ಕಸ್ತೂರಿ

ಜನವರಿ ೧೯೭೭

ಬೆಲೆ: ರೂ. ೧-೨೫



ಐಟೆಕ್ಸ್

ಸೌಂದರ್ಯ ಸಾಧನಗಳು



ARAVIND LABORATORIES MADRAS-600 033

ಕಸ್ತೂರಿ



ವ್ಯವಸ್ಥಾಪಕ ಸಂಪಾದಕರು :
ರಂಗನಾಥ ದಿವಾಕರ

ಪ್ರಧಾನ ಸಂಪಾದಕರ :
ಖಾದ್ರಿ ಶಾಮಣ್ಣ

ಸಂಪಾದಕರು :
ದ. ಲ ಕೆರೂರ

ಕಲೆ :
ಕೆ. ಬಿ. ಕುಲಕರ್ಣಿ

ಮುಖಪುಟ :
ಎರಡೂ ನಂಗೇ
ಮದನ ದೇಸಾಯಿ

ಲೇಖಕರಿಗೆ ಸೂಚನೆ

ಕಸ್ತೂರಿಯಲ್ಲಿ ಪ್ರಕಟಣೆಗಾಗಿ ಕಳುಹಿಸುವ ಲೇಖ, ಪ್ರಬಂಧ, ಕಥೆ ಮೊದಲಾದವನ್ನು ಕಾಗದದ ಒಂದೇ ಮಗ್ಗಲಿಗೆ ವಿರಳವಾಗಿ ಬರೆದಿರಬೇಕು. ಲೇಖಕರ ಹೆಸರು ವಿಳಾಸ ಸ್ಪಷ್ಟವಿರಬೇಕು. ಅನುವಾದ ರೂಪಾಂತರ ಇಲ್ಲವೆ ಸಾಧಾರ ಲೇಖನಗಳಾದರೆ ಮೂಲ ಲೇಖಕರ ಮತ್ತು ಪ್ರಕಾಶಕರ ಹೆಸರು ವಿಳಾಸಗಳಿರಬೇಕು. ಇಂಥ ಲೇಖನಗಳಿಗೆ ಪೂರ್ವಾನುಮತಿ ದೊರಕಿಸಿಕೊಂಡರೆ ಉತ್ತಮ. ಅಸ್ವೀಕೃತ ಲೇಖನಗಳು ತಿರುಗಿ ಬೇಕಾಗಿದ್ದರೆ, ಜತೆಗೆ ಸಾಕಷ್ಟು ಅಂಚೆ ಚೀಟಿಗಳನ್ನು ಇರಿಸಿ. ಲೇಖನಗಳಲ್ಲಿ ಸೂಕ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗೆ ಇದೆ.

ಚಂದಾದಾರರಿಗೆ ಸೂಚನೆ

ಕಸ್ತೂರಿ ತಿಂಗಳ ಒಂದನೇ ದಿನಾಂಕದೊಳಗೆ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲುಕಟ್ಟೆಯಲ್ಲಿ ಮೊದಲು ವಿಚಾರಿಸಿ, ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಚಂದಾ ದರ

೩ ವರ್ಷ (ಅಂಚೆ ಸೇರಿ)	ರೂ.	೩೫-೦೦
೨ ವರ್ಷ ,,	ರೂ.	೨೫-೦೦
೧ ವರ್ಷ ,,	ರೂ.	೧೪-೦೦
ಅರ್ಧ ವರ್ಷ ,,	ರೂ.	೭-೫೦

KASTURI January 1977

ಈ ಸಂಚಿಕೆಯಲ್ಲಿ

ಸಹಚಿಂತನ

ಎಲ್ಲವೂ ಸುಳ್ಳು; ಎಲ್ಲರೂ ಸುಳ್ಳರು

ಶ್ರೀ ಮ. ಬ. ಚೆನ್ನಬಸಪ್ಪನವರ 'ಎಲ್ಲವೂ ಸುಳ್ಳು; ಎಲ್ಲರೂ ಸುಳ್ಳರು' ಎಂಬ ತಲೆಬರಹದಡಿಯಲ್ಲಿ ಪ್ರಕಟವಾದ ಲೇಖನ ಓದಿ ನಗು ಬಂದಿತು 'Methodless Madness ಎಂಬ ತಲೆಬರಹ ಈ ಲೇಖನಕ್ಕೆ ಸರಿಯಾಗಿ ಒಪ್ಪಬಹುದು. ಈ 'ಎರಡೆಕರೆ' ಹುಚ್ಚು ತೀರಾ ಅವಿವೇಕತನ. ಎರಡೆಕರೆ ಇಡೀ ಪ್ರಪಂಚದಲ್ಲಿ ಒಂದೇ ರೀತಿಯಾಗಿ ಫಲವತ್ತಾಗಿರುವುದಿಲ್ಲ; ಈ ಎರಡೆಕರೆಯಲ್ಲಿ ಯುಗಯುಗಗಳ ವರೆಗೂ ಒಂದೇ ಸಮಾನ ಹವಾಮಾನವಿರುವುದಿಲ್ಲ ಮತ್ತು ಈ ಎರಡೆಕರೆಯಲ್ಲಿ ವಾಸಿಸುವ ಸಂಸಾರ ಚಿರಕಾಲ ದುಡಿಯುವ ಶಕ್ತಿ ಹೊಂದಿರುವುದಿಲ್ಲ. ಇಲ್ಲಿ ವಾಸಿಸುವವರಿಗೆ ಒಂದೇ ಸಂಖ್ಯೆಯ ಮಕ್ಕಳಿರುವುದಿಲ್ಲ. ಹುಟ್ಟಿದ ಮಕ್ಕಳೆಲ್ಲಾ ದುಡಿಯುವ ಶಕ್ತಿ ಹೊಂದಿರುವುದಿಲ್ಲ ಬುದ್ಧಿ ಹೊಂದಿರುವುದಿಲ್ಲ. ನಪುಂಸಕತನ, ಬಂಜೆತನ ಬುದ್ಧಿಮಾಂದ್ಯ, ಅನಾರೋಗ್ಯ ಇತ್ಯಾದಿಗಳು ಮನುಷ್ಯನನ್ನು ಬಾಧಿಸುತ್ತವೆ ಕಾಮುಕತನ ಅಥವಾ sex attraction, ಮೈಬಣ್ಣ, ಸ್ವರೂಪ, ಆರೋಗ್ಯ, ಯೌವನವನ್ನು ಹೊಂದಿಕೊಂಡಿರುತ್ತದೆ.

ಬಹಳ ಮುಖ್ಯವಾಗಿ ಶ್ರೀಯುತರು ಜೇನು ನೊಣಗಳ, ಇರುವೆಗಳ ಜೀವಿತ ಕ್ರಮದ ಆದರ್ಶವನ್ನು ಹೇಳುತ್ತಾರೆ. ಭಗವಂತ! ಈ ಜಂತುಗಳಲ್ಲೂ ದುಡಿಯುವ-ದುಡಿಸುವ ವರ್ಗಗಳಿವೆ. ವಿದ್ಯೆ, ಜ್ಞಾನ, ಆಚಾರ, ವ್ಯವಹಾರ, ಭಕ್ತಿ ಇತ್ಯಾದಿಗಳು ಇಲ್ಲದ ಪಶು, ಪಕ್ಷಿ ಹುಳು ಇತ್ಯಾದಿಗಳೂ ಕಾದಾಡುತ್ತವೆ, ಕೊಲೆ ಮಾಡುತ್ತವೆ, ಮೇಲು ಕೀಳುಗಳ ತಾರತಮ್ಯ ಮಾಡುತ್ತವೆ.

ದಯವಿಟ್ಟು ಇಂತಹ ಅಸಂಬದ್ಧ, ಅಪ್ರಬುದ್ಧ, ಹೇಯ ಲೇಖನಗಳನ್ನು ಪ್ರಕಟಿಸಬೇಡಿ. ಇದೂ ಪೂರ್ಣ ಅವಿಚಾರ ಮತ್ತು ಅವಿವೇಕ.

ಕಾಸರಗೋಡು — -ಎಂ. ವ್ಯಾಸ

ಡಿಸೆಂಬರ್ ಸಂಚಿಕೆಯಲ್ಲಿ ಪ್ರಕಟವಾದ ಮ. ಬ. ಚನ್ನಬಸಪ್ಪನವರ 'ಎಲ್ಲವೂ ಸುಳ್ಳು ಎಲ್ಲರೂ ಸುಳ್ಳರು' ಅತ್ಯುತ್ತಮ ವೈಚಾರಿಕ ಲೇಖನ. ಶ್ರೀಯುತರು ಬರೆದ ಅಕ್ಟೋಬರ್ ಸಂಚಿಕೆಯ 'ಕರು ಬಡತನ-ದಟ್ಟ ದಾರಿದ್ರ್ಯ'ವೂ ಮನಸ್ಸಿಗೆ ಹಿಡಿಸಿತ್ತು. ಸಮಾಜವು ಮುಚ್ಚಿದ, ಆದರೆ ಗಂಟು ಬಿದ್ದಿರುವ ಹಲವಾರು ಸಾಮಾನ್ಯ ವಿಷಯಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ ದರ್ಪಣದಲ್ಲಿ ಪ್ರತಿಬಿಂಬಿಸಿದ್ದಾರೆ; ನಿಷ್ಪಕ್ಷಪಾತ ಧೋರಣೆಯನ್ನು ಅನುಸರಿಸಿದ್ದಾರೆ. ಅವರಿಗೆ ಅಭಿನಂದನೆಗಳು. ಅವರ ಲೇಖನಿಯಿಂದ ಇಂತಹ ಇನ್ನಷ್ಟು ಲೇಖನಗಳನ್ನು ನಿರೀಕ್ಷಿಸುತ್ತೇನೆ. ಆದರೆ 'ಶ್ವಾನ ಪ್ರಣಯ'ದಂತಹ ಶಬ್ದಗಳು ಮರುಕಳಿಸದಿರಲಿ.

ಬಿದ್ರಿ (ದ. ಕ) — -ಎ ರವೀಂದ್ರ ಪೂಜಾರಿ

ಮುಕೇಶ

ಡಿಸೆಂಬರ್ ಸಂಚಿಕೆಯಲ್ಲಿ ಪ್ರಕಟವಾದ 'ಕಂಠವೂ ಮಧುರ; ವ್ಯಕ್ತಿತ್ವವೂ ಮಧುರ' ಲೇಖನಕ್ಕಾಗಿ ಕೃತಜ್ಞತೆಗಳು. ಅನೇಕ ಪತ್ರಿಕೆಗಳು ಅಮರ ಗಾಯಕ ಮುಕೇಶರ ಬಗ್ಗೆ ಪ್ರಕಟಿಸಿದ ಶ್ರದ್ಧಾಂಜಲಿಪೂರ್ವಕ ಲೇಖನಗಳು ಅವರ ಜೀವನದ ಒಂದು ಮುಖದ ದರ್ಶನ ಮಾಡಿಸಿದರೆ 'ಕಸ್ತೂರಿ' ಇದರ ಇನ್ನೊಂದು ಮುಖದ ದರ್ಶನ ಮಾಡಿಸಿತು.

ಧಾರವಾಡ — -ಕೆ. ವೀರಭದ್ರ

ಉತ್ತಮ ಸಂಚಿಕೆ

'ಕಸ್ತೂರಿ'ಯ ಅತ್ಯುತ್ತಮ ಸಂಚಿಕೆಗಳಲ್ಲಿ ಡಿಸೆಂಬರ್ ೭೬ ರ ಸಂಚಿಕೆಯೂ ಒಂದು. 'ಸಸ್ಯಗಳಲ್ಲಿ ಅತೀಂದ್ರಿಯ ಪ್ರಜ್ಞೆ' 'ಅನ್ನನಾಳ ಸುಯ್ಯ'. 'ಮಕ್ಕಳ ಮಾರಕ ರೋಗಗಳು' 'ಸೌರವ್ಯೂಹದ ಪೌರರು ಯಾರು?' ಇವು ಉತ್ತಮ ಲೇಖನಗಳು. 'ಸೌರವ್ಯೂಹದ ಪೌರರು ಯಾರು?' ಲೇಖನವು ಸೌರವ್ಯೂಹದ ಉಗಮ, ಬೆಳವಣಿಗೆ ಇತ್ಯಾದಿಗಳನ್ನು ಚೆನ್ನಾಗಿ ನಿರೂಪಿಸುತ್ತದೆ. ಆದರೆ ಕೊನೆಯ ಪ್ಯಾರಾವನ್ನು ಬಿಟ್ಟರೆ ಉಳಿದವು ತಲೆಕಟ್ಟಿಗೆ ಹೊಂದಿಕೊಳ್ಳುವಂತೆ ಕಾಣುವುದಿಲ್ಲ. 'ಸಸ್ಯಗಳ ಅತೀಂದ್ರಿಯ ಪ್ರಜ್ಞೆ'ಯನ್ನು ತಿಳಿದು ಕೌತುಕಗೊಂಡೆ. 'ರಾಹುಲ ವಸ್ತ್ರ' ಸಂಗ್ರಹಿಸಿ ಪ್ರಕಟಿಸಿದುದಕ್ಕೆ ವಂದನೆಗಳು. ಸಣ್ಣ ಕಥೆಗಳಲ್ಲಿ 'ಧವಳಗಿರಿ'ಯು ತುಂಬ ಚೆನ್ನಾಗಿದೆ. ಕಥೆಯ ಹೆಸರು ಸೂಕ್ತವಾಗಿ ಬದಲಾಗಿದ್ದರೆ ಕಥೆಯ ಅಂದ ಇನ್ನೂ ಹೆಚ್ಚುತ್ತಿತ್ತು.

ಹಾಲಾಡಿ (ದ. ಕ.) — -ಯಂ. ಶಶಿಧರ

ಕ್ಲಿಷ್ಟ ವಿವರಗಳು

ಡಿಸೆಂಬರ್ ಸಂಚಿಕೆಯಲ್ಲಿ ಶ್ರೀ ಜಿ. ಟಿ. ನಾರಾಯಣ ರಾಯರು ಸಂದೇಹವೊಂದಕ್ಕೆ ಕೊಟ್ಟಿರುವ ಪ್ರತ್ಯುತ್ತರವನ್ನು ನೋಡಿ ಈ ಪತ್ರವನ್ನು ಬರೆಯುತ್ತಿದ್ದೇನೆ

$E=mc^2$ ಮತ್ತು $E=h\nu$ ಎಂಬ ಎರಡು ಸೂತ್ರಗಳು ಅವರು ತಿಳಿಸಿರುವ ಹಾಗೆ ಭಿನ್ನ ಸಮೀಕರಣಗಳೇನೂ ಅಲ್ಲ. ಎರಡೂ ಒಟ್ಟಿಗೇ ಒಂದೇ ವಿಚಾರದಲ್ಲಿ ಉಪಯೋಗಿಸಲ್ಪಡಬಹುದು. ಇದು Modern Physics ನಲ್ಲಿನ Spectroscopy ಯಲ್ಲಿ ಸರ್ವೇ ಸಾಧಾರಣವಾಗಿದೆ. De Broglie ವಿಜ್ಞಾನಿಯು Matter waves ಪ್ರತಿಪಾದನೆಯಲ್ಲಿ ಈ ಎರಡೂ ಸಮೀಕರಣಗಳನ್ನು ಒಟ್ಟಿಗೆ ಸೇರಿಸಿ ವಸ್ತು-

ತರಂಗ-ಅಂತರಕ್ಕೆ ಒಂದು ಮುಖ್ಯವಾದ ಸಮೀಕರಣವನ್ನು ನಿರೂಪಿಸಲಾಗಿದೆ. ಈ ಪ್ರತಿಪಾದನೆಯ ಪ್ರಕಾರ ಕಣಗಳು ಸಹ ತರಂಗ ಚಲನೆಯನ್ನು ಹೊಂದಿರುತ್ತವೆ.

$$E = mc^2 = h\nu = \frac{hc}{\lambda}$$

$$\lambda = \frac{h}{mc}$$

De Broglie Relation

ಈ ಸಮೀಕರಣವನ್ನು ಪ್ರಯೋಗಗಳಿಂದಲೂ ಸಿದ್ಧಪಡಿಸಲಾಗಿದೆ.

ಬೆಂಗಳೂರು — ಓರ್ವ ವಿಜ್ಞಾನಿ

ಮರಣ ಸ್ವಾತಂತ್ರ್ಯ

ಡಿಸೆಂಬರ್ ಸಂಚಿಕೆಯಲ್ಲಿನ 'ಮರಣ ಸ್ವಾತಂತ್ರ್ಯ'ದ ಲೇಖಕ ಶ್ರೀ ರಂಗನಾಥ ದಿವಾಕರರು ಮನುಷ್ಯನನ್ನು ಶುದ್ಧ ವೈಚಾರಿಕತೆಯ ಬೌದ್ಧಿಕ ಹಿನ್ನೆಲೆಯಲ್ಲಿಯೇ ಕಲ್ಪಿಸಿಕೊಂಡು ಅಮೇರಿಕೆಯ ಕ್ಯಾಲಿಫೋರ್ನಿಯಾ ಪ್ರಾಂತದ ಕಾನೂನಿನ ಮುಖಾಂತರ ಮತ್ತು ಬ್ರಿಟಿಷ್ ಲೇಖಕ ಬರ್ನಾರ್ಡ್ ಷಾರವರ ಮೂಲಕ ತಮ್ಮ ಲೇಖನದ ಧೋರಣೆಯನ್ನು ನಮ್ಮಲ್ಲಿ ತುರುಕಲು ಪ್ರಯತ್ನಿಸಿದ್ದಾರೆ. ಲೇಖಕರು ತಳೆದಿರುವ ಧೋರಣೆಯನ್ನೇ ಮನುಷ್ಯ ಸಂಬಂಧದ ಬಗೆಗೆ ನಾವು ತಳೆದಾದರೆ ಒಬ್ಬ ಮನುಷ್ಯ ಮತ್ತೊಬ್ಬ ಮನುಷ್ಯನಿಗೆ ಬರೀ ಒಂದು ಉಪಯುಕ್ತ ವಸ್ತು ಮಾತ್ರವಾಗುತ್ತಾನೆ. ಈ ಧೋರಣೆಯ ಮಾತ್ರದಿಂದಲೇ ಮನುಷ್ಯ ಸಂಬಂಧ ನಿಲ್ಲಲು ಸಾಧ್ಯವಿದೆಯೆ ?

ಬೆಂಗಳೂರು — ಬಿ. ಲಕ್ಕಣ್ಣ

ರಾಹುಲ

ವಿಕ್ಷಿಪ್ತ ವ್ಯಕ್ತಿ 'ರಾಹುಲ'ನನ್ನು ಸಂಗ್ರಹಕಾರರಾದ ಶ್ರೀ ವೈ. ಎನ್. ಗುಂಡೂರಾವ್ ಅವರು ಪುಸ್ತಕ ವಿಭಾಗದಲ್ಲಿ ಶ್ರೀ ಶಾಂತಿನಾಥ ದೇಸಾಯಿ ಅವರ ಮೂಲ ಕೃತಿಗೆ ಚ್ಯುತಿ ಬರದಂತೆ ಸೂಕ್ಷ್ಮವಾಗಿ ಸಂಗ್ರಹಿಸಿದ್ದಾರೆ. ರಾಹುಲ ತನ್ನ ವಿಕ್ಷಿಪ್ತತೆಯನ್ನು ಕೇವಲ ಹುಡುಗಿಯರ ಸರ್ಕಲ್ಲಿನಲ್ಲಿಯೇ ತೋರಿರುವುದೂ ಒಂದು ವಿಶೇಷ. ಹುಡುಗಿಯರನ್ನು ತನ್ನ ಬಲೆಗೆ ಹಾಕಿಕೊಳ್ಳಲು ಅವನು ನಡೆಸುವ 'ನಾಟಕ'ಗಳು ತುಂಬಾ ಮಜ' ಆಗಿವೆ!

ಇತ್ತೀಚಿನ 'ಕಸ್ತೂರಿ'ಯನ್ನು ನೋಡುತ್ತ ಬಂದಲ್ಲಿ, ಡಿಸೆಂಬರ್ ೧೯೮೧ರ ಸಂಚಿಕೆ ತನ್ನ ಮಟ್ಟವನ್ನು ಪುನಃ ಕಾಯ್ದುಕೊಳ್ಳಲು ಯತ್ನಿಸುತ್ತಿದೆಯೆನ್ನಬಹುದು. ಕನ್ನಡದ ಅನೇಕ ಮಾಸಪತ್ರಿಕೆಗಳ ಬಂಡವಲು ಬಂಡಲ್ ಕಥೆಗಳೇ ಆಗಿರುವಾಗ, 'ಕಸ್ತೂರಿ' ವೈಚಾರಿಕ ಲೇಖನಗಳಿಗೇ ಪ್ರಾಧಾನ್ಯ ಕೊಡುವುದು ಸೂಕ್ತವೂ ಹೌದು. ಶ್ರೀ ಮ. ಬ. ಚನ್ನಬಸಪ್ಪನವರು 'ಎಲ್ಲವೂ ಸುಳ್ಳು; ಎಲ್ಲರೂ ಸುಳ್ಳು' ಲೇಖನದಲ್ಲಿ ಉದ್ದೋ ಉದ್ದ ಪುರಾಣ ಬಿಚ್ಚಿ, ಏನು ಹೇಳಬೇಕೆಂದಿದ್ದರೋ, ಗೊತ್ತಾಗದೆ ತಲೆ ನೋವು ತಂದರು! ಜೊತೆಗೆ ಶ್ರೀ ಎ. ರಾಜಾರಾಮ ಮೋಹನ ರಾಯರ ಕಥೆ 'ಜೀವನ ವೇಗ' ಉತ್ತಮವಾಗಿದೆ ಎನ್ನಬಹುದು.

ಪುಣೆ — ಪದ್ಮರಾಜ ಕಳಸೂರು

ಪೇಜಾವರ ಶ್ರೀಗಳು

ಪೇಜಾವರ ಶ್ರೀಪಾದಂಗಳವರು ಹರಿಜನಕೇರಿಗೆ ಹೋದ ಕಾರ್ಯ ಬೂಟಾಟಿಕೆ ಎನಿಸಿ ಸ್ವಾಮಿಗಳ ಪ್ರಾಮಾಣಿಕತನವನ್ನು ಶಂಕಿಸಿದ ಶ್ರೀ ಚಂದ್ರಶೇಖರ ಪಾಟೀಲರು ಮತ್ತೆ ಪೂರ್ವಾಗ್ರಹ ಪೀಡಿತರಾಗಿ ಬರೆದಿದ್ದಾರೆ. ಈ ಘಟನೆಯ ನಂತರ ಶ್ರೀಪಾದಂಗಳವರು ಎಂಥ ಬೆಲೆ ತೆತ್ತರು ಎಂಬುದು ಬ್ರಾಹ್ಮಣನಾದ ನನಗೆ ಗೊತ್ತು. ಆಗ ಬಹಳಷ್ಟು ಬ್ರಾಹ್ಮಣರು ಅವರನ್ನು ಬಹಿಷ್ಕರಿಸಿದರು. ವಿರುದ್ಧ ಪ್ರಚಾರ ನಡೆಸಿದರು. ಆದರೆ ಸ್ವಾಮಿಗಳು ತಮ್ಮ ನಿಲುವಿನಿಂದ ವಿಚಲಿತರಾಗಲಿಲ್ಲ. ಶ್ರೀಗಳವರ ಹೆಸರೆತ್ತಿ ಹಗುರಾಗಿ ಮಾತನಾಡಿದ ಚಂ. ಪಾ. ಅವರಿಗೆ ಸ್ವಾಮಿಗಳ ಜಾತ್ಯತೀತ ದೃಷ್ಟಿಯ ಬಗ್ಗೆ ಈ ಕೆಳಗಿನ ಒಂದು ಉದಾಹರಣೆ ಸಾಕು.

ಹಲವು ವರ್ಷಗಳ ಹಿಂದೆ ಶ್ರೀಪಾದಂಗಳವರು ಪ್ರಥಮ ಬಾರಿಗೆ ಮಂತ್ರಾಲಯಕ್ಕೆ ಆಗಮಿಸಿದ್ದರು. ನಾನು ಸ್ವಾಮಿಗಳ ಹಿಂದೆ ಇದ್ದೆ. ಮಠದ ಹಿರಿಯರು ಸ್ವಾಮಿಗಳಿಗೆ ಮಠವನ್ನು, ಮಠದ ಬೇರೆಬೇರೆ ಸ್ಥಳಗಳನ್ನೂ ತೋರಿಸುತ್ತ, ಪರಿಚಯ ಮಾಡಿಸುತ್ತ ಸಾಗಿದ್ದರು. ಮಧ್ಯದಲ್ಲಿ ಒಂದು ಸ್ಥಳವನ್ನು ತೋರಿಸಿ, "ಇದು ವಿದ್ಯಾರ್ಥಿನಿಲಯ. ಶಾಲೆ ಕಲಿಯುವ ಬ್ರಾಹ್ಮಣ ವಿದ್ಯಾರ್ಥಿಗಳಿಗಾಗಿ ಇಲ್ಲಿ ಉಚಿತವಾಗಿ ಅನ್ನದಾನ ಮಾಡಲಾಗುತ್ತಿದೆ," ಎಂದರು. ಆಗ ಸ್ವಾಮಿಗಳು, "ಬ್ರಾಹ್ಮಣ ವಿದ್ಯಾರ್ಥಿಗಳಿಗಷ್ಟೇ ಏಕೆ? ಉಳಿದವರು ಏನು ತಪ್ಪು ಮಾಡಿದ್ದಾರೆ? ಉಳಿದವರಿಗೂ ನೀವು ವ್ಯವಸ್ಥೆ ಮಾಡಿರಿ," ಎಂದರು.

ಹಿಂದೆ ನಿಂತಿದ್ದ ನಾನು ಈ ಮಾತು ಕೇಳಿ ಕೆಲವೊತ್ತು ಸ್ತಂಭಿತನಾದೆ. ವಿಶೇಷತಃ ಬ್ರಾಹ್ಮಣ ಸ್ವಾಮಿಗಳಲ್ಲಿ ಕಡಿಮೆಯಾಗಿ ಕಂಡುಬರುವ ಈ ಕಳಕಳಿ, ಸಾಮಾಜಿಕ ಪ್ರಜ್ಞೆ ಶ್ರೀಗಳವರಲ್ಲಿ ಬಹಳಷ್ಟು ಹಿಂದೆಯೇ ಇತ್ತು, ಈಗಲೂ ಇದೆ.

ಅಥಣಿ — ಪ್ರಕಾಶ ಪರ್ವತೀಕರ

ಕಸ್ತೂರಿ

ಸಂಚಿಕೆ : ೫ ಕಸ್ತೂರಿ, ಜನವರಿ ೧೯೭೭ ವರ್ಷ : ೨೧

ಮೆಚ್ಚುಗೆಯ ಒಂದು ನುಡಿ

'ಶ್ರೀತನಯ'

ಭಾರವಿಯ ಕತೆ ಕೇಳಿದ್ದೀರಾ?

ಸಾವಿರ ವರ್ಷಗಳಿಗೂ ಹಿಂದೆ ಬಾಳಿದ್ದ ಆತ ಸಂಪ್ರದಾಯಸ್ಥ ಮನೆತನದ ಯುವಕ. ವಿದ್ಯಾಭ್ಯಾಸದಲ್ಲಿ ಚುರುಕು. ಕೆಲಸದಲ್ಲಿ ದಕ್ಷ. ಜೊತೆಗೆ ಸಭ್ಯತೆ- ಶಿಷ್ಟಾಚಾರಗಳು ಆತನಲ್ಲಿ ಮಿಳಿತವಾಗಿದ್ದವು.

ಅಂಥ ವ್ಯಕ್ತಿ ತನ್ನ ತಂದೆಯನ್ನು ಕೊಲೆ ಮಾಡಬೇಕೆಂದು ಒಂದು ರಾತ್ರಿ ತಂದೆಯು ಮಲಗುವ ಕೋಣೆಯ ಅಟ್ಟದ ಮೇಲೆ ದೊಡ್ಡ ಕಲ್ಲು ಗುಂಡೊಂದನ್ನು ಹಿಡಿದು ಕೊಂಡು ಕಾಯುತ್ತಿದ್ದ. ತಂದೆಯು ಮಲಗಿದೊಡನೆ ಕಲ್ಲನ್ನು ಆತನ ತಲೆಯ ಮೇಲೆ ಎತ್ತಿ ಹಾಕಿ ಆತ ಎಂದೆಂದೂ ಏಳದಂತೆ ಮಾಡುವ ಕರಾಳ ಕೃತ್ಯಕ್ಕಾಗಿ ಭಾರವಿ ಕಾದಿದ್ದ.

ಏನಾಗಿತ್ತು? ಅವನಿಗೆ ಹುಚ್ಚು ಹಿಡಿದಿತ್ತೇ?

ಸಾಮಾನ್ಯ ಅರ್ಥದಲ್ಲಿ ಹಾಗಾಗಿರಲಿಲ್ಲ ನಿಜ, ಆದರೆ ಅವನ ಮನಸ್ಸು ಅನುಭವಿಸುತ್ತಿದ್ದ ರೋಷದ ಉದ್ವೇಗ ಹುಚ್ಚಿನ ಮಿತಿಗೆ ಬಂದಿತ್ತು. ಅದಕ್ಕೂ ಮುಂದೆ ಸಾಗಿತ್ತು.

ಕಾರಣ?

ಭಾರವಿ ಏನೇ ಒಳ್ಳೇ ಕೆಲಸ ಮಾಡಲಿ, ಎಷ್ಟೇ ದಕ್ಷತೆಯಿಂದ ದುಡಿಯಲಿ, ಎಂಥದೇ ಪ್ರತಿಭಾನ್ವಿತ ಕೃತಿ ರಚಿಸಲಿ, ಅವನ ತಂದೆಯದು ಒಂದೇ ಪ್ರತಿಕ್ರಿಯೆ— ಟೀಕೆ, ಕಟು ಟೀಕೆ. ಒಂದೇ ಒಂದು ಮೆಚ್ಚುಗೆಯ ಶಬ್ದವೂ ಅವನ ಬಾಯಿಂದ ಹೊರಡದು. ಭಾರವಿಯ ಅಸಹನೆ ಹೆಚ್ಚಿತು. ತಂದೆಯ ಕಟು ವಿಮರ್ಶೆ ಅವನ ಪ್ರತಿಭೆಯ ತೊರೆಯನ್ನು ಬತ್ತಿಸಿತು. ರೋಷದ ಜ್ವಾಲೆ ಧಗಧಗಿಸಿತು. ಆ ಉನ್ಮಾದದಲ್ಲಿ ಆತ ತಂದೆಯ ಕೊಲೆಗೈಯುವಂಥ ಕರಾಳ ಕೃತ್ಯಕ್ಕೆ ಮನಸು ಮಾಡಿದ.

ಆದರೆ ತಂದೆ ಮಗ ಇಬ್ಬರೂ ಬದುಕಬೇಕಾಗಿತ್ತು.

ತಂದೆಯೊಡನೆ ಮಾತನಾಡುತ್ತಿದ್ದ ತಾಯಿಯ ಸ್ವರ ಅಟ್ಟದ ಮೇಲೆ ಕಲ್ಲುಗುಂಡನ್ನು ಹಿಡಿದಿದ್ದ ಭಾರವಿಗೆ ಕೇಳಿಸಿತು. ಆಕೆ ಹೇಳುತ್ತಿದ್ದಳು, "ಮಗು ಈಗೀಗ ಬಹಳ ಬೇಸರದಲ್ಲಿರುತ್ತಾನೆ. ಅವನು ಮಾಡಿದ್ದಕ್ಕೆಲ್ಲ ನೀವು ಬಯ್ಯುತ್ತೀರೆಂದು ದುಃಖಿತನಾಗಿದ್ದಾನೆ. ನಿಮಗಾದರೂ ಅವನ ಮೇಲೇಕೆ

ಅಷ್ಟು ನಿರ್ದಯತೆ ?"

ತಂದೆಯ ಉತ್ತರ ಕೇಳಿಸಿತು.

"ನಾವೆಷ್ಟು ಹೃತ್ಪೂರ್ವಕವಾಗಿ ಅವನನ್ನು ಮೆಚ್ಚುತ್ತಿದ್ದೇವೆಂಬುದು ನಿನಗೆ ತಿಳಿದಿಲ್ಲವೆ ? ಮಕ್ಕಳನ್ನು ಅವರ ಎದುರಲ್ಲೇ ಹೊಗಳಬಾರದೆಂದು ಪೂರ್ವಿಕರ ಹೇಳಿಕೆ. ಅದರಿಂದ ಅವರ ಅಹಂಕಾರ ಹೆಚ್ಚುತ್ತದೆ."

ಅಷ್ಟೇ ಸಾಕಾಯಿತು ಭಾರವಿಗೆ. ಕಲ್ಲುಗುಂಡನ್ನು ದೂರವಿಟ್ಟು ಹೊಸ ಜೀವನವನ್ನು ಆರಂಭಿಸಿದ. ಕವಿಯಾಗಿ, ರಸಋಷಿಯಾಗಿ ಕಿರಾತಾರ್ಜುನೀಯದಂಥ ಮೇರು ಕೃತಿಯನ್ನು ಸಂಸ್ಕೃತಸಾಹಿತ್ಯಕ್ಕೆ ಅರ್ಪಿಸಿ ತುಂಬುಬಾಳನ್ನು ನಡೆಸಿ ಕೀರ್ತಿಶಾಲಿಯಾದ.

ಮೆಚ್ಚಿಗೆಯ ಒಂದು ಮಾತು–ಅದೂ ಕದ್ದು ಕೇಳಿದ್ದು ಅವನ ಜೀವನದ ಸಾರ್ಥಕತೆಗೆ ಕಾರಣವಾಯಿತು. ಘೋರ ಕೃತ್ಯದಿಂದ ಪರಾಙ್ಮುಖನನ್ನಾಗಿ ಮಾಡಿ ಮಾನವನನ್ನಾಗಿಸಿತು. ಮೆಚ್ಚುಗೆಯ ಮಧುರ ಶಬ್ದ ಕೇಳದ ಆತ ಎಷ್ಟೇ ಮೇಧಾವಿ ಚತುರನಾಗಿದ್ದರೂ ತಂದೆಯನ್ನೇ ಕೊಲೆಗೈವ ಕೆಲಸಕ್ಕೆ ಉದ್ಯುಕ್ತನಾಗಿದ್ದ. ಮೆಚ್ಚುಗೆಯ ಒಂದು ನುಡಿ ಗೈದ ಪವಾಡ ಇದು.

ಅಹಂಕಾರ

ಖ್ಯಾತಿವೆತ್ತ ಅರಸ ಅಲೆಕ್ಸಾಂಡರ ಎಲ್ಲ ಅರಸರನ್ನು ಗೆದೆಯುತ್ತ ಬಂದಂತೆ ನಡುವೆ ಒಬ್ಬ ಅರಸ ಆತನಿಗೆ, ಶರಣು ಬಂದ. ಸರಿ, ಅಲೆಕ್ಸಾಂಡರ ಅಲ್ಲಿಯೇ ತನ್ನ ಬಿಡಾರ ಹೂಡಿದ. ಆ ರಾಜನನ್ನು ಕರೆಸಿ ಹೇಳಿದ, "ನಿನ್ನ ರಾಜ್ಯದಲ್ಲಿಯ ದೊಡ್ಡ ಮನುಷ್ಯರನ್ನೆಲ್ಲಾ ಕರೆಸು. ಅವರಿಗೆ ನಾವು ಬಹುಮಾನ ಕೊಡುವೆ." ಕೂಡಲೇ ಆ ರಾಜ ಊರಲ್ಲಿಯ ಕೆಲವರನ್ನು ಕರೆಸಿ ಅಲೆಕ್ಸಾಂಡರನಿಂದ ಬಹುಮಾನ ಕೊಡಿಸಿದ.

ಮತ್ತೆ ಅಲೆಕ್ಸಾಂಡರ ಕೇಳಿದ, "ಎಲ್ಲರೂ ಮುಗಿದರೇನು?" ಆಗ ಆ ರಾಜ ಹೇಳಿದ, "ಇಲ್ಲ ಮಹಾರಾಜ, ಊರ ಹೊರಗೆ ಒಬ್ಬ ಸಂನ್ಯಾಸಿ ಮಾತ್ರ ಎಷ್ಟು ಹೇಳಿದರೂ ಬರಲಿಲ್ಲ. ಅಲ್ಲದೇ ಆತ ಅನೇಕ ವರುಷ ಗಾಳಿ ನೀರು ತಿಂದೇ ಬದುಕಿದ್ದಾನೆ. ಆತ ಪಟ್ಟಣಕ್ಕೆ ಬರುವದು ಬಿಟ್ಟು ಅನೇಕ ದಿನಗಳಾದವು!".

ಸರಿ, ಅಲೆಕ್ಸಾಂಡರ, ಸಿಟ್ಟಿನಿಂದ ಬೆಂಕಿಯಾಗಿ ಕೂಡಲೆ ತನ್ನ ಸೇವಕರಿಗೆ ಹೇಳಿದ, "ಹೋಗಿ ವಿಚಾರಿಸಿ ಬನ್ನಿ"

ಪಾಪ, ಸೈನಿಕರು ಆ ಋಷಿಯ ಹತ್ತಿರ ಹೋಗಿ ನಿಂತೇ ನಿಂತರೂ ಹೋದಿ ಆತನ ಕಣ್ಣೇ ತೆರೆಯಲಿಲ್ಲ. ಕೊನೆಗೆ, ಸೇವಕರು ಮರಳಿ ಬಂದರು. ಸಮಾಚಾರ ತಿಳಿಸಿದಾಗ ಅಲೆಕ್ಸಾಂಡರ ತಾನೆ ಎದ್ದು ಆ ಋಷಿಯೆಡೆಗೆ ಹೊರಟ. ಪರಿವಾರದೊಂದಿಗೆ ಹೋಗಿ ನಿಂತಾಗ, ಆ ಋಷಿ ಮುಂಜಾನೆ ಚಳಿಯಿಂದಾಗಿ ಬಿಸಿಲು ಕಾಸುತ್ತಿದ್ದ. ಅವನಿಗೆ ಅಲೆಕ್ಸಾಂಡರ ಹೇಳಿದ: "ನಾನು ಇಡೀ ಜಗತ್ತನ್ನೇ ಗೆದ್ದವ, ನಿನಗೇನು ಬೇಕೋ ಬೇಡು".

ಆ ಋಷಿ, ದೊಡ್ಡದಾಗಿ ನಕ್ಕು ಹೇಳಿದ: "ಹುಂ. ನನಗೇನೂ ಕೊಡಬಲ್ಲಿ? ನನಗಾವುದರ ಇಚ್ಛೆಯೂ ಇಲ್ಲ. ನೀನು ಕೊಡಲೇ ಬೇಕೆಂದಿದ್ದರೆ, ದಯವಿಟ್ಟು ದೂರ ಸರಿದು ನಿಂತು, ನನಗೆ, ನಿರಾತಂಕವಾಗಿ ಸೂರ್ಯನ ಬಿಸಿಲು ಸಿಗುವಂತೆ ಮಾಡು" ಎಂದಾಗ, ಒಂದೇ ಕ್ಷಣದಲ್ಲಿ ಅಲೆಕ್ಸಾಂಡರನ ಗರ್ವವೆಲ್ಲ ಕರಗಿ ನೀರಾಗಿ ಹೋಗಿತ್ತು. ಹೆಚ್ಚಿಗೆ ಮಾತು ಬೆಳೆಸದೇ ಅಲೆಕ್ಸಾಂಡರ ತನ್ನೂರಿಗೆ ತೆರಳಿದ. ಆದರೆ ಆತನ ಮನದಲ್ಲಿ ಮಾತ್ರ, ಈ ಜಗತ್ತೆಲ್ಲವೂ ನಶ್ವರವೆಂದು ಖಚಿತವಾಗಿತ್ತು.

ಸಂಗ್ರಹ— ವೆಂಕಟೇಶ ಹ್ಯಾಟಿ

ವೇದಸಾಹಿತ್ಯಕ್ಕೆ ಜರ್ಮನ್ನರ ಕೊಡುಗೆ

ಕೆ. ಎಸ್. ರಮಾ

ವೇದ ಎನ್ನುವ ಶಬ್ದಕ್ಕೆ ಜ್ಞಾನ ಎಂದು ಅರ್ಥವಿದೆ. ಅಪಾರವಾದ ಈ ಸಾಹಿತ್ಯ ಹಿಂದೂ ಸಂಸ್ಕೃತಿಯ ತಳಪಾಯವಾಗಿದೆ. ಆದರೆ ೩೦೦೦ ವರ್ಷಗಳಿಗಿಂತಲೂ ಹಿಂದೆ, ಆರ್ಯ ಜನಾಂಗದಿಂದ ರಚಿಸಲ್ಪಟ್ಟು, ಭಾರತೀಯ ಸಂಸ್ಕೃತಿಯ ಆಗರವೆನಿಸಿದ ಈ ಸಾಹಿತ್ಯವನ್ನು ತಿಳಿದುಕೊಳ್ಳುವ, ವಿಮರ್ಶಿಸುವ, ಹೊಸ ದೃಷ್ಟಿಕೋಣದಿಂದ ನೋಡಿ ಪ್ರಪಂಚದ ಇತರ ಸಾಹಿತ್ಯಗಳೊಂದಿಗೆ ತುಲನೆ ಮಾಡುವ ಪ್ರವೃತ್ತಿ ಬೆಳೆದದ್ದು ಇತ್ತೀಚೆಗೆ. ಅಂದರೆ ೧೮ನೇ ಶತಮಾನದಿಂದೀಚೆಗೆ ಎಂದರೆ ಆಶ್ಚರ್ಯವಲ್ಲವೇ? ಇದಕ್ಕೆ ಸ್ವಲ್ಪ ಮೊದಲು, ಅಂದರೆ ೧೭ನೇ ಶತಮಾನದ ಉತ್ತರಾರ್ಧದಲ್ಲಿ ಕೆಲವರು ಪಾದ್ರಿಗಳು ಭಾರತ ದೇಶದ ಭಾಷೆಗಳನ್ನು ಕಲಿತು ತಮ್ಮ ಧರ್ಮಪ್ರಚಾರಕ್ಕೆ ಅನುಕೂಲ ಮಾಡಿಕೊಳ್ಳುತ್ತಿದ್ದಾಗ ಹೇಗೋ ಸಂಸ್ಕೃತ ಸಾಹಿತ್ಯದ ಬಗ್ಗೆ ಆಸಕ್ತಿ ಮೂಡಲು, ಡಚ್‌ಮನ್ ಅಬ್ರಾಹಾಂ ರೋಗರ್‌ನು ಕೆಲವು ಲೇಖನಗಳನ್ನು ಪ್ರಕಟಿಸಿದನು. ಪಾಶ್ಚಾತ್ಯ ವಿದ್ವಾಂಸರ ಗಮನ ಆ ಕಡೆಗೆ ಸೆಳೆಯಲ್ಪಟ್ಟು, ಸಂಸ್ಕೃತ ಸಾಹಿತ್ಯವು ಉಜ್ವಲವಾಗಿ ಹೊರ ಪ್ರಪಂಚಕ್ಕೆ ಬರಲು ಸಾಧ್ಯವಾಯಿತು. ಅನೇಕ ಪಾಶ್ಚಾತ್ಯ ವಿದ್ವಾಂಸರು ಈ ವಿಷಯದಲ್ಲಿ ಆಸಕ್ತಿಯಿಂದ ಕೆಲಸಮಾಡಿದರೂ ಜರ್ಮನರು ಸಂಸ್ಕೃತ ಸಾಹಿತ್ಯಕ್ಕೆ, ಅದರಲ್ಲೂ ವೇದಸಾಹಿತ್ಯಕ್ಕೆ ಕೊಟ್ಟ ಕೊಡುಗೆ ಅತ್ಯಂತ ಪ್ರಶಂಸನೀಯವಾದದ್ದು. ಮೊಟ್ಟಮೊದಲಿಗೆ ಪಾಶ್ಚಾತ್ಯರು ವೇದಗಳ ವಿಷಯದಲ್ಲಿ ಅಸಡ್ಡೆ ತೋರಿದರೂ ಕೆಲವು ಜರ್ಮನರ ಶ್ರದ್ಧೆಯ ಫಲವಾಗಿ, ಹೊಸಚೇತನದಿಂದ, ಮುನ್ನುಗ್ಗುವಂತೆ ಮಾಡಿತು; ಆದರ ತಳೆಯುವಂತೆ ಮಾಡಿತು. ಕೋಲ್‌ಬ್ರೂಕ್ (೧೭೬೫-೧೮೩೭) ವೇದದಲ್ಲಿ ಹುರುಳಿಲ್ಲವೆಂದು ಮೊದಲಿಗೆ ಸಾರಿದರೂ, ಕಡೆಯಲ್ಲಿ ಅದನ್ನು ಅತ್ಯಂತ ಆದರಣೀಯವೆಂದು ಕರೆದಿದ್ದಾನೆ. ಇಷ್ಟು ದೊಡ್ಡ ಕೊಡುಗೆಯನ್ನು ಭಾರತಕ್ಕೆ ನೀಡಿದ ಕೆಲವು ವಿದ್ವಾಂಸರ ಶ್ರಮವನ್ನಾದರೂ ನಾವು ಅಲ್ಪಮಟ್ಟಿಗೆ ಅರಿತರೆ ಒಳ್ಳೆಯದಲ್ಲವೇ?

ವೇದ ಸಾಹಿತ್ಯವೆಂದರೇನು? ಎನ್ನುವ ಪ್ರಶ್ನೆ ಮೊದಲು ಉದ್ಭವಿಸುವುದು ಸಹಜವಷ್ಟೆ. ವೇದ ಪದದ ಅರ್ಥವಂತೂ 'ಜ್ಞಾನ' ಎಂದು ಹೇಳಲಾಗಿದೆ. ಬಹಳ ಸುಲಭವಾದ ಪರಿಭಾಷೆ ಶ್ರೀ ಸಾಯಣಾಚಾರ್ಯರು ಹೇಳಿದ ಮಂತ್ರ "ಬ್ರಾಹ್ಮಣಯೋರ್ವೇದ ನಾಮಧೇಯತ್ವಂ". ಪ್ರಸ್ತುತ ಸಂದರ್ಭಕ್ಕೆ ಇದು ಸಾಕು. ಮಂತ್ರ ಗ್ರಂಥಗಳಿಗೆ ಸಂಹಿತೆಗಳೆಂದೂ ಕರೆಯುತ್ತಾರೆ. ಇವು ನಾಲ್ಕು. ೧) ಋಗ್ವೇದ, ೨) ಯಜುರ್ವೇದ, ೩) ಸಾಮವೇದ, ೪) ಅಥರ್ವವೇದ. ಇವುಗಳಲ್ಲಿರುವ ಮಂತ್ರಗಳ ಉಪಯುಕ್ತತೆಯನ್ನು ಸಾರುತ್ತಾ ಯಜ್ಞಯಾಗಗಳಲ್ಲಿ ಅವುಗಳನ್ನು ಉಪಯೋಗಿಸುವ

ವಿಧಾನವನ್ನು ಹೇಳಿ, ವಿಮರ್ಶಿಸುವ ಗ್ರಂಥಗಳು ಬ್ರಾಹ್ಮಣ ಗ್ರಂಥಗಳು. ಪ್ರತಿಯೊಂದು ವೇದಕ್ಕೂ ಬ್ರಾಹ್ಮಣ ಗ್ರಂಥಗಳಿವೆ. ಇದರ ನಂತರ ಮಾನವನು ಆತ್ಮಸಾಕ್ಷಾತ್ಕಾರಕ್ಕಾಗಿ ಯಜ್ಞಯಾಗಗಳನ್ನೂ ತ್ಯಜಿಸಿ, ಜೀವನದ ಅತ್ಯುನ್ನತ ಗುರಿಗಾಗಿ ಹಂಬಲಿಸುತ್ತಾ ಶಾಶ್ವತ ಸುಖವನ್ನು ಪಡೆಯಲೋಸುಗ ಮಾಡಿದ ಪ್ರಯತ್ನದಿಂದ ಉಂಟಾದ ಮತ್ತೊಂದು ಶ್ರೇಣಿ ಆರಣ್ಯಕಗಳು ಮತ್ತು ಉಪನಿಷತ್ತುಗಳು. ಈ ಮೂರು ವಿಭಾಗಗಳನ್ನು ಶ್ರುತಿಯೆಂದು ಕರೆಯುತ್ತಾರೆ. ಇದಾದ ಮೇಲೆ ವೇದಾಂಗಗಳು. ಇದಿಷ್ಟೂ ವೈದಿಕಸಾಹಿತ್ಯ ಅಥವಾ ವೇದಸಾಹಿತ್ಯ. ಈ ಸಾಹಿತ್ಯದ ಪ್ರತಿಯೊಂದು ವಿಭಾಗದಲ್ಲೂ ಕೈಯಾಡಿಸಿ ಯಶಸ್ಸು ಗಳಿಸಿದವರೆಂದರೆ ಜರ್ಮನರು.

ಜರ್ಮನ್ ವಿದ್ವಾಂಸರಲ್ಲಿ ಫ್ರೆಡ್ರಿಕ್ ಮ್ಯಾಕ್ಸ್‌ಮುಲ್ಲರ್ ಎನ್ನುವ ಹೆಸರು ನಮಗೆ ಅತ್ಯಂತ ಪೂಜನೀಯ. ಫ್ರೆಡ್ರಿಕ್ ರೋಸನ್ನನು ವೇದ ಸಾಹಿತ್ಯದ ಅಡಿಗಲ್ಲನ್ನಿಸಿದ ಋಗ್ವೇದದ ಮೇಲೆ ಕೆಲವು ಲೇಖನಗಳನ್ನು ಬರೆದಿದ್ದನು. ಆದರೆ ಮ್ಯಾಕ್ಸ್‌ಮುಲ್ಲರನು ಮೊಟ್ಟಮೊದಲಿಗೆ ಋಗ್ವೇದವನ್ನು ಸಾಯಣಭಾಷ್ಯದೊಂದಿಗೆ ಅಚ್ಚುಮಾಡಿಸಿದನು (೧೮೯೦-೯೨). ಈ ರೀತಿ ಪೂರ್ಣ ಋಗ್ವೇದದ ಪ್ರತಿ ಮೊಟ್ಟಮೊದಲು ನಮಗೆ ದೊರೆತದ್ದು ಮ್ಯಾಕ್ಸ್‌ಮುಲ್ಲರನ ಕಷ್ಟಸಹಿಷ್ಣುತೆ ಮತ್ತು ದೃಢ ನಿರ್ಧಾರಗಳ ಫಲದಿಂದ.

ಮ್ಯಾಕ್ಸ್‌ಮುಲ್ಲರ್ ಮತ್ತು ಶೆಲಿಜಲ್ ಇಬ್ಬರೂ ಕೂಡಿ ತುಲನಾತ್ಮಕ ಭಾಷಾವಿಜ್ಞಾನ ಮತ್ತು ಧರ್ಮಗಳ ತುಲನಾತ್ಮಕ ಅಧ್ಯಯನಗಳಿಂದ ಸಂಸ್ಕೃತಕ್ಕೆ ಒಂದು ಪ್ರಮುಖ ಸ್ಥಾನವನ್ನು ಗಳಿಸಿ ಕೊಟ್ಟರು. ತನ್ನನ್ನು ಮೋಕ್ಷಮೂಲ್ಲರ್ ಭಟ್ಟ ಎಂದೂ ಆಕ್ಸ್‌ಫರ್ಡನ್ನು ಗೋಷ್ಪಾದಪುರವೆಂದೂ ಹೇಳಿಕೊಳ್ಳುವ ಮ್ಯಾಕ್ಸ್‌ಮುಲ್ಲರನಿಗೆ ಭಾರತೀಯ ಸಂಸ್ಕೃತಿಯಲ್ಲಿರುವ ಪ್ರೀತಿ, ಅಭಿಮಾನ ಅತ್ಯಂತ ಹೆಚಿನದು.

ಋಗ್ವೇದದ ಪೂರ್ಣ ಪ್ರತಿ ಹೊರಬರುವ ಮೊದಲೇ ರೂಡಾಲ್ಫ್ ರೋತ್‌ನು ಜರ್ಮನ್ ಭಾಷೆಯಲ್ಲಿ 'On the Literature and History of the Veda' ಎನ್ನುವ ಪುಸ್ತಕವನ್ನು ಬರೆದನು. ಆದರೆ ಸಂಸ್ಕೃತ ಸಾಹಿತ್ಯಕ್ಕೆ ಇವನು ಕೊಟ್ಟ ಶ್ರೇಷ್ಠ ಬಳುವಳಿ 'ಸೆಂಟ್ ಪೀಟರ್ ಬರ್ಗ್ ಡಿಕ್ಷನರಿ'. ರೋತ್ ಮತ್ತು ಬಾಟ್ಲಿಂಕರ ಪ್ರಯತ್ನದಿಂದ ಏಳು ಭಾಗಗಳಲ್ಲಿ ರೂಪುಗೊಂಡ ಈ ಡಿಕ್ಷನರಿಯಲ್ಲಿ ವೇದಗಳಲ್ಲಿ ಮತ್ತು ಪೂರ್ಣ ಸಂಸ್ಕೃತ ಸಾಹಿತ್ಯಗಳಲ್ಲಿ ಬರುವ ಶಬ್ದಾರ್ಥಗಳೊಂದಿಗೆ ಅನೇಕ ವಿಷಯಗಳ ವಿವರಣೆಯೂ ಇದೆ.

ರೋತ್‌ನ ಶಿಷ್ಯರಾದ ಚಾರ್ಲಸ್ ಲಾಸ್ಮನ್, ಡಬ್ಲ್ಯೂ. ಡಿ. ವ್ಹಿಟ್ನೆ (೧೮೨೭-೧೮೯೪) ಹೆನ್‌ರಿಚ್ ಜಿಮ್ಮರ್ ಸೀನಿಯರ್ (೧೮೫೦-೧೯೧೦) ರಿಚರ್ಡ್‌ಗಾರ್ಬೆ (೧೮೫೭-೧೯೨೭) ಮತ್ತು ಕಾರ್ಲ್ ಎಫ್. ಗೆಲ್ಡ್‌ನರ್ ಈ ಋಗ್ವೇದವನ್ನು ಅನುವಾದಿಸಿದರು. ಈ ನಂತರ ಹರ್ಮನ್ ಗ್ರಾಸ್‌ಮನ್ (೧೮೦೯-೧೮೭೭) ಮತ್ತು ಅಲ್ಫ್ರೆಡ್ ಲುಡ್‌ವಿಗ್ (೧೮೩೨-೧೯೧೧)ರಿಂದಲೂ ಮಾಡಲ್ಪಟ್ಟವು.

ಕಾಲಕ್ರಮದಲ್ಲಿ ಇತರ ವೇದಗಳೂ ಅನುವಾದಿಸಲ್ಪಟ್ಟವು. ಥಿಯೋಡಾರ್ ಬೆನ್‌ಫೆ (೧೮೦೯-೧೮೮೧) ಸಾಮವೇದವನ್ನೂ ಆಲ್‌ಬ್ರೆಕ್ಟ್ ವೀಬರ್‌ನು ಶುಕ್ಲಯಜುರ್ವೇದವನ್ನೂ ಅನುವಾದಿಸಿದರು. ಲಿಯೊಪೋಲ್ಡ್ ವಾನ್ ಷ್ರೋಯಿಡರ್ (೧೮೫೧-೧೯೨೦) ಕೃಷ್ಣಯಜುರ್ವೇದದ ಮೈತ್ರಾಯಣೀ ಸಂಹಿತೆಯನ್ನು ೨ ಭಾಗಗಳಲ್ಲಿಯೂ ಮತ್ತು ಕಠಕ ಸಂಹಿತೆಯನ್ನು ೪ ಭಾಗಗಳಲ್ಲಿಯೂ ಪ್ರಕಟಿಸಿದನು.

ಹೀಗೆಯೇ ಮುಂದೆ ಅಥರ್ವವೇದವನ್ನು ಕೂಡ ಜರ್ಮನಿಯ ಮಹಾಪುರುಷರಾದ ರುಡಾಲ್ಫ್ ರೋತ್ ಮತ್ತು ಡಬ್ಲ್ಯೂ. ಡಿ. ವಿಟ್ನಿಯವರು ೧೮೫೫-೫೬ನೇ ಇಸವಿಯಲ್ಲಿ ಸಂಪಾದಿಸಿ ಪ್ರಕಟಿಸಿದರಲ್ಲದೆ, ಥಿಯೋಡಾರ್ ಆಫ್ರೆಕ್ಟ್ ಮತ್ತು ಆಲ್ಬ್ರೆಕ್ಟ್ ವೀಬರರು ಅನುವಾದವನ್ನು ಮಾಡಿದರು. ಜೂಲಿಯಸ್

ಗ್ರಿತ್ ಎಂಬವರು (೧೮೪೦-೧೯೧೮) ಅಥರ್ವ ವೇದದ ಕೆಲವು ಸೂಕ್ತಗಳನ್ನು ಅನುವಾದಿಸಿದರು.

ಹರ್ಮನ್ ಒಲ್ಡನ್‌ಬರ್ಗರು ಜರ್ಮನಿಯ ಪ್ರಮುಖ ವಿದ್ವಾಂಸರಲ್ಲಿ ಒಬ್ಬರಾಗಿದ್ದು ಸಂಸ್ಕೃತ ಸಾಹಿತ್ಯದ ಮೇಲೆ ಅಪಾರ ಕೃಪಾದೃಷ್ಟಿಯನ್ನಿರಿಸಿದ್ದಾರೆ. ಇವರು ಬರೆದ "Religion of Veda" ಎನ್ನುವ ಗ್ರಂಥವು ವೇದದ ಕಾಲದ ಧಾರ್ಮಿಕ ವಿಷಯಗಳನ್ನು ಸ್ಪಷ್ಟವಾಗಿ ವರ್ಣಿಸುತ್ತದೆ. ಇದೇ ರೀತಿಯ ಮತ್ತೊಂದು ಗ್ರಂಥ ಆಲ್ಫ್ರೆಡ್ ಹಿಲ್‌ಬ್ರ್ಯಾಂಟ್ ಜರ್ಮನ್ ಭಾಷೆಯಲ್ಲಿ ಬರೆದ "Vedische Mythologie" ಇದು ಎರಡು ಭಾಗಗಳಲ್ಲಿ ಪ್ರಕಟವಾಗಿದೆ. ಇದೇ ಸಮಯದಲ್ಲಿ ಪ್ರಕಟವಾದ ಇನ್ನೊಂದು ಪುಸ್ತಕ "Life In Ancient India" ಇದರ ಗ್ರಂಥಕರ್ತರು ಪ್ರಸಿದ್ಧ ವಿದ್ವಾಂಸರೂ ಮತ್ತು ಋಗ್ವೇದವನ್ನು ಅನುವಾದಿಸಿದವರೂ ಆದ ಹೆನ್‌ರಿಚ್ ಜಮರ್‌ನರ್ ಸೀನಿಯರ್.

ವೇದಗಳನ್ನು ಅನುವಾದಿಸುವ ಮತ್ತು ಸಂಪಾದಿಸಿ ಪ್ರಕಟಿಸುವ ದೊಡ್ಡ ಕಾರ್ಯವೊಂದು ಕೊನೆಗೊಳ್ಳುತ್ತಿದ್ದಂತೆ, ಆಯಾಸವರಿಯದ ಈ ಉತ್ಸಾಹಶಾಲಿ ಜರ್ಮನ್ ಸಂಸ್ಕೃತ ಪ್ರೇಮಿಗಳ ದೃಷ್ಟಿ, ವೇದಗಳ ನಂತರ ರೂಪು ತಳೆದು, ಸ್ಥಾನ ಗಳಿಸಿದ, ವೇದದ ಮಂತ್ರಗಳನ್ನು ಉಪಯೋಗದಲ್ಲಿ ತರುವ ಕೆಲಸ ವಹಿಸಿದ, ಬ್ರಾಹ್ಮಣ ಗ್ರಂಥಗಳ ಕಡೆಗೆ ಹೊರಳಿತು. ಕೇವಲ ಪ್ರಕೃತಿ ಆರಾಧನೆಯನ್ನು ಮಾಡಿ, ಆ ದೇವತೆಗಳಿಗೆ ಹವಿಸ್ಸುಗಳನ್ನರ್ಪಿಸುವ ಬುದ್ಧಿ ಕ್ಷೀಣಗೊಂಡು ಅದಕ್ಕಿಂತ ಎತ್ತರದೆಡೆಗೆ, ಪ್ರಕೃತಿಯ ಮೇಲೆ ಸ್ವಾಮಿತ್ವವನ್ನು ಪಡೆಯಲೋಸುಗ ಆರಂಭವಾದ ಪ್ರಯತ್ನಗಳಲ್ಲಿ ಈ ಬ್ರಾಹ್ಮಣರ ಗ್ರಂಥಗಳು ಮೊದಲನೆಯ ಹಂತ. ಈ ಗ್ರಂಥಗಳು ಜರ್ಮನಿಯ ವಿದ್ವಾಂಸರ ಕೃಪಾದೃಷ್ಟಿಯಿಂದ ಬೆಳಕಿಗೆ ಬರತೊಡಗಿದವು.

ಇಂತಹ ಬ್ರಾಹ್ಮಣ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಿದವರಲ್ಲಿ ಋಗ್ವೇದಕ್ಕೆ ಸಂಬಂಧಿಸಿದ "ಐತರೇಯ ಬ್ರಾಹ್ಮಣ"ವನ್ನು ಸಂಪಾದಿಸಿ, ತನ್ನ ವಿಮರ್ಶಾತ್ಮಕ ಟಿಪ್ಪಣಿಗಳೊಂದಿಗೆ ಅನುವಾದಿಸಿ ಮಾರ್ಟಿನ್ ಹಾಗ್, ಶುಕ್ಲಯಜುರ್ವೇದಕ್ಕೆ ಸಂಬಂಧಿಸಿ, ಬ್ರಾಹ್ಮಣ ಗ್ರಂಥಗಳಲ್ಲೆಲ್ಲಾ ದೊಡ್ಡದೆಂದೂ ಹೆಚ್ಚುಗಾರಿಕೆಯದೆಂದೂ ಖ್ಯಾತಿ ಪಡೆದ "ಶತಪಥ ಬ್ರಾಹ್ಮಣ"ವನ್ನು ೫ ವಿಭಾಗಗಳಲ್ಲಿ Sacred Books of East" ಮಾಲಿಕೆಯಲ್ಲಿ ಅನುವಾದಿಸಿದ ಜೂಲಿಯಸ್ ಯೆಗ್‌ಲಿಂಗ್‌ನೂ ಬಹಳ ಹೆಸರಾದವರು. ವಿಲ್ಹೆಮ್ ಗ್ಯಾಲೆಂಡ್ ಬ್ರಾಹ್ಮಣ ಗ್ರಂಥಗಳ ಮೇಲೆ ಅನೇಕ ಪುಸ್ತಕಗಳನ್ನು ಜರ್ಮನ್ ಭಾಷೆಯಲ್ಲಿಯೇ ಬರೆದನು. ಹಿಲ್‌ಬ್ರ್ಯಾಂಟನು ಜರ್ಮನ್ ಭಾಷೆಯಲ್ಲಿ ಬರೆದ. "Full Moon and New Moon Sacrifice in Ancienit India" ಹಾಗೂ 'Ritual Literature' ಎರಡೂ ಪುಸ್ತಕಗಳು ಈ ನಿಟ್ಟಿನಲ್ಲಿ ಪ್ರಶಂಸಾರ್ಹವಾದವುಗಳು.

ಉಪನಿಷತ್ತುಗಳನ್ನು ಇಂದು ಹಿಂದೂ ಧರ್ಮಸಾರವೆಂದೂ ಮಾರ್ಗದರ್ಶಿಯೆಂದೂ ಕರೆಯುತ್ತೇವೆ. ತ್ರಿಮತಸ್ಥ ಆಚಾರ್ಯರೂ ಕೂಡ ತಮ್ಮ ಮತಗಳನ್ನು ಈ ಉಪನಿಷತ್ತುಗಳ ಆಧಾರದ ಮೇಲೆಯೇ ದೃಢೀಕರಿಸಿದ್ದಾರೆ. ಇಂತಹ ಸಾಹಿತ್ಯ ಜರ್ಮನ್ ವಿದ್ವಾಂಸರ ಕಣ್ಣಳತೆಯಿಂದ ದೂರವಾಗಲಿಲ್ಲ. ವೇದಾಂತವೆಂದು ಕರೆಯುವ ಉಪನಿಷತ್ತುಗಳಲ್ಲಿ ವೇದಸಾಹಿತ್ಯದ ಸಾರಸರ್ವಸ್ವವಲ್ಲದೆ ವೇದಗಳ ಅಂತಿಮ ಗುರಿಯೆನಿಸಿದ ಆತ್ಮಸಾಕ್ಷಾತ್ಕಾರವೂ ಸಂಪೂರ್ಣವಾಗಿ ರೂಪುಗೊಂಡಿದೆ. ಈ ಉಪನಿಷತ್ತುಗಳನ್ನು ಒಟ್ಟೊಬಾಟ್ಲಿಂಕ್ ಆಲ್ಫ್ರೆಡ್ ಹಿಲ್‌ಬ್ರ್ಯಾಂಟ್, ಜೊಹೆನ್ ಹರ್ಟೆಲ್ ಮುಂತಾದವರು ಅನುವಾದಿಸಿದರು. ಆದರೆ ಈ ಸಾಹಿತ್ಯವನ್ನು ಅನುವಾದಿಸುವ ಕಾರ್ಯದಲ್ಲಿ ಸ್ವಾಮಿತ್ವವನ್ನು ಪಡೆದ ವ್ಯಕ್ತಿಯೆಂದರೆ 'ಪಾಲ್ ಡಾಯಿಸೆನ್ (೧೮೪೫-೧೯೧೯) ಈ ಮಹಾ ಪಂಡಿತನು ಸುಮಾರು ೬೦ ಉಪನಿಷತ್ತುಗಳನ್ನು ಅನುವಾದಿಸಿರುವನಲ್ಲದೆ ತನ್ನ

ಇಂಗ್ಲಿಷ್ ಗ್ರಂಥವಾದ (General History of Philosophy) ಯಲ್ಲಿ ಒಂದು ಭಾಗವನ್ನು ಸಂಪೂರ್ಣವಾಗಿ ಉಪನಿಷತ್ತು ವೇದಾಂತಕ್ಕೆ ಮೀಸಲಾಗಿರಿಸಿದ್ದಾನೆ. 'The Philosophy of Upanishads' ಎನ್ನುವ ಈ ವಿಭಾಗದಲ್ಲಿ ಯಥಾರ್ಥವಾದ ಉಪನಿಷತ್ ಜ್ಞಾನವು ಲಭ್ಯವಾಗುವಂತೆ ಮಾಡಿರುವ ಈ ವಿದ್ವಾಂಸನ "Das System Des Vedanta" ಎನ್ನುವ ಇನ್ನೊಂದು ಜರ್ಮನ್ ಗ್ರಂಥದಲ್ಲಿ ಮುಂದೆ ಹುಟ್ಟಿದ "ಷಡ್ದರ್ಶನ" (ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಪೂರ್ವ ಮೀಮಾಂಸೆ ಉತ್ತರ ಮೀಮಾಂಸೆ)ಗಳನ್ನು ವಿವರಿಸಿದ್ದಾನೆ. ಅಪ್ಪಟ ಅದ್ವೈತಿಯಾದ ಇವನನ್ನು ಇವನ ಹಿಂದೂಸ್ನೇಹಿತರು "ದೇವಸೇನ" ನೆಂದು ಕರೆಯುತ್ತಿದ್ದರಂತೆ!

ವೇದಾಂತಗಳಲ್ಲಿ (ವೇದಾಂಗಗಳು ಆರು. ಶಿಕ್ಷಾ, ಕಲ್ಪ, ನಿರುಕ್ತ, ವ್ಯಾಕರಣ, ಜ್ಯೋತಿಷ ಮತ್ತು ಛಂದಸ್ಸು) ಈ ವಿದ್ವಾಂಸರ ಮೊದಲ ಗಮನ ಸೆಳೆದುದು ವ್ಯಾಕರಣ. ಭಾರತ ದೇಶದ ವ್ಯಾಕರಣಶಾಸ್ತ್ರವು ಬಹು ಪ್ರಾಚೀನವಾಗಿದ್ದಂತೆ ವೈಜ್ಞಾನಿಕವೂ ಪ್ರಭಾವಶಾಲಿಯಾಗಿಯೂ ಇದ್ದುದೇ ಇದಕ್ಕೆ ಕಾರಣ. ೪೦೦೦ ಸೂತ್ರಗಳಲ್ಲಿ ರಚಿಸಲ್ಪಟ್ಟ ಮಹರ್ಷಿ ಪಾಣಿನಿಯ "ಅಷ್ಟಾಧ್ಯಾಯೀ" ವ್ಯಾಕರಣ ಗ್ರಂಥಗಳಲ್ಲಿ ಮೊದಲನೆಯದೂ ಹೌದು, ಪರಿಪೂರ್ಣವೂ ಹೌದು. ಮೊಟ್ಟಮೊದಲಿಗೆ ಒಟ್ಟೋ ಬೊಟ್ಲಿಂಕನು ಪಾಣಿನಿಯ ವ್ಯಾಕರಣದ ಮೊದಲನೆಯ ಅಧ್ಯಾಯವನ್ನು ತನ್ನ ವಿಮರ್ಶೆಯೊಂದಿಗೆ ೧೮೩೯ ರಲ್ಲಿ ಪ್ರಕಟಿಸಿದ. ನಂತರ ೧೮೮೭ ರಲ್ಲಿ ಸಂಪೂರ್ಣ ಪುಸ್ತಕವನ್ನು ಆತ ಪ್ರಕಟಿಸಿ ಅದನ್ನು ಅನುವಾದಿಸಿದನಲ್ಲದೆ ತನ್ನ ಅತ್ಯಮೂಲ್ಯ ವಿಮರ್ಶಾತ್ಮಕ ಟಿಪ್ಪಣಿಗಳನ್ನೂ ಸೇರಿಸಿದ. ಗೋಲ್ಡ್ ಸ್ಟಕರ್, ಎಫ್. ಕೀಲ್ ಹಾರ್ನ್, ಜ್ಯೂಲಿಯಸ್ ಯಂಗ್ ಲಿಂಗ್, ಬಿ. ಲಿಬಿಕ್ ಮುಂತಾದವರು ಪಾಣಿನಿಯ ವಿಷಯದಲ್ಲಿ ಅಧಿಕಾರಯುತರಾದವರು. ಎಫ್. ಕೀಲ್ ಹಾರ್ನನು ಭಾರತದ ವಿದ್ಯಾರ್ಥಿಗಳಿಗಾಗಿ ಬರೆದ ವ್ಯಾಕರಣ ಪುಸ್ತಕವು ಬಹಳ ಉಪಯುಕ್ತವಾಗಿದೆ.

ಬ್ರಾಹ್ಮಣ ಗ್ರಂಥಗಳಲ್ಲಿ ವಿವರಿಸಿದ ಯಜ್ಞಯಾಗಗಳು ವಿಸ್ತೃತವಾಗಿಯೂ ಬಹಳ ಜಟಿಲವಾಗಿಯೂ ಇದ್ದು ಅವುಗಳನ್ನು ಅನುಷ್ಠಾನಕ್ಕೆ ತರುವ ಕೆಲಸ ಬಹಳ ಕಷ್ಟಕರವಾಗಿತ್ತು. ಇದನ್ನು ಹೋಗಲಾಡಿಸಲೋಸುಗ ಸೂತ್ರಗಳು ಬರೆಯಲ್ಪಟ್ಟವು. ಇವುಗಳನ್ನು ಮೂರು ಭಾಗಗಳಾಗಿ ಹೇಳಬಹುದು. ಶ್ರೌತಸೂತ್ರಗಳು, ಗೃಹ್ಯ ಸೂತ್ರಗಳು ಮತ್ತು ಧರ್ಮಸೂತ್ರಗಳು. ಆದರೆ ಬ್ರಾಹ್ಮಣಗಳಿಂದ ಇವುಗಳ ವಸ್ತುಗಳನ್ನಾಯ್ದಿರುವುದರಿಂದ ಇವುಗಳಿಗೆ ಎರಡನೆಯ ಸ್ಥಾನ ಮಾತ್ರ ಲಭಿಸಿದೆ. ಆದ್ದರಿಂದ ಉಪನಿಷತ್ ವರೆಗಿನ ಸಾಹಿತ್ಯವನ್ನು ಶ್ರುತಿಯೆಂದೂ ಅಪೌರುಷೇಯವೆಂದೂ ಘೋಷಿಸಿದ ನಮ್ಮ ಹಿರಿಯರು ಇವುಗಳನ್ನು 'ಸ್ಮೃತಿ' (ಹಿಂದಿನ ಗ್ರಂಥಗಳ ನೆನಪಿನಿಂದ ರಚಿತವಾದದ್ದು) ಎಂದು ಕರೆದಿದ್ದಾರೆ.

ಜರ್ಮನ್ ವಿದ್ವಾಂಸರು ಈ ಸಾಹಿತ್ಯದಲ್ಲಿ



ಸನ್ ಬಿಡು ಇಲ್ದಿದ್ರೆ ನೀನೂ ನಮ್ಮ ಗುಂಪಿಗೆ ಸೇರಿದ್ದೀಯ ಅಂತ ಹೇಳ್ಬಿಡ್ತೀನಿ...!

ಪ್ರಮುಖವೆನಿಸಿದ ಅನೇಕ ಗ್ರಂಥಗಳನ್ನು ಅನುವಾದಿಸಿದ್ದಾರೆ. ಇವುಗಳಲ್ಲಿ ಹೆರ್ನ್‌ವೆಲ್ಯನ್‌ನ 'The Hindu Code, Called the Law of Manu ಸರಿಸ[illegible]ದಾಗಿದೆ. ಆದರೆ ಕೆಲವು ಕಡೆ ಮಾತ್ರ ಈತನು ನಮಗೆ ದಾರಿತಪ್ಪಿಸುತ್ತಾನೆ. ಜಾರ್ಚ್ ಬುಹ್ಲರನು ವಿಮರ್ಶಾತ್ಮಕ ಟಿಪ್ಪಣಿಗಳೊಂದಿಗೆ ಅನುವಾದಿಸಿದ ಮನುಸ್ಮೃತಿಯು ಗ್ರಂಥ ಪ್ರಶಂಸನೀಯವಾಗಿದೆ ಜೂಲಿಯಸ್ ಜಾಲಿಯು ನಾರದ ಮತ್ತು ಬೃಹಸ್ಪತಿ ಸ್ಮೃತಿಗಳನ್ನು ಅನುವಾದಿಸಿದ್ದಾನೆ. ಹೀಗೆಯೇ ವೇದಾಂಗದಲ್ಲಿ ಒಂದಾದ ಜ್ಯೋತಿಷ ಶಾಸ್ತ್ರದ ವಿಶಿಷ್ಟ ಕೃತಿಯಾಗಿ ಉಳಿದ ವರಾಹಮಿಹಿರನ ಲಘುಕೌಮುದಿಯೂ ಎ. ವೀಬರ್ ಮತ್ತು ಹರ್ಮನ್ ಜಾಕೋಬಿಯವರಿಂದ ಅನುವಾದಿಸಲ್ಪಟ್ಟಿತು. ಮತ್ತೆ ಜಾಕೋಬಿಯು ಈ ಜ್ಯೋತಿಷ ಶಾಸ್ತ್ರದ ಮೂಲಕ ಋಗ್ವೇದದ ಕಾಲವನ್ನು ೪೫೦೦ B. C. ಎಂದು ಸ್ಥಿರಗೊಳಿಸಿದ್ದಾನೆ.

ಜರ್ಮನ್ ವಿದ್ವಾಂಸರ ಕೊಡುಗೆಯನ್ನು ನೆನೆಯುತ್ತಾ ಹೋದಾಗ ಫೆಡ್ರಿಕ್ ಮ್ಯಾಕ್ಸ್‌ಮುಲ್ಲರನು ನಮ್ಮಲ್ಲಿ ಚಿರಸ್ಥಾಯಿಯಾಗಿ ನಿಲ್ಲುವನು. ಪ್ರಧಾನ ಸಂಪಾದಕನಾಗಿದ್ದ "Sacred Books of East" (S. B. E.) ಗ್ರಂಥ ಮಾಲಿಕೆಯಲ್ಲಿ ಇವನು ಪೌರಸ್ತ್ಯ ರಾಷ್ಟ್ರಗಳಾದ ಚೈನಾ, ಇರಾಣ್ ಮತ್ತು ಇಂಡಿಯಾ ದೇಶದ ಅನೇಕ ಧಾರ್ಮಿಕ ಗ್ರಂಥಗಳನ್ನು ಸಂಪಾದಿಸಿ, ಇತರ ವಿದ್ವಾಂಸರ ಸಹಾಯದಿಂದ ಇಂಗ್ಲೀಷಿಗೆ ಅನುವಾದಿಸಿದ್ದಾನೆ. ೮೦ ಸಂಪುಟಗಳಲ್ಲಿ ಪ್ರಕಟವಾದ ಈ ಮಾಲಿಕೆ ಈ ಮೂರು ದೇಶಗಳ ಮುಖ್ಯವಾದ ಎಲ್ಲಾ ಧಾರ್ಮಿಕ ಗ್ರಂಥಗಳನ್ನೂ ಒಂದೇ ಭಾಷೆ (ಇಂಗ್ಲಿಷ್)ನಲ್ಲಿ ಎಲ್ಲಾ ಜನರಿಗೂ ಈ ಮೂಲಕ ಒದಗಿಸಿದೆ. ಇದರಿಂದ ಆ ಧರ್ಮಗಳ ವಿಷಯದಲ್ಲಿ ಹೆಚ್ಚಿನ ಅಧ್ಯಯನ ನಡೆಸಲು ಸಹಾಯಕವಾಗಿದೆ. ಪ್ರಧಾನ ಸಂಪಾದಕನ ಹೊಣೆ ಸುಲಭವಲ್ಲ. ಹಾಗೆಯೇ ಮೂಲದಿಂದ ತರ್ಜುಮೆ ಮಾಡುವಕಾರ್ಯವೂ ಬಹಳ ಕಷ್ಟಕರ. ಸರಿಯಾದದ್ದನ್ನೇ ಹೇಳಬೇಕು. ಇನ್ನೊಂದು ಧರ್ಮದ ಬಗ್ಗೆ ಹೇಳುವಾಗ ಸ್ವಲ್ಪ ತಪ್ಪಿದರೂ ಆ ಧರ್ಮೀಯರಿಗೆ ಖೇದವಾಗಬಹುದು. ಮ್ಯಾಕ್ಸ್‌ಮುಲ್ಲರ್ ತನ್ನ ಪೀಠಿಕೆಯಲ್ಲಿ ಹೇಳಿದ್ದಾನೆ," what is wanted here, as every where else, is the truth and the whole truth. ಅತ್ಯಂತ ಜಾಗರೂಕನಾಗಿ, ಸಮರ್ಪಕವಾಗಿ ಕೆಲಸ ನಿರ್ವಹಿಸಿದ ಕೀರ್ತಿ ಮ್ಯಾಕ್ಸ್‌ಮುಲ್ಲರನದು.

ಜರ್ಮನರು ವೇದಸಾಹಿತ್ಯಕ್ಕೆ ಕೊಟ್ಟಿದ್ದೇನು ? ಅವರ ಪರಿಶ್ರಮವೆಷ್ಟು? ಎನ್ನುವುದನ್ನು ಬರೀ ಮಾತಿನಲ್ಲಿ ಹೇಳಲು ಸಾಧ್ಯವಿಲ್ಲ. ವೇದ ಸಾಹಿತ್ಯದ ಮೇಲಿನ ನಂಬಿಕೆ ಕ್ಷೀಣವಾಗುತ್ತಿದ್ದಾಗ, ಅದನ್ನು ತಿಳಿದುಕೊಳ್ಳುವ ಪ್ರಜ್ಞೆಯೇ ಇಲ್ಲದೆ ಭಾರತೀಯರು ಕತ್ತಲಲ್ಲಿ ತೊಳಲಾಡುತ್ತಿದ್ದಾಗ, ಹೊರಗಿನಿಂದ ಬಂದ ಈ ವಿದ್ವಾಂಸರ ಕೊಡುಗೆ, ಪರಿಶ್ರಮ ಸ್ತುತ್ಯಾರ್ಹ, ಅನುಕರಣೀಯ. ಪ್ರಪಂಚದಿಂದ ಒಂದು ಅಮೋಘ ಸಾಹಿತ್ಯ ಕಣ್ಮರೆಯಾಗದಂತೆ ನೋಡಿಕೊಳ್ಳಲು ಇವರು, ಹೆಚ್ಚು ಜನರು ಸುಲಭದಲ್ಲಿ ಅರಿತುಕೊಳ್ಳಲಾಗದ ಭಾಷೆಯಿಂದ, ಜನರಂಜಿತವಾದ ಇಂಗ್ಲಿಷ್ ಭಾಷೆಗೂ, ಜರ್ಮನ್ ಭಾಷೆಗೂ ತರ್ಜುಮೆ ಮಾಡಿ ಅದನ್ನು ಉದ್ಧಾರ ಮಾಡಿದರು ಎಂದರೆ ಅತಿಶಯೋಕ್ತಿಯಲ್ಲ. ನಮ್ಮ ಆಲಸ್ಯಕ್ಕೆ, ಅಸಡ್ಡೆಗೆ ಜರ್ಮನರಿತ್ತ ಚುಚ್ಚುಮದ್ದು ಇದು.

ಇನ್ನಾದರೂ ಭಾರತೀಯರಲ್ಲಿ ಆತ್ಮಜಾಗ್ರತೆ ಆಗದಿದ್ದರೆ ವೇದ ಸಾಹಿತ್ಯವು ಬೆಳಗಲಾರದು. ★

ಗಾಂಧೀಜಿ- ಅಂದು, ಇಂದು....

ಸಂಗ್ರಹ: ಡಿ. ಕೆ. ಜಯಂತಲತಾ

ನೀನೇ ಭಾರತವಾಗಿ, ಭಾರತವೇ ನೀನಾಗಿ
ದೀನ ದಲಿತರ ಕಣ್ಣಿಗಮೃತ ಕಿರಣ

—ಕೆ. ಎಸ್. ನ.

ಗಾಂಧಿ ಹುಟ್ಟಿದಾಗ ನಾನು ಹುಟ್ಟಿದ್ದಿಲ್ಲ
ಗಾಂಧಿ ಸತ್ತಾಗ ನಾನು ಸತ್ತದ್ದೂ ಇಲ್ಲ
ಒಂದೋ ನಾನು ಹುಟ್ಟಿದ್ದು ತಡವಾಯಿತು
ಇಲ್ಲ ಅವನು ಸತ್ತದ್ದು ಬೇಗಾಯಿತು
ಇಲ್ಲವಾದರೆ........

—ಬನ್ನಂಜೆ ಗೋವಿಂದಾಚಾರ್ಯ

ಸೂರ್ಯ ಮುಳುಗದ ಮಹಾಸಾಮ್ರಾಜ್ಯ ಪೀಠವನು
ನಡುಗಿಸಿತ್ತವನೊಂದು ಶಾಂತಿಮಂತ್ರ ಸ್ಫೂರ್ತಿ

—ಕಯ್ಯಾರ ಕಿಞ್ಞಣ್ಣ ರೈ

ಗಾಂಧಿ ಬರಿ ಮಿಂಚು; ಮಿಂಚಿನಂತೆ ಧಗೆ
ಒಂದೇ ಗಳಿಗೆ
ಗಾಂಧಿ ಸಂಜೆ ಬಗೆ, ಒಂದೇ ಕ್ಷಣದ ನಗೆ!

—ಲಕ್ಷ್ಮೀನಾರಾಯಣ ಭಟ್ಟ

ನಿನಗೆ ಮನುಷ್ಯರ ಹಿಂದಿನ ದೇವರು ಬೇಕು
ನನಗೆ ದೇವರ ಮುಂದಿನ ಮನುಷ್ಯರು
ಮಾತ್ರ ಸಾಕು

—ಕೆ. ವಿ. ತಿರುಮಲೇಶ್

ಈ ಮುದುಕಜ್ಜನ ಕಥೆ ಕೇಳಿದರೆ
ಹಗಲೂ ದಿಗಿಲಾಗುತ್ತದೆ
ಚಿತ್ರ ನೋಡಿದರೆ ಬೆರಗಾಗುತ್ತದೆ

—ಜಿ. ಎಸ್. ಸಿದ್ಧಲಿಂಗಯ್ಯ

ಗಾಂಧಿ ಎಂದರೆ ಯಾರು ಎಂದು ಕೇಳಿದರೆ
ಹೇಳುವೆನು ಹೀಗೆ ನಾನು:
ಸತ್ತು ಬದುಕಿದ ಸತ್ಯ; ಸೋತ ಮೃತ್ಯು
ಸತ್ಯಾಗ್ರಹ ಸರ್ವೋದಯಗಳ ಬಿತ್ತು!

—ಗುಂಡ್ಮಿ ಚಂದ್ರಶೇಖರ ಐತಾಳ

ಒಂದು ಧ್ವಜಕಾಗಿಯೂ
ಒಂದು ಹಾಡಿಗೆ ಕೂಡ
ಬದುಕುವುದು ಸಾರ್ಥಕವು
ಎಂದು ತಿಳಿದವನು
ಮನೆಯ ಅಂಗಳದಲ್ಲಿ
ಕರುಣೆಯ ಸಸಿ ನೆಟ್ಟವನು

—ಸುಬ್ಬಣ್ಣ ಎಕ್ಕುಂಡಿ

ಅಯ್ಯಾ, ನೀನು ಬಸವನ ಹಾಗೆ ಕಸ ತೆಗೆದು
ಹೋದೆ;
ಮತ್ತಿಲ್ಲಿ ಬಿದ್ದಿದೆ ನೋಡು ತಿಪ್ಪೆ!
ನೀನು ಗಳಿಸಿಟ್ಟುದನ್ನೆಲ್ಲ ಕಳೆದು; ಮತ್ತೆ
ನಮ್ಮದು ತಿರುಪೆ!

—ಸಿ. ಪಿ. ಕೆ.

ಇಂದು: ನಮಗೆ ನೀನು
ಹೊಸಬನಲ್ಲದಿದ್ದರೂ
ಅಪರಿಚಿತ

—ವೇಣುಗೋಪಾಲ ಸೊರಬ

ನೀನಿಲ್ಲಿ ನೆಲೆಯೂರಿಸಿದ ಅಹಿಂಸೆಗೆ
ರಜೆ ಪ್ರಾರಂಭವಾಗಿದೆ ಬಾಪೂ
ನಿನ್ನ ಚಪ್ಪಲಿ ಊರುಗೋಲುಗಳೇ
ಹೊಡೆದಾಟಕ್ಕೆ ಅಸ್ತ್ರವಾಗಿವೆ ಬಾಪೂ

—ಸುಬ್ರಾಯ ಚೊಕ್ಕಾಡಿ

(ಎಂ. ಜಿ. ಎಂ. ಕಾಲೇಜಿನ ಬೆಳ್ಳಿಹಬ್ಬದ ಸಂಚಿಕೆ 'ನಗರಿ'ಯಿಂದ ಸಂಗ್ರಹಿತ)

ಕೆ. ರಘುಪತಿಭಟ್ಟ

ನಿಮಗೆಷ್ಟು ಮುಖಗಳು? ವಿಚಾರ ಮಾಡಿದ್ದೀರಾ?

ಜಗತ್ತಿನ ಸೃಷ್ಟಿಯಾಗಿ ಮನುಷ್ಯ ಜನಾಂಗ ನೆಲೆಗೊಳ್ಳುತ್ತಲೆ ದೈವ- ದೇವರ ಕಲ್ಪನೆಯೂ ಬೆಳೆದು ಬಂತು. ಆಯಾ ಪ್ರದೇಶದ ಜನಗಳ ಮನೋಧರ್ಮಕ್ಕೂ ಭೂಗುಣಕ್ಕೂ ಅನುಸಾರವಾಗಿ ದೈವ-ದೇವರ ಸ್ವರೂಪದಲ್ಲೂ ಅವುಗಳ ಕಾರ್ಯ-ಕ್ಷೇತ್ರದ ಕಲ್ಪನೆಯಲ್ಲೂ ಆರಾಧನಾ ವಿಧಾನದಲ್ಲೂ ತಾರತಮ್ಯ ತಲೆದೋರಿತು. ಪ್ರಕೃತಿಯ ವಿವಿಧ ಶಕ್ತಿಗಳ ವಿರುದ್ಧ ಹೋರಾಡಲಾರದ ಮಾನವ, ತನ್ನನ್ನು ಮೀರಿದ ಶಕ್ತಿ ಸಾಮರ್ಥ್ಯಗಳು ಅವುಗಳಿಗಿರುವುದನ್ನು ಗುರುತಿಸಿ ಪೂಜಿಸಹತ್ತಿದ. ಪ್ರಕೃತಿಯ ಪ್ರತಿಭಟನೆ ಅಥವಾ ಪ್ರಕೃತಿಯನ್ನು ಮಾನವೋಪಯೋಗಿಯಾಗಿ ಪಳಗಿಸುವುದೇ ವಿಜ್ಞಾನವೆಂದು ಒಪ್ಪುವುದಾದರೆ, ಇದು ಅವೈಜ್ಞಾನಿಕವಾಗಿರುವುದನ್ನು ಗುರುತಿಸಬಹುದು. ಆದರೆ ಈ ಕಲ್ಪನೆಯ ಹಿಂದಿರುವ ಆಶಯವನ್ನೂ ಅದರೊಂದಿಗೆ ಈಗಲೂ ಬೆಳೆದು ಬಂದಿರುವ ಭಾವಕೋಶವನ್ನು ಗಮನಿಸಿದರೆ ಇದು ಅವೈಜ್ಞಾನಿಕವೆಂದು ಹೇಳುವ ಎದೆಗಾರಿಕೆ ಯಾರಿಗೆ ಬಂದೀತು ?

"ದೇವರ ಭಯವೇ ಜ್ಞಾನದ ಮೂಲ" ಅನ್ನುವ ಮಾತು ಪ್ರಸಿದ್ಧವಾಗಿದೆ. ಮಾನವ ಜನಾಂಗದ ಮೂಲ ಸಾಹಿತ್ಯವೆಲ್ಲ ಇಂಥ ದೈವೀ ಸಾಹಿತ್ಯವಾಗಿರುವುದನ್ನೂ ಆ ಸಾಹಿತ್ಯವೇ ಜ್ಞಾನಸ್ರೋತವಾಗಿ ಹರಿದು ಬಂದಿರುವುದನ್ನೂ ಜಗತ್ತಿನ ಬೇರೆ ಬೇರೆ ಭಾಗಗಳ ಚರಿತ್ರೆಯಲ್ಲಿ ಕಂಡುಕೊಳ್ಳಬಹುದು. ಬಹುಶಃ ಈ ಕಾಲದಲ್ಲೇ ಆರಂಭವಾಗಿರಬೇಕು, ಅಮಾನುಷ ಶಕ್ತಿಗಳನ್ನು ಒಂದಕ್ಕಿಂತ ಹೆಚ್ಚು ತಲೆಗಳನ್ನು ಕೊಟ್ಟು ನಂಬುವ ಮತ್ತು ಪ್ರತಿಮಾಕೃತಿಯಾಗಿ ಪೂಜಿಸುವ ಪದ್ಧತಿ. ಹೀಗೆ ನಂಬುವಲ್ಲಿ ನಾವು ಮೆಚ್ಚಬೇಕಾದ್ದು— ನಮ್ಮ ಆದಿಮಾನವನ ಧರ್ಮಭೀರುತ್ವ ಅಥವಾ

ದೈವಭಕ್ತಿಗಿಂತಲೂ ಹೆಚ್ಚಾಗಿ ಅವನ ವಿಚಾರ ಶೀಲತೆಯನ್ನು.

ನಾವು ಇತರರನ್ನು ಕುರಿತು ಆಡುವಾಗ, ನಿರೂಪಿಸುವಾಗ ನಮ್ಮನ್ನೇ ನಾವು ಅಭಿವ್ಯಕ್ತೀಕರಿಸುತ್ತೇವೆನ್ನುವ ಮಾತು ಮೂಲಭೂತವಾದ ವಸ್ತುಸ್ಥಿತಿಯಾಗಿದೆ. ಇಲ್ಲದಿದ್ದರೆ, ದೇವರ ಸೃಷ್ಟಿಯಾದ ಮಾನವ ದೇವರನ್ನು ಸೃಷ್ಟಿಸಿದರೆ ಹೇಗೆ? ದನ ಮೇಯಿಸುವ ಹುಡುಗರು ತಮಗೆ ಸಿಕ್ಕ ಸಿಕ್ಕಿದ ವಸ್ತುಗಳನ್ನೇ ಗೊಂಬೆ ಮಾಡಿ, ಬಣ್ಣ ಬಣ್ಣದ ಗಿಡ್ಡ ಸೊಪ್ಪು ಹೂ-ಹಣ್ಣುಗಳನ್ನರ್ಪಿಸಿ ಏನೇನೋ ಗುನುಗಿ 'ಪೂಜೆ' ಮಾಡುವ ಆ ಬಾಲಿಶ ಕಲ್ಪನೆಗಿಂತ ದೇವರು ಬಹುಮುಖಿ, ಬಹುರೂಪಿ ಎಂಬ ಮೂಲಕಲ್ಪನೆಯೇ ಹಿನ್ನೆಲೆಯಾಗುಳ್ಳ ಈ ಪೂಜೆ ಹೆಚ್ಚು ಪ್ರೌಢವೂ ಮಾರ್ಮಿಕವೂ ಆಗಿದೆ ಎಂಬುದನ್ನು ಎಂಥವರೂ ಒಪ್ಪಬೇಕು.

ದೇವರನ್ನು ಚಿತ್ರಿಸುತ್ತ ಮನುಷ್ಯ ತನ್ನನ್ನೇ ತಾನು ಚಿತ್ರಿಸಿದ ಸೂಚ್ಯವಾಗಿ. ತ್ರಿಮೂರ್ತಿಗಳನ್ನು ಒಟ್ಟಾಗಿಯೂ ಬೇರಾಗಿಯೂ ಹೇಳುವುದುಂಟು. ಅವರಲ್ಲಿ ಬ್ರಹ್ಮನಿಗೆ ನಾಲ್ಕು ಮುಖ. ಈಶ್ವರನಿಗೆ ಐದು ಮುಖ. ಇನ್ನು ಐದು ಮುಖದ ಈಶ್ವರನ ಮಗ ಷಣ್ಮುಖನಿಗೆ ಆರು ಮುಖವಿಲ್ಲದಿದ್ದರೆ ಹೇಗೆ? ಇದು ದೇವ ದೇವತೆಗಳ ಸಂಗತಿಯಾಯಿತು. ರಾಕ್ಷಸರಲ್ಲಿ ರಾವಣನಿಗೆ ಹತ್ತು ಮುಖ. ಇನ್ನು ಕ್ಷುದ್ರ ದೈವಗಳಿಗೂ ಒಂದಕ್ಕಿಂತ ಅಧಿಕ ಮುಖ ಕೊಟ್ಟು ಪ್ರತಿನಿಧಿಸುವುದೂ ಉಂಟು.

ಆ ಮುಖಗಳ ನಿರ್ದಿಷ್ಟ ಸಂಖ್ಯೆ ಏನನ್ನು ಸೂಚಿಸುತ್ತದೋ ನಮಗೆ ಬೇಕಿಲ್ಲ. ಒಟ್ಟು ಈ ವ್ಯಕ್ತಿಗಳು (ಶಕ್ತಿಗಳು) ಒಂದೇ (?) ತಲೆ ಪಡೆದಿರುವ ನಮಗಿಂತ ಹೆಚ್ಚು ಶಕ್ತರು, ಲೋಕೋತ್ತರರಾದವರು ಎಂದು ಸಾಮಾನ್ಯವಾಗಿ ಹೇಳುವುದು ಪಾಠ. ಇಲ್ಲಿ ಪ್ರಾರಂಭದಲ್ಲೇ ಎರಡು ಅಂಶಗಳನ್ನು ಪ್ರಸ್ತಾಪಿಸುವುದು ಅಗತ್ಯ: ೧. ಕೆಲವರ ಈ ಮುಖಗಳಿಗೆ ಅವುಗಳದೇ ಆದ ಹೆಸರಿದೆ (ಈ ಮುಖಗಳ ಹೆಸರುಗಳಿಂದಲೆ ಆಯಾ ವ್ಯಕ್ತಿಗಳಿಗೆ ಹೆಸರು ಬಂದಿರುವುದೆಂಬುದು ಬಹು ಮುಖ್ಯ ಸಂಗತಿ) ಮತ್ತೆ ಕೆಲವರ ಮುಖಗಳಿಗೆ ಪ್ರತ್ಯೇಕ ಹೆಸರಿಲ್ಲ. ಪ್ರಯತ್ನಪೂರ್ವಕ ಶೋಧಿಸಿದರೆ ಸಿಕ್ಕಬಹುದೇನೋ (ಅಲ್ಲ, ಸಿಕ್ಕಿದರೆ ನೆನಪಿಟ್ಟುಕೊಳ್ಳುವುದು ಕಷ್ಟ; ಆದ್ದರಿಂದ ಬೇಡ ಎನ್ನುವ). ೨. ಅಲ್ಲದೆ, ಕೆಲವರಿಗೆ ಈ ಮುಖಗಳ ಸಂಖ್ಯಾಸ್ವರೂಪಗಳಿಂದಲೇ ಹೆಸರು ಬಂದಿರುತ್ತದೆ ಎಂಬುದು.

ಬ್ರಹ್ಮನಿಗೆ ಮೊದಲು ನಾಲ್ಕು ಮುಖ ಕೊಟ್ಟೆವು; ನಂತರ ಸೃಷ್ಟಿಯ ಕೆಲಸವನ್ನು ಕೊಟ್ಟೆವು. (ಇವರಲ್ಲಿ ಯಾವುದು ಮೊದಲೆಂಬುದು ಅವನಿಗೇ ಗೊತ್ತಿರಲಿಕ್ಕಿಲ್ಲ!) ಅಂದ ಮೇಲೆ ಅವನ ಸೃಷ್ಟಿಯಾದ ನಮಗೂ ಕನಿಷ್ಠ ನಾಲ್ಕು ಮುಖಗಳಿರಬೇಕಷ್ಟೆ. ಇದು 'ಗಾಂಧೀ ತರಗತಿ'ಯಲ್ಲಿ 'ಪಾಸಾ'ಗುವ ಕನಿಷ್ಠ ಅರ್ಹತೆ. ಇಲ್ಲ ಅಂತೀರ– ನಿಮ್ಮನ್ನ 'ಚೆರಕೆ' ಅನ್ನಬೇಕಾದೀತು!

ನಾವು ನೀವು ಬಹುಮುಖಿಗಳು ಎಂಬುದನ್ನ 'ಅನುಮಾನ' (hypothesis) ಆಗಿ ತೆಗೆದುಕೊಂಡೆವು. ಈಗ ಇದನ್ನು ಪರೀಕ್ಷೆಗೆ ಒಳಪಡಿಸಬೇಕು. ಇದಕ್ಕೆ ಉದಾಹರಣೆಯಾಗಿ ದೊಡ್ಡ ಮನುಷ್ಯರನ್ನೇ ತೆಗೆದುಕೊಳ್ಳಬೇಕೆಂದಿಲ್ಲ; ನಮ್ಮ ಮಕ್ಕಳನ್ನೇ ತೆಗೆದುಕೊಳ್ಳೋಣವಂತೆ.

ಪ್ರೈಮರಿ ಶಾಲೆಯ ಮೆಟ್ಟಿಲು ಹತ್ತಿ ಒಂದೆರಡು ವರ್ಷವಾಗುತ್ತಲೆ ನಮ್ಮ ಮಕ್ಕಳು ಎಷ್ಟು ಮುಖ (–ಮುಖವಾಡ ಅಲ್ಲ; ಹಾಗೆ ಹೇಳಿದರೆ ನಮ್ಮನ್ನು ಅಣಿಮಾಡಿದ ಆ ಪರಮಶಕ್ತಿಗಳ ತಾಂತ್ರಿಕ ಕೌಶಲವನ್ನೆ ಅಲ್ಲಗಳೆದಂತಾಗುತ್ತದೆ) ತಳೆದುಬಿಡುತ್ತಾರೆ ಎಂಬುದು ಸೂಕ್ಷ್ಮವಾಗಿ ಪರಿಶೀಲಿಸುವವರಿಗೆ ಸುವ್ಯಕ್ತವಾಗಿ ಗೋಚರವಾಗಬಲ್ಲುದು. ತಾಯಿಯೊಡನೆ ವ್ಯವಹರಿಸುವಾಗ ಒಂದು ಮುಖ, ತಂದೆಯೊಡನೆ ಇನ್ನೊಂದು, ಅಜ್ಜ-ಅಜ್ಜಿಯರೊಡನೆ ಮಗದೊಂದು, ಓರಿಗೆಯವರೊಂದಿಗೆ ಬೇರೊಂದು, ಶಾಲಾ ಮಕ್ಕಳೊಂದಿಗೆ ಮತ್ತೊಂದು, ಅಧ್ಯಾಪಕರೊಂದಿಗೆ ಬೇರೆಯೇ ಒಂದು, ಬೆರಗುಗೊಳಿಸುವ ದೃಶ್ಯ–ಸನ್ನಿವೇಶ

ಗಳಲ್ಲಿ ಸಂಪೂರ್ಣ ಬೇರೊಂದು... ಆ 'ಬೇರೊಂದನ್ನು' ಹೇಳಲು ನನ್ನ ಬತ್ತಳಿಕೆಯ ಪದಗಳೇ ಸಾಲದಾದ್ದರಿಂದ ಅಪೂರ್ಣವಾಗುಳಿಸಿದ್ದೇನೆ. (ಗೊತ್ತಿದ್ದವರು ಪೂರ್ಣಗೊಳಿಸಬಹುದು) ನನ್ನ ಸಿದ್ಧಾಂತವನ್ನು ಇನ್ನೂ ವಿಶ್ಲೇಷಿಸಿ ಹೇಳಿದರೆ ನಿಜವಾಗಿಯೇ ಒಪ್ಪುತ್ತೀರೆಂಬ ಭರವಸೆ ನನಗಿದೆ. ಪ್ರಾಥಮಿಕ ಶಾಲೆಯಲ್ಲಿ ಎರಡನೇ ತರಗತಿ ಓದುವ ಹುಡುಗ ಶಾಲೆಯಲ್ಲಿ (ಜೀವನದ ಒಂದು ಅಂಗ ಅಷ್ಟೆ) ಎಷ್ಟು ಮುಖ ಪ್ರದರ್ಶಿಸುತ್ತಾನೆ ನೋಡಿ:

(i) ಅಧ್ಯಾಪಕರು ತರಗತಿಗೆ ಬಂದಾಗ, ಕರಿಹಲಗೆಗೆ ಮುಖ ಹಾಕಿದಾಗ (ಅಂದರೆ ತರಗತಿಗೆ ಬೆನ್ನು ಹಾಕಿದಾಗ- ಅದು ಮುಖ್ಯ, ಮತ್ತು ನೇರ ಮಾತು. ವಿದ್ಯಾರ್ಥಿಯ ದೃಷ್ಟಿಯಿಂದ) ಪಕ್ಕದವನನ್ನು ಬೈದಾಗ. ಹೊಗಳಿದಾಗ, ಹೊಡೆದಾಗ, ತನ್ನನ್ನು ಹೊಗಳಿದಾಗ, ಬೈದಾಗ, ಹೊಡೆದಾಗ, ಮನೆಗೆಲಸ ಕೊಟ್ಟಾಗ ನೋಡಿದಾಗ, ರಜೆ ನೋಟೀಸು ಅಥವಾ ಶಾಲೆ ಬೇಗ ಬಿಡುವ ನೋಟೀಸು ಓದಿದಾಗ, ವೇಳಾಪಟ್ಟಿ (ಪರೀಕ್ಷೆಗೆ) ಕೊಟ್ಟಾಗ...

(ii) ತನಗೆ ತಾನು- ಹೇಳಿಕೊಳ್ಳುವಲ್ಲಿ, ಹತ್ತಿರದ ಸಹಪಾಠಿಯೊಂದಿಗೆ ಶಾಲೆಯಲ್ಲಿ ಕ್ಲಾಸಿನಲ್ಲಿ ಅಧ್ಯಾಪಕರಿರುವಾಗ- ಇರದಾಗ, ಮೈದಾನದಲ್ಲಿ, ಮನೆಗುಂಟ ದಾರಿಯಲ್ಲಿ, ಮನೆಯಲ್ಲಿ, ಇತರ ಕಡೆಗಳಲ್ಲಿ...

ಎಷ್ಟೆಷ್ಟು ಮುಖಗಳು!

ಒಂದೇ ಮನೆಯಲ್ಲಿರುವ ಮಕ್ಕಳೇ ಒಂದೇ ತರಗತಿಯಲ್ಲಿ ಓದುತ್ತಿರುವಾಗ ಈ 'ಮುಖ'ದಳ ಸಂಖ್ಯೆ, ಸ್ವರೂಪಗಳಲ್ಲಿ ಒಬ್ಬರಿಗಿಂತ ಒಬ್ಬರು ಭಿನ್ನರಾಗಿರುತ್ತಾರೆ; ಬಿಗಿಯಾಗಿರುತ್ತಾರೆ.

ಇನ್ನೊಂದು ಪ್ರಯೋಗ: ಅಂಚಿನಲ್ಲಿ ಒಳಮುಖವಾದ ದಪ್ಪ ಕನ್ನಡಿಯಲ್ಲಿ ಮುಖವನ್ನೂ ಮುಖದ ಭಾಗಗಳನ್ನೂ ಪರೀಕ್ಷಿಸಿ ನೋಡಿ ಆಗ ನಿಮಗೆಷ್ಟು ಮುಖವಿದೆ ಗೊತ್ತಾಗುತ್ತದೆ. ಅಂದರೆ ನಮಗಿರುವ ಮುಖಗಳ ಸಂಖ್ಯೆಯನ್ನು ಗಣಿಸಬೇಕಾದರೆ ಕನಿಷ್ಠ ಇಬ್ಬರು ಅಗತ್ಯ ಎಂಬ ತೀರ್ಮಾನಕ್ಕೆ ಬಂದಂತಾಯಿತು.

ರಾಮ ಮತ್ತು ಕೃಷ್ಣ ಇಬ್ಬರು ಮಿತ್ರರು. ಮೊದಲು ರಾಮನ ಪಕ್ಷ ಹಿಡಿದು ಮಾತಾಡುವುದಾದರೆ- ೧) ರಾಮನು ನಿಜವಾಗಿ ತಾನು ಏನಾಗಿದ್ದಾನೋ ಅದು ಅವನ ಒಂದನೆಯ ಮುಖ. ೨) ರಾಮನು (ಕೃಷ್ಣನಿಗೆ) ಏನಾಗಿರುವುದಾಗಿ ಕಾಣಿಸುತ್ತಾನೋ ಅದು (ಕೃಷ್ಣನ ದೃಷ್ಟಿಯಿಂದ) ಅವನ ಎರಡನೆಯ ಮುಖ. ೩) ರಾಮನು ತನ್ನ ಕುರಿತು ತಾನು ಏನು ಭಾವಿಸುತ್ತಾನೋ ಅದು (ಅವನ ದೃಷ್ಟಿಯಿಂದ) ಅವನ ಮೂರನೆಯ ಮುಖ. ೪) ರಾಮನು ಏನಾಗಬೇಕಾಗಿತ್ತೊ ಅದು ಅವನ ನಾಲ್ಕನೆಯ ಮುಖ.

ಈಗ ಕೃಷ್ಣನ ಪಕ್ಷ: ೧) ಕೃಷ್ಣನು ನಿಜವಾಗಿ ತಾನು ಏನಾಗಿದ್ದಾನೋ ಅದು ಅವನ ಒಂದನೆಯ ಮುಖ. ೨) ಕೃಷ್ಣನು (ರಾಮನಿಗೆ) ಏನಾಗಿರುವುದಾಗಿ ಕಾಣಿಸುತ್ತಾನೋ ಅದು (ರಾಮನ ದೃಷ್ಟಿಯಿಂದ) ಅವನ ಎರಡನೆಯ ಮುಖ. (೩) ಕೃಷ್ಣನು ತನ್ನ ಕುರಿತು ತಾನು ಏನು ಭಾವಿಸುತ್ತಾನೋ ಅದು (ಅವನ ದೃಷ್ಟಿಯಿಂದ) ಅವನ ಮೂರನೆಯ ಮುಖ. ೪) ಕೃಷ್ಣನು ಏನಾಗಿರಬೇಕಾಗಿತ್ತೊ ಅದು ಅವನ ನಾಲ್ಕನೆಯ ಮುಖ.


ಹೀಗೆ ಇಬ್ಬರ ನಡುವಣ ಸಾಮಾಜಿಕ ಸಂಬಂಧದಲ್ಲಿ ಒಬ್ಬೊಬ್ಬರಿಗೆ ಕನಿಷ್ಠ ನಾಲ್ಕು ನಾಲ್ಕು ಮುಖಗಳಿರುವುದು ಸ್ಪಷ್ಟವಾಯಿತು. ಈ 'ಸಮಾಜ'ದಲ್ಲಿ ಸದಸ್ಯರ ಸಂಖ್ಯೆ ಅಧಿಕವಾಗುತ್ತ ಹೋದಂತೆ ಈ ಮುಖಗಳ ಸಂಖ್ಯೆಯೂ ಬೆಳೆಯುತ್ತಾ ಹೋಗುತ್ತದೆ ಬಹುಶಃ geometrical ratio ನಲ್ಲಿ.

ಮೇಲಿನ ನಾಲ್ಕು ಮುಖಗಳನ್ನೇ ಕ್ರಮವಾಗಿ ವ್ಯಕ್ತಿಯ ಸ್ವಾಭಾವಿಕತೆ-ಪ್ರಾಮಾಣಿಕತೆ (appearing as he is) ತೋರಾಣಿಕೆ (as he appears to be in the eyes of the person in the context) 'ಸ್ವ-ಭಾವ' (what he feels of himself) ಮತ್ತು ಆದರ್ಶ, ಕರ್ತವ್ಯಪಾಲನೆ

(what he ought to have been) ಎಂದು ಬೇಕಿದ್ದರೆ ಹೇಳಬಹುದು. ಆದರೆ ಈ ಕಟುಸತ್ಯವನ್ನು ತತ್ತ್ವಶಾಸ್ತ್ರದ ದಂತಗೋಪುರಕ್ಕೇರಿಸುವುದು ನನಗೆ ಸಮ್ಮತವಿಲ್ಲ.

ಈಗ ಕೊನೆಯದಾಗಿ ನೀವು ಮತ್ತು ನಿಮ್ಮ ಮಡದಿಯ ಸಂಬಂಧ ಹೇಗೆ ನಿಮ್ಮಿಬ್ಬರಿಗಿರುವ ಮುಖಗಳ ಸ್ವರೂಪ-ಸಂಖ್ಯೆಗಳನ್ನು ಅರುಹುತ್ತದೆ ನೋಡಿ. ಹೊಸತಾಗಿ ಮದುವೆಯಾದಾಗ ಒಂದು ಮುಖ; ಹಾಗೆ ವಿಹಾರಕ್ಕೆ, ಮಧುಮಂಚಕ್ಕೆ ಇತ್ಯಾದಿಗಳಿಗೆ ಹೋದಾಗ ಇನ್ನೊಂದು; ಮಡದಿ ಗರ್ಭಿಣಿಯಾದ ವೇಳೆ ಒಂದು; ಒಂದು ಮಗುವಿನ ತಾಯಿಯಾದ ವೇಳೆ ಒಂದು; ಎರಡು ಮೂರು... ಹೀಗೆ ಹೆಚ್ಚು ಹೆಚ್ಚು ಮಕ್ಕಳಾಗುತ್ತ ಬಂದಂತೆ ಹೆಚ್ಚು ಹೆಚ್ಚು ಮುಖಗಳು; ಬೆಲೆ ಏರಿದಾಗ ಒಂದು, ಇಳಿದಾಗ ಒಂದು; ರೇಶನ್ ಅಕ್ಕಿಗಾಗಿ ಹೋರಾಡಿ ಬಸವಳಿದು ಬಂದಾಗ ಒಂದು; ದೀಪಾವಳಿ-ದಸರಾ-ಯುಗಾದಿ ರಿಡಕ್ಷನ್ ಸೇಲುಗಳಲ್ಲೊಂದು: ಆಫೀಸಿಗೆ ಹೊರಟು ನಿಂತಾಗ ಒಂದು; ಹೋಗುವಾಗ ತಡವಾದರೆ ಒಂದು, ಆಫೀಸಿನಲ್ಲಿ ಕೆಲಸ ಮಾಡುತ್ತ ಒಂದು; ವಾಪಸಾಗುತ್ತ ಒಂದು; ದೂರ ಹೋದಾಗ ಒಂದು, ಹತ್ತಿರ ಬಂದಾಗ ಒಂದು; ನೆಂಟರು (ಯುಮಾ!) ಬಂದಾಗ ಒಂದು, ಹೋದಾಗ ಒಂದು...

ಹೀಗೆ ಕಾಲ ಬದಲಾಗುತ್ತ ಹೋದಂತೆ ನಮ್ಮ 'ಮುಖ'ಗಳ ಸಂಖ್ಯೆ ಬೆಳೆಯುತ್ತ ಹೋಗುತ್ತಿದೆ. ಇದನ್ನು ಬೆರಳುಮಾಡಿ ತೋರಿಸಲು ಕನ್ನಡಿಯ ಅಗತ್ಯವಿಲ್ಲ. ಆದರೆ ನಿರ್ದಿಷ್ಟವಾಗಿ ಒಬ್ಬ ವ್ಯಕ್ತಿಗೆ ತಲಾ ಇಷ್ಟು ತಲೆ ಅಥವಾ ಮುಖಗಳಿವೆ ಎಂಬುದರ ಖಾನೇಸುಮಾರಿ ಭಾವೀ ಸಂಶೋಧಕರಿಗೆ ಬಿಟ್ಟದ್ದು. ಒಟ್ಟು ಸದ್ಯ ಇಷ್ಟು ಹೇಳಬಹುದು: 'ಪುರುಷಸೂಕ್ತ'ದ ಆರಂಭದಲ್ಲಿ ಹೇಳಿದ 'ಸಹಸ್ರಶೀರ್ಷಃ ಪುರುಷಃ'- ಈಗ ಹೇಳಿಯಾರು? ನಾಲ್ಕೈದಕ್ಕಿಂತಲೂ ಮಿಗಿಲಾದವರು ಯಾರು? ಸಹಸ್ರ-ಲಕ್ಷ ಶೀರ್ಷರಾದವರು ಯಾರು? (ನಿಮಗೆ ನೀವಲ್ಲದೆ ಮತ್ತಾರು?) ★



ತಾಯಿ

ಬೀಸಿದ ಬಿರುಗಳು
ಕುತ್ತಿಗೆಗೆ
ಕೈ
ಹಾಕಿ
ಪಾತಾಳಕ್ಕೆ
ಧಡಾರೆಂದು ನೂಕಿದಾಗ
ತನ್ನ
ತಲೆ ಜಜ್ಜಿದರೂ
ಒಳಗಿನ ತಿರುಳನ್ನು
ಬದುಕಿಸಿಟ್ಟ
ತೆಂಗಿನ ಕಾಯಿ

ಮಡದಿ

ಮಳೆ
ನಿಂತಾಗ
ಬಸ್ಸಿನಲಿ
ಮರೆತರೂ
ಇಳಿವಾಗ
ನನ್ನ ಕೈಗೆ
ತಾನಾಗಿಯೇ
ತಗಲಿಕೊಳ್ಳುವ
ಬಣ್ಣದ
ಕೊಡೆ!

—[illegible]

ಯಾವುದೇ ವಿಷಯವನ್ನು ಕುರಿತು ಯೋಚಿಸುತ್ತಿದ್ದರೆ, ಅದು ಬೇಕೆಂಬ ಬಯಕೆ ಉಂಟಾಗುತ್ತದೆ. ಬಯಕೆ ಬೆಳೆದು ಹೆಬ್ಬಯಕೆಯಾದಾಗ ಆಸೆ ಆದಮ್ಯವಾಗುತ್ತದೆ... ಮಂಕಯ್ಯನ ಅನುಭವ.

ಧ್ಯಾಯತೋ ವಿಷಯಾನ್

ರಾಮು

ತನ್ನ ನಾ ನಾ...' ಸಂಗೀತದ ಅಲೆಗಳು ಕಿವಿಯ ಮೇಲೆ ಬೀಳುತ್ತಿದ್ದಂತೆಯೇ, ಮನಸ್ಸಿನೊಳಗೂ ಯೋಚನೆಯ ಅಲೆಗಳು ಒಂದರ ಹಿಂದೊಂದು ಬರುತ್ತಲೇ ಇರುತ್ತವೆ. ಎಂದಿನಂತೆ ದಿನದ ವ್ಯಾಪಾರದ ಲೆಕ್ಕ, ಊರಿಗೆ ಹಿಂದಿರುಗುವ ಕಾರ್ಯಕ್ರಮ...ಅಪರೂಪಕ್ಕೊಮ್ಮೆ, ಕಣ್ಣು ತೆರೆದಂತೇ ಏನಾದರೂ ಸಿಹಿ ಕನಸು—ಬಹಳ ಓದಿ ಬುದ್ಧಿವಂತನೆನಿಸಿಕೊಂಡಂತೆ, ದರ್ಪದ ಅಧಿಕಾರಿಯಾಗಿ ದಕ್ಷನಾಗಿದ್ದಂತೆ, ಜನಪ್ರಿಯ ಧುರೀಣನಂತೆ—ಕಾಲದ ಓಟವನ್ನು ಮರೆಸಲು ಎಂಥ ಕನಸಾದರೂ ಸರಿ, ರೈಲಿನಲ್ಲಿ ಕಡಲೆಕಾಯಿಯವನು ಕೂಗುವಂತೆ ಟೈಂ ಪಾಸ್, ಕಳ್ಳೇಕಾಯಿ? ಕ್ರಮೇಣ ಈ ಯೋಚನೆಗಳೂ ಕನಸುಗಳೂ ಬತ್ತಿದಂತಾಗಿ ಬಿತ್ತಿದಂತಾಗಿ ಬೇಸರ ಬರಿಸಿದಂತೆ ಆಕಳಿಕೆ ಜೋರಾಯಿತು, ಮಂಕಯ್ಯನಿಗೆ, ಆಕಳಿಸಲು ಹಿಂದೊರಗಿದಾಗ ಅರೆಬಿರಿದ ಕಣ್ಣುಗಳು ಹಿಡಿದ ಚಿತ್ರ ಪಕ್ಕನೆ ಹಾರಿಬಿತ್ತು. ತೆರೆದ ಬಾಯನ್ನು ಹಾಗೇ ಬಿಟ್ಟು, ಕಣ್ಣಗಲಿಸಿ ನೋಡಿದ, ಮೈಸೆಳೆದು ತಲೆತೂರಿ ಮತ್ತೆ ನೋಡಿದ—ನಾಲ್ಕು ಸಾಲುಗಳ ಮುಂದೆ, ಕೇಳುತ್ತಿದ್ದ ಸಂಗೀತವೇ ರೂಪುತಳೆದು ಬಂದಂತೆ, ತಿಳಿ ನೀಲಿಯ ಹೊಳಪಿನ ಸೀರೆಯ ಬೆಡಗಿನಲ್ಲಿ, ಗುಲಾಬಿವರ್ಣದ ದುಂಡು ಮುಖ ನೆನಪಿನಾಳದಿಂದ ಏನನ್ನೋ ಮೇಲೆಳೆಯುತ್ತಿತ್ತು. ಏನಿರಬಹುದೆಂದು ಕಣ್ಮುಚ್ಚಿ ತಲೆ ಕೆರೆದರಾಗಲೀ, ಬಿಡದೆ ಮತ್ತೆ ಮತ್ತೆ ನೋಡಿದರಾಗಲೀ ಆ ನೆನಪು ಬರಲೊಲ್ಲದು. ಆದರೂ ಆ ಮುಖ ಯಾವುದೋ ಆತ್ಮೀಯತೆಯ ಭಾವವನ್ನು ಹೊಡೆದೆಬ್ಬಿಸಿತ್ತು. ಅಲ್ಲಿಯವರೆಗಿನ ಬೇಸರವೆಲ್ಲಾ ಮಾಯವಾಗಿ ಉತ್ಸಾಹ ಚಿಮ್ಮಿನಿಂತಿತ್ತು. ಅವನಿಗರಿವಿಲ್ಲದಂತೆಯೆ ಅವನ ದೃಷ್ಟಿಯೆಲ್ಲಾ ಆ ಮುಖದೆಡೆಗೇ ಕೇಂದ್ರಿಕೃತವಾಗಿತ್ತು. ಅಪರಿಚಿತಳನ್ನು ಹಾಗೆ ನೋಡುತ್ತಿರುವುದರ ಬಗೆಗೆ ನಾಚಿಕೆಯಾಗಲೀ, ಸಭ್ಯತೆಯ ಸಂಕೋಚವಾಗಲೀ, ಸುತ್ತಲಿನ ಜನರು ಏನನ್ನುವರೆಂಬ ಅಂಜಿಕೆಯಾಗಲೀ, ಯಾವುದೂ ಅವನನ್ನು ಮುಟ್ಟಲಿಲ್ಲ. ಇವನ ದೃಷ್ಟಿಯೇ ಅವಳನ್ನು ಈ ಕಡೆ ಎಳೆಯಿತೋ ಎನ್ನುವಂತೆ ಅವಳೂ ಒಮ್ಮೆ ತಲೆ ತಿರುಗಿಸಿದಳು. ಪೂರ್ಣ ಮುಖದರ್ಶನವಾದಾಗ ಆ ಬೆಳಕಿನಲ್ಲಿ ಏನೋ ಹೊಳೆದಂತಾಯಿತು. 'ಹೋ' ಎಂಬ ಉದ್ಗಾರ ಪುಣ್ಯವಶಾತ್ ಉಳಿದವರ ಸಂಗೀತ ಪ್ರಶಂಸೆಯೊಡನೆ ವಿಲೀನವಾದಾಗ ಮಂಕಯ್ಯ ತನ್ನ ಸ್ವರ್ಗದಿಂದ ಭೂಮಿಗಿಳಿದು ಬಂದ. ತನ್ನ ವರ್ತನೆಯ ಬಗ್ಗೆ ಸ್ವಲ್ಪ ನಾಚಿಕೆಯಾದರೂ 'ಹೌದು, ಎಲ್ಲೋ ನೋಡಿದ ನೆನಪು, ಒಟ್ಟಿನಲ್ಲಿ ಪರಿಚಿತ ಮುಖ, ಯಾರಿರಬಹುದು?' ಎಂಬ ಅನಿಸಿಕೆ ತಾನು ಆ ಕಡೆಯೇ ನೋಡುತ್ತಿದ್ದುದಕ್ಕೆ ಸಮರ್ಥನೆಯಾಗಿ ಕಂಡಿತೇನೋ! ಆದರೂ ಛೆ, ಹೀಗೆ ನೋಡಬಹುದೆ, ವಿವೇಕ ಮರೆತು' ಎಂದು ಎಚ್ಚರಿಸಿಕೊಂಡು ಸರಿಯಾಗಿ ಕುಳಿತ-ಸಂಗೀತವನ್ನೇ ಆಲಿಸಿ ಅರಗಿಸಿಕೊಳ್ಳುವವನಂತೆ. ಅದು ಕ್ಷಣಮಾತ್ರ! ಆ ಮುಖದ ಮೋಡಿ ಬಿಡದೆ ಸೆಳೆಯುತ್ತಿದೆ. ಈ

ಹೊಯ್ದಾಟದಲ್ಲಿ ರಸ, ನೀರಸಗಳ ನಡುವೆ ತೂಗಿದ ಮುಕಯ್ಯನಿಗೆ ಹೊತ್ತು ಕಳೆದುದೇ ತಿಳಿಯಲಿಲ್ಲ.

ಮುಕಯ್ಯನ ಈ ಗುಂಗು ಬಹಳ ಕಾಲ [illegible]. ಹೌದು. ಇದೂ ಸಂಗೀತದಂತಹುದೇ ಗುಂಗು. ನಾದ ಸಂಗೀತ ಕಿವಿಯಲ್ಲಿ ಉಳಿದು, ಹೃದಯದಲ್ಲಿ ತೆರೆಯನೇಳಿಸಿ ಶ್ರೀರಾಮನ ಪಾದ ತೊಳೆದರೆ, ಈ ರೂಪ ಸಂಗೀತ ಕಣ್ಣಲ್ಲಿ ಸುಳಿದು, ಮನದಲ್ಲಿ ಮೇಲು ಗಾಳಿ ಬೀಸಿ ಹೃದಯವನ್ನು ಹಾರಿಸಿ ಕೆಣಕುತ್ತದೆ. ಈ ಅನುಭವದಲ್ಲಿ ಅದ್ದಿ ತೆಗೆದ ಮುಕಯ್ಯ ಮೆದುವಾದ. ಹಾಗೆಂದು ಈ ಹೆಣ್ಣೇನೂ ಹೃದಯದ ತಾಳ ತಪ್ಪಿಸುವ ಅಪ್ಸರೆಯಲ್ಲ. ಹಾಗಾದರೆ ಹೀಗೇಕೆ? ತಟ್ಟನೆ ಮನಸ್ಸು ಉತ್ತರ ದೊರಕಿಸಿತು_ ಆ ಮುಖ ತನ್ನ ಬಾಲ್ಯದ ಶಾಲೆಯ ಗೆಳತಿಯಂತೇ ಇದೆ. ಅವಳೇ ಇವಳು ಎನ್ನುವಂತಿಲ್ಲ. ಆದರೆ ಈ ಮುಖ ತರುವ ಹಳೆಯ ಸ್ನೇಹದ ಸವಿ ನೆನಪು ಈಗಿನ ಆಕರ್ಷಣೆಗೆ ಕಾರಣ ಎಂದು ಸಮಾಧಾನ ಪಟ್ಟ. ಅಥವಾ ಇದೂ ಹುಳ್ಳ ಮನಸ್ಸಿನ ಕಳ್ಳ ಉತ್ತರವೋ ಎನಿಸಿದರೂ, ಅದನ್ನು ಒಪ್ಪಲು ತಾನು ತಯಾರಿಲ್ಲ.

ಅಂತೂ ನಾಲ್ಕಾರು ದಿನಗಳಲ್ಲಿ ಆಗಾಗ ಈ ಮುಖ ನೆನಪಿಗೆ ಬರುವುದುಂಟು. ಬಹುಶಃ ಕಾಲದ ಓಟದಲ್ಲಿ, ದಿನದ ರಘುರಘಾಟದಲ್ಲಿ ಈ ಸಂಗತಿಗೂ ಧೂಳಿನ ಹೊದಿಕೆ ಬಿದ್ದು ಮರೆಯಾಗುತ್ತಿತ್ತೇನೋ! ಒಂದು ಪದರ ಧೂಳು ಕಟ್ಟುವಲ್ಲಿ ಅದನ್ನು ಒರೆಸಿ ಮತ್ತೆ ಹಳೆಯ ನೆನಪನ್ನು ಹೊಳೆಸುವಂತೆ ಅವಳ ದರ್ಶನ. ದಾರ ಪೋಣಿಸದೆ ಸೂಜಿಯನ್ನು ಜೋಡಿಸಿ ಹೊಲಿಗೆ ಯಂತ್ರ ತುಳಿಯುವ ಸಣ್ಣ ಹುಡುಗನಂತಾಯಿತು ಅವನ ಸ್ಥಿತಿ. ಮನಸ್ಸು ತುಳಿಯುತ್ತಲೆ ಇದೆ, ಸೂಜಿ ಚುಚ್ಚುತ್ತಲೇ ಇದೆ. ಎಳೆಯೂ ಇಲ್ಲ, ಹೊಲಿಗೆಯೂ ಇಲ್ಲ, ಆದರೆ ಬಟ್ಟೆ ಮಾತ್ರ ತೂತಾಗಿ ಸರಿಯುತ್ತಲೇ ಇದೆ. ಇದರಿಂದಾಗಿ ಈಚೀಚೆಗೆ ಅವಳನ್ನು ಮತ್ತೊಮ್ಮೆ ನೋಡಬೇಕೆಂಬ ಆಸೆ ಬಲವಾಗುತ್ತಿದೆ.

ಎಷ್ಟೋ ಬಾರಿ ಹುಚ್ಚು ಮನಸ್ಸಿಗೆ ಕಡಿವಾಣ ಹಾಕಿ ಬಿಗಿಸಿದ್ದಾನೆ ಮುಕಯ್ಯ. ಪಾಪ, ಯಾರೋ ಏನೋ, ಇನ್ನೊಬ್ಬಳನ್ನು ತಾನೇಕೆ ಈ ರೀತಿ ನೆನಸಬೇಕು ಎನಿಸುತ್ತದೆ. ಆದರೆ ಬರೀ ನೋಡಬೇಕೆಂಬುದೇ ಹೊರತು, ಮತ್ತೆ ಯಾವ ಯೋಚನೆಯೂ ಇಲ್ಲದಾಗ ಇದರಲ್ಲಿ ತಪ್ಪೇನು?

ಗೆಳತಿ ಎಂಬ ಮಾತ್ರಕ್ಕೆ ಇಂಥಾ ಅತಿರೇಕದ ವಿಶ್ವಾಸವೇನು, ಅದೂ ಅವಳ ಪರಿಚಯ 'ಗೆಳತಿ' ಎಂಬ ಪದದ ಅರ್ಥ ತಿಳಿಯುವ ಮೊದಲೇ, ಇನ್ನೂ ಪ್ರೈಮರಿ ಶಾಲೆಯಲ್ಲಿ ಆವಾಗ? ಅಲ್ಲೇ ಅದರ ದುಟ್ಟು ಕೂಡ! ಹೊರಗಿನ ಪ್ರಪಂಚ ತಿಳಿವ ಮೊದಲು, ಇವನ ಮುಂಕು ಪತ್ತೆಯಾಗುವ ಮುನ್ನ ಪರಿಚಯವಾದ್ದರಿಂದ ಅವಳು ಇವನಲ್ಲಿ ಬಾಲಿಶ ಸಲಿಗೆ ಯುಂದಿದ್ದುದು, ಬಿಸಿಲು ಮಳೆಯನ್ನು ಲೆಕ್ಕಿಸದ ಕುಣಿತ, ಮನೆಯಿಂದ ತರುತ್ತಿದ್ದ ತಿಂಡಿ ತಿನಿಸುಗಳು, ತಾನು ಕೊಳ್ಳುತ್ತಿದ್ದ ಚಾಕೊಲೇಟ್, ಪೆಪ್ಪರ್‌ಮೆಂಟುಗಳು, ಅರ್ಥವಿಲ್ಲದ ನಾನಾ ತರಹದ ಆಟಗಳು, ಕೊನೆ ಮೊದಲಿನ ಕಥೆಗಳು— ಒಂದೆ ಎಷ್ಟೋ. ಈ ಎಲ್ಲಾ ಬಾಲ್ಯದಲ್ಲಿ ಇಬ್ಬರನ್ನೂ ಬಹಳ ಹತ್ತಿರ ತಂದಿತ್ತು. ಈಗ ಆ ಆಟ ಕುಣಿತದ ನೆನಪು ಓತವಾಗದಿದ್ದರೂ ಆತ್ಮೀಯತೆಯ ಸಿಹಿ ಇನ್ನೂ ಮಧುರವಾಗೇ ಇದೆ. ಶಾಲೆಯ ನಂತರ ಕಾಲೇಜಿನಲ್ಲಾಗಲೀ ಬೇರೆಲ್ಲಾಗಲೀ ಇಂತಹ ಒಡನಾಟ ಮುಕಯ್ಯನಿಗೆ ದೊರೆಯಲೇ ಇಲ್ಲ.

ಇಂಥದೇ ವಿಚಾರದ ತೊಳಲಾಟದಲ್ಲಿ ಸಾಗಿದ್ದಾಗ, [illegible] ಗಿಡ್ಡ [illegible] ಸಿಂಗ [illegible]. '[illegible]?' [illegible] ಕೈ ಹಾಕಿ [illegible] ಬಿದ್ದ [illegible]. [illegible] ಇವನ [illegible] ತನ್ನ [illegible] ವರೆಗೂ ಕರೆದುಕೊಂಡು [illegible] ತಪ್ಪ [illegible] ನಡೆದ [illegible] ದಿಕ್ಕು ಕಾಣದೆ [illegible] ರಾರಿಯಾಯಿತು. ಮುಂದಿನ [illegible]

ಒಪ್ಪವಾದ ಚಿಕ್ಕ ಕಾಂಪೌಂಡು, ಒಳಗಡೆ ಮೆಟ್ಟಿಲ ಮೇಲೆ ಸೂರ್ಯನ ಹೊಂಗಿರಣಗಳಿಂದ ಮಿರುಗುವ ಮಾಲೆಯಿಂದ, ಉಟ್ಟ ಗುಲಾಬಿಯ ವಸ್ತ್ರದಿಂದ ಮೆರುಗು ಪಡೆದ ಮೆಚ್ಚಿದ ಮುಖ! ಈಗಲೂ ಹೋ ಎಂದು ಉದ್ಗರಿಸುವ ಸಾತಸದ ಅಚ್ಚರಿ. ಉದ್ಗಾರವನ್ನು [illegible] ಸರಿಯಾಗಿ ಹೊರಡಿಸಲು [illegible] ಹಿಡಿಯಲಾಗಲಿಲ್ಲ. ಮನಸ್ಸಿನಲ್ಲಿ ಉತ್ಸಾಹದ ಬುಗ್ಗೆಯನ್ನೇ ಚಿಮ್ಮಿಸಿತ್ತು ಈ ನೋಟ.

ಮೊದಲಿಗಿಂತಲೂ ಈ ನೋಟದ ಸೆಳೆತ ಜೋರಾಯಿತು. ಅಂಗಡಿಯಲ್ಲಿ ಸ್ವಲ್ಪ ಬಿಡುವು ದೊರೆತಾಗ ಮೊದಲು ಕಣ್ಣ ಮುಂದೆ ಸುಳಿಯುವುದು ಈ ನೋಟ. ಒಬ್ಬನೇ ಕುಳಿತು ಎಲೆಯಡಿಕೆ ಜಗಿಯುವಾಗ ಮೆಲುಕುವುದು ಈ ನೋಟದ ಸುತ್ತ ಬೆಳೆಸಿದ ಎಳೆಯನ್ನು. ರಸ್ತೆಯಲ್ಲಿ ಒಬ್ಬನೇ ನಡೆದಾಗ ಆಶಿಸುವುದು, ಅವಳು ಎಲ್ಲಾದರೂ ಕಾಣ ಸಿಗಬಹುದೇ ಎಂದು. ಎಷ್ಟೋ ಬಾರಿ ತಲೆ ಕೊಡವಿ ಈ ಯೋಚನೆಗಳನ್ನು ತಳ್ಳಿದ್ದಾನೆ, 'ಇದೇನು, ಈ ಸೆಳೆತ ಎಲ್ಲಿಯವರೆಗೆ?' ಎಂದು ಚಿಂತಿಸುತ್ತಾನೆ. ಆದರೆ ಆ ಮುಖವನ್ನು ನೆನಪು ಮಾಡಿಕೊಳ್ಳುವಾಗ, ಮತ್ತೊಮ್ಮೆ ನೋಡಬೇಕೆನ್ನುವವರೆಗೆ ಮಾತ್ರ ಅವನ ಕಲ್ಪನೆ, ಆಸೆ ಎಲ್ಲಾ ಸೀಮಿತ; ಅಲ್ಲಿಂದ ಮುಂದೆ ಮನಸ್ಸು ಹರಿಯಲಾರದು. ಹೀಗೆ ಒಂದು ಕಡೆ ಆಸೆ, ಕಲ್ಪನೆ, ಕನಸು; ಇನ್ನೊಂದು ಕಡೆ ಮನಸ್ಸಿನ ಕಡಿವಾಣ. ದಿನವೂ ಇವೆರಡರ ನಡುವೆ ಸಿಕ್ಕಿ ಅವನಿಗೆ ಮಂಕೇ ಕವಿಯಿತು. ಈ ಸ್ಥಿತಿಯಲ್ಲೇ ಆಸೆ ಗೆದ್ದಾಗ, ಬೇಕೆಂದಾದರೂ ಮಾರ್ಗ ಬದಲಿಸಿ ಅದೇ ರಸ್ತೆಯಲ್ಲಿ ಹೋಗುವುದು. ಉದ್ದಕ್ಕೂ ಆ ಮನೆಯ ಬಾಗಿಲ ಕಡೆಗೇ ನೋಟ. ಕಾಣದಿದ್ದಾಗ ಬೇಸರದಿಂದ ಮುನ್ನಡೆಯುವುದು, ಸೀರೆಯ ಅಂಚು ಕಂಡರೆ ಈ ಕಡೆ ಬಂದರೆ ನೋಡಿದಾದರೂ ನೋಡಬಹುದಲ್ಲಾ ಎಂಬ ಅನಿಸಿಕೆ, ಕಂಡರೆ ಕಣ್ಣಂಚಿನಲ್ಲಿ ನೋಡಿ ಓಡುವುದು, ಪಕ್ಕದವರೊಡನೆ ಮಾತಾಡುತ್ತಿದ್ದರೆ ಕಿವಿಯೆಲ್ಲಾ ಅವಳ ಮಾತಿಗಾಗಿ! ಕ್ಷಣ ಒಮ್ಮೆ ಮಾತಾಡಿಸಿದರೆ ಹೇಗೆ ಎಂಬ ಆಸೆ ಚಿಗುರಿತು. ಹೌದು, ಯಾಕಾಗಬಾರದು ಎಂಬಂತೆ ತಿರುಗಿ ನೋಡಿದಾಗ ಅವಳ ಗಂಭೀರ ಮುಖ ಕಂಡು ಧೈರ್ಯ ಹಿಂದೆ ಓಡಿತು. ಈ ಹುಚ್ಚು ಮನಸ್ಸು ಏನು ಆಭಾಸ ಮಾಡೀತೋ ಎಂದು ಹೆದರಿ ಮಿಂಚಿನಂತೆ ನಡೆದ. ರಸ್ತೆ ದಾಟಿ ಪಾರಾದೆ ಎಂದು ನಿಟ್ಟುಸಿರು ಬಿಟ್ಟ. ಹಾಗೆಯೇ ಮಾತಾಡುವಂತಿದ್ದರೆ ಎಂದು ಎಷ್ಟೋ ಒಳಗೆ ಕೊರಗಿ ಈ ಬೇಗುದಿಯಲ್ಲಿರುವಾಗಲೇ, ಒಂದು ಬಾರಿ ಅವಳು, ಇವನ ಪರಿಚಯದವರೊಬ್ಬರ ಜೊತೆ ನಗುನಗುತ್ತಾ ಮಾತನಾಡುವುದು ಕಂಡ. ಆ ದೃಶ್ಯದಿಂದ ಮನಸ್ಸೆಲ್ಲಾ ಕಲಕಿದಂತಾಯಿತು, ಇದೇನು ಹೊಟ್ಟೆಕಿಚ್ಚೇ ಅಂದುಕೊಂಡ. ಅಲ್ಲಿಂದಾಚೆಗೆ, ಅವಳ ಪರಿಚಯ ಮಾಡಿಕೊಳ್ಳಬೇಕೆಂಬ ಹಂಬಲ. ಹೀಗೆ ಮನಸ್ಸಿನ ಕೋರಿಕೆಗಳು ಸ್ವಲ್ಪ ಸ್ವಲ್ಪವೇ ಮುಂದುವರಿದಂತೆ, ಒಳ ಮನಸ್ಸಿನ ಕೂಗು ಸ್ವಲ್ಪ ಮಂದವಾಯಿತು, ವಿವೇಕದ ಸಣ್ಣ ಎಳೆ ಹೇಗೋ ಇವನನ್ನು ಹಾದಿಯಲ್ಲಿ ನಡೆಸಿತ್ತು.

ಒಂದು ಭಾನುವಾರ ಚಿಂತೆ ಜಾಸ್ತಿಯಾಯಿತು. ಸಾಯಂಕಾಲ ಸುತ್ತಿ ಬರಲು ಹೊರಟವನಿಗೆ ಮೊದಲು ಕಂಡ ಅಂದಿನ ಸಂಜೆಯ ನೋಟದ ನೆನಪು ಮೇಲೆ ಮೇಲೆ ಬರಲಾರಂಭಿಸಿತು. ಅವನಿಗೆ ತಿಳಿಯದಂತೆಯೇ ಕಾಲುಗಳು ಯಾಂತ್ರಿಕವಾಗಿ ಆ ರಸ್ತೆಯ ಕಡೆ ನಡೆದವು. ದಾರಿಯುದ್ದಕ್ಕೂ ಹಲವಾರು ಚಿತ್ರಗಳು. ತಾನು ಹೋಗುವಾಗ ಅವತ್ತಿನಂತೆ ಮನೆಯ ಮುಂದೇ ಕುಳಿತವಳು ತನ್ನನ್ನು ನೋಡಿ ಮುಗುಳ್ನಗುವಳು. ತಾನೂ ಅದನ್ನು ಹಿಂದಿರುಗಿಸಿ ಮಾತನಾಡಿಸುವನು. ಆದರೆ ಮಾತಿನ ಪ್ರಾರಂಭ, ಮುಂದುವರಿಕೆ ಹೇಗೆ ತಿಳಿಯದು. ಅಥವಾ ಅವಳ ಮನೆಯಲ್ಲಿ ತನ್ನ ಪರಿಚಯದವರು ಇದ್ದಾರೆ, ದಾರಿಯಲ್ಲಿ ತನ್ನನ್ನು ಕಂಡು ಕರೆಯುತ್ತಾರೆ. ಅವಳ ಪರಿಚಯ ಮಾಡಿಸುತ್ತಾರೆ... ಈ ಭ್ರಮೆಯ ಸಿನಿಮಾದಲ್ಲಿ ದಾರಿ

ಸವೆದುದೇ ತಿಳಿಯಲಿಲ್ಲ. ಆದರೂ ರಸ್ತೆಯ ತಿರುವಿನಿಂದಲೇ ಕಣ್ಣು ಆ ಮನೆಯ ಕಡೆಗೆ ನೆಟ್ಟಿದೆ. ಅಚ್ಚುಕಟ್ಟಾದ ಸಣ್ಣ ಹೂದೋಟದ ಸುಂದರ ಪರಿಸರದಲ್ಲಿ ಹೊಂಗಿರಣಗಳ ಮೆರುಗಿನ ಈ ಚೆಂಗುಲಾಬಿಯನ್ನು ಕಂಡು ಧನ್ಯತೆಯನ್ನು ಪಡೆವ ತವಕ ಮನಸ್ಸಿಗೆ.

ಕಂಡದ್ದು ಮಿಂಚನ್ನೇ— ಬಿಟ್ಟ ಕಣ್ಣನ್ನು ಮುಚ್ಚಗೊಳಿಸಿ, ದಾರಿಗಾಣದಂತೆ ಮಾಡಿದ ಈ ಮಿಂಚು, ಸಂಜೆಯ ಸೂರ್ಯನ ಬಿಸಿಲಿಗೆ ಬಾಗಿಲಿಗೆ ತಗುಲಿಸಿದ ಹೊಸ ಬೀಗದ ಮೆರಗು! ಹೂಗಳನ್ನು ಹರಿದಂತೆ ಕಾಣುವ ಹೂದೋಟ, ಧೂಳಿನಿಂದ ಮುಸುಕಿ ಬಾಡಿದ ಎಲೆಗಳು !! ನಡೆಯುತ್ತಿದ್ದ ಕಾಲುಗಳು ತಾನೇ ನಿಂತವು; ಕ್ಷಣ ಮಾತ್ರದಲ್ಲಿ ಕಣ್ಣು, ಮನಸ್ಸಿಗೆ ಭ್ರಮೆಗೊಳಿಸುವ ನಿರಾಶೆಯ ಕತ್ತಲು. ನಿರಾಶೆಯ ಹಿಂಭಾಗದಲ್ಲಿ ನಿಧಾನವಾಗಿ ಕಾಲೆಳೆದು ಮುಂದೆ ನಡೆದರು ಮಂಕಯ್ಯನವರು. ಕ್ಷಣಗಳ ಹಿಂದಿನ ಕಣ್ಣಿನ ಹೊಳಪು, ನಡಿಗೆಯ ಚುರುಕು, ಗರಿಗೆದರಿದ ಮನಸ್ಸಿನ ವಿಹಾರದೆಳೆಗೆ ಬದಲಾಗಿ ಮಂಕು, ಮಂದಗತಿ, ತೊಳಲಾಟ.

ಆದರೂ ಮನಸ್ಸಿನ ಮಥನ ಇದ್ದೇ ಇದೆಯಲ್ಲ— ಸಿನಿಮಾಕ್ಕೆ ಹೋಗಿರಬಹುದು ಎಂದುಕೊಂಡಾಗ, ಹೂದೋಟದ ಸ್ಥಿತಿ ಕಂಡು ಊರಿಗೆ ಹೋಗಿರಬಹುದು ಎನಿಸುತ್ತದೆ. ಹಾಗೆಂದರೆ ಕೆಲವು ದಿನಗಳ ರಜಕ್ಕೋ ಅಥವಾ ವರ್ಗವಾಗಿ ಪುನಃ ಈ ಕಡೆ ಬರದಂತೆಯೋ, ಅಥವಾ ಬೇರೆ ಕಡೆ ಮನೆ ಬದಲಾಯಿಸಿದರೋ— ಎಲ್ಲವೂ ಪ್ರಶ್ನಾರ್ಥಕ.

ಇದನ್ನೇ ಮೆಲುಕು ಹಾಕುತ್ತಾ ಬರುವಾಗ, ಹತ್ತಿರದ ಪಾರ್ಕಿನಿಂದ ಧ್ವನಿವರ್ಧಕ ಮುಗ್ಧತೆಯ ಸೊಗಸಿನ ಕಂಠದ ಗೀತೆಯ ಶ್ಲೋಕವೊಂದನ್ನು ಬೀರುತ್ತಿತ್ತು. ತಳಮಳಿಸುವ ಮನಸ್ಸಿಗೆ ತಂಪೆನಿಸುವ ಶೈಲಿ, ಮಾಧುರ್ಯ— 'ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷೂಪಜಾಯತೇ...' ಉಪನ್ಯಾಸಕಾರರು ಅರ್ಥ ವ್ಯಾಖ್ಯಾನ ಪ್ರಾರಂಭಿಸಿದರು. "ಯಾವುದೇ ವಿಷಯವನ್ನು ಕುರಿತು ಯೋಚಿಸುತ್ತಿದ್ದರೆ, ಅದು ಬೇಕೆಂಬ ಬಯಕೆ ಉಂಟಾಗುತ್ತದೆ. ಉದಾಹರಣೆಗೆ, ಮಕ್ಕಳು ಅಂಗಡಿಯಲ್ಲಿ ಮಿಠಾಯಿ, ಪೆಪ್ಪರ್‌ಮೆಂಟ್‌ಗಳನ್ನು ನೋಡುತ್ತಾರೆ. ದಿನದಿನವೂ ಬಣ್ಣ ಬಣ್ಣದ ಈ ಅಂದ ಅವರ ನೋಟವನ್ನು ಹಿಡಿಯುತ್ತದೆ. ಬೀದಿಗೆ ಬಂದ ಕೂಡಲೇ ಮನಸ್ಸು ಅದನ್ನೇ ನೋಡಬೇಕೆನ್ನುತ್ತದೆ. ನೋಡುತ್ತಾ, ನೋಡುತ್ತಾ ಅದು ಬೇಕೆನಿಸುತ್ತದೆ. ಬಾಯಲ್ಲಿ ನೀರೂರಿ, ಆಸೆ ಅದಮ್ಯವಾಗುತ್ತದೆ. ಅಂಗಡಿಗಳಲ್ಲಿ ಅಂದವಾಗಿ ಪೇರಿಸಿದ ಹಲ ಬಗೆಯ ಹಣ್ಣುಗಳ ಕಣ್ಸೆಳೆವ ಬಣ್ಣ, ಮೋಹಕ ಮೆರಗು ನೋಡುವ ಯಾರಲ್ಲಿ ತಾನೇ ನೀರೂರಿಸಲಾರದು ? ಹಾಗೆಯೇ ಯಾವ ಆಸೆಯಾದರೂ ಅದಕ್ಕಾಗಿಯೇ ಸಣ್ಣ ವಿಷಯಗಳ ಚಿಂತನೆಗೆ ಮನಸ್ಸು ಇಳಿಬಿಡಬಾರದು ಎಂದು ಶ್ರೀಕೃಷ್ಣನ ಉಪದೇಶ..." ಹೀಗೆ ವ್ಯಾಖ್ಯಾನ ಮುಂದುವರೆದಿತ್ತು.

ಇದಷ್ಟು ಮಾತ್ರ ತನಗೇ ಹೇಳಿದಂತೆ ಎನಿಸಿತು ಮಂಕಯ್ಯನಿಗೆ. ಹೌದು ಹೆಣ್ಣೇನು, ಹಣ್ಣಿನ ವಿಷಯವೂ ಅಷ್ಟೆ. ಒಮ್ಮೆ ನೋಡಿದಾಗ ಮತ್ತೆ ನೋಡಬೇಕೆನಿಸಿತು, ಮತ್ತೆ ನೋಡಿದರೆ ಮತ್ತೆ ಮತ್ತೆ ನೋಡುವ ಆಸೆ, ನೋಡಿದಷ್ಟೂ ಮಾತಾಡಿಸುವ ಚಪಲ, ಪರಿಚಯದ ಬಯಕೆ ಮುಂದೆ ಎಲ್ಲಿ ಸೆಳೆಯುತ್ತಿತ್ತೋ ಈ ಹುಚ್ಚು ಮನಸ್ಸು ಅನಿಸಿದಾಗ ಮೈ ಬೆವರಿತು. 'ಛೀ, ನಾನೆಂಥ ಅವಿವೇಕಿ ! ಕೃಷ್ಣಾ ನೀನೇ ಗೆಲಿಸಿದೆ !' ಎಂದು ತಲೆ ಕೊಡವಿ ನಡೆದೇಬಿಟ್ಟ ಮಂಕಯ್ಯ. ಅವನ ಮನಸ್ಸು ಮಾತ್ರ ಅದೇ ಶ್ಲೋಕವನ್ನು ಮೆಲುಕು ಹಾಕುತ್ತಾ ಇತ್ತು— "ಧ್ಯಾಯತೋ ವಿಷಯಾನ್..."

✡

ಜನವರಿ 1977

ಬುಧಮಾಶ್ರಯಾಮಿ

ಜಿ. ಟಿ. ನಾರಾಯಣರಾವ್

"ಬುಧಮಾಶ್ರಯಾಮಿ ಸತತಂ, ಸುರವಿನುತಂ, ಚಂದ್ರತಾರಾಸುತಂ" (ಅಂದರೆ ದೇವತೆಗಳಿಂದ ಸ್ತುತಿಸಲ್ಪಟ್ಟವನೂ ಚಂದ್ರ ತಾರೆಯರ ಮಗನೂ ಆದ ಬುಧನನ್ನು ಸದಾ ಆಶ್ರಯಿಸುತ್ತೇನೆ) ಎಂಬುದಾಗಿ ಮುತ್ತುಸ್ವಾಮಿ ದೀಕ್ಷಿತರು (೧೭೭೫–೧೮೩೫) ತಮ್ಮ ನವಗ್ರಹ ಕೃತಿಯೊಂದರಲ್ಲಿ ಹಾಡಿದ್ದಾರೆ. ಅದೇ ಬುಧನನ್ನು ಈಗ ನಾವು ಖಗೋಳ ವಿಜ್ಞಾನದ ಹಾದಿಯಿಂದ ಆಶ್ರಯಿಸಿ ಅರಿಯಲು ಪ್ರಯತ್ನಿಸೋಣ.

ಬಲು ಚಿಕ್ಕವನಿವನು

ಸೂರ್ಯದೇವನಿಗೆ ಬುಧನಿಗಿಂತ ಹೆಚ್ಚು ಒಲವಿನ ಅಂದರೆ ಭೌತವಾಗಿ ಇನ್ನಷ್ಟು ಸನಿಹದಲ್ಲಿರುವ ಸುತ ಇನ್ನೊಬ್ಬ ಇಲ್ಲ. ಸೂರ್ಯ–ಬುಧ ಅಂತರ ೪೫೯ ಲಕ್ಷ ಮತ್ತು ೬೯೭ ಲಕ್ಷ ಕಿಲೋಮೀಟರ್ ನಡುವೆ ತೂಗಾಡುತ್ತಲೇ ಇರುವುದು. ಸೂರ್ಯ–ಬುಧ ಸರಾಸರಿ ದೂರ ೫೭೯ ಲಕ್ಷ ಕಿ. ಮೀ. ಖಗೋಳಮಾನದಲ್ಲಿ (= ಸೂರ್ಯ–ಭೂಮಿ ಸರಾಸರಿ ದೂರ, ೧೪೯೬ ಲಕ್ಷ ಕಿ. ಮೀ) ಇದು ಕೇವಲ ೦.೩೮೭. ಸೂರ್ಯನಿಂದ ತೊಡಗಿ ಮೊದಲ ಹೆಜ್ಜೆಯನ್ನು ಭೂಮಿಯ ಮೇಲೆ ಊರುವ ತ್ರಿವಿಕ್ರಮನಿಗೆ ಬುಧ ಅರ್ಧ ಹೆಜ್ಜೆಗಿಂತಲೂ ಕಡಿಮೆ ದೂರದಲ್ಲಿ ಎದುರಾಗುತ್ತಾನೆ.


ಗಾತ್ರದಲ್ಲಿಯೂ ತೂಕದಲ್ಲಿಯೂ ಬುಧ ಬಲು ಚಿಕ್ಕವನು, "ಎನಗಿಂತ ಕಿರಿಯರಿನ್ನಿಲ್ಲವಯ್ಯ" ಎನ್ನುವ ಪಂಥದವನು. ಪ್ಲೂಟೋ-ಗ್ರಹದ ವಿವರಗಳು ತಿಳಿದಿಲ್ಲವಾದ್ದರಿಂದ ಸೌರವ್ಯೂಹದ ಇತರ ಪೌರರ ಪೈಕಿ ಇವನೇ ಕಿರಿಯವನು. ಭೂಮಿಯೊಳಗೆ ೧೭ ಬುಧರನ್ನು ಸಲೀಸಾಗಿ ತುಂಬಬಹುದು; ಬುಧ-ರಾಶಿ ಭೂರಾಶಿಯ ೦.೦೫೫ ಅಂಶ ಮಾತ್ರ ಉಂಟು ಅಷ್ಟೆ. ಹಾಗಿದ್ದರೂ ಸಾಂದ್ರತೆಯಲ್ಲಿ ಇವನು ಹಿಂದೆ ಬಿದ್ದಿಲ್ಲ (ಏಕಮಾನ ಗಾತ್ರಕ್ಕೆ ಇರುವ ರಾಶಿಯೇ ಸಾಂದ್ರತೆ). ಇವನ ಸಾಂದ್ರತೆಯ ಅಂಕ ೫.೪, ಭೂಮಿಯದು ೫.೫ ಸಾಂದ್ರತೆಯಲ್ಲಿ ಇವನಿಗೆ ಸೌರವ್ಯೂಹದಲ್ಲಿ ಎರಡನೆಯ ಸ್ಥಾನ ಉಂಟು. ಮಹಾದೈತ್ಯಗ್ರಹವಾದ ಗುರುವೂ (ಸಾಂದ್ರತೆ ೧.೩) ಇವನ ಮುಂದೆ ಸೋಲಬೇಕಾಗುತ್ತದೆ. ಇದರ ಅರ್ಥ ಬುಧ ಒಬ್ಬ ಗಟ್ಟಿ ಕುಳ, ಇವನನ್ನು ರಚಿಸಿರುವ ಪದಾರ್ಥಗಳು ನಿಬಿಡವಾಗಿ ಅಮರಿ ಪೇರಿಕೊಂಡಿವೆ ಎಂದು. ಗುರು ಉಬ್ಬಿದ ಬೆಲೂನ್ ಆದರೆ ಬುಧ ಅಡಕವಾದ ಕಬ್ಬಿಣದ ಗುಂಡು. ಕಬ್ಬಿಣ ಮೊದಲಾದ ಭಾರ ಲೋಹಗಳು ಬುಧ ಗರ್ಭದಲ್ಲಿ ಹೇರಳ-

ವಾಗಿ ಬಿಟ್ಟುಯಾಗಿಕೊಂಡಿವೆ ಎಂದು ವಿಜ್ಞಾನಿಗಳು ನಂಬುತ್ತಾರೆ.

ಸೂರ್ಯನಿಗೆ ಅತಿ ಸಮೀಪ ಇರುವ ಬುಧನಿಗೆ ಎರಡು ವಿಧವಾದ ಅಸೌಕರ್ಯಗಳಿವೆ: ಕಡಿಮೆ ಗಾತ್ರ, ಕಡಿಮೆ ರಾಶಿ. ಹೀಗಾಗಿ ಇದರ ಗುರುತ್ವ ಬಲ ಬಲು ಕಡಿಮೆ. ಭೂಗುರುತ್ವದ ಕೇವಲ ೦.೩೭ ಅಂಶ ಮಾತ್ರ. ಆದ್ದರಿಂದ ಬುಧನಲ್ಲಿ ವಾಯುಮಂಡಲ ಅಥವಾ ಜಲರಾಶಿ ಎಂಬುದಾದರೂ ಮೊದಲಿದ್ದಿದ್ದರೆ ಆಗಿಂದಾಗಲೇ ಅದರ ಅಣುಗಳು ಸೂರ್ಯತಾಪದಿಂದ ಕಾದು ನೆಗೆದು ಬುಧನ ವಿಮೋಚನವೇಗದ ಮಿತಿಯನ್ನು (ಸೆಕೆಂಡಿಗೆ ೪.೩ ಕಿ. ಮೀ) ಮೀರಿ ವಿಶಾಲ ವಿಶ್ವಕ್ಕೆ ಸಾಗಿ ಹೋಗುತ್ತಿದ್ದುವು.

ಬುಧನಿಗೆ [illegible] ತನ್ನ ಒಳಗುದಿಯನ್ನು ತೋಡಿಕೊಳ್ಳುವುದು ಸಾಧ್ಯವಾಯಿತು ಎಂದು ಭಾವಿಸೋಣ. ಆಗ ಅವನ ಆಕ್ರಂದನ ಹೀಗಿದ್ದೀತು: "ಸೂರ್ಯನಿಂದ ಬೆಳಕು ಮತ್ತು ಕಾವು ಹಿತಮಿತವಾಗಿ ದೊರೆಯುವಷ್ಟು ದೂರದಲ್ಲಿ, ಜೊತೆಗೆ ಇವುಗಳ ಕೊರತೆಯಿಂದಾಗಿ ಕೊಡಿಹೋಗದಷ್ಟು ಹತ್ತಿರದಲ್ಲಿ, ವಾಯುಮಂಡಲದ ಬಟ್ಟೆ [illegible] ಜಲರಾಶಿಯ ನಡುವೆ ಸುಖವಾಗಿ ವಿಹರಿಸಿರುವ ನಿಮಗೆ ಎಂದೂ ನನ್ನ ಬವಣೆ ತಿಳಿಯದು. ನಿಮಗಿಂತಲೂ ನಾನು ಭಾನುಮೂರ್ತಿಗೆ ಸಮೀಪ ಇದ್ದೇನಲ್ಲ, ಇದೊಂದು ಮಹಾಭಾಗ್ಯ ಎಂದು ನೀವು ಅನ್ನಬಹುದು. ನಿಜಕ್ಕೂ ನನ್ನ ದುರದೃಷ್ಟದ ಪ್ರಾಯಶಃ ಏಕೈಕ ಕಾರಣ ಇದೇ, ಸೂರ್ಯ ಸಾಮೀಪ್ಯವೇ. ಅಧಿಕಾರಕೇಂದ್ರದ ಹೀರೆ ಪಕ್ಕದ ರಾಜ್ಯವು ಎಷ್ಟು ಅಪಾಯಕಾರಿ ಎನ್ನುವುದಕ್ಕೆ ನನ್ನ ಬದುಕೇ ನಿದರ್ಶನ"

ಸಮೀಪಗ್ರಹಗಳು ಉನ್ನತ ಕಕ್ಷಾವೇಗಗಳಿಂದ ಸೂರ್ಯನ ಸುತ್ತ ಪರಿಭ್ರಮಿಸುವುದು ಸೌರವ್ಯೂಹದ ಶಿಸ್ತು. ಇದಕ್ಕನುಗುಣವಾಗಿ ಬುಧನ ಕಕ್ಷಾವೇಗ ಸೆಕೆಂಡಿಗೆ ೪೭.೯ ಕಿ ಮೀ. (ಶುಕ್ರ ೩೫, ಭೂಮಿ ೨೯.೮). ಗರಿಷ್ಠ ಕಕ್ಷಾವೇಗ, ಕನಿಷ್ಠ ಸಂಚಾರ ಪಥ ಇವೆರಡು ಅನುಕೂಲತೆಗಳೂ ಬುಧನಲ್ಲಿ ಮೇಳೈಸಿರುವುದರಿಂದ ಅವನ ವರ್ಷ, ಅಂದರೆ ಸೂರ್ಯನ ಸುತ್ತ ಒಂದು ಪರಿಭ್ರಮಣೆ ಪೂರೈಸಲು ಬೇಕಾಗುವ ಅವಧಿ, ಸೌರವ್ಯೂಹದಲ್ಲಿ ಅತ್ಯಂತ ಕಿರಿಯದು, ೮೮ ನಮ್ಮ ದಿವಸಗಳು. ಭೂಮಿಯಲ್ಲಿ ೮೮ ವರ್ಷಗಳ ಕಾಲ ಬಾಳಿ ೩೦,೦೦೦ ಕ್ಕಿಂತಲೂ ಹೆಚ್ಚು ಸಲ ಆದಿತ್ಯದರ್ಶನ ಮಾಡಿ ಕೃತಾರ್ಥನಾದ ಓರ್ವ ವೃದ್ಧ ಬುಧನಲ್ಲಿ ಅಷ್ಟೇ ವರ್ಷ ಬದುಕಿದ್ದರೆ ೩೬೫ ವರ್ಷ ವಯಸ್ಸಿನವನಾಗುತ್ತಿದ್ದ. ಆದರೆ ಅದೇ ವೇಳೆ ಅವನಿಗೆ ಸೂರ್ಯೋದಯದ ನೋಟ ಲಭಿಸಿದ್ದು ಮಾತ್ರ ೩೦೦ ಕ್ಕಿಂತಲೂ ಕಡಿಮೆ ಸಲ ಆಗಿರುತ್ತಿತ್ತು. ಬುಧನ ದಿವಸ, ಅಂದರೆ ಸ್ವಂತಾಕ್ಷದ ಸುತ್ತ ಒಮ್ಮೆ ಆವರ್ತಿಸಲು ಬೇಕಾಗುವ ಕಾಲ, ೫೯ ನಮ್ಮ ದಿವಸಗಳಿಗೆ ಸಮವಾಗಿರುವುದರಿಂದ ಸರಿಸುಮಾರಾಗಿ ೩ ಬುಧ ದಿವಸಗಳಲ್ಲಿ (=೧೭೭ ನಮ್ಮ ದಿವಸಗಳು) ೨ ಬುಧ ವರ್ಷಗಳು (=೧೭೬ ನಮ್ಮ ದಿವಸಗಳು) ಸಂದಿರುತ್ತವೆ.




ಭೂಮಿಗೆ ಸಾಪೇಕ್ಷವಾಗಿ ಬುಧ ಮತ್ತು ಚಂದ್ರಗಾತ್ರಗಳು.

ಬುಧದರ್ಶನ

ಆಕಾಶದಲ್ಲಿ ನಮಗೆ ಶುಕ್ರ, ಮಂಗಳ, ಗುರು, ಶನಿಗ್ರಹಗಳು ಸುಲಭವಾಗಿ ಗೋಚರಿಸುತ್ತವೆ. ಉದಾಹರಣೆಗೆ ಜನವರಿ, ಫೆಬ್ರವರಿ (೧೯೭೭) ತಿಂಗಳುಗಳಲ್ಲಿ ಸಂಜೆ [illegible]

ಇನ್ನಷ್ಟು ಪೂರ್ವಕ್ಕೆ. ಸರಿಸುಮಾರಾಗಿ ಅಷ್ಟೇ ಹೊಳಪಿನಿಂದ, ಕಣ್ಸೆಳೆವ ಇನ್ನೊಂದು ಬೆಳಕಿನ ಬೊಟ್ಟು ಗುರುಗ್ರಹ. ರಾತ್ರಿ ಸ್ವಲ್ಪ ಏರಿದಂತೆ ಪೂರ್ವಾಕಾಶದಲ್ಲಿ ಏರಿ ಬರುವ ಬಿಳಿ ಮಾಸಲು ಚುಕ್ಕಿ ಶನಿಗ್ರಹ. ಬುಧನನ್ನು ಇಷ್ಟು ಸುಲಭವಾಗಿ ಪತ್ತೆ ಮಾಡಲು ಸಾಧ್ಯವಾಗದು. ಅನುಕೂಲ ಸನ್ನಿವೇಶಗಳಲ್ಲಿ ಉದ್ದೇಶಪೂರ್ವಕವಾಗಿ ಇದರತ್ತ ದೃಷ್ಟಿ ಹರಿಸಿದ ವಿನಾ ಇದು ಎಂದೂ ನಮಗೆ ದರ್ಶನ ನೀಡದು. ಆಧುನಿಕ ಖಗೋಳ ವಿಜ್ಞಾನದ ಪ್ರವರ್ತಕನಾದ ನಿಕೊಲಾಸ್ ಕೊಪರ್ನಿಕಸ್ (೧೪೭೩–೧೫೪೩) ತನ್ನ ಜನ್ಮವಿಡೀ ಒಮ್ಮೆಯೂ ಬುಧನನ್ನು ನೋಡಲಾಗಲಿಲ್ಲವಲ್ಲ ಎಂಬುದಾಗಿ ಮರಣಶಯ್ಯೆಯಲ್ಲಿ ಹಲುಬಿದನೆಂಬ ಕತೆ ಪ್ರಚಲಿತವಾಗಿದೆ. ಇದು ಸುಳ್ಳೇ ಇರಬಹುದು. ಆದರೂ ಎಂಥ ಜಗುಳುವ "ಜನ" ಈ ಬುಧ ಎಂಬುದು ಇದರಿಂದ ತಿಳಿಯುತ್ತದೆ. ಇಂಗ್ಲಿಷಿನಲ್ಲಿ ಇದರ ಹೆಸರು ಮರ್ಕ್ಯುರಿ (ಪಾದರಸ) ಎಂದಿರುವುದು ಸಾರ್ಥಕ. ಬಾನಿನ ವಿಶಾಲ ವಿಸ್ತಾರದಲ್ಲಿ ಬುಧ–ಭೂಮಿ ಎರಡೂ ಸೂರ್ಯನ ಸುತ್ತ ವಿವಿಧ ಕಕ್ಷೆಗಳಲ್ಲಿ ಭಿನ್ನ ವೇಗಗಳಿಂದ ಆದರೆ ಒಂದೇ ದಿಶೆಯಲ್ಲಿ ಪರಿಭ್ರಮಿಸುತ್ತಿವೆ. ಭೂಮಿಯ ಕಕ್ಷಾತಲಕ್ಕೆ (ಇದಕ್ಕೆ ಕ್ರಾಂತಿವೃತ್ತತಲ ಎಂಬ ಹೆಸರುಂಟು) ಬುಧನ ಕಕ್ಷಾತಲ ೭ ಡಿಗ್ರಿಗಳಷ್ಟು ವಾಲಿಕೊಂಡಿದೆ. ಇವೆಲ್ಲವುಗಳ ಸಂಯುಕ್ತ ಫಲವಾಗಿ, ಭೂಮಿಯಿಂದ ವೀಕ್ಷಿಸುವ ನಮಗೆ, ಬುಧ ಸದಾ ಸೂರ್ಯದಿಶೆಯಲ್ಲಿಯೇ ಇರುವಂತೆ ಭಾಸವಾಗುವುದು. ನಮ್ಮನ್ನು ಸೂರ್ಯನಿಗೆ ಜೋಡಿಸುವ ಸರಳ ರೇಖೆಯೊಡನೆ ನಮ್ಮನ್ನು ಬುಧನಿಗೆ ಜೋಡಿಸುವ ಸರಳ ರೇಖೆ ರಚಿಸುವ ಕೋನದ ಗರಿಷ್ಠ ಬೆಲೆ ೨೮ ಡಿಗ್ರಿಗಳು: ಬುಧ ಎಂದೂ ಸೂರ್ಯನಿಂದ ೨೮ ಡಿಗ್ರಿಗಳಿಗಿಂತ ಹೆಚ್ಚು ಮುಂದೆ (ಪಶ್ಚಿಮದಿಂದ ಪೂರ್ವದೆಡೆಗೆ) ಅಥವಾ ಹಿಂದೆ



ಭೂಮಿಕಕ್ಷೆ ಇರುವ ಸಮತಲಕ್ಕೆ ಕ್ರಾಂತಿವೃತ್ತ ತಲವೆಂದು ಹೆಸರು. ಇದಕ್ಕೆ ಬುಧ ಕಕ್ಷೆ 7° ವಾಲಿಕೊಂಡಿದೆ. ಚಿತ್ರದಲ್ಲಿ


A= ಬುಧನ ಸೂರ್ಯೋಚ್ಚ ಬಿಂದು

B= ಬುಧನ ಸೂರ್ಯನೀಚಬಿಂದು

CD= ಎರಡು ತಲಗಳ ಛೇದನ ರೇಖೆ ಇದಕ್ಕೆ ಸಂಪಾತ ರೇಖೆ ಎಂಬ ಹೆಸರಿದೆ.

(ಪೂರ್ವದಿಂದ ಪಶ್ಚಿಮದೆಡೆಗೆ) ಸರಿಯುದು ಎಂದು ಇದರ ಅರ್ಥ. ಬುಧ ಸೂರ್ಯನಿಗಿಂತ ಮುಂದೆ (ಪೂರ್ವಕ್ಕೆ) ಇರುವಾಗ ಸೂರ್ಯ ಮೊದಲು ಮುಳುಗುತ್ತದೆ; ಹೀಗಾಗಿ ಸಂಜೆ ಹೊತ್ತು, ಅರ್ಕ ಅಸ್ತಮಿಸಿದ ಅನಂತರ, ಬುಧನನ್ನು ಪಶ್ಚಿಮ ಕ್ಷಿತಿಜದ ಬಳಿ ಬಾನಿನ ತಾಮ್ರದ ತಗಡಿಗೆ ಅಂಟಿಸಿದ ಬೇಗಡೆಯ ಚುಮುಕಿಯಂತೆ ಕಾಣಬಹುದು. ಬುಧ ಸೂರ್ಯನಿಗಿಂತ ಹಿಂದೆ (ಪಶ್ಚಿಮಕ್ಕೆ) ಇರುವಾಗ ಸೂರ್ಯ ಮತ್ತೆ ಮೂಡಿ ಮತ್ತೆ ಮುಳುಗುತ್ತದೆ; ಅಂದರೆ ಆಗ ಬುಧ ಸೂರ್ಯನ ಆಗಮನವನ್ನು ಅರುಹುವ ಪರಿಚಾರನಂತೆ, ಸಾರುವ ಮುಂಗೋಳಿಯಂತೆ ವರ್ತಿಸುವುದು. ಹೀಗಾಗಿ ಮುಂಜಾನೆ ರವಿ ಉದಯಿಸುವ ಮೊದಲು ಬುಧನನ್ನು ಮೂಡಲಮ್ಮನ ಮೂಗಿನ ನತ್ತಿನಂತೆ ಪೂರ್ವ ಕ್ಷಿತಿಜದ ಪಕ್ಕ ನೋಡುವುದು ಸಾಧ್ಯ. ಈ ಎರಡು ಅನುಕೂಲತಮ ಸಂದರ್ಭಗಳಲ್ಲಿಯೂ ಬಲು ಬೇಗನೆ ಬುಧ ಒಂದೋ ಕ್ಷಿತಿಜ ರೇಖೆಯಿಂದ ಕೆಳಕ್ಕೆ ಧುಮುಕಿ ಇಲ್ಲವೇ ಸೂರ್ಯ-ಪ್ರಕಾಶದ ಕಡಲಿನಲ್ಲಿ ಕರಗಿ ಮಾಯವಾಗಿ ಹೋಗುವುದು.

ಕೆಲವು ವಿಶೇಷ ಸಂದರ್ಭಗಳಲ್ಲಿ ಬುಧ ನಮಗೂ ಸೂರ್ಯನಿಗೂ ನೇರ ನಡುವೆ ಬರುವುದುಂಟು. ಚಂದ್ರ ಈ ತೆರನಾಗಿ ಬಂದರೆ ಆ ಘಟನೆಗೆ ಸೂರ್ಯಗ್ರಹಣ ಎನ್ನುತ್ತೇವೆ, ನಿಖರವಾಗಿ ಇದು ಚಂದ್ರನಿಂದ ಸೂರ್ಯನ ಗ್ರಹಣ. ಆದ್ದರಿಂದ ಬುಧನ "ಅತಿಕ್ರಮ ಪ್ರವೇಶ"ವನ್ನು ಬುಧನಿಂದ ಸೂರ್ಯಗ್ರಹಣ ಎಂದು ಹೆಸರಿಸಬಹುದು. ಆದರೆ ಚಂದ್ರ-ವ್ಯಾಸಕ್ಕಿಂತ ತುಸುವೇ ದೊಡ್ಡ ವ್ಯಾಸವಿರುವ ಬುಧ (೧.೪ ಮಡಿ ಮಾತ್ರ) ಭೂಮಿ-ಸೂರ್ಯ ಗೆರೆಯ ಮೇಲೆ ಬಂದಾಗ ಭೂಮಿ-ಬುಧ ದೂರ ಭೂಮಿ-ಚಂದ್ರ ದೂರದ ೨೪೦ಕ್ಕಿಂತಲೂ ಹೆಚ್ಚು ಪಾಲು ದೊಡ್ಡದಾಗಿರುವುದರಿಂದ ಈ ಗ್ರಹಣವನ್ನು ಸುಲಭವಾಗಿ ನಾವು ಗುರುತಿಸಲಾರೆವು. ಬೆಳಕಿನ ಕಡಲಿನ ಮೇಲೆ ಇರುವೆ ಹರಿದರೆ ಅದನ್ನು ಕಾಣಲಾದೀತೇ? ಇಂಥ ಘಟನೆಗೆ ಬುಧ ಸಂಕ್ರಮಣವೆಂದು ಹೆಸರು. ಬುಧ ಸೂರ್ಯ ಬಿಂಬದ ಮೇಲೆ ಸರಿಯಲು ತೆಗೆದುಕೊಳ್ಳುವ ಕಾಲದ ಗರಿಷ್ಠ ಬೆಲೆ ೯ ಗಂಟೆಗಳೇ ಆಗಬಹುದು. ಭವಿಷ್ಯದಲ್ಲಿ ಬುಧ ಸಂಕ್ರಮಣಗಳು ಸಂಭವಿಸಲಿರುವ ಕೆಲವು ತಾರೀಕುಗಳು ಹೀಗಿವೆ: ೧೨-೧೧-೧೯೮೬, ೫-೧೧-೧೯೯೩, ೭—೧೧—೨೦೦೩, ೮—೧೧—೨೦೦೬, ೯—೫—೨೦೧೬. ಈ ಹಿಂದೆ ಅಂದರೆ ೭-೧೧-೧೯೬೦, ೯-೫-೧೯೭೦ ಮತ್ತು ೯-೧೧-೧೯೭೩ ರಲ್ಲಿ (ಕೊನೆಯದನ್ನು ಈ



ಹೊರವೃತ್ತ ಭೂಮಿ ಕಕ್ಷೆ. ಒಳವೃತ್ತ ಬುಧ ಕಕ್ಷೆ. ಕೇಂದ್ರ ಬಿಂದು S ಸೂರ್ಯ. ಬಾಣದ ಗುರುತು ವಾಸ್ತವಾಕಾಶದಲ್ಲಿ ಪಶ್ಚಿಮ-ಪೂರ್ವ ದಿಶೆಯನ್ನು ಸೂಚಿಸುವುದು. ಭೂಮಿಯ (E) ಮೇಲಿರುವ ನಮಗೆ ಸಾಪೇಕ್ಷವಾಗಿ ಬುಧ $M_1M_2M_3M_4$ ದಿಶೆಯಲ್ಲಿ ಚಲಿಸಿದಂತೆ ಕಾಣುತ್ತದೆ. ಬುಧ M_1 ರಲ್ಲಿ ಇರುವಾಗ ಅದನ್ನು ನಾವು ಕಾಣಲಾರೆವು. M_2 ರಲ್ಲಿ ಇರುವಾಗ ಬುಧ ಸೂರ್ಯನ ಪಶ್ಚಿಮಕ್ಕಿದೆ: ಈಗ ಅದನ್ನು "ಮುಂಜಾನೆಯ ತಾರೆ"ಯಾಗಿ ನೋಡುವ ಸಾಧ್ಯತೆ ಉಂಟು. M_3 ರಲ್ಲಿ ಇರುವಾಗ ಅದನ್ನು ಕಾಣಲಾರೆವು. M_4 ರಲ್ಲಿ ಇರುವಾಗ ಬುಧ ಸೂರ್ಯನ ಪೂರ್ವಕ್ಕಿದೆ: ಈಗ ಅದನ್ನು "ಸಂಜೆಯ ತಾರೆ"ಯಾಗಿ ನೋಡುವ ಸಾಧ್ಯತೆ ಉಂಟು. M_1EM_2 ಕೋನದ ಗರಿಷ್ಠ ಬೆಲೆ-ನಮಗೆ ಕಾಣುವಂತೆ ಬುಧ ಸೂರ್ಯರ ಕೋನಾಂತರದ ಗರಿಷ್ಠ ಬೆಲೆ- 28 ಡಿಗ್ರಿಗಳು ಮಾತ್ರ

ಲೇಖಕ ನೋಡಿದ್ದ) ಘಟಿಸಿದ ಕೆಲವು ಬುಧ ಸಂಕ್ರಮಣಗಳನ್ನು ವಿಜ್ಞಾನಿಗಳು ವಿಶೇಷೋಪಕರಣಗಳ ನೆರವಿನಿಂದ ವೀಕ್ಷಿಸಿ ಬುಧನ ಬಗ್ಗೆ ಹೊಸ ಮಾಹಿತಿಗಳನ್ನು ಸಂಗ್ರಹಿಸಿದ್ದಾರೆ. ಹಳೇ ಮಾಹಿತಿಗಳನ್ನು ಪರಿಶೀಲಿಸಿ ಪರಿಷ್ಕರಿಸಿದ್ದಾರೆ.

ಬುಧಾಧ್ಯಯನಕ್ಕೆ ನವತಂತ್ರಗಳು

ಯಾವುದೇ ಆಕಾಶಕಾಯದ ವಿವರಗಳನ್ನು ಅರಿಯಲು ಮನುಷ್ಯನಿಗೆ ಈ ಶತಮಾನದ ತನಕವೂ ಇದ್ದ ಸಾಧನವೆಂದರೆ ಆ ಕಾಯದಿಂದ ಹೊರಟು ಬಂದು ಇವನನ್ನು ತಲುಪುತ್ತಿದ್ದ ಬೆಳಕಿನ ಕಿರಣವೊಂದೇ. ದೂರದರ್ಶಕವಾದರೂ (ಇದು ವ್ಯಾಪಕವಾಗಿ ಬಳಕೆಗೆ ಬಂದದ್ದು ೧೭ನೆಯ ಶತಮಾನದಲ್ಲಿ) ಈ ಕಿರಣಗಳನ್ನೇ ಸಂಗ್ರಹಿಸಿ ಒಂದೆಡೆ ನಾಭೀಕರಿಸಿ ಮೂಲವಸ್ತುವಿನ ಲಂಬಿತ ಪ್ರತಿಬಿಂಬವನ್ನು ವೀಕ್ಷಣೆಗೆ ಒದಗಿಸುತ್ತಿತ್ತು, ಮಾತ್ರ. ಇಲ್ಲಿಯೂ ಕಿರಣಗಳ ಪ್ರಥಮಾವಶ್ಯಕತೆಯನ್ನು ಗಡೆಗಣಿಸುವಂತಿಲ್ಲ. ಇನ್ನು ದೂರದರ್ಶಕದ ಲಂಬನ ಸಾಮರ್ಥ್ಯಕ್ಕೂ ಮಿತಿ ಉಂಟು. ಇವೆಲ್ಲ ನೈಸರ್ಗಿಕ ಅಡಚಣೆ ನಿರ್ಬಂಧಗಳ ಪರಿಣಾಮವಾಗಿ ಬುಧನ ಭೌತವಿವರಗಳನ್ನು ಕುರಿತು ಲಭ್ಯವಿದ್ದ ಮಾಹಿತಿಗಳು, ಸೌರವ್ಯೂಹದಲ್ಲಿ ಬುಧ ನಮ್ಮ "ಆಚೆ ಮನೆ" ಎನ್ನುವಷ್ಟು ಸನಿಹದಲ್ಲಿದ್ದರೂ, ಅತ್ಯಲ್ಪವಾಗಿದ್ದುವು. ಉದಾಹರಣೆಗೆ ಬುಧನ ದಿವಸ ಮತ್ತು ವರ್ಷ ಸಮಾವಧಿಯವು ಎಂಬುದಾಗಿ ಕಳೆದ ದಶಕದ ತನಕವೂ ತರ್ಕಿಸಲಾಗಿತ್ತು. ಬುಧ ಸೂರ್ಯನ ಸುತ್ತ ಒಂದು ಸಲ ಪರಿಭ್ರಮಿಸುವ ಅವಕಾಶದಲ್ಲಿ ತನ್ನ ಸುತ್ತ ಕೂಡ ಒಂದು ಸಲ ಆವರ್ತಿಸುವುದು ಎಂದು ನಂಬಿದ್ದರು. ತತ್ಪರಿಣಾಮವಾಗಿ, ಚಂದ್ರ ಸದಾ ಒಂದೇ ಮುಖವನ್ನು ಭೂಮಿಗೆ ತೋರಿಸುವಂತೆ, ಬುಧನ ಒಂದು ಪಾರ್ಶ್ವ ಸದಾ ಸೂರ್ಯಮುಖವಾಗಿಯೂ ಇನ್ನೊಂದು ಪಾರ್ಶ್ವ ಸದಾ ಸೂರ್ಯವಿಮುಖವಾಗಿಯೂ ಇವೆಯೆಂದು ಭಾವಿಸಲಾಯಿತು.

ರೇಡಾರ್ ತಂತ್ರದ (ರೇಡಿಯೊ ತರಂಗಗಳ ದೂಲವನ್ನು ಉದ್ದಿಷ್ಟ ವಸ್ತುವಿನೆಡೆಗೆ ಪ್ರೇಷಿಸಿ ಅದರಿಂದ ಹಿಂಪುಟಿದು ಮರಳುವ ಪ್ರತಿಫಲಿತ ತರಂಗಗಳನ್ನು ಸಂಗ್ರಹಿಸಿ ವಿಶ್ಲೇಷಿಸಿ ತನ್ಮೂಲಕ ಆ ವಸ್ತುವಿನ ಸ್ವರೂಪ ಮುಂತಾದ ಗುಣನಿರ್ಧಾರ ಮಾಡುವುದು) ಉಪಜ್ಞೆ (ಇನ್‌ವೆನ್ಷನ್) ೧೯೨೦ರ ಸುಮಾರಿಗೇ ಆಗಿತ್ತು. ಆದರೆ ಇದು ವಿಶೇಷವಾಗಿ ಅಭಿವರ್ಧನೆಗೊಂಡದ್ದು ಎರಡನೆಯ ಮಹಾಯುದ್ಧದ ಕಾವಿನ ದಿನಗಳಂದು. ಯುದ್ಧಾನಂತರ ಇದರ ಅನ್ವಯ ಮತ್ತು ಉಪಯೋಗಗಳು ಖಗೋಳ ವಿಜ್ಞಾನ ಕ್ಷೇತ್ರಕ್ಕೆ ಲಭಿಸಿದುವು ೧೯೬೫ ರಲ್ಲಿ ರಾಲ್ಫ್ ಬಿ ಡೈಸ್ ಮತ್ತು ಗಾರ್ಡನ್ ಎಚ್. ಪೆಟ್ಟೆನ್‌ಗಿಲ್ ಎಂಬ ಇಬ್ಬರು ಖಗೋಳ ವಿಜ್ಞಾನಿಗಳು ಪೋರ್ಟೊರೀಕೋದ ಆರಿಸೀಬೊ ವೇಧಶಾಲೆಯಿಂದ ಬುಧಗ್ರಹಕ್ಕೆ ರೇಡಾರ್ ತಂತ್ರದ ಪ್ರಕಾರ ರೇಡಿಯೊ ತರಂಗದೂಲವನ್ನು ಪ್ರೇಷಿಸಿ ಪ್ರತಿಫಲಿತವಾಗಿ ಬಂದ ತರಂಗಗಳನ್ನು ಅಭ್ಯಸಿಸಿದರು. ಅವರು ಗ್ರಹದ ವಿರುದ್ಧ ಅಂಚುಗಳಿಂದ ಪ್ರತಿಫಲಿತವಾದವುಗಳ ಮೇಲೆ ತಮ್ಮ ಲಕ್ಷ್ಯವನ್ನು ವಿಶೇಷವಾಗಿ ಸಾಂದ್ರೀಕರಿಸಿದರು. ಬುಧನ ಪರಿಭ್ರಮಣಾವಧಿಯೂ ಆವರ್ತನಾವಧಿಯೂ ಸಮತೂಲದಲ್ಲಿ ಇಲ್ಲ ಎಂದು ಆಗ ಗೊತ್ತಾಯಿತು. ಬುಧ ದಿವಸದ ಅವಧಿ ೫೯ ನಮ್ಮ ದಿವಸಗಳು ಎಂದು ಸ್ಪಷ್ಟವಾಗಿ ತಿಳಿದದ್ದು ಈ ಅನ್ವೇಷಣೆಯ ಅನಂತರವೇ. ರೇಡಾರ್ ತಂತ್ರದ ಬಳಕೆಯಿಂದ ಬುಧನ ಮೇಲ್ಮೈ ಸ್ವರೂಪವನ್ನು ಕೂಡ ಅಭ್ಯಸಿಸಲಾಗಿದೆ.

೧೯೭೩ ರ ನವೆಂಬರಿನಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನ ಮ್ಯಾರಿನರ್-೧೦ ಎಂಬ ಹೆಸರಿನ ಆಕಾಶ ನೌಕೆಯನ್ನು ಒಳಗ್ರಹಗಳ (ಶುಕ್ರ ಮತ್ತು ಬುಧ) ಸಮೀಪ ವೀಕ್ಷಣೆಯ ಉದ್ದೇಶದಿಂದ ಉಡಾಯಿಸಿತು. ಮಂಗಳ, ಗುರು ಮೊದಲಾದ ಹೊರಗ್ರಹಗಳ ವಿಶಾಲ ಕ್ಷೇತ್ರಕ್ಕೆ ನೌಕೆಗಳನ್ನು ರವಾನಿಸುವುದಕ್ಕಿಂತ ಹೆಚ್ಚಿನ ತಾಂತ್ರಿಕ ಕೌಶಲವನ್ನೂ ಗಣಿತ

ಸಿದ್ಧಿಯನ್ನೂ ಒಳಗ್ರಹಗಳ ಕಡೆಗಿನ ಉಡಾವಣೆ ಬೇಡುತ್ತದೆ. ಇಲ್ಲಿನ ಕ್ಷೇತ್ರ ಸಂಕುಚಿತವಾದದ್ದು. ಸದಸ್ಯ ಕಾಯಗಳು (ಶುಕ್ರ ಮತ್ತು ಬುಧ) ಬಲು ಕಿರಿಯವು. ಅವುಗಳ ಕಕ್ಷಾವೇಗಗಳು ಅತಿ ತ್ವರಿತವು. ಮೇಲಾಗಿ ಸೂರ್ಯಾಭಿಮುಖವಾದ ಈ ಸಂಚಾರದಲ್ಲಿ ಸೂರ್ಯನ ಪ್ರಭಾವ ಕ್ಷಣ ಕ್ಷಣ ತೀವ್ರವಾಗಿ ಏರುತ್ತಿರುವುದು. ಮ್ಯಾರಿನರ್-೧೦ರ ಉಡಾವಣೆ ಮತ್ತು ಮುಂದಿನ ಯಾನದಲ್ಲಿ ವಿಜ್ಞಾನಿಗಳು ವಿಶೇಷವಾದ ಒಂದು "ಅಂತರಿಕ್ಷ ದೊಂಬರಾಟ" ಆಡಿ ಯಶಸ್ಸು ಗಳಿಸಿದರು. ಮೊದಲು ಈ ನೌಕೆ ಶುಕ್ರಗಾಮಿಯಾಗಿ ಸಾಗಿ ಹೋಯಿತು. ಶುಕ್ರನಿಗೆ ಇದು ಸಾಕಷ್ಟು ಹತ್ತಿರ ಐದಿದಾಗ ಆದರ ಗುರುತ್ವ ಬಲದಿಂದ ನೌಕೆ ವಿಕರ್ಷಣೆಗೊಂಡು ಬುಧ ಗ್ರಹದೆಡೆಗೆ ಎಸೆಯಲ್ಪಟ್ಟಿತು. ಆಗ ಇದಕ್ಕೆ ಬುಧನನ್ನೂ ಒಳಗೊಂಡಂತೆ ಸೂರ್ಯನ ಸುತ್ತ ಪರಿಭ್ರಮಿಸುವ ಹೊಸತೇ ಆದ ಒಂದು ಕಕ್ಷೆ ಒದಗಿತು. ಕೇರಮ್ ಆಟದಲ್ಲಿ ಒಂದು ಕಾಯಿನ್ನು ಓರೆಯಾಗಿ ತಾಡಿಸಿ ಅದು ಇನ್ನೊಂದನ್ನು ತಾಗುವಂತೆ ಮಾಡಿ ಅದರ ಹೊಡೆತದಿಂದ ಮೂರನೆಯ ಕಾಯಿಯೊಂದನ್ನು ಗುಂಡಿಗೆ ಬೀಳಿಸುವ ಚಮತ್ಕೃತ್ತನ್ನು ನೆನಪಿಗೆ ತಂದುಕೊಳ್ಳಬಹುದು. ಈ ಹೊಸ ಕಕ್ಷೆಯ ಸೂರ್ಯನೀಚಬಿಂದು (ಕಕ್ಷೆಯಲ್ಲಿ ಸೂರ್ಯನಿಗೆ ಸಮೀಪತಮ ಬಿಂದು) ಬುಧಕಕ್ಷೆಯ ಸೂರ್ಯೋಚ್ಚ ಬಿಂದುವಿನ (ಕಕ್ಷೆಯಲ್ಲಿ ಸೂರ್ಯನಿಂದ ದೂರತಮ ಬಿಂದು) ಸನಿಹದಲ್ಲಿರುವಂತೆ ನೌಕೆಯ ಕಕ್ಷೆಯನ್ನು ಏರ್ಪಡಿಸಲಾಯಿತು. ಇಷ್ಟೇ ಅಲ್ಲ, ಬುಧ ತನ್ನ ಕಕ್ಷೆಯ ಉಚ್ಚ ಬಿಂದುವಿಗೆ ಬಂದಾಗ ನೌಕೆ ತನ್ನ ಕಕ್ಷೆಯ ನೀಚಬಿಂದುವಿಗೆ ಬರುವಂತೆ ನೌಕೆಯ ಪರಿಭ್ರಮಣಾವಧಿ ಹಾಗೂ ಕಕ್ಷಾವೇಗ ಎರಕಗೊಂಡಿದ್ದವು. ನಿರ್ದಿಷ್ಟವಾಗಿ ಹೇಳುವುದಾದರೆ ಪ್ರತಿ ೧೭೬ ನಮ್ಮ ದಿವಸಗಳಲ್ಲಿ (ಈ ಅವಧಿ ಬುಧನ ೨ ವರ್ಷಗಳಿಗೆ ಸಮವಾಗುತ್ತದೆ) ನೌಕೆ ಬುಧಸಾಮೀಪ್ಯವನ್ನು ಪಡೆಯುವುದು ಸಾಧ್ಯವಾಗಿತ್ತು. ಸಹಸ್ರಾರು ಕಿಲೋಮೀಟರುಗಳ ಮಹಾದೂರದಲ್ಲಿ (ಭೂಮಿ-ಬುಧ ಅಂತರದ ಕನಿಷ್ಠ ಬೆಲೆ ಸುಮಾರು ೮೦೫ ಲಕ್ಷ ಕಿಮೀ. ಗರಿಷ್ಠ ಬೆಲೆ ಸುಮಾರು ೨೧೨೫ ಲಕ್ಷ ಕಿಮೀ). ಧೂಳ ಹುಡಿಗಳೋಪಾದಿಯಲ್ಲಿ, ಮಹಾ ಗಾತ್ರ ಸೂರ್ಯನ ಸುತ್ತ ಭಿನ್ನ ಕಕ್ಷಾವೇಗಗಳಿಂದ ಸಂಚರಿಸುತ್ತಿರುವ ಭೂಮಿ, ಶುಕ್ರ ಮತ್ತು ಬುಧಗ್ರಹಗಳ ವಲಯದಲ್ಲಿ ಭೂಜಾತನಾದ ಮೇಲಿನ "ಪುಟ್ಟ ಮಾನವ" ಆಡಿದ ಈ ಆಕಾಶ ಬಿಲ್ಲಿಯರ್ಡ್ ಆಟದಲ್ಲಿ ಮ್ಯಾರಿನರ್-೧೦ ಬುಧನನ್ನು ೭೦೦ ಕಿಮೀ. ಸನಿಹದಿಂದ ವೀಕ್ಷಿಸಿ ಗುರಿ ಸಿದ್ಧಿಸಿದ್ದು ಅತಿ ವಿಸ್ಮಯಕರ ಹಾಗೂ ಅಪೂರ್ವ ವಿಜಯ ಆಗಿರುವುದರ ಜೊತೆಗೆ ತಂತ್ರವಿದ್ಯೆ ಇಂದು ಸಾಧಿಸಿರುವ ನಿಷ್ಕೃಷ್ಟತೆಗೆ ಒಂದು ಉತ್ತಮ ನಿದರ್ಶನವೂ ಹೌದು.

ಬುಧ ವಾಸ್ತವ್ಯ –

ನಾವು ಈ ಗಳಿಗೆ ಬುಧನ ನೆಲದ ಮೇಲೆ ನಿಂತು ಆಗಸವನ್ನು ದಿಟ್ಟಿಸುವುದಾದರೆ ನಮ್ಮ ಅನುಭವ ಹೇಗಿರಬಹುದು? ರಾತ್ರಿ ವೇಳೆ ಇಳಿದಿದ್ದೇವೆ ಎಂದು ಭಾವಿಸೋಣ. "ಮೇಲೆ ನೋಡಿದ ಕಣ್ಣು ತಣಿಸುವ ನೀಲಪಟ" ಬುಧನಲ್ಲಿ ಕಾಣಿಸದು. ಗಮನಾರ್ಹ ವಾಯುಮಂಡಲ ಆಗಲಿ ಧೂಳ ಕವಚ ಆಗಲಿ ಇಲ್ಲಿ ಇಲ್ಲದಿರುವುದೇ ಇದರ ಕಾರಣ. ದಟ್ಟ ಕಪ್ಪು ಬಾನಿನ, ಮೇರೆ ಇರದ ಆಳಗಳಿಂದ ಅರಿಲುಗಳು ನಮ್ಮನ್ನು ಇರಿಯುತ್ತವೆ. ಅವು ಮಿನುಗುವುದಿಲ್ಲ. ತಾರೆಗಳಿಗೆ ಹೋಲಿಸುವಾಗ ಕೈಗೆ ಎಟುಕುವ ಎತ್ತರದಲ್ಲಿ ಅತ್ಯುಜ್ವಲವಾಗಿ ಬೆಳಗುತ್ತಿರುವ ಬೆಳಕಿನ ಬಿಳಿ ಉಂಡೆ ಶುಕ್ರ. ಅದೇ ಕಾಂತಿ ಪ್ರಮಾಣದಿಂದ ಪ್ರಕಾಶಿಸುತ್ತಿರುವ ಇನ್ನೊಂದು ಘನಮೂರ್ತಿ ಭೂಮಿ. ಬುಧನ ಒಂದು ರಾತ್ರಿ ಭೂಮಿಯ ಸುಮಾರು ೩೦ ದಿವಸಗಳಷ್ಟು ಸುದೀರ್ಘ [illegible] ಇಲ್ಲಿ ನಕ್ಷತ್ರ ರಂಗವಲ್ಲಿಗಳ ಮೂಡು-ಮುಳುಗು ಸರಿತ ಬಲು ಮಂದಗತಿಯದು. ಉಪಗ್ರಹ ರಹಿತವಾದ ಬುಧನಲ್ಲಿ ತಿಂಗಳು ಬೆಳಕಿನ ಹಾಲಿನ ಮೀಹ ನಮಗೆ ದೊರೆಯದು. ಹೀಗಾಗಿ ನಾವೇನು ಶಾಶ್ವತಾಂಧಕಾರದ

ಕುಂಭೀಪಾಕಕ್ಕೇ ಕೆಡೆದಿರುವೆವೋ ಎಂದು ನಮಗೆ ಅನ್ನಿಸಿದರೆ ಅಚ್ಚರಿ ಏನೂ ಇಲ್ಲ. ಅಂತೂ ನೇಸರು ಮೂಡುವ ಗಳಿಗೆ ಸನ್ನಿಹಿತವಾಗುವುದು. ಆದರೆ ಮುಂಜಾನೆಯ ಚೆಂಬೆಳಕಿನ ಓಕುಳಿ ಇಲ್ಲಿಲ್ಲ. ಇಂಥ ಚಮತ್ಕಾರಗಳು ಕೇವಲ ಭೂಸಂಬಂಧವಾದವು. ವಾಯುಮಂಡಲದೊಡನೆ ಸೂರ್ಯಕಿರಣಗಳ ಕಚಕುಳಿ ಆಟದ ಫಲವಾಗಿ ಭೂನಿವಾಸಿಗಳಿಗೆ ಲಭ್ಯವಾಗುವಂಥವು. ಬುಧನಲ್ಲಿ ಸೂರ್ಯ ಮೂಡುವುದು ಒಮ್ಮೆಗೇ. ಗುಂಡಿ ಒತ್ತಿದಾಗ ವಿದ್ಯುದ್ದೀಪ ಪ್ರಜ್ವಲಿಸುವಂತೆ. ಬೆಳಕಿನ ಸಗ್ಗಡಿಗೆ ದಿಢೀರನೆ ಒಡೆದು ಚೆಲ್ಲಿ ಹೋಗುವುದು. ಇಲ್ಲಿನ ಬಾನಿನಲ್ಲಿ ಸೂರ್ಯನ ಚಲನೆ ಕೂಡ ಬಲು ನಿಧಾನ. ಆದರೆ ಅದರ ಬಿಂಬ ಗಾತ್ರ ಮಾತ್ರ ಚಿಕ್ಕದು ದೊಡ್ಡದು ಆಗುತ್ತಿರುವಂತೆ ಭಾಸವಾಗುವುದು. ಬುಧ – ಸೂರ್ಯ ಅಂತರ ನಿರಂತರವಾಗಿ ಏರಿಳಿಯುತ್ತಿರುವುದೇ ಇದರ ಕಾರಣ. ಸೂರ್ಯಬಿಂಬದ ತೋರ್ಕೆ ವ್ಯಾಸ ೧ ಡಿಗ್ರಿ ೮ ಕೋನ ಮಿನಿಟುಗಳಿಂದ ೧ ಡಿಗ್ರಿ ೪೪ ಕೋನ ಮಿನಿಟುಗಳ ತನಕ ಬದಲಾಗುವುದು. (ಹೋಲಿಕೆಗಾಗಿ ಹೇಳುವುದಾದರೆ ಭೂಮಿಯಿಂದ ಕಾಣುವಂತೆ ಸೂರ್ಯ ಬಿಂಬದ ತೋರ್ಕೆ ವ್ಯಾಸ ೩೧ ಕೋನ ಮಿನಿಟುಗಳು; ೧ ಡಿಗ್ರಿ = ೬೦ ಕೋನ ಮಿನಿಟುಗಳು). ಒಂದು ವರ್ಷವಿಡೀ (ಇದು ೮೮ ಭೂ ದಿವಸಗಳಿಗೆ ಸಮ) ನಾವು ಇಲ್ಲಿಯೇ ಇದ್ದು ಋತುಗಳ ಬದಲಾವಣೆಯನ್ನು ಕೂಡ ಗಮನಿಸೋಣ ಎಂದು ನಿರೀಕ್ಷಿಸಿದರೆ ಅದು ಹುಸಿ ಆಗುವುದು. ಬುಧನ ಆವರ್ತನಾಕ್ಷ ಕಕ್ಷಾತಲಕ್ಕೆ ಲಂಬವಾಗಿದೆ ಎಂದು ಭಾವಿಸಲಾಗಿದೆ. ಹೀಗಾಗಿ ಇಲ್ಲಿ ಋತು ವ್ಯತ್ಯಾಸಗಳು ಸಂಭವಿಸುವುದಿಲ್ಲ.

ಈ ಸುಂದರ ವಸುಂಧರಾ ತಳದಲ್ಲಿ ನಿಮ್ಮ ತೂಕ "ಕೇವಲ" ೧೦೦ ಕೆಜಿ ಇದ್ದು ಇನ್ನೂ ಅದು ಊರ್ಧ್ವದಿಶಾಗಾಮಿಯಾಗಿಯೇ ಇದ್ದು ಈ "ತಲೆಭಾರ"ವನ್ನು ಸ್ವಲ್ಪ ಕಳಚಿ ಹಾಕುವುದು ಅಪೇಕ್ಷಣೀಯ ಎಂದು ನಿಮಗೆ ಅನ್ನಿಸಿದರೆ ಅಥವಾ ಹಾಗೆಂದು ನಿಮ್ಮ ಖಾಸಗಿ ವೈದ್ಯರು ಸಲಹೆ ನೀಡಿದರೆ ನೀವು ಅನುಸರಿಸಬಹುದಾದ ಒಂದು "ಸುಲಭ ವಿಮೋಚನೆ" ಎಂದರೆ ಬುಧನಲ್ಲಿಗೆ ವಲಸೆ ಹೋಗುವುದು; ಅಲ್ಲಿ ನಿಮ್ಮ ತೂಕ ಕೇವಲ ೩೭ ಕೆಜಿ. ಆದರೆ ಒಂದು ಎಚ್ಚರಿಕೆಯ ಮಾತು: ಉಷ್ಣತಾಮಾಪಕದಲ್ಲಿ ಏರಿದ ಪಾದರಸ ಸ್ತಂಭವನ್ನು ಕುಂತದ ನೆರವಿನಿಂದ ಕೆಳಗಿಳಿಸಿ ಜ್ವರದ ತಾಪವನ್ನು ತಗ್ಗಿಸಲಾಗುವುದಿಲ್ಲ. ಭೂಮಿಯಲ್ಲಿ ಪ್ರಯೋಗಿಸುವಷ್ಟು ಪ್ರಯತ್ನದಿಂದ ನೀವು ಬುಧನಲ್ಲಿ ಅದೆಷ್ಟೋ ಹೆಚ್ಚು ಎತ್ತರಕ್ಕೆ ಹಾರಬಲ್ಲಿರಿ, ದೂರಕ್ಕೆ ಜಿಗಿಯಬಲ್ಲಿರಿ. ಅಲ್ಲೇನಾದರೂ ನೀವು ಕ್ರಿಕೆಟ್ ಆಡತೊಡಗಿದರೆ ಭೂಮಿಯಲ್ಲಿನ ನಿಮ್ಮ ಸಿಕ್ಸರ್ ಹೊಡೆತಗಳು ಬುಧನಲ್ಲಿ ಬಾನ್ ನೆಗೆತಗಳೇ ಆಗಿಬಿಡುವ ಅಪಾಯ ಉಂಟು.

ಬುಧ ಸ್ವರೂಪ

ಬುಧನ ಮೇಲ್ಮೈ ಅತಿ ತೀವ್ರವಾದ ಸೌರ ಪ್ರಹಾರಕ್ಕೆ ತುತ್ತಾಗುವುದು ನಿರೀಕ್ಷಿತವಾದದ್ದೇ. ಉದಾಹರಣೆಗೆ ಬುಧ ಸೂರ್ಯನೀಚಬಿಂದುವಿಗೆ ಬಂದಾಗ ಅದರ ಮೇಲ್ಮೈಯ ಏಕಮಾನ ಸಲೆಯ ಮೇಲೆ ಪಾತವಾಗುವ ಸೌರಶಕ್ತಿ ಚಂದ್ರನ ಮೇಲ್ಮೈಯ ಸಮ ಸಲೆಯ ಮೇಲೆ ಪಾತವಾಗುವ ಸೌರಶಕ್ತಿಯ ಹತ್ತು ಪಟ್ಟು ಜಾಸ್ತಿ; ಬುಧ ಸೂರ್ಯೋಚ್ಚ ಬಿಂದುವಿನಲ್ಲಿರುವಾಗ ಭೂಮಿಗಿಂತ ೪.೬ ಪಟ್ಟು ಅಧಿಕ ಸೌರಶಕ್ತಿಯನ್ನು ಪಡೆದರೆ ಸೂರ್ಯನೀಚಬಿಂದುವಿನಲ್ಲಿರುವಾಗ ಭೂಮಿಗಿಂತ ೧೦.೬ ಪಟ್ಟು ಅಧಿಕ ಸೌರಶಕ್ತಿಯನ್ನು ಪಡೆಯುತ್ತದೆ. ಬುಧನ ಸಮಭಾಜಕೀಯ ವಲಯದಲ್ಲಿ ಮಧ್ಯಾಹ್ನದ ಪ್ರಖರ ಉಷ್ಣತೆ ೭೦೦ ಡಿಗ್ರಿ ಕೆಲ್ವಿನ್ ತನಕವೂ ಏರಬಹುದು. (ಭೂಮಿಯಲ್ಲಿ ಸಾಧಾರಣವಾಗಿ ನೀರು ಬರ್ಫ ಆಗುವುದು ೨೭೩ ಡಿಗ್ರಿ ಕೆಲ್ವಿನ್‌ನಲ್ಲಿ ಮತ್ತು ಕುದಿಯುವುದು ೩೭೩ ಡಿಗ್ರಿ ಕೆಲ್ವಿನ್‌ನಲ್ಲಿ). ಬುಧನಲ್ಲಿ ಉಷ್ಣವನ್ನು ಸೆರೆ ಹಿಡಿದಿಡಲು ವಾಯುಮಂಡಲ ಅಥವಾ ಜಲರಾಶಿ ಇಲ್ಲವಾದ್ದರಿಂದ ಮತ್ತು ಪ್ರಾಯಶಃ ವಿಕಿರಣಪಟು ಧಾತುಗಳ ಕ್ಷಯದಿಂದ ಜನಿಸಬಹು

ದಾದ ಆಂತರಿಕ ಉಷ್ಣ ವಿಶೇಷವಾಗಿ ಇಲ್ಲವಾದ್ದರಿಂದ ಗ್ರಹದ ರಾತ್ರಿ ಪಾರ್ಶ್ವದಲ್ಲಿ (ಅಂದರೆ ಸೂರ್ಯನಿಗೆ ವಿಮುಖ ಭಾಗದಲ್ಲಿ) ಮೇಲ್ಮೈ ಉಷ್ಣತೆ ಅತಿ ಶೀಘ್ರವಾಗಿ ೧೦೦ ಡಿಗ್ರಿ ಕೆಲ್ವಿನ್‌ಗೆ ಕುಸಿಯುತ್ತದೆ. ಮೇಲ್ಮೈಯಿಂದ ಹಲವಾರು ಕಿಲೊಮೀಟರ್ ಆಳದ ತನಕವೂ ಉಷ್ಣತೆ ನೀರಿನ ಬರ್ಫ ಬಿಂದುವಿಗಿಂತ ಕೆಳಗೆ ಇರುವುದರಿಂದ ತಲಾಂತರ್ಗತ ನೀರೇನಾದರೂ ಅಲ್ಲಿ ಹುದುಗಿದ್ದರೆ ಅದು ಈ ಬರ್ಫಗೋಡೆಯನ್ನು ಭೇದಿಸಿ ಹೊರಬರುವಂತಿಲ್ಲ. ಬುಧಕಂಪನದಿಂದಾಗಲಿ ತೀವ್ರ ಉಲ್ಕಾಪ್ರಹಾರದಿಂದಾಗಲಿ ಮೇಲ್ಮೈಗೆ ಆಳವಾದ ಗಾಯವಾಗಿ ತಲಾಂತರ್ಗತ ಜಲ ಬಾಷ್ಪ ಪರಿಸರಕ್ಕೆ ಒಡ್ಡಲ್ಪಟ್ಟರೆ ಬುಧನ ಹಗಲಿನಲ್ಲಿ ಅದು ಆವಿಯಾಗಿ ಅದರ ಅಣುಗಳು ತಕಪಕನೆ ಕುಣಿದು ಗ್ರಹದ ಹಿಡಿತದಿಂದ ತಪ್ಪಿಸಿಕೊಂಡು ಹೋಗಿಬಿಡುತ್ತವೆ. ಬುಧನ ದಪ್ಪ ತೊಗಟೆ ಅಥವಾ ಚರ್ಮದಲ್ಲಿ (ಇದು ೬೪೦ ಕಿ ಮೀ. ಮಂದ ಅಂದರೆ ಬುಧ ತ್ರಿಜ್ಯದ ೦.೨೬ ಅಂಶ ಉಂಟು. ಭೂಚರ್ಮದ ಮಂದ ೨೯೦೦ ಕಿ.ಮೀ. ಅಂದರೆ ಭೂ ತ್ರಿಜ್ಯದ ೦.೪೬ ಅಂಶ ಉಂಟು; ಬುಧನ ತಿರುಳು ತುಂಬ ದಪ್ಪ ಮತ್ತು ದಟ್ಟವಾಗಿ ಇದೆಯೆಂದು ಇದರ ಅರ್ಥ; ಕಿರಿಗಾತ್ರದ ಬುಧನಿಗೆ ಹಿರಿಗಾತ್ರದ ಭೂಮಿಯ ಸಾಂದ್ರತೆಯಷ್ಟೇ ಸಾಂದ್ರತೆ ಇರುವುದರ ಕಾರಣವಿದು) ಸಾಕಷ್ಟು ಗುಳಿಗಳೂ ಕೂಪಗಳೂ ಹರಡಿಹೋಗಿವೆ. ನಯವಾದ ಪುಡಿ ವ್ಯಾಪಕವಾಗಿ ಎರಚಿದಂತಿದೆ. ಈ ನಿಟ್ಟಿನಲ್ಲಿ ಬುಧ ಹೆಚ್ಚಾಗಿ ಚಂದ್ರನ ಮೇಲ್ಮೈಯನ್ನು ಹೋಲುವುದು. ಆದರೆ ತಳದಿಂದ ಲೆಕ್ಕ ತೆರಳಿದಾಗ ಬುಧ ಭೂಮಿ ಸದೃಶವಾಗಿದೆ. ಹೀಗಾಗಿ ಈ ಗ್ರಹ ಖಗೋಲ ವಿಜ್ಞಾನಿಗಳಿಗೆ ಒಂದು ಒಗಟಾಗಿದೆ.

ಮ್ಯಾರಿನರ್–೧೦ರಿಂದ ಲಭಿಸಿದ ಮಾಹಿತಿಗಳನ್ನು ವಿಶ್ಲೇಷಿಸಿ ಬುಧತಳದ ಇತಿಹಾಸವನ್ನು ಐದು ಅನುಕ್ರಮ ಘಟನೆಗಳ ಸರಣಿಯಾಗಿ ವಿಭಾಗಿಸಲಾಗಿದೆ. ಚಂದ್ರರೂಪಣೆಗೆ ಕೂಡ ಸಾಧಾರಣವಾಗಿ ಇದೇ ತೆರನಾದ ಘಟನೆಗಳೇ ಕಾರಣವೆಂದು ವಿಜ್ಞಾನಿಗಳು ನಂಬಿದ್ದಾರೆ.

ಮೊದಲ ಘಟನೆಯಲ್ಲಿ ಬುಧನ ಮೇಲೆ ಆಗಲೇ ಮೂಡಿದ್ದ ಭಾರೀ ಗಾತ್ರದ ಕೂಪಗಳು ಜ್ವಾಲಾಮುಖಿಗಳ ಇಲ್ಲವೇ ತೊಗಟೆ ಚಲನೆಯ ತೀವ್ರ ಕ್ರಿಯೆಗಳಿಂದ ಗುಡಿಸಿಹೋಗಿದ್ದಾಗಲಿ ಪ್ರಭಾವಿತವಾದದ್ದಾಗಲಿ ಕಾಣಬರುವುದಿಲ್ಲ. ಆದ್ದರಿಂದ ಬುಧನ ಅತಿ ಪುರಾತನ ಕೂಪಗಳು ಮೂಡುವುದಕ್ಕೆ ಮುನ್ನವೇ ಅದರ ಕಬ್ಬಿಣ ತಿರುಳೂ ಅದನ್ನು ಆವರಿಸಿ ತೆಳು ಸಿಲಿಕೇಟ್ ಹೊದಿಕೆಯೂ ಉಂಟಾಗಿರಬೇಕು ಎಂದು ಊಹಿಸಬಹುದು.

ಇತರ ಗ್ರಹಗಳಂತೆ ಬುಧ ಕೂಡ ದ್ರವ್ಯ ಸಂಚಯನದಿಂದ ರಚಿತವಾಯಿತೆಂದು ಭಾವಿಸುವುದಾದರೆ ಅಲ್ಲಿ ಆರಂಭದಲ್ಲಿ ಮೂಡಿದ ಕೂಪಗಳು ಎರಡನೆಯ ಹಂತದ ಮೊದಲ ದಿನಗಳಂದು ಉದ್ಭವಿಸಿದ ಜ್ವಾಲಾಮುಖಿಗಳ ಚಟುವಟಿಕೆಗಳಿಂದ ಮಾಸಿ ಹೋಗಿರಬೇಕೆಂದು ತೋರುತ್ತದೆ. ಏಕೆಂದರೆ ದ್ರವ್ಯ ಸಂಚಯನ ಕ್ರಿಯೆಯ ಗುರುತುಗಳು ಅಲ್ಲಿ ಈಗ ಕಾಣುತ್ತಿಲ್ಲ.

ಮೂರನೆಯ ಘಟ್ಟದ ವೇಳೆ ಬುಧತಳದ ಮೇಲೆ ಆಕಾಶತಿರುಕುಗಳ ತೀವ್ರ ಪ್ರಹಾರಗಳ ಪರಿಣಾಮವಾಗಿ ಭಾರೀ ಗಾತ್ರದ ಬೋಗುಣಿಗಳೂ ಪರ್ವತ ಸಾನು ಪ್ರದೇಶಗಳೂ ಉಂಟಾದುವು. ತೀವ್ರ ಬಾಹ್ಯ ಚಟುವಟಿಕೆಯ ಅವಧಿ ಇದು.

ಮುಂದಿನ ಬೆಳವಣಿಗೆಯಲ್ಲಿ, ಪ್ರಾಯಶಃ ವ್ಯಾಪಕವಾಗಿ ಹಬ್ಬಿದ ಜ್ವಾಲಾಮುಖಿ ಕ್ರಿಯೆಗಳ ಪರಿಣಾಮವಾಗಿ, ವಿಶಾಲವಾದ ಬಯಲುಗಳು ನಿರ್ಮಾಣಗೊಂಡಿರಬೇಕು.

ವರ್ತಮಾನ ಕಾಲದ ತನಕ ಚಾಚಿರುವ ಐದನೆಯ ಹಂತದಲ್ಲಿ ಬುಧತಳದ ಮೇಲೆ ಹೆಚ್ಚಿನ ಬದಲಾವಣೆಗಳೇನೂ ಕಂಡುಬಂದಿಲ್ಲ. ಆಗ ಈಗ ಬಿದ್ದ ಬಾಹ್ಯ ವಸ್ತುಗಳಿಂದ ಉಂಟಾದ ಕೆಲವೊಂದು ಕೂರಾದ ಬಿಂದುಗಳನ್ನು ಮಾತ್ರ ಕಾಣಬಹುದಷ್ಟೆ. ಇವು ಬೆಳಕನ್ನು ವಿಶೇಷವಾಗಿ ಪ್ರತಿಫಲಿಸುತ್ತವೆ.

ಕಳೆದ ೩೦೦ ಕೋಟಿ ವರ್ಷಗಳಿಂದೀಚೆಗೆ (ಸೌರವ್ಯೂಹದ ನಿರ್ಮಾಣ ಆದಮೇಲೆ ಸುಮಾರು

೪೬೦ ಕೋಟಿ ವರ್ಷಗಳ ಹಿಂದೆ) ಬುಧ, ಚಂದ್ರ ಮತ್ತು ಮಂಗಳಗ್ರಹಗಳಲ್ಲಿ ಬಾಹ್ಯ ವಸ್ತುಗಳ ತಾಡನೆಯಿಂದಾಗಿ ಕೂಪಗಳ ಉದ್ಭವದರಗಳಲ್ಲಿನ ಸಾದೃಶ್ಯ ಖಗೋಳ ವಿಜ್ಞಾನಿಗಳಿಗೆ ವಿಸ್ಮಯವನ್ನು ಉಂಟು ಮಾಡಿದೆ. ಕ್ಷುದ್ರ ಗ್ರಹಗಳ ಹೊನಲಿನ ಸಮೀಪದಲ್ಲಿರುವ ಮಂಗಳವನ್ನು ಬಡಿದಷ್ಟೇ ತೀವ್ರ ಕುಳಿಗಳು ಅಲ್ಲಿಂದ ಅತಿ ದೂರದಲ್ಲಿರುವ ಬುಧನನ್ನೂ ಹೊಡೆದಿವೆ ಎಂದು ಇದರಿಂದ ತಿಳಿಯುವುದು. ಪ್ರಾಯಶಃ ಆರಂಭದ ದಿನಗಳಲ್ಲಿ ಅಂತರಗ್ರಹ ಅವಶೇಷಗಳು ಅಧಿಕ ಪ್ರಮಾಣದಲ್ಲಿ ಇದ್ದಿರಬಹುದು; ಬುಧ–ಸೂರ್ಯ ಅವಕಾಶದಲ್ಲಿ ಇನ್ನೊಂದು ಚಿಕ್ಕ ಗ್ರಹವೇ ಇದ್ದು ಅದು ಒಡೆದು ಬುಧನನ್ನು ಹೆಟ್ಟಿರಬಹುದು. ಬೇರೆ ಕೆಲವು ವಿಜ್ಞಾನಿಗಳ ಅಭಿಪ್ರಾಯದಲ್ಲಿ ಸೌರವ್ಯೂಹದ ದೈತ್ಯ ಗ್ರಹಗಳ (ಗುರು, ಶನಿ, ಯುರೇನಸ್) ಆಕಾಶ ಬಿಲ್ಲಿಯರ್ಡ್ ಆಟದಲ್ಲಿ ಕ್ಷುದ್ರಗ್ರಹಗಳ ಹೊನಲಿನಲ್ಲಿ ಅಥವಾ ಬೇರೆ ಎಲ್ಲಿಯೋ ಇದ್ದ ಚಿಕ್ಕ ಕಾಯವೊಂದು ಉಚ್ಚಾಟನೆಗೊಂಡು ಬುಧ ಗ್ರಹ ಹುಟ್ಟಿರಬೇಕು ಎಂದಿದೆ.

ಭೂಮಿಯ ವಿಚಾರ ಮತ್ತು ಇಲ್ಲಿನ ಜೀವಿಗಳ ಉಗಮದ ವಿಚಾರ ಹೆಚ್ಚು ಹೆಚ್ಚು ತಿಳಿಯಲು ಸೌರವ್ಯೂಹದ ಇತರ ಎಲ್ಲ ಸದಸ್ಯ ಕಾಯಗಳ ಅಧ್ಯಯನವನ್ನು ಹೆಚ್ಚು ಹೆಚ್ಚು ಮಾಡುವುದು ಅತ್ಯವಶ್ಯ.

ನವನವ ಪ್ರಶ್ನೆಗಳು, ನವನವ ಪರೀಕ್ಷೆಗಳು
ದಿವಸಾಬ್ದ ಯುಗ ಚಕ್ರ ತಿರುತಿರುಗಿದಂತೆ
ಪ್ರವಹಿಸುವದರಂತೆ ಪೌರುಷ ಹಿತಪ್ರಜ್ಞೆ
ಅವಿರತದ ಚೈತನ್ಯ ಚುಂಬಿತವು



ವಿಧ ವಿಧ ಜನರ ವಿಧ ವಿಧ ನಡತೆ

"ಮಾಳಿಗೆ ಮೇಲೆ ನನ್ನ ಕರ್‌ಚೀಫ್ಸ್ ಇದೆ. ದಯವಿಟ್ಟು ತಂದು ಕೊಡುತ್ತೀರಾ?" ಎಂದು ಅಮೇರಿಕಾದ ಯುವತಿ ತನ್ನ ಗಂಡನಿಗೆ ಕೇಳಿದಾಗ ಗಂಡ ಕೂಡಲೇ ತಂದು ಕೊಡುತ್ತಾನೆ.

ಇದೇ ರೀತಿ ಚೀನಾದ ಯುವತಿ ತನ್ನ ಗಂಡನಿಗೆ ಕೇಳಿದರೆ ಆಕೆಯ ಗಂಡ ತನ್ನ ಮಗನಿಗೆ ತರಲು ಹೇಳುತ್ತಾನೆ.

ಒಂದು ವೇಳೆ ಇಂಗ್ಲೀಷ್ ಯುವತಿ ವಿನಂತಿಸಿದಾಗ ಆಕೆಯ ಗಂಡ, "ಯಾಕೆ ನಿನ್ನ ಕೈಕಾಲುಗಳು ಮುರಿದಿವೆಯೇನು?" ಎಂದು ಕೇಳುತ್ತಾನೆ.

ಹಾಗೂ ರಶಿಯಾದ ಯುವತಿ ತನ್ನ ಗಂಡನನ್ನು ಕೇಳಿದರೆ, ಆಕೆಯ ಗಂಡ ಆ ಕೆಲಸ ಮಾಡುತ್ತಾನೆ. ಆದರೆ, "ನಾನು ಮಾಳಿಗೆ ಮೇಲೆ ಹೋಗಿ ಬರುವಾಗ ನನ್ನ ಪೆನ್ನು ಬಿಸ್ತು ದಯವಿಟ್ಟು ತೆಗೆದುಕೊಂಡು ಬರುವಿಯಾ? ಎಂದು ತಿರುಗಿ ಕೆಲಸ ಹೇಳುತ್ತಾನೆ.

ಸಂಗ್ರಹ: ಕೋಟಿ ವರದೇಂದ್ರ

ನಗೆಮಲ್ಲಿಗೆ

ಗೋದಿಯ ದರ

"ಕ್ವಿಂಟಲ್ ಗೋದಿ ಬೆಲೆಯೆಷ್ಟು?" ಗ್ರಾಹಕ ಅಂಗಡಿಯವನನ್ನು ಕೇಳಿದ.

"೧೪೦ ರೂ. ಗಳು" ಅಂಗಡಿಯವ ಹೇಳಿದ.

"ಪಕ್ಕದಂಗಡಿಯವನು ೧೨೫ ರೂ. ಗೆ ಮಾರುತ್ತಿದ್ದಾನೆ."

"ಅತನ ಬಳಿಯೆ ತೆಗೆದುಕೊಳ್ಳಿ."

"ಅತನ ಬಳಿ ಈ ದಿನವಿಲ್ಲ."

"ನನ್ನ ಬಳಿ ಗೋದಿಯಿಲ್ಲದ ದಿನ, ನಾನು ೧೦೦ ರೂ. ಗಳಿಗೆ ಒಂದು ಕ್ವಿಂಟಲ್ ಮಾರುತ್ತೇನೆ."

—ಎಚ್. ಕೆ. ನರಸಿಂಹಮೂರ್ತಿ

ಅಪಥ್ಯ ಸಲಹೆ

ಮನಶ್ಶಾಸ್ತ್ರಜ್ಞರಲ್ಲಿಗೆ ಬಂದಾತ ತನ್ನ ಹೆಂಡತಿಯ ಬಗೆಗೆ ಆಪಾದಿಸುತ್ತಾ ಹೇಳಿದ:

"ಡಾಕ್ಟರ್, ಇನ್ನು ನನ್ನ ಹೆಂಡತಿಯ ಬಳಿಗೆ ಹೋಗಲಾರೆ. ಅವಳ ಮನಸ್ಸನ್ನು ಸಂತೋಷಗೊಳಿಸಲು ಪ್ರತಿದಿನ ನನ್ನ ಕೈಯಲ್ಲಾದುದನ್ನೆಲ್ಲಾ ಮಾಡುತ್ತಿದ್ದೇನೆ. ಆದರೆ ಏನೇ ಮಾಡಲಿ, ನನಗೆ ಹುಚ್ಚು ಹಿಡಿದಂತಾಗಿದೆ. ನೀವೇ ಉಪಾಯ ಹೇಳಬೇಕು. ಅವಳ ಮೊದಲ ಗಂಡ ಮಾಡಿದಂತೆಯೆ ಈಗ ನಾನೂ ಮಾಡಬೇಕೆನ್ನುತ್ತಿದ್ದಾಳೆ."

"ನೀವೇಕೆ ಹಾಗೇ ಮಾಡಬಾರದು? ಸಂಸಾರದಲ್ಲಿ ಸಾಮರಸ್ಯ ಇರುತ್ತದೆ."

"ಅವಳ ಮೊದಲ ಗಂಡ ಆತ್ಮಹತ್ಯೆ ಮಾಡಿಕೊಂಡಿದ್ದ." —ಎಸ್. ವಿಶ್ವನಾಥ

ಸಾಹಿತಿ ಆದರೇನು?

"ಎಷ್ಟು ಕಥೆ, ಕವನ, ಕಾದಂಬರಿ ಬರೆ- [illegible] ಸಾಹಿತಿಗಳಾದ್ರಿಪ್ಪಿ. ಆದರಿಂದ ಏನಾದರೂ ಸಂಪಾದನೆ ಉಂಟಾ...!"

"ಹೌದು! ಅಷ್ಟಷ್ಟು ಸಂಪಾದನೆ ಯಾಗುತ್ತಿದೆ. ಸಾವಿರ ಪುಟಗಳ ಕಾದಂಬರಿ ಬರೆದು ಪ್ರಕಟಿಸಲು ಕೊಡುತ್ತೇನೆ ಎಂದಾಕ್ಷಣ ಪ್ರಕಾಶಕರು, 'ಬೇಡ ಪೇಪರ್ ಕಾಗದದ ಅಭಾವ' ಎಂದು ಹೇಳಿ ಐವತ್ತು ರೂಪಾಯಿ ಕೊಟ್ಟು ಕಳುಹಿಸುತ್ತಾರೆ."

—ಎಸ್. ಎ. ಜಂಗಾವಿ

ಆದ ಮೇಲೆ ಕೊಡಿ ತಾಯಿ!

ಭಿಕ್ಷುಕ: ಅಮ್ಮಾ, ಸ್ವಲ್ಪ ಅನ್ನ ಕೊಡಿ ತಾಯಿ.

ಮನೆ ಯಜಮಾನಿ: ಅಡಿಗೆ ಆಗಿಲ್ಲ ಮುಂದೆ ಹೋಗಪ್ಪ.

ಭಿಕ್ಷುಕ: ಪರವಾಗಿಲ್ಲ ಅಡಿಗೆ ಆದ ಮೇಲೆ ಕೊಡಿ ತಾಯಿ! —ಎನ್. ಜೋರಯ್ಯ

ಕಾರಣ

ಪುಟ್ಟ ರಾಜು ಹೊತ್ತಾಗಿ ಶಾಲೆಗೆ ಹೋಗಿದ್ದ. ಆದರೆ ಅಂದೇ ಒಬ್ಬ ಪ್ರಸಿದ್ಧ ವ್ಯಕ್ತಿಯು ನಿಧನವಾದುದರಿಂದ ಶಾಲೆಗೆ ರಜೆ ಕೊಡಲಾಯಿತು. ಮಾರನೆದಿವಸ ರಾಜು ಶಾಲೆಗೆ ಹೋಗಲು ಸಿದ್ಧನಾದ. ಆದರೆ ಅವನ ತಾಯಿ ಆ ದಿನ ರವಿವಾರ ಇದ್ದುದರಿಂದ ಅವನಿಗೆ, "ಈ ಹೊತ್ತು ಶಾಲೆಗೆ ಹೋಗಬೇಕಾಗಿಲ್ಲ. ಇಂದು ರಜೆ" ಎಂದು ಹೇಳಿದಳು. "ಅಮ್ಮಾ, ಹಾಗಾದರೆ ಇಂದು ಯಾರು ಮಡಿದರು?" ಎಂದು ಕೇಳದೇ ಬಿಟ್ಟನು

—ವಾಸುದೇವ ರಾಜ

ನನಗೆ ಕಲಿಸ್ತೀಯಾ?

ಕಳ್ಳ: ಸಾಹೇಬ್ರೆ, ಬೀಗ ತಗೊಂಡು ಬರ್ತೀನಿ ಕೊಂಚ ಇಲ್ಲೇ ಇರಿ.

ಪೋಲೀಸ್: ಹಾ, ಕಳ್ಳ ನೀ... ಮಗನೇ ನನಗೆ ಕಲಿಸ್ತೀಯಾ? ಒಂದು ದೊಣ್ಣೆಗಳನ್ನ ಬೇಕೆನು? ನಾ ಹೋಗಿ ತಗೊಂಡು ಬರ್ತೀನಿ ನೀ ಇಲ್ಲೇ ಇರು. —ಬಿ. ಎಚ್. ರಾಜೇಂದ್ರ

ಪಥ್ಯ

[illegible]

ಅರ್ಧ ಲೋಟ ಹಾಲು ಮತ್ತು ಸ್ವಲ್ಪ ಸೊಪ್ಪಿನ ಪಲ್ಯ, ಇವಿಷ್ಟನ್ನು ಸ್ವಲ್ಪ ಕಠಿಣವಾದರೂ ಪಥ್ಯ ನಡಿಸಲೇಬೇಕು.

ರೋಗಿ : ಅಷ್ಟು ಎಂಥಹ ಕಠಿಣ ಪಥ್ಯ ಇದ್ದರೂ ಅದನ್ನು ಮಾಡೇ ಮಾಡುತ್ತೇನೆ. ಆದರೆ ಇವನ್ನು ಊಟಕ್ಕೆ ಮೊದಲು ತೆಗೆದುಕೊಳ್ಳಬೇಕೋ ಅಥವಾ ಊಟದ ನಂತರವೋ ಹೇಳಿ! —ಅನಂತ ದಂಡಾಪೂರ

ಫಾರ್ಮುಲಾ ?

ಮೇಷ್ಟ್ರು : ಲೋ, ಶ್ಯಾಮು – ಬಡವ ಮತ್ತು ಶ್ರೀಮಂತರ ನಡುವಿನ – ಅಂತರ ವೆಷ್ಟು? ಲೆಕ್ಕ ಹಾಕು.

ಶ್ಯಾಮು : ಲೆಕ್ಕವೇನೋ ಮಾಡ್ತಿದ್ದೆ ಸಾರ್. ಆದರೆ ಫಾರ್ಮುಲಾ ಯಾವ್ದು ?

ನಿಂಗೆ ಬರೋಲ್ಲ

ರಾಮು ವಿವಿಧವಾಗಿ ಸರ್ಕಸ್ ಮಾಡುತ್ತಾ, ಸೈಕಲ್ ತುಳಿಯುತ್ತಾ ಬಂದು ಅಲ್ಲಿಯೇ ನಿಂತಿದ್ದ ಶ್ಯಾಮುನ ಮುಂದೆ ಸೈಕಲ್ ನಿಂದ ಇಳಿದು, ಹೆಮ್ಮೆಯಿಂದ ಶ್ಯಾಮುವನ್ನು ಪ್ರಶ್ನಿಸಿದ, "ನೋಡ್ದೇನೋ ಹ್ಯಾಗೆ ಸೈಕಲ್ ತುಳಿತೀನಿ? ನಿಂಗೂ ನನ್ನ ತರ ತುಳಿಯಲಿಕ್ಕೆ ಬರುತ್ತಾ ?"

ಶ್ಯಾಮು ಹೆಮ್ಮೆಯಿಂದ ಉತ್ತರಿಸಿದ: "ನಿನ್ನ ತರ ಏನೋ. ನಿಮ್ಮಪ್ಪನ ತರ ತುಳಿತೀನಿ."

ಕೂಡಲೇ ರಾಮು ಹೇಳಿದ, "ಓ! ಹಾಗಾದ್ರೆ ನಿಂಗೆ ಸೈಕಲ್ಲೇ ಬರಲ್ವಾ? ಯಾಕೆಂದ್ರೆ ನಮ್ಮಪ್ಪನಿಗೆ ಸೈಕಲ್ ಬರೋದೇ ಇಲ್ಲ." —ಬಿ ಈ. ಗೋವಿಂದ

'ಸಾಬ ಹಮಾಲ'

ಬೆಳಗಾಂವಿ ಬಸ ಸ್ಟ್ಯಾಂಡು ಸಾಹೇಬರು ಬಸ್ಸಿನಿಂದ ಇಳಿದು ತಮ್ಮ ಸೂಟ್‌ಕೇಸ್ ತಾವೆ ಹಿಡಿದು ನಡೆದರು. ಹಮಾಲ ಬೆನ್ನಹತ್ತಿದ ಆದರೆ ಸಾಹೇಬರು ಬೇಡಂತ ಹೇಳಿದರು. ಅಂವಾ.

"ಹಮಾಲ ಸಾಬ, ಸಾಬ ಹಮಾಲ, ಸಾಬ ಹಮಾಲ" ಎನ್ನುತ್ತಾ ಹಿಂದೆ ಬಂದ ಜೋರಿನಿಂದ:

"ಸಾಬ ಹಮಾಲ" ಎಂದ ಕೂಡಲೆ ಸಾಹೇಬರು ಸೂಟ್‌ಕೇಸ್ ಅವನ ಕೈಗಿತ್ತು ಮುಂದೆ ನಡೆದರು. —ಶಂಕರ

ವಿಚಾರಣೆ ಇಲ್ಲಿ

ಸಂಪಾದಕ : ನೀವು ಬರೆದ ಕಥೆ ನಮಗೆ ಹಿಡಿಸಲಿಲ್ಲ.

ಸಾಹಿತಿ : ಏಕೆ?

ಸಂಪಾದಕ :– ಆ ಕಥೆಯಲ್ಲಿ ನೀವು ಎಂಟು ಕೊಲೆಗಳನ್ನು ಮಾಡಿದ್ದೀರಿ.

ಸಾಹಿತಿ : ಕೊಲೆಯಾಗಬಾರದೇ?

ಸಂಪಾದಕ : ಕೊಲೆಯಾದರೇನು ಅಡ್ಡಿಯಿಲ್ಲ. ಆದರ ವಿಚಾರಣೆ ಮಾತ್ರ ನೀವು ನಡಿಸಲೆಯಿಲ್ಲವಲ್ಲಾ.

—ಎಚ್. ಎಸ್. ಮುಜಾವರ



"ಪ್ರಿಯೆ ನಿನ್ನ ಅಡ್ರೆಸ್ ಸರಿಯಿಲ್ಲವೆಂದು ತೋರುತ್ತದೆ. ಈ ಕಾಗದ ತಲುಪುವುದೋ ಇಲ್ಲವೊ ತಿಳಿಯದು. ತಲುಪದಿದ್ದಲ್ಲಿ ಸರಿಯಾದ ಅಡ್ರೆಸ್ ಕೊಟ್ಟು ತಕ್ಷಣ ಕಾಗದ ಬರೆಯುವುದು."



ಇಲ್ಲಿ ಪುರಾತನವು ಆಧುನಿಕತೆಯ ಸೊಬಗನ್ನು ಪಡೆಯುತ್ತದೆ!

ಪುರಾತನ ಕಾಲದಿಂದಲೂ ಕರ್ನಾಟಕ ಹಾಗೂ ಹಿಂದುಸ್ತಾನಿ ಪದ್ಧತಿಯ ಸಂಗೀತಕ್ಕಾಗಿ ಭಾರತವು ಸುವಿಖ್ಯಾತವಾಗಿದೆ. ಇವೆರಡೂ ಪದ್ಧತಿಯ ಸಂಗೀತಗಳಲ್ಲಿ ರಾಗಗಳ ಆಲಾಪಗಳಿಗೆ ಸಂಬಂಧಿಸಿದ ಪದಗಳು ಒಂದೇ ಆಗಿದೆ. ಹಾಡುಗಾರಿಕೆಯ ಮೂಲಕವೇ ಭಾರತದ ಈ ಪ್ರಮುಖ ಕಲೆಯು ತಲೆತಲಾಂತರಗಳಿಂದ ಬೆಳೆದುಬಂದಿದೆ. ಅದೇ ಬಗೆಯಾಗಿ ದಾವಣಗೆರೆಯ ನಮ್ಮ ಮಿಲ್ಲಿನಲ್ಲಿ ತಯಾರಾಗುತ್ತಿರುವ ಬಟ್ಟೆಗಳು ಕಾಲಕ್ಕೆ ತಕ್ಕಂತೆ ಬಗೆಬಗೆಯ ವೈವಿಧ್ಯತೆಗಳಲ್ಲಿ ಬರುತ್ತಿವೆ. ಹಿಂದಿನ ಕಾಲದಲ್ಲಿ ಕೇವಲ ಹತ್ತಿಯ ಬಟ್ಟೆಗಳು ತಯಾರಾಗುತ್ತಿದ್ದವು. ಆಮೇಲೆ ಉಚ್ಚ ಮಟ್ಟದ ಶ್ರೇಣಿಗಳಲ್ಲಿ ಬಂದವು. ಈಗ ದಾವಣಗೆರೆಯ ನಮ್ಮ ಮಿಲ್ಲಿನಲ್ಲಿ ಶ್ರೇಷ್ಠ ಮಟ್ಟದ ಬ್ಲೆಂಡೆಡ್ ಬಟ್ಟೆಗಳೂ ತಯಾರಾಗುತ್ತಿವೆ. ಅವು ನೀವು ಕೊಡುವ ಹಣಕ್ಕೆ ದೊರೆಯಬಹುದಾದ ಉತ್ಕೃಷ್ಟ ಬಟ್ಟೆಗಳಾಗಿವೆ.

Reshma ರೇಶ್ಮಾ 2 x 2 ಫುಲ್ ವಾಯಿಲ್ ಸೀರೆಗಳು

Merlin ಮರ್ಲಿನ್ ಪ್ರಿಂಟೆಡ್ ವಾಶ್-ಎನ್-ವೇರ್ ಕ್ಯಾಂಬ್ರಿಕ್ಸ್

MYSORE BEAUTY ಮೈಸೂರ್ ಬ್ಯೂಟಿ ಪ್ರಿಂಟೆಡ್ ವಾಶ್-ಎನ್-ವೇರ್ ಕ್ಯಾಂಬ್ರಿಕ್

ಗಾ

ಮೇಕೆಯ ಕೂಗುವಿಕೆಯನ್ನು ಸೂಚಿಸುತ್ತದೆ.

PIN CODE FOR FAST MAIL

ದಾವಣಗೆರೆ

ಗುಣಕ್ಕೆ ಪ್ರಾಧಾನ್ಯತೆ ದೊರೆಯುತ್ತದೆ

ದಿ ದಾವಣಗೆರೆ ಕಾಟನ್ ಮಿಲ್ಸ್ ಲಿಮಿಟೆಡ್ ದಾವಣಗೆರೆ, ಕರ್ನಾಟಕ.

THOMAS/DCM/376/ Kan

ರೂಪಸಿ ಆರೋಪಿಯಾದಾಗ

ಹೇಮಲತಾ ಮಹಿಷಿ

ಒಬ್ಬ ನ್ಯಾಯವಾದಿಗೆ ಉತ್ತಮವಾದ ಒಂದು ಮೊಕದ್ದಮೆಯನ್ನು ತನ್ನ ಅಚಾತುರ್ಯದಿಂದ ಕೆಡಿಸಲು ಬರುವಂತೆ, ಒಂದು ಕೆಟ್ಟು ಹೋಗಿರುವ ಮೊಕದ್ದಮೆಯನ್ನು ತನ್ನ ಚಾತುರ್ಯದಿಂದ ಸರಿಪಡಿಸಲೂ ಬರುತ್ತದೆ. ಇಲ್ಲಿ ಚಾತುರ್ಯವೆಂದರೆ ಕಾನೂನು ಜ್ಞಾನ, ಮಾತಿನ ಮೋಡಿ ಮಾತ್ರ ಎಂದೇನು ಅಲ್ಲ. ಸಿವಿಲ್ ಮೊಕದ್ದಮೆಗಳಿಗೆ ಇವೆರಡೇ ಮುಖ್ಯವಾದರೂ ಕ್ರಿಮಿನಲ್ ಮೊಕದ್ದಮೆಗಳಿಗೆ ಇದಕ್ಕಿಂತ ಹೆಚ್ಚಾಗಿ ವ್ಯವಹಾರ ಜ್ಞಾನ ಮುಖ್ಯವಾಗಿರುತ್ತದೆ. ನ್ಯಾಯಾಧೀಶರ ಮೇಲೆ, ನ್ಯಾಯದರ್ಶಿ (Jury-ಈಗ ಭಾರತದಲ್ಲಿ ಈ ಪದ್ಧತಿ ಇಲ್ಲ)ಗಳ ಮೇಲೆ ತಾನು ಜಾಣ್ಮೆಯಿಂದ ಇಚ್ಛಿತ ಪರಿಣಾಮವನ್ನು ಉಂಟು ಮಾಡಲು ಮನಃಶಾಸ್ತ್ರದ ಅಭ್ಯಾಸವನ್ನೂ ಮಾಡಬೇಕಾಗುತ್ತದೆ. ಹಲವು ವೇಳೆ ಅಲ್ಲಲ್ಲಿ ನಾಟಕೀಯತೆಯನ್ನು ತುಂಬಿ ತನ್ನ ವಾದ ಪರಿಣಾಮಕಾರಿಯಾಗಿ ಆಗುವಂತೆ ಮಾಡಬೇಕಾಗುತ್ತದೆ. ಇವೆಲ್ಲ ಗುಣಗಳನ್ನು ಉಳ್ಳ ಒಬ್ಬ ಕ್ರಿಮಿನಲ್ ನ್ಯಾಯವಾದಿ ಹೇಗೆ ಒಂದು ಕೆಟ್ಟು ಹೋದ ಮೊಕದ್ದಮೆಯನ್ನು ಹೇಗೆ ಸರಿಪಡಿಸಬಲ್ಲ ಎಂಬುದಕ್ಕೆ ಬ್ರಿಟನ್ನಿನ ಪ್ರಸಿದ್ಧ ಸಾಲಿಸಿಟರ್ ಫ್ರೀರ್ ಪಾಮರ್ ಮತ್ತು ಬ್ಯಾರಿಸ್ಟರ್ ಸರ್ ಎಡ್ವರ್ಡ್ ಮಾರ್ಷಲ್ ಹಾಲ್ ಇಬ್ಬರೂ ಸೇರಿ ನಡೆಸಿದ ರೆಕ್ಸ್ V ಫಾಮಿ ಕ್ರಿಮಿನಲ್ ಮೊಕದ್ದಮೆಯೇ ಸಾಕ್ಷಿ. (ಕಕ್ಷಿಗಾರನು ಮೊದಲು ಭೇಟಿಮಾಡುವುದು ಸಾಲಿಸಿಟರ್‌ನನ್ನು-ಮುಂದೆ ಆ ಕಕ್ಷಿಗಾರನನ್ನು ಸಾಲಿಸಿಟರನು ಬ್ಯಾರಿಸ್ಟರ್‌ಗೆ ಪರಿಚಯ ಮಾಡಿಸಿ ಆ ಮೊಕದ್ದಮೆಯನ್ನು ಬ್ಯಾರಿಸ್ಟರನಿಗೆ ಒಪ್ಪಿಸುತ್ತಾನೆ)

ಕ್ರಿಮಿನಲ್ ಕಾಯಿದೆಯನ್ನು ಚೆನ್ನಾಗಿ ತಿಳಿದಿದ್ದ ಫ್ರೀರ್ ಪಾಮರ್ ೧೯೨೦-೩೦ ರ ಇಂಗ್ಲೆಂಡಿನ ಒಬ್ಬ ಪ್ರಸಿದ್ಧ ಸಾಲಿಸಿಟರ್ ಎನಿಸಿದ್ದ. ಇವನ ಖ್ಯಾತಿ ಲಂಡನ್ನಿನಲ್ಲಿ ಮಾತ್ರವಲ್ಲದೇ ಲಿವರ್‌ಪೂಲ್, ಮ್ಯಾಂಚೆಸ್ಟರ್, ಬರ್ಮಿಂಗ್‌ಹ್ಯಾಂ ಮೊದಲಾದ ಬ್ರಿಟನ್ನಿನ ಬೇರೆ ಬೇರೆ ಕೇಂದ್ರ ಸ್ಥಳಗಳಲ್ಲೂ ಹರಡಿತ್ತು.

ಎಂದಿನಂತೇ ಅಂದೂ ಪಾಮರ್ ತನ್ನ ಕಚೇರಿಗೆ ೧೦ ಗಂಟೆಗೆ ಸರಿಯಾಗಿ ಬಂದ. ದಿನದ ಪದ್ಧತಿಯಂತೆ ಮೊದಲು ಸ್ವಲ್ಪ ಕಾಲ The Times Law Reportಗಳ ಮೇಲೆ ಕಣ್ಣೋಡಿಸಿದ ನಂತರ Daily Express ಪತ್ರಿಕೆಯನ್ನು ಕೈಗೆತ್ತಿಕೊಂಡ. ಉಳಿದ ಪತ್ರಿಕೆಗಳಿಗಿಂತ ಬಲು ಬೇಗನೆ ಈ ಪತ್ರಿಕೆಯಲ್ಲಿ ಲಂಡನ್ನಿನ ಕ್ರಿಮಿನಲ್ ಸುದ್ದಿಗಳು ಪ್ರಕಟವಾಗುತ್ತಿದ್ದುದೇ ಆ ಪತ್ರಿಕೆಯನ್ನು ಪಾಮರ್ ಕೊಳ್ಳಲು ಕಾರಣವಾಗಿತ್ತು. ಹಿಂದಿನ ರಾತ್ರಿ ತಾನೇ ಲಂಡನ್ನಿನಲ್ಲಿ ನಡೆದ ಅಪರಾಧವೊಂದರ ವರದಿ ಅದರಲ್ಲಿತ್ತು. ಉಳಿದಾವ ಪತ್ರಿಕೆಗಳಲ್ಲಿ ಅದಿನ್ನೂ ಪ್ರಕಟವಾಗಿರಲಿಲ್ಲ. ಓದುತ್ತಾ ಹೋದಂತೆ ಪಾಮರ್‌ನ ಕುತೂಹಲ ಕೆರಳಿತು.

ಹೆಚ್ಚಿನ ವಿವರಗಳು ಅದರಲ್ಲಿರದಿದ್ದರೂ ಇಷ್ಟು ವಿಷಯಗಳು ಅದರಿಂದ ತಿಳಿಯಬಹುದಾಗಿತ್ತು: ರಾಜಕುಮಾರ ಫಾಮಿ ಮತ್ತು ಅವನ ಹೆಂಡತಿ ಲಂಡನ್ನಿನ ಸೆವಾಯ್ ಹೋಟೆಲ್ಲಿನಲ್ಲಿ ಕೆಲವು ದಿನಗಳಿಂದ ತಂಗಿದ್ದರು.

ಸುರೂಪಿಯಾದ ಮೇಡಂ ಫಾಮಿ ಫ್ರಾನ್ಸ್ ದೇಶದವಳಾಗಿದ್ದಳು. ಈಜಿಪ್ಟಿನ ಮುಸಲ್ಮಾನನಾಗಿದ್ದ ರಾಜಕುಮಾರ ಫಾಮಿ ಸೊಗಸುಗಾರನಲ್ಲದೇ ಅಗರ್ಭ ಶ್ರೀಮಂತನೂ ಆಗಿದ್ದ. ಆ ಪತ್ರಿಕಾ ವರದಿಯ ಪ್ರಕಾರ ಮೇಡಂ ಫಾಮಿ ತನ್ನ ಗಂಡನನ್ನು ಮೂರು ಬಾರಿ ಗುಂಡು ಹಾರಿಸಿ ಕೊಂದಿದ್ದಳು. ಆ ಸಮಯದಲ್ಲಿ ಹೊರಗಡೆ ಮೊಗಸಾಲೆಯಲ್ಲಿ ಹಾದುಹೋಗುತ್ತಿದ್ದ ಕೂಲಿಯಾಳಿಗೆ ಗುಂಡಿನ ಶಬ್ದ ಕೇಳಿಸಿ ಕೋಣೆಯೊಳಗೆ ಹೊಕ್ಕು ನೋಡಿದಾಗ ಪೈಜಾಮಾ ಧರಿಸಿದ್ದ ಫಾಮಿ ನೆಲದ ಮೇಲೆ ಒರಗಿದ್ದ. ಅವನ ಬಾಯಿಂದ ರಕ್ತ ಹೊರಬರುತ್ತಿತ್ತು. ಅವನು ಸತ್ತಿದ್ದ ಅಥವಾ ಸಾಯುವುದರಲ್ಲಿದ್ದ. ಹೋಟೆಲ್ ಮ್ಯಾನೇಜರನನ್ನು ಎಬ್ಬಿಸಿ, ವಿಷಯ ತಿಳಿಸಿ, ಕೋಣೆಗೆ ಕರೆತಂದಾಗ, ಅತೀವ ದುಃಖದಿಂದ ಮೇಡಂ ಫಾಮಿಯು, "ಅಯ್ಯೋ, ನಾನೇನು ಮಾಡಿಬಿಟ್ಟೆ. ನಾನೆಂಥಾ ಪಾಪಿ," ಎಂದಳಂತೆ.

ಪತ್ರಿಕೆಯಲ್ಲಿದ್ದ ಈ ವರದಿಯನ್ನು ಓದುತ್ತಿದ್ದಂತೆಯೇ ಪಾಮರ್‌ನಿಗೆ ತನ್ನ ಆಫೀಸಿಗೆ ಆ ಮೊಕದ್ದಮೆ ಬರುವುದಾಗಿಯೂ, ತನ್ನನ್ನು ಪ್ರಸಿದ್ಧಿಗೆ ತರುವಂತಹ ಎಲ್ಲಾ ಅಂಶಗಳೂ ಆ ಮೊಕದ್ದಮೆಯಲ್ಲಿ ಇರುವುದಾಗಿಯೂ ತಿಳಿದುಹೋಯಿತು.

ಮೊದಲನೆಯದಾಗಿ ತನ್ನನ್ನು ರಕ್ಷಿಸಿಕೊಳ್ಳಲು ಮೇಡಂ ಫಾಮಿ ಬೇಕಾದಷ್ಟು ಹಣವನ್ನು ತೆರಲು ಸಿದ್ಧವಿದ್ದಳು. ಎರಡನೆಯದಾಗಿ ಆ ಕಾಲದಲ್ಲಿ ಇಂಗ್ಲೆಂಡಿನ ಜನರಿಗೆ ಈಜಿಪ್ಟ್-ಹಾಗೂ ಅಲ್ಲಿಯ ಜನರ ಮೇಲೆ ಅಷ್ಟಾಗಿ ಒಳ್ಳೆಯ ಭಾವನೆ ಇರಲಿಲ್ಲ. ಈಜಿಪ್ಟಿನ ಮುಸಲ್ಮಾನರೆಂದರೆ ಕ್ರೂರಿಗಳು, ಮೋಸಗಾರರು, ನಂಬಿಕೆಗೆ ಅನರ್ಹರು ಎನ್ನುವ ಭಾವನೆ ಇತ್ತು. ಈ ಹತ್ಯಾ ಪ್ರಕರಣ ಬ್ರಿಟನ್ನಿನ ಸಾರ್ವಜನಿಕರ ಕುತೂಹಲ ಕೆರಳಿಸಲು ಒಂದು ಫ್ರೆಂಚ್ ಹೆಣ್ಣು ಈಜಿಪ್ಟಿನ ಶ್ರೀಮಂತನೊಬ್ಬನನ್ನು ಕೊಂದದ್ದೇ ಸಾಕಾಗಿತ್ತು.

ಹಿಂದಿನ ದಿನ ರಾತ್ರಿ ಲಂಡನ್ನು ಭಯಂಕರ ಬಿರುಗಾಳಿ, ಮಳೆ, ಸಿಡಿಲಿನ ಶಬ್ದದಿಂದ ತಲ್ಲಣಿಸಿತ್ತು. ಸಿಡಿಲು, ಬಿರುಗಾಳಿ-ಮಳೆಯ ಅಬ್ಬರದಲ್ಲಿ ಗುಂಡಿನ ಶಬ್ದ ಕೇಳದಿರಬಹುದು, ಕೇಳಿದರೂ ಅದನ್ನು ಸಿಡಿಲಿನ ಶಬ್ದವೆಂದು ತಪ್ಪು ಭಾವಿಸಬಹುದು ಎಂದು ತಿಳಿದು ಮೇಡಂ ಫಾಮಿ ಈ ಕೊಲೆ ಮಾಡಿರಬೇಕು. ಹಾಗೆ ಮಾಡುವುದರಿಂದ ತನಗೆ ಬೇಕಾದಂತೆ ಕೊಲೆಯಾದ ದೃಶ್ಯವನ್ನು ಏರ್ಪಡಿಸಲು ಸಮಯ ದೊರೆಯುತ್ತದೆ ಎಂದು ಅವಳು ಭಾವಿಸಿರಬೇಕು ಎಂದು ಪಾಮರ್‌ನ ವಕೀಲಿ ಬುದ್ಧಿ ಆಗಲೇ ಯೋಚಿಸತೊಡಗಿತ್ತು. ಆ ಮೊಕದ್ದಮೆಯಲ್ಲಿ ಎಲ್ಲೆಲ್ಲಿ ನ್ಯೂನತೆಗಳಿವೆ, ಯಾವ್ಯಾವುದನ್ನು ತಾವು ತನ್ನ ಪರವಾಗಿ ಉಪಯೋಗಿಸಿಕೊಳ್ಳಬಹುದು, ಮುಂದೆ ಮೇಡಂ ಫಾಮಿಯ ರಕ್ಷಣೆಗಾಗಿ ಯಾವ ರಕ್ಷಣ ಮಾರ್ಗವನ್ನು ಅನುಸರಿಸಬೇಕು ಮುಂತಾಗಿ ಪಾಮರ್ ಆಗಲೇ ಯೋಚಿಸತೊಡಗಿದ್ದ.

ನಿರೀಕ್ಷಿಸಿದಂತೆ, ಮಧ್ಯಾಹ್ನದ ವೇಳೆಗೆ ಪಾಮರ್‌ನ ಆಫೀಸಿಗೆ ಪೋಲೀಸ್ ಸ್ಟೇಶನ್ನಿನಿಂದ ಟೆಲಿಫೋನ್ ಕರೆ ಬಂತು—ಪೋಲೀಸರ ವಶದಲ್ಲಿರುವ ಮೇಡಂ ಫಾಮಿ ಪಾಮರ್‌ನನ್ನು ತಕ್ಷಣ ನೋಡಲು ಬಯಸಿದ್ದಾಳೆಂದು.

ಮಧ್ಯಾಹ್ನ ೨॥ ಘಂಟೆಗೆ ಪಾಮರ್ ಮೇಡಂ ಫಾಮಿಯನ್ನು ಪೋಲೀಸ್ ಸ್ಟೇಶನ್ನಿನಲ್ಲಿ ಭೇಟಿ ಮಾಡಿದ. ಅವಳಿಂದ ಬೇಕಾದ ವಿವರಗಳನ್ನೆಲ್ಲಾ ಪಡೆದ. ಮೇಡಂ ಫಾಮಿ ಸುಮಾರು ೩೦ ವರ್ಷದವಳಿದ್ದು ಸುಂದರ ಉಡುಪು ಧರಿಸಿದ ನವನಾಗರಿಕ ಫ್ರೆಂಚ್ ಸುಂದರಿಯಾಗಿದ್ದಳು. ಎಲ್ಲಕ್ಕಿಂತ ಹೆಚ್ಚಾಗಿ ಅವಳ ಮುಖ ಯಾತನೆಯನ್ನು ಹೊರಸೂಸುತ್ತಿತ್ತು. ಅವಳನ್ನು ನೋಡಿದ ಕೂಡಲೇ, ಅದು ತನ್ನ ಆ ವರ್ಷದ ಮುಖ್ಯ ಮೊಕದ್ದಮೆ ಎಂದು ಪಾಮರ್‌ನಿಗೆ ಹೊಳೆದುಹೋಯಿತು.

ತಾನು ಯಾವಾಗಲೂ ಪ್ರವಾಸದಲ್ಲಿರುವುದರಿಂದ ತಮ್ಮ ಪ್ರಾಣ ಹಾಗೂ ಹತ್ತಿರವಿರುವ ಬೆಲೆಬಾಳುವ ಆಭರಣಗಳ ರಕ್ಷಣೆಗಾಗಿ ಯಾವಾಗಲೂ ರಿವಾಲ್ವರನ್ನು ಜೊತೆ

ಯಲ್ಲಿಟ್ಟುಕೊಂಡಿರುತ್ತಿದ್ದುದಾಗಿ ಮೇಡಂ ಫಾಮಿ ತಿಳಿಸಿದಳು. ಅಲ್ಲಿಗೆ ರಿವಾಲ್ವರ್ ಅವಳ ಬಳಿ ಹೇಗೆ ಬಂದಿತು ಎಂಬುದಕ್ಕೇನೋ ಸಮಾಧಾನ ದೊರಕಿತು. ಆದರೆ ಗಂಡನನ್ನು ಕೊಲ್ಲಲು ಕಾರಣವೇನು ಎಂಬುದಕ್ಕೆ ಮಾತ್ರ ವಿವರಣೆ ಕೊಡುವುದು ಕಷ್ಟದಾಯಕ ಹಾಗೂ ಗಡುಚಾಗಿತ್ತು. ಇತ್ತೀಚಿನ ಕೆಲವು ತಿಂಗಳುಗಳಲ್ಲಿ ತನ್ನ ಗಂಡನು ತನಗೆ ದುಃಸ್ವಪ್ನನಾಗಿದ್ದನೆಂದೂ ತನ್ನ ಕುಟುಂಬದ ಸದಸ್ಯರನ್ನು ಬಿಟ್ಟು ಇನ್ನಾರೊಂದಿಗೂ ಗೆಳೆತನವನ್ನು ಯಾವುದೇ ವಿಧವಾದ ಸಂಬಂಧವನ್ನು ಹೊಂದಿರಕೂಡದೆಂಬುದು ಕಟ್ಟಾ ಈಜಿಪ್ಶಿಯನ್ ಮುಸಲ್ಮಾನನಾಗಿದ್ದ ರಾಜಕುಮಾರ ಫಾಮಿಯ ಅಭಿಮತವಾಗಿತ್ತು ಎಂದೂ ಅವಳು ತಿಳಿಸಿದಳು. ಆದರೆ ಮೊದಲಿನಿಂದಲೂ ಸ್ವತಂತ್ರ ವಾತಾವರಣದಲ್ಲಿ ಬೆಳೆದ ಮೇಡಂ ಫಾಮಿಗೆ ಇದು ಸರಿಬರುತ್ತಿರಲಿಲ್ಲ. ಮುಸಲ್ಮಾನ ಪದ್ಧತಿಯಂತೆ ಅವಳು ಸಂಪೂರ್ಣ ತನಗೆ ಅಡಿಯಾಳಾಗಿರಬೇಕೆಂದು ರಾಜಕುಮಾರ ಫಾಮಿ ಪ್ರಯತ್ನಿಸತೊಡಗಿದಾಗ ದಾಂಪತ್ಯದಲ್ಲಿ ವಿರಸ ತಲೆಹಾಕಿತು. ಮದುವೆಯಾದ ಆರಂಭದಲ್ಲಿ ಜೀವನ ಜೇನಾಗಿದ್ದುದು, ಬರಬರುತ್ತಾ ರಾಜಕುಮಾರ ಫಾಮಿಯ ನಿಜಸ್ವರೂಪ ಬಯಲಾದ ಹಾಗೆ ಹಾಲಾಹಲವಾಗತೊಡಗಿತು. ಇದಲ್ಲದೆ ಅವನ ವಕ್ರಮಾರ್ಗದ ಲೈಂಗಿಕ ದಾಹವನ್ನು ಬೇರೆ ಅವಳು ತೃಪ್ತಿಪಡಿಸಬೇಕಾಗಿತ್ತು. ಇದೆಲ್ಲಾ ಸೇರಿಕೊಂಡು ಅವಳನ್ನು ಹುಚ್ಚೆಬ್ಬಿಸಿತ್ತು.

ಆಫೀಸಿಗೆ ಹಿಂತಿರುಗುವಾಗ ಪಾವುರನ ತಲೆಯು ತುಂಬೆಲ್ಲ ಆ ಮೊಕದ್ದಮೆಯೇ ತುಂಬಿತ್ತು. ಹೆಚ್ಚೆಂದರೆ ಈ ಮೊಕದ್ದಮೆಯಲ್ಲಿ 'ಕೊಲೆ'ಯ ಅಪರಾಧವನ್ನು 'ಮಾನವಹತ್ಯೆ'ಯ ಅಪರಾಧಕ್ಕೆ ಇಳಿಸಿ, ಅಪರಾಧಿಗೆ ಕಡಿಮೆ ಶಿಕ್ಷೆ ದೊರೆಯುವಂತೆ ಮಾಡಬಹುದಿತ್ತು. ಇದಕ್ಕಾದರೂ ಕೂಡ, ಮೇಡಂ ಫಾಮಿಯ ಅಪರಾಧದ ಕಠೋರತೆಯನ್ನು ಕಡಿಮೆ ಮಾಡಲು ಸಾಕಷ್ಟು ಬಲವಾದ ಕಾರಣಗಳಿರಬೇಕು. ಅದಕ್ಕಾಗಿ ರಾಜಕುಮಾರ ಫಾಮಿಯ ಜೀವನದ ಬಗ್ಗೆ ಸಂಪೂರ್ಣ ಮಾಹಿತಿ ದೊರಕಿಸಿಕೊಳ್ಳಬೇಕು...ಪಾವುರ್ ಎಂದು ತನ್ನ ಯೋಚನೆಯಲ್ಲಿಯೇ ಮುಳುಗಿ ಹೋಗಿದ್ದ.

ಮಾರನೆಯ ದಿನ ಗುಪ್ತ ದಳದಿಂದ ಕಟ್ಟಲ್ಪಟ್ಟ ಮೊಕದ್ದಮೆಯ ಕಾಗದ ಪತ್ರಗಳು ಸರ್ ಎಡ್ವರ್ಡ್ ಮಾರ್ಷಲ್ ಹಾಲ್‌ನ ಗುಮಾಸ್ತನ ಕೈಸೇರಿತು. ಮಾರ್ಶಲ್ ಹಾಲ್ ಆ ಕಾಲದ ಪ್ರಸಿದ್ಧ ಕ್ರಿಮಿನಲ್ ನ್ಯಾಯವಾದಿ ಎನಿಸಿದ್ದ. ಕಾನೂನಿನ ಜ್ಞಾನ ವಿಶೇಷವಾಗಿ ಇರದಿದ್ದರೂ ಕ್ರಿಮಿನಲ್ ಮೊಕದ್ದಮೆಯನ್ನು ನಡೆಸುವ ಚಾಕಚಕ್ಯತೆಯಲ್ಲಿ ಇವನು ನಿಪುಣನಾಗಿದ್ದರಿಂದ ಎಷ್ಟೋ ಸಾರಿ ಇವನು ಅಪರಾಧಿಯ ಪರ ವಕೀಲಿ ವಹಿಸದಂತೆ ಮಾಡಲು ಬ್ರಿಟಿಶ್ ಸರ್ಕಾರವು ಇವನನ್ನು ತಾನೇ ನೇಮಿಸಿಕೊಳ್ಳುತ್ತಿತ್ತು. ಅಪರಾಧಿಯ ರಕ್ಷಣೆಯಲ್ಲಿ ಎತ್ತಿದ ಕೈಯಾದ ಮಾರ್ಷಲ್ ಹಾಲ್ ಎಷ್ಟೋ ಸಾರಿ ನ್ಯಾಯಾಧೀಶರನ್ನು ಪಕ್ಕಕ್ಕೆ ಒತ್ತರಿಸಿ, ತಾನೇ ೧೩ ನೇ ಜ್ಯೂರಿಯಾಗಿ ವರ್ತಿಸುತ್ತಿದ್ದುದೂ ಉಂಟು. ಅದಕ್ಕಿಂತ ಹೆಚ್ಚಾಗಿ ನೀಲಿಗಣ್ಣಿನ, ಬೆಳ್ಳಿಕೂದಲಿನ, ನೀಳ ನಾಸಿಕದ, ಆರು ಅಡಿ ಮೂರು ಅಂಗುಲ ದೀರ್ಘಕಾಯದ ಈ ಸುಂದರಾಂಗ ತನ್ನ ಮೊಕದ್ದಮೆಯನ್ನು ನಡೆಸುವ ಜಾಣ್ಮೆಯೊಂದಿಗೆ ಆಕರ್ಷಕ ವ್ಯಕ್ತಿತ್ವವನ್ನೂ ಪಡೆದಿದ್ದುದರಿಂದ ಪ್ರಾಣಭಯದಿಂದ ಗಂಡನನ್ನು ಕೊಲೆಮಾಡಿರುವ ಫ್ರೆಂಚ್ ಸುಂದರಿಯ ರಕ್ಷಣೆ ಮಾಡಲು ತಕ್ಕ ವ್ಯಕ್ತಿ ಇವನೇ ಎಂದು ಪಾವುರ್ ನಿರ್ಧರಿಸಿದುದರಲ್ಲಿ ಆಶ್ಚರ್ಯವೇನೂ ಇಲ್ಲ. ಇವರಿಬ್ಬರ ಜೋಡಿ ಕೊನೇಪಕ್ಷ ಕೊಲೆಯಿಂದ ಮಾನವ ಹತ್ಯೆಯ ನಿರ್ಣಯಕ್ಕೆ ಬರಲು ಜ್ಯೂರಿಗಳನ್ನು ಒಲಿಸಬಹುದು ಎಂಬುದು ಪಾವುರನ ನಿರೀಕ್ಷೆಯಾಗಿತ್ತು.

ಗುಮಾಸ್ತನು ಈ ಮೊಕದ್ದಮೆಗೆ ಸಂಬಂಧಿಸಿದ ಕಾಗದ ಪತ್ರಗಳನ್ನು ತಂದು ಎದುರು ಇಟ್ಟಾಗ ಇದು 'ಹತ್ತರ ಜೊತೆ ಹನ್ನೊಂದು' ಎಂದು ಮಾರ್ಷಲ್ ಹಾಲ್ ಓದಲು ಕೈಗೆತ್ತಿಕೊಂಡ. ಆದರೆ ಓದುತ್ತಾ ಹೋದಂತೆ ಅವನ

ಕುತೂಹಲವೂ ಹೆಚ್ಚಿತು. ಈಗ ಆ ಕಾಗದ ಪತ್ರಗಳೊಂದಿಗೆ ಫ್ರೀಕ್ ಪಾವರ್ ತಾನು ಸಂಗ್ರಹಿಸಿದ ಕೆಲವು ವಿಷಯಂಗಳನ್ನು ಅದರೊಂದಿಗೆ ಸೇರಿಸಿದ್ದ; ರಾಜಕುಮಾರ ಫಾಮಿಯ ಪರಿವಾರವೆಂದರೆ ಅವನ ಈಜಿಪ್ಷಿಯನ್ ಕಾರ್ಯದರ್ಶಿ ಮತ್ತು ಅಂಗರಕ್ಷಕ. ಭೀಮಕಾಯದ ಈ ಅಂಗರಕ್ಷಕ ನ್ಯೂಬಿಯಾ ದೇಶದವನಿದ್ದು, ಅವನು ಬಾಯಿಬಿಡುತ್ತಿದ್ದುದು ಇಲ್ಲವೆಂದರೂ ಸರಿಯೇ. ಈ ಮೂರು ಜನರೂ ಈಜಿಪ್ಟಿನಲ್ಲಿ ಬೆಳಕು, ಬೆಳಕಿನ ನೆರಳು ಮತ್ತು ಬೆಳಕಿನ ನೆರಳಿನ ನೆರಳು ಎಂದು ಪ್ರಸಿದ್ಧರಾಗಿದ್ದರು.

ಗಂಡನನ್ನು ಕೊಲೆ ಮಾಡಲು ಮೇಡಂ ಫಾಮಿ ಉಪಯೋಗಿಸಿದ ಸ್ಮಿತ್ ರಿವಾಲ್ವರ್ ಆ ಕಾಲದಲ್ಲಿ ಪ್ಯಾರಿಸ್ಸಿನ ಶ್ರೀಮಂತ ಮಹಿಳೆಯರಲ್ಲಿ ಒಂದು ಫ್ಯಾಶನ್ ಆಗಿತ್ತು. ರಿವಾಲ್ವರ್, ಬಂದೂಕು ಮೊದಲಾದವುಗಳ ಬಗ್ಗೆ ವಿಶೇಷ ಜ್ಞಾನವಿದ್ದ ಮಾರ್ಷಲ್ ಹಾಲ್‌ಗೆ ತಕ್ಷಣವೇ ಒಂದು ವಿಷಯ ಹೊಳೆದು ಹೋಯಿತು; ಈ ತರಹದ ರಿವಾಲ್ವರ್‌ನಲ್ಲಿ ಒಂದು ದೋಷವಿತ್ತು–ಯಾರಾದರೂ ಮೈ ಮೇಲೆ ಏರಿ ಬಂದರೆ, ಬೆದರಿಸಿ ಓಡಿಸಲೋಸುಗ ಒಂದು ಬಾರಿ ಈ ರಿವಾಲ್ವರನ್ನು ಚಲಾಯಿಸಲು ಬಯಸಿದರೂ, 'ಟ್ರಿಗರ್' ಮೇಲಿನ ಒತ್ತಡವನ್ನು ಬಿಡುಗಡೆ ಮಾಡದಿದ್ದಲ್ಲಿ ಒಂದರ ಹಿಂದೆ ಒಂದರಂತೆ ಹಲವಾರು ಗುಂಡುಗಳು ಹೊರ ಬರುವ ಸಾಧ್ಯತೆ ಇದೆ. ಈ ಮೊಕದ್ದಮೆಯಲ್ಲಿ ಇವೆರಡು ಅಂಶಗಳ ಪ್ರಾಮುಖ್ಯತೆಯನ್ನು ಮನಗಂಡ ಮಾರ್ಷಲ್ ಹಾಲ್ ಭವಿಷ್ಯದ ಬಗ್ಗೆ ಆಶಾವಾದ ತಳೆದಿದ್ದ.

ಮಾರನೆಯ ದಿನ ಮಾರ್ಷಲ್ ಹಾಲ್‌ನ ಕೋಣೆಯಲ್ಲಿ ಕುಳಿತು ಹಾಲ್ ಮತ್ತು ಪಾವರ್ ಇಬ್ಬರೂ ಮೊಕದ್ದಮೆಯ ಬಗ್ಗೆ ವಿವರವಾದ ಚರ್ಚೆ ನಡೆಸಿದರು. ತಕ್ಷಣವೇ ರಾಜಕುಮಾರ ಫಾಮಿಯ ಜೀವನದ ಒಳ್ಳೆ ಅದರಲ್ಲೂ ಅವನ ಲೈಂಗಿಕ ವರ್ತನೆಯ ಬಗ್ಗೆ ತನಿಖೆ ಮಾಡಬೇಕೆಂದೂ ಅದಕ್ಕಾಗಿ ಮೇಡಂ ಫಾಮಿ ನೀಡಿರುವ ಹಣದಲ್ಲಿ ಸ್ವಲ್ಪ ಭಾಗ ಉಪಯೋಗಿಸಬೇಕೆಂದೂ ನಿರ್ಧರಿಸಿದರು. ಇಬ್ಬರೂ ಕುಳಿತು ಪತಿ–ಪತ್ನಿಯ ಸಂಬಂಧ ಹಾಗಿರುವ ಮುಸ್ಲಿಂ ಕಾನೂನನ್ನು, ಮುಸಲ್ಮಾನರಲ್ಲಿ ಹೆಂಡತಿ ಗಂಡನ ಆಸ್ತಿ ಎಂದಿರುವ ಪ್ರಾಚೀನ ಸಂಪ್ರದಾಯವನ್ನೂ ಕುರಿತು ಆಳವಾಗಿ ಅಭ್ಯಾಸ ನಡೆಸಿದರು.

ಕೊನೆಯಲ್ಲಿ ಮಾರ್ಷಲ್ ಹಾಲ್‌ನನ್ನು ಬೀಳ್ಕೊಂಡಾಗ ಫ್ರೀಕ್ ಪಾವರ್, "ನರಹತ್ಯೆಯ ತೀರ್ಪು ಇದರಲ್ಲಿ ದೊರಕಲು ಸಾಧ್ಯವೆಂದು ನಿಮಗೆ ಅನ್ನಿಸುತ್ತದೆಯೇ?" ಎಂದು ಕೇಳಿದಾಗ ಬಂದ ಉತ್ತರ ಮಾರ್ಷಲ್ ಹಾಲ್‌ನಂತಹವರಿಂದ ಮಾತ್ರ ನಿರೀಕ್ಷಿಸಲು ಸಾಧ್ಯ:

"ಕಡಿಮೆ ಫಲವನ್ನು ನಿರೀಕ್ಷಿಸಿ ನಮ್ಮನ್ನು ನಾವು ಕಟ್ಟುಪಾಡಿಗೆ ಒಳಪಡಿಸಿಕೊಳ್ಳುವುದು ಬೇಡ. ಯಾವುದನ್ನೂ ಸಾಧ್ಯವಾಗಿಸುವ ಲಕ್ಷಣಗಳು ಈ ಮೊಕದ್ದಮೆಯಲ್ಲಿವೆ. ಸದ್ಯದಲ್ಲಿಯೇ ನಾನು ಮೇಡಂ ಫಾಮಿಯನ್ನು ಕಂಡು, ಅವಳೆಂತಹ ಹೆಂಗಸು, ನಾಳೆ ನ್ಯಾಯಾಲಯದಲ್ಲಿ ಎಂತಹ ಸಾಕ್ಷಿಯಾಗುತ್ತಾಳೆ ಎನ್ನುವುದನ್ನು ನಿರ್ಧರಿಸಬೇಕಾಗಿದೆ. ಈ ಮಧ್ಯೆ ನೀನೂ ತನಿಖೆಯನ್ನು ಮುಂದುವರಿಸು. ನನ್ನ ಕೈಲಾದದ್ದನ್ನೆಲ್ಲಾ ಮಾಡುತ್ತೇನೆಂದು ನಿನ್ನ ಕಕ್ಷಿದಾರಳಿಗೆ ತಿಳಿಸು."

ಮೇಡಂ ಫಾಮಿಯನ್ನು ಭೇಟಿ ಮಾಡಿದಾಗ ಮಾರ್ಷಲ್ ಹಾಲ್‌ನನ್ನು ಮೊಟ್ಟಮೊದಲು ಆಕರ್ಷಿಸಿದುದು ಅವಳ ಸೌಂದರ್ಯವಲ್ಲ; ಅತಿಯಾಗಿ ಕೆರಳಿಸುವುದರಿಂದ ಅಥವಾ ಆತ್ಮರಕ್ಷಣೆಗಾಗಿ ಅವಳು ಹಾಗೆ ಮಾಡಿರಬಹುದೇ ಹೊರತು ಮೇಡಂ ಫಾಮಿ ಗಂಡನನ್ನು ಕೈಯಾರೆ ಕೊಲೆ ಮಾಡುವಂತಹ ಹೆಣ್ಣಲ್ಲವೆಂದು ಮಾರ್ಷಲ್‌ನಿಗೆ ಅನ್ನಿಸಿತು. ಹಾಗೆ ಯಾರಾದರೂ ಹೇಳಿದರೆ ಅವನಿಗೇ ನಂಬುವುದು ಅಸಾಧ್ಯವಾಗಿತ್ತು. ಅದರೊಂದಿಗೆ, ಅವಳು ಅನುಭವಿಸುತ್ತಿದ್ದ ಮಾನೋವ್ಯಥೆ ಸಹಜವಾಗಿ ಎದ್ದು ಕಾಣುತ್ತಿದ್ದುದರಿಂದ ನ್ಯಾಯಾಲಯದಲ್ಲಿ ಅವಳು ಒಬ್ಬ ಉತ್ತಮ

ಸಾಕ್ಷಿಯಾಗುತ್ತಾಳೆಂದು ಮಾರ್ಷಲ್‌ಗೆ ತೋರಿತು. ಮೇಡಂ ಫಾಮಿ ಇಂಗ್ಲಿಷನ್ನು ಬಿಡಿ ಬಿಡಿಯಾಗಿ ಮಾತಾಡುತ್ತಿದ್ದುದರಿಂದ ಮಾರ್ಷಲ್ ಹಾಲ್‌ನ ಮೆದುಳಲ್ಲಿ ಮಿಂಚೊಂದು ಮಿಂಚಿತು: ಆಕರ್ಷಕವಾಗಿರುವ ೨೫ ವರ್ಷ ವಯಸ್ಸಿನ ಫ್ರೆಂಚ್ ಬಾರ್‌ಗೆ ಸೇರಿರುವ ಯುವತಿಯೊಬ್ಬಳನ್ನು ಮೇಡಂ ಫಾಮಿಯ ಭಾಷಾಂತರಕಾರಳನ್ನಾಗಿ ನೇಮಿಸಿದರೆ ಹೇಗೆ? ಇದರಿಂದ ನ್ಯಾಯಾಲಯದಲ್ಲಿ ಒಂದು ವಿಧದ 'ಚೇತೋಹಾರಿ ವಾತಾವರಣ' ಏರ್ಪಡುವುದೂ ಅಲ್ಲದೇ ಮೇಡಂ ಫಾಮಿಗೆ ಯೋಚಿಸಿ ಉತ್ತರಿಸಲು ಸಮಯವೂ ಸಿಗುತ್ತದೆ. ಒಬ್ಬ ಸುಂದರ ಫ್ರೆಂಚ್ ಯುವತಿ ಇನ್ನೊಬ್ಬ ಆಕರ್ಷಕ ಯುವತಿಯಿಂದ ನೆರವು ಪಡೆಯುವ ದೃಶ್ಯವು ದುರ್ಬಲ ಮನಸ್ಸಿನ ಜ್ಯೂರಿಗಳ ಮೇಲೆ ಪರಿಣಾಮ ಬೀರಬಲ್ಲದೆಂದು ಮಾರ್ಷಲ್ ಹಾಲ್ ಸರಿಯಾಗಿಯೇ ನಿರೀಕ್ಷಿಸಿದನು.

ಈ ಮೊಕದ್ದಮೆಯು ಮಾರ್ಷಲ್ ಹಾಲ್‌ನ ವಕೀಲಿ ಜೀವನದ ಒಂದು ಸವಾಲಾಗಿತ್ತು. ತಾನೇಕೆ ಮೇಡಂ ಫಾಮಿಯ ಬಿಡುಗಡೆಗಾಗಿ ಪ್ರಯತ್ನಿಸಬಾರದು? ರಾಜಕುಮಾರ ಫಾಮಿ ತನಗೆ ಶರಣಾಗದಿದ್ದರೆ ಕೊಲ್ಲುತ್ತೇನೆಂದು ಬೆದರಿಸಿ, ಮೇಲೆ ಬೀಳಲು ಪ್ರಯತ್ನಿಸಿದಾಗ ತನ್ನ ಆತ್ಮ ರಕ್ಷಣೆಗೆಂದು ಮೇಡಂ ಫಾಮಿ ಗುಂಡು ಹಾರಿಸಬೇಕಾಯಿತು ಎಂದು ತನ್ನಿಂದ ಸಾಧಿಸಲು ಸಾಧ್ಯವಾದರೆ, 'ಮೇಡಂ ಫಾಮಿ ತಪ್ಪಿತಸ್ಥಳಲ್ಲ' ಎನ್ನುವ ತೀರ್ಮಾನವನ್ನು ಜ್ಯೂರಿಗಳು ನೀಡಲು ಸಾಧ್ಯವಿಲ್ಲವೇ? 'ಮೇಡಂ ಫಾಮಿಯನ್ನು ಅವಳ ಗಂಡ ಕೆರಳಿಸಿದ್ದರಿಂದ ಅವಳು ಗುಂಡು ಹಾರಿಸಿದಳು' ಎಂದು ಹೇಳುವುದರಿಂದ ಏನೂ ಉಪಯೋಗವಿಲ್ಲ. ಈ ರೀತಿಯ ವಾದದಿಂದ ಹೆಚ್ಚೆಂದರೆ 'ಕೊಲೆ'ಯ ಅಪಾದನೆ 'ನರಹತ್ಯೆ'ಗೆ ಇಳಿದು, ಶಿಕ್ಷೆ ಸ್ವಲ್ಪ ಕಡಿಮೆ ಆಗಬಹುದು. ಅದರ ಬದಲು ಅವಳ ಜೀವಕ್ಕೆ ತಕ್ಷಣ ಅಪಾಯವಿತ್ತೆಂದು ತೋರಿಸಿದರೆ ಅವಳಿಗೆ ಅಂತಹ ಸಮಯದಲ್ಲಿ ಪ್ರಾಣರಕ್ಷಣೆಗಾಗಿ ಯಾವ ಕ್ರಮ ಕೈಗೊಳ್ಳಲೂ ಹಕ್ಕಿರುತ್ತದೆ. ಅಂತಹ ಸಮಯದಲ್ಲಿ ಅವಳನ್ನು ಬೆದರಿಸಿದ ವ್ಯಕ್ತಿಯನ್ನು ಕೊಲ್ಲುವುದೂ ಅಪರಾಧವಾಗುವುದಿಲ್ಲ. ಪ್ರತಿಯೊಂದನ್ನೂ ತೂಗಿನೋಡಿ ಮಾರ್ಷಲ್ ಕೊನೆಗೆ ಈ ದಿಟ್ಟ ನಿರ್ಧಾರ ಕೈಗೊಂಡ. ಆದರೆ ತಾನು ಮುಂದಿಡುವ ಹೆಜ್ಜೆ ಮಾತ್ರ ಮೊಕದ್ದಮೆ ಯಾವ ದಿಕ್ಕಿನಲ್ಲಿ ಸಾಗುತ್ತದೆ ಎಂಬುದರ ಮೇಲೆ ಅವಲಂಬಿಸಿದೆ ಎಂದು ಅವನಿಗೆ ಚೆನ್ನಾಗಿ ತಿಳಿದಿತ್ತು. ಮೇಡಂ ಫಾಮಿ ಏನಾದರೂ ಪಾಟಿ ಸವಾಲಿನಲ್ಲಿ ಕುಸಿದು ಬಿದ್ದರೆ, ಪ್ರಾಸಿಕ್ಯೂಶನ್ ಏನಾದರೂ ಮೇಡಂ ಫಾಮಿ ಮೊದಲೇ ಕೊಲೆ ಮಾಡಲು ಯೋಚಿಸಿದ್ದಳು ಎಂದು ತೋರಿಸಿದರೆ ಅಥವಾ ತಾನು ನಂಬಿರುವಂತೆ ರಾಜಕುಮಾರ ಫಾಮಿ, ಅವನ ಕಾರ್ಯದರ್ಶಿ ಹಾಗೂ ಅಂಗರಕ್ಷಕನ ಗುಂಪು ಭಯಾನಕವಾಗಿಲ್ಲದೇ ಹೋದರೆ ನರಹತ್ಯೆಯ ತೀರ್ಪು ಸಿಗುವುದೇ ಅದೃಷ್ಟ ಎಂದಾಗುತ್ತದೆ. ಆಗ ಕಡಿಮೆ ಶಿಕ್ಷೆ ವಿಧಿಸಬೇಕೆಂದು ನ್ಯಾಯಾಧೀಶರನ್ನು ಒಲಿಸಲೋಸುಗವೇ ತನ್ನೆಲ್ಲಾ ಜಾಣ್ಮೆಯನ್ನು ಖರ್ಚು ಮಾಡಬೇಕಾಗುತ್ತದೆ.

Old Bailey ಯಲ್ಲಿ ನ್ಯಾಯಾಧೀಶ ರಿಗ್‌ಬೈ ಸ್ವಿಫ್ಟ್ ಮುಂದೆ ಈ ಮೊಕದ್ದಮೆ ವಿಚಾರಣೆಗೆ ಬಂದಿತು. ಪರ್ಸಿವಲ್ ಕ್ಲಾರ್ಕ್ ಪ್ರಾಸಿಕ್ಯೂಶನ್ ಪರ ನೇಮಿಸಲ್ಪಟ್ಟನು. ಸಂಪೂರ್ಣ ಬ್ರಿಟಿಶ್ ವ್ಯಕ್ತಿತ್ವವಿದ್ದ ರಿಗ್‌ಬೈ ಸ್ವಿಫ್ಟ್ ಈಜಿಪ್ಟಿಯನ್ನರ ವಿರೋಧಿಯೇನೂ ಆಗಿರಲಿಲ್ಲ. ಅಲ್ಲದೆ ಕಷ್ಟದಲ್ಲಿರುವ ಸುಂದರ ಯುವತಿಯ ಬಗ್ಗೆ ಸಹಾನುಭೂತಿ ತೋರಿಸದೇ ಇರುವವನೂ ಆಗಿರಲಿಲ್ಲ. ಪ್ರಾಸಿಕ್ಯೂಟರ್ ಪರ್ಸಿವಲ್ ಕ್ಲಾರ್ಕ್ ಕೂಡ ಆ ಕಾಲದ ಒಬ್ಬ ಪ್ರಸಿದ್ಧ ನ್ಯಾಯವಾದಿಯಾಗಿದ್ದರೂ ವ್ಯಕ್ತಿತ್ವದಲ್ಲಿ ಮಾರ್ಷಲ್ ಹಾಲ್‌ನನ್ನು ಸರಿಗಟ್ಟುವವನೇನೂ ಆಗಿರಲಿಲ್ಲ. ಪರಿಣಾಮವಾಗಿ ನ್ಯಾಯಾಲಯದಲ್ಲಿ ಬೆಳಿಗ್ಗೆ ಕಾಲಿಟ್ಟಾಗಿನಿಂದ ಹಿಡಿದು ಸಂಜೆ ನ್ಯಾಯಾಲಯ ಏಳುವವರೆಗೆ ಮಾರ್ಷಲ್ ಹಾಲ್ ಎಲ್ಲರ ಕಣ್ಮಣಿಯಾಗಿ ಪ್ರಭಾವ ಬೀರುತ್ತಿದ್ದನು.

ಅಪರಾಧಿಯ ವಿರುದ್ಧ ಸಾಕ್ಷಿಗಳಲ್ಲಿ ರಾಜಕುಮಾರ ಫಾಮಿಯ ಕಾರ್ಯದರ್ಶಿ ಮುಖ್ಯನಾದವನು. ಅವನು ತನ್ನ ಸ್ವರ್ಗಸ್ಥ ಯಜಮಾನನ ಪರವಾಗಿಯೇ ಸಾಕ್ಷಿ ಹೇಳಿದರೂ ಮಾರ್ಷಲ್ ಹಾಲ್‌ನ ಪಾಟಿ ಸವಾಲಿಗೆ ಉತ್ತರವಾಗಿ ಕೆಲವು ಅಪರಾಧಿಗೆ ಅನುಕೂಲಕರ ಉತ್ತರಗಳನ್ನು ನೀಡಲೇಬೇಕಾಯಿತು. ಗಂಡ ತನ್ನನ್ನು ಸಂಪೂರ್ಣ ನಿಸ್ಸಹಾಯಕಳನ್ನಾಗಿ, ಶರಣಾಗತಳನ್ನಾಗಿ ಮಾಡಲು ಪ್ರಯತ್ನಿಸುತ್ತಿದ್ದನೆಂಬ ಮೇಡಂ ಫಾಮಿಯ ಕಥೆಯ ಸತ್ಯತೆಯನ್ನು ಅವನು ಬಹಳ ಮಟ್ಟಿಗೆ ಬೆಂಬಲಿಸಿದ. ಅಲ್ಲದೇ ಈಜಿಪ್ಟಿನ ಪತ್ರಿಕೆಯಲ್ಲಿ ರಾಜಕುಮಾರ, ಅವನ ಕಾರ್ಯದರ್ಶಿ ಹಾಗೂ ಅಂಗರಕ್ಷಕನ ಮೇಲೆ ಬರೆದಿದ್ದ ವ್ಯಂಗ್ಯಚಿತ್ರವೊಂದನ್ನು ಅವನು ಗುರುತಿಸಿದ.

ನಂತರ ಬಂದ ಬಂದೂಕಿನ ತಜ್ಞ ರಾಬರ್ಟ್ ಚರ್ಚಿಲ್ ಮತ್ತೊಬ್ಬ ಮುಖ್ಯ ಸಾಕ್ಷಿ. ಬಂದೂಕು ಮೊದಲಾದ ಅಗ್ನಿಶಸ್ತ್ರಗಳ ವಿಷಯದಲ್ಲಿ ಅವನಷ್ಟೇ ಮಾಹಿತಿಯಿದ್ದ ಮಾರ್ಷಲ್ ಹಾಲ್‌ಗೆ ತನಗೆ ಬೇಕಾದ ಉತ್ತರಗಳನ್ನು ಅವನ ಬಾಯಿಂದ ಹೊರಡಿಸಲು ಹೆಚ್ಚೇನು ಕಷ್ಟವಾಗಲಿಲ್ಲ. ಈ ತರಹದ ರಿವಾಲ್ವರ್‌ನಲ್ಲಿ ಒಂದು ಬಾರಿ ಗುಂಡು ಹಾರಿಸಲು ಬೇಕಾಗುವ ಒತ್ತಡಕ್ಕೂ ಹಲವಾರು ಬಾರಿ ಗುಂಡು ಹಾರುವಂತೆ ಮಾಡಲು ಬೇಕಾಗುವ ಒತ್ತಡಕ್ಕೂ ಹೆಚ್ಚೇನು ವ್ಯತ್ಯಾಸವಿಲ್ಲವೆಂದೂ ಆ ತಜ್ಞನೇ ನುಡಿಯುವಂತೆ ಮಾರ್ಷಲ್ ಮಾಡಿದನು.

ಕೊನೆಯಲ್ಲಿ ಮಾರ್ಷಲ್ ಹಾಲ್ ಎದ್ದು ನಿಂತು, ಜ್ಯೂರಿಗಳ ಕಡೆ ತಿರುಗಿ, "ನಾನು ವಿಚಾರಣೆಗಾಗಿ ಅಪರಾಧಿಯನ್ನು ಬರಹೇಳುತ್ತೇನೆ," ಎಂದಾಗ ನ್ಯಾಯಾಲಯದಲ್ಲಿದ್ದ ಎಲ್ಲರೂ ಒಂದು ನಿಮಿಷ ಉಸಿರು ಬಿಗಿ ಹಿಡಿದರು. ಮೈಯೆಲ್ಲ ಕಣ್ಣಾಗಿ ಮುಂದಿನ ದೃಶ್ಯವನ್ನು ವೀಕ್ಷಿಸತೊಡಗಿದರು!

ಫ್ರೆಂಚ್ ಭಾಷಾಂತರಕಾರರ ಸಹಾಯದಿಂದ ಮೇಡಂ ಫಾಮಿ ತನ್ನ ಕರುಣಾಜನಕ ಕಥೆಯನ್ನು ಸಂಪೂರ್ಣವಾಗಿ ಹೇಳುವಂತೆ ಮಾರ್ಷಲ್ ಅವಳಿಗೆ ನಿರ್ದೇಶನ ನೀಡಿದನು. ಮಧ್ಯೆ ಮಧ್ಯೆ ಪ್ರಶ್ನೆಗಳನ್ನು ಕೇಳುವುದರ ಮೂಲಕ ಗಂಡನೊಂದಿಗೆ ಅವಳ ಜೀವನ ಇತ್ತೀಚೆಗೆ ಎಷ್ಟು ಭಯಾನಕವಾಗಿತ್ತು ಎಂಬುದನ್ನು ತೋರಿಸಿಕೊಟ್ಟನು. ಸುಂದರವಾದ, ಮಧುರವಾದ ಪ್ರಣಯ ಕಥೆಯಾಗಿ ಆರಂಭವಾದ ತನ್ನ ಜೀವನ ಕೊನೆಗೆ ತಾನರಿಯದ ವಿವಾಹ ಬಂಧನದಲ್ಲಿ ಸಿಕ್ಕಿಹಾಕಿಕೊಂಡ ಭಯಂಕರ ಜೀವನವಾಗಿ ಹೇಗೆ ಪರ್ಯವಸಾನಗೊಂಡಿತು, ತನ್ನ ತೇಜೋವಧೆಗಾಗಿ, ತನ್ನನ್ನು ಮಣಿಸುವುದಕ್ಕಾಗಿ ರಾಜಕುಮಾರ ಫಾಮಿ ಹೇಗೆ ಪ್ರಯತ್ನಿಸಿದ ಎನ್ನುವುದನ್ನು ಮೇಡಂ ಫಾಮಿ ಪರಿಣಾಮಕರವಾಗಿ ವಿವರಿಸಿದಳು. ಮಾರ್ಷಲ್ ಹಾಲ್ ರಾಜಕುಮಾರನ ಜೀವನದ ಹಿನ್ನೆಲೆಯ ಬಗ್ಗೆ ಸಂಗ್ರಹಿಸಿದ್ದ ಪುರಾವೆಗಳೂ ಇದಕ್ಕೆ ಪೂರಕವಾಗಿದ್ದವು.

ತನ್ನ ಸಾಕ್ಷ್ಯದ ಕೊನೆಯಲ್ಲಿ ಮೇಡಂ ಫಾಮಿ, "ನಾನು ಇವತ್ತು ನಿನ್ನನ್ನು ಕೊಂದು ಹಾಕ್ತೀನೆ ಎಂದು ಅವನು ನನ್ನ ಮೇಲೇರಲು ಬಂದಾಗ ನಾನು ಕೈ ಎತ್ತಿದೆ. ಏನಾಗುತ್ತಿದೆ ಎಂದು ನೋಡದೇ ಟ್ರಿಗರನ್ನು ಎಳೆದೆ. ಮರು ನಿಮಿಷವೇ ಅವನು ನೆಲದ ಮೇಲೆ ಬಿದ್ದಿದ್ದನ್ನು ನೋಡಿದೆ. ನನಗೇನಾಯಿತೋ ಅರ್ಥವಾಗಲಿಲ್ಲ. ಎಷ್ಟು ಸಾರಿ ಗುಂಡು ಹಾರಿತೆಂಬುದೂ ನನಗೆ ತಿಳಿಯದು. ನನಗೆ ಏನೂ ಅರ್ಥವಾಗುವ ಸ್ಥಿತಿಯಲ್ಲಿ ಆಗ ನಾನಿರಲಿಲ್ಲ. ಫಾಮಿ ನೆಲದ ಮೇಲೆ ಬಿದ್ದಿದ್ದೊಂದೇ ಕಾಣಿಸಿದ್ದು. ತಕ್ಷಣ ನಾನು ಓಡಿ ಹೋಗಿ ಅವನ ಕೈ ಹಿಡಿದುಕೊಂಡೆ. ಡಾರ್ಲಿಂಗ್, 'ಏನೂ ಆಗಲ್ಲ, ಮಾತಾಡು, ನನ್ನ ಹತ್ತಿರ ಮಾತಾಡು' ಎಂದೆ.

ಇದೇನು ನಿಜವಾದ ಕಥೆಯೋ ಅಥವಾ ಅತ್ಯುತ್ತಮವಾದ ನಟನೆಯೋ ಯಾರಿಗೂ ತಿಳಿಯಲೇ ಇಲ್ಲ. ನಂತರ ಪ್ರಾಸಿಕ್ಯೂಟರ್ ಪರ್ಸಿವಲ್ ಕ್ಲಾರ್ಕ್ ಪಾಟಿಸವಾಲು ಮಾಡಿದಾಗ ಅವನಿಗೆ ಸಹಾಯಕವಾಗುವಂತಹ ಉತ್ತರವೇನೂ ಸಿಗಲಿಲ್ಲ. ಬದಲಿಗೆ ಅವನ ಪ್ರಶ್ನೆಗಳೇ ಅವನಿಗೆ ಹಲವು

ಬಾರಿ ಮುಳುವಾದವು. "ರಾಜಕುಮಾರನನ್ನು ಮದುವೆಯಾಗಲು ಮೇಡಂ ಫಾಮಿ, ಬಯಸಿರಲಿಲ್ಲವ? ಎಂದು ಅವನು ಕೇಳಿದಾಗ, ಆಶ್ಚರ್ಯದಿಂದ ಮೇಡಂ ಫಾಮಿ, "ಬಯಸುವುದೇ? ಇಲ್ಲ. ನಾನು ಅವನನ್ನು ಪ್ರೀತಿಸುತ್ತಿದ್ದೆ." ಎಂದು ಹೇಳಿ ಜ್ಯೂರಿಗಳ ಮೇಲೆ ಬಲವಾದ ಪರಿಣಾಮವನ್ನು ಉಂಟು ಮಾಡಿದ್ದಳು.

ಈ ರೀತಿ ವಿಚಾರಣೆಯ ನಾಟಕ ಮುಂದುವರಿದಾಗ ಮಾರ್ಷಲ್ ಹಾಲ್ ತನಗೆ ಅನುಕೂಲವಾದ ಪರಿಸ್ಥಿತಿ ಏರ್ಪಟ್ಟಿದ್ದುದನ್ನು ಕಂಡು ನಿಧಾನವಾಗಿ 'ನರಹತ್ಯೆಯ' ವಾದದಿಂದ 'ನಿರ್ದೋಷತ್ವ'ದ ವಾದದ ಕಡೆಗೆ ಚಲಿಸಿದ. ಜ್ಯೂರಿಗಳೇನಾದರೂ ಅವಳು ಅಪರಾಧವನ್ನು ಮಾಡಿದ್ದಾಳೆಂಬ ನಿರ್ಣಯಕ್ಕೆ ಬಂದರೆ ಅದು ನರಹತ್ಯೆಯ ಅಪರಾಧವೇ ಹೊರತು ಕೊಲೆಯಲ್ಲ ಎಂಬ ತೀರ್ಪು ಕೊಡಬೇಕೆಂದು ವಾದಿಸಿ ಎರಡು ರೀತಿಯ ರಕ್ಷಣಾ ತಂತ್ರವನ್ನು ಅನುಸರಿಸಿದ. ಕೊನೆಯಲ್ಲಿ ವಾದಮಾಡುವಾಗ ಮಾತ್ರ ಬಿಡುಗಡೆಯನ್ನೇ ಮುಖ್ಯ ಗುರಿಯನ್ನಾಗಿರಿಸಿಕೊಂಡು 'ನರಹತ್ಯೆಯ ವಾದ'ವನ್ನು ಅದರ ಪಾಲಿಗೆ ಬಿಟ್ಟುಕೊಟ್ಟ.

ಮಾರ್ಷಲ್ ಹಾಲ್ ತನ್ನ ದೃಢ ಕಂಠದಿಂದ, "ತನ್ನನ್ನು ಪ್ರೀತಿಸುವ ತನ್ನ ಜನಗಳ ಬಳಿ ಈ ಪಾಶ್ಚಿಮಾತ್ಯ ಮಹಿಳೆ ಹಿಂತಿರುಗಲು ಅವಕಾಶ ಕೊಡಿ", ಎಂದಾಗ ಅಲ್ಲಿದ್ದವರಿಗೆಲ್ಲಾ ಮೇಡಂ ಫಾಮಿಯ ಬಗ್ಗೆ ಸಹಾನುಭೂತಿ ಉಂಟಾದುದರಲ್ಲಿ ಆಶ್ಚರ್ಯವೇನೂ ಇಲ್ಲ.

ಜ್ಯೂರಿಗಳು ತಮ್ಮ-ತಮ್ಮಲ್ಲಿ ಚರ್ಚೆ ಮಾಡಿ ನಿರ್ಧಾರಕ್ಕೆ ಬರಲು ಕೇವಲ ಒಂದು ಗಂಟೆ ಮಾತ್ರ ತೆಗೆದುಕೊಂಡರು. ಅವರು ಹಿಂತಿರುಗಿ ತಮ್ಮ ತಮ್ಮ ಆಸನಗಳನ್ನು ಅಲಂಕರಿಸಿದಾಗ ಗುಜು ಗುಜು ಸದ್ದು ಅಡಗಿ ಹೋಯಿತು. ಜ್ಯೂರಿಗಳ ತೀರ್ಮಾನವನ್ನು ಕೇಳಲು ಕಾತರಿಸಿದ ಜನ ಕಿವಿ ತೆರೆದು ಕಾದಿದ್ದರು. ಕೆಂಪು ದಿರಸು ಧರಿಸಿದ್ದ ನ್ಯಾಯಾಧೀಶರು ತಮ್ಮ ಆಸನವನ್ನಲಂಕರಿಸಿದಾಗ ಜನರು ಉಸಿರು ಬಿಗಿ ಹಿಡಿದುಕೊಂಡರು. ನ್ಯಾಯಾಲಯದ ಗುಮಾಸ್ತ ಎದ್ದು ನಿಂತು ಜ್ಯೂರಿಗಳನ್ನುದ್ದೇಶಿಸಿ, "ನಿಮ್ಮ ತೀರ್ಮಾನವೇನು? ಅಪಾದಿತಳು ದೋಷಿಯೋ ನಿರ್ದೋಷಿಯೋ?" ಎಂದಾಗ, ಜ್ಯೂರಿಗಳ ಮುಖ್ಯಸ್ಥನಿಂದ "ನಿರ್ದೋಷಿ" ಎಂಬ ಉತ್ತರ ಬಂತು. ಜನಗಳ ಹರ್ಷಧ್ವನಿಯನ್ನು ನ್ಯಾಯಾಧೀಶರು ತಮ್ಮ ಅಧಿಕಾರ ಬಲವನ್ನುಪಯೋಗಿಸಿ ಅಡಗಿಸಬೇಕಾಯಿತು. ಮೇಡಂ ಫಾಮಿ ಕುಸಿದು ಬಿದ್ದಳು; ತಕ್ಷಣವೇ ವೈದ್ಯಕೀಯ ಸಹಾಯ ನೀಡಲಾಯಿತು. ಆದರೆ ಅವಳ ಪ್ರಾಣವನ್ನುಳಿಸಿದ ನ್ಯಾಯವಾದಿ ಮಾತ್ರ ಅದಾವಾಗಲೋ ಅಲ್ಲಿಂದ ಮಾಯವಾಗಿದ್ದ.

ಪ್ರತಿ ದಿನದ ಈ ಮೊಕದ್ದಮೆಯನ್ನು ವೀಕ್ಷಿಸಲು ಬರುತ್ತಿದ್ದ ನ್ಯಾಯವಾದಿಗಳಿಗೆ ಈ ತೀರ್ಮಾನ ಆಶ್ಚರ್ಯಕರವಾಗಿ ಕಂಡಿತ್ತು. ಅವರೆಲ್ಲಾ ಹೆಚ್ಚೆಂದರೆ ನರಹತ್ಯೆಯ ಅಪರಾಧಕ್ಕಾಗಿ ಶಿಕ್ಷೆ ದೊರೆಯಬಹುದೆಂದು ಭಾವಿಸಿದ್ದರು. ಮಾರ್ಷಲ್ ಹಾಲ್ ಎಷ್ಟೇ ಉತ್ತಮವಾಗಿ ವಾದ ಮಾಡಿದ್ದರೂ ಅವನು ಉಪಯೋಗಿಸಿದ ರಕ್ಷಣಾ ತಂತ್ರ ಫ್ರಾನ್ಸಿನಲ್ಲಿ ಫಲಕಾರಿಯಾಗಬಹುದೇ ಹೊರತು ಬ್ರಿಟಿಶ್ ನ್ಯಾಯಾಲಯದಲ್ಲಿ ವಿಫಲಗೊಳ್ಳುತ್ತದೆಂದು ಅವರೆಲ್ಲಾ ಭಾವಿಸಿದ್ದರು. ಆದರೆ ಸೂಕ್ಷ್ಮವಾಗಿ ಮೊದಲಿನಿಂದಲೂ ಈ ಮೊಕದ್ದಮೆಯನ್ನು ಅಭ್ಯಾಸ ಮಾಡಿದವರಿಗೆ, ಈ ಮೊಕದ್ದಮೆಯ ನಾಟಕಕ್ಕೆ ಸಂಬಂಧಪಟ್ಟವರೆಲ್ಲಾ ಆರಂಭದಿಂದಲೂ ತಮ್ಮ ಕೈಲಾದಷ್ಟು ರೂಪಸಿ ಮೇಡಂ ಫಾಮಿ ಬಿಡುಗಡೆಯಾಗಬೇಕೆಂದು ಪ್ರಯತ್ನಿಸಲು ನಿರ್ಧರಿಸಿದುದು ಸ್ಪಷ್ಟವಾಗಿ ಕಂಡುಬರುತ್ತದೆ.

'ಅರ್ಥ ಮಂತ್ರಿ'ಗಳಾದ ಗೃಹಿಣಿಯರೇ !



ಸಂಬಳದ ದಿವಸ,
ನಿಮ್ಮ ಮನೆಯ ವೆಚ್ಚದ 'ಅಂದಾಜು ಪತ್ರ'ದಲ್ಲಿ
ಜೀವ ವಿಮೆಯ ಪ್ರೀಮಿಯಮ್ ತುಂಬಲು ಅವಕಾಶ ಒದಗಿಸಿರಿ

ಸಂಬಳದ ದಿನ...
ಪ್ರೀಮಿಯಮ್ ತುಂಬುವ ದಿನ

ಲೈಫ್ ಇನ್‌ಶೂರನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ

ನಿಮ್ಮ ಜೀವ ವಿಮೆ ಬೇಕಷ್ಟು ಮೊತ್ತದಲ್ಲಿದೆಯೆ ? ನಿಮ್ಮ ಮಕ್ಕಳ ಶಿಕ್ಷಣ, ಮದುವೆ, ತೆರಿಗೆಗಳು, ಮುಪ್ಪಿನ ವಯಸ್ಸು ಮತ್ತು ಇತರ ಆವಶ್ಯಕತೆಗಳಿಗೆ ಹಣದ ವ್ಯವಸ್ಥೆ ಮಾಡಿರುವಿರಾ ?

ನಿಮ್ಮ ಜೀವ ವಿಮೆಯ ಏಜಂಟರಾಗಲಿ, ಹತ್ತಿರದ ಎಲ್. ಐ. ಸಿ. ಕಚೇರಿಯವರಾಗಲಿ, ನಮ್ಮ ಹಲವಾರು ಯೋಜನೆಗಳನ್ನು,

RADEUS/LIC/AS-17

ಐರೋಡಿ ಶಿವರಾಮಯ್ಯ

ಮುದ್ದಣ - ನಾಕಂಡಂತೆ

[ಐರೋಡಿ ಶಿವರಾಮಯ್ಯ (೧೮೭೬-೧೯೪೧) ನವರು ಈ ಶತಮಾನದ ಮೊದಲಿಗೆ, ದಕ್ಷಿಣಕನ್ನಡ ಜಿಲ್ಲೆಯ ಕುಂದಾಪುರದ ಬೋರ್ಡ್ ಹೈಸ್ಕೂಲಿನ ಕನ್ನಡ ಪಂಡಿತರಾಗಿದ್ದು, ಸಾಹಿತ್ಯಸೇವೆ ಗೈದವರು. ಪ್ರಚಾರ ಪ್ರಶಸ್ತಿಗಳಿಗೆ ಹಾತೊರೆಯದೆ, ಎಲೆಮರೆಯ ಹೂವಿನಂತೆ ಬಾಳಿ ಬೆಳಗಿದ ಸಜ್ಜನರು ಅವರು. ಅವರು ಮುದ್ದಣನ ಒಡನಾಡಿಗಳಾಗಿದ್ದರು; ಇಂದೀಗ ಪ್ರಸಿದ್ಧ ಸಾಹಿತಿಗಳಾಗಿರುವ ಶ್ರೀ ಕೆ. ಶಿವರಾಮ ಕಾರಂತರ ಗುರುಗಳಾಗಿದ್ದರು. ಮುದ್ದಣನನ್ನು ತುಂಬ ಹತ್ತಿರದಿಂದ ಕಂಡ ಅವರು, ಆತನ ಬಗ್ಗೆ ೧೯೨೭ ನೇ ಇಸವಿಯ 'ಸುವಾಸಿನಿ'ಯ ನವೆಂಬರ್ ಹಾಗೂ ಡಿಸೆಂಬರ್ ತಿಂಗಳುಗಳ ಸಂಚಿಕೆಗಳಲ್ಲಿ ಲೇಖನಗಳನ್ನು ಬರೆದಿದ್ದರು. ಆ ಲೇಖನಗಳನ್ನೇ ಆಯ್ದು ಇಲ್ಲೀಗ ಪ್ರಕಟಿಸುತ್ತಿದ್ದೇವೆ.]

ಒಬ್ಬ ವ್ಯಕ್ತಿ ಹುಟ್ಟಿ, ತನ್ನ ಬುದ್ಧಿವೈಭವದಿಂದ ಜಗತ್ತಿನ ಜನರನ್ನು ಬೆರಗುಗೊಳಿಸಿ, ಸ್ವಲ್ಪ ಕಾಲದಲ್ಲಿಯೇ ಸಾವನ್ನಪ್ಪಿದರೂ, ಆತನ ಕೀರ್ತಿಶರೀರ ಮಾತ್ರ, ಸರ್ವದಾ ಜರಾಮರಣವರ್ಜಿತವಾಗಿ ಈ ಪ್ರಪಂಚವನ್ನು ಬೆಳಗುತ್ತಿರುವುದು. ಹಾಗೆ ಯಶಶ್ಶರೀರಿಗಳಾದ ಅನೇಕ ಕವಿಶ್ರೇಷ್ಠರಲ್ಲೊಬ್ಬ ಮಹಾಕವಿ ನಂದಳಿಕೆ ಲಕ್ಷ್ಮೀನಾರ್ಣಪ್ಪ (ಈತನನ್ನು ನಂದಳಿಕೆ ಲಕ್ಷ್ಮೀನಾರಾಯಣಯ್ಯ ಎಂದೂ ಕರೆಯುತ್ತಾರೆ—ಸಂ) ಆತ ಹುಟ್ಟಿದುದು ೧೮೭೦ ನೇ ಇಸವಿ ಜನವರಿ ತಿಂಗಳ ೨೪ ನೇ ತಾರೀಕಿನಂದು ದಕ್ಷಿಣಕನ್ನಡ ಜಿಲ್ಲೆಯ ಉಡುಪಿ ತಾಲೂಕಿನ ನಂದಳಿಕೆಯಲ್ಲಿ.

ನಾನು ಈತನನ್ನು 'ಮಹಾಕವಿ' ಎಂಬ ಗೌರವವಿಶಿಷ್ಟವಾದ ನಾಮದಿಂದ ಕರೆದುದಕ್ಕೂ ಹಲವು ಕಾರಣಗಳಿರುವುವು. ನಮ್ಮ ಕನ್ನಡ ಗ್ರಂಥಗಳಲ್ಲಿ ಯಾವ ಕಾವ್ಯವನ್ನೇ ತೆರೆಯಲಿ, ಕವಿತೆಯು ಪ್ರೌಢವಾಗಿದ್ದರೂ, ಒಂದರಲ್ಲಿದ್ದ ರಗಳೆಯೇ ಇನ್ನೊಂದರಲ್ಲಿಯೂ ಇರುವುದು. ವನವನ್ನು ವರ್ಣಿಸಲಿಕ್ಕೆ ಹೊರಟರೆ, ಅದರೊಳಗಿನ ವನಸ್ಪತಿ ವರ್ಗದ ಹೆಸರೆಲ್ಲಾ ಬಂದುಬಿಡುವುದು. ರಾಜಧಾನಿಯನ್ನು ಬಣ್ಣಿಸತೊಡಗಿದರೆ ಇದ್ದುದೂ ಇಲ್ಲದುದೂ ಎಲ್ಲವೂ ಬರುವುವು. ಒಂದರ ನಕಲನ್ನೇ ಇನ್ನೊಂದು ತೆಗೆದಂತೆ ಎಲ್ಲಾ ಕಾವ್ಯಗಳಲ್ಲಿಯೂ ಈ ರಗಳೆಗಳಿಗೇನೂ ಕಡಿಮೆಯಿಲ್ಲ. ವಿಶೇಷಣಗಳ ಕಂತೆ ಕಂತೆಯನ್ನೇ ಹಚ್ಚಿದ ಹೊರತು, ವಿಶೇಷ್ಯಗಳೇ

ಬಾಯಿಯಿಂದ ಓದುವುದಿಲ್ಲ. ಕೆಲವು ಕಾವ್ಯಗಳನ್ನೋದುವುದಕ್ಕಂತೂ ಮೇದಿನಿ, ವಿಶ್ವ ಮೊದಲಾದ ಪ್ರಾಚೀನ ಸಂಸ್ಕೃತ ನಿಘಂಟುಗಳನ್ನು ಹತ್ತಿರವೇ ಇಟ್ಟುಕೊಳ್ಳಬೇಕಾಗುವುದು. ಇಲ್ಲವಾದರೆ ಆ ಪದ್ಯಗತವಾದ ಶ್ಲೇಷೆ ಯಮಕ ಮೊದಲಾದವುಗಳ ಅರ್ಥವನ್ನು ಬಿಚ್ಚುವುದು ಸಾಧ್ಯವಿಲ್ಲ. ಇಂತಹ ಎಷ್ಟೋ ಕೊರತೆಗಳು ನಮ್ಮ ಪ್ರಾಚೀನ ಕರ್ನಾಟಕ ಕಾವ್ಯಗಳಿಗಿರುವುವು. ಆದರೆ ನಮ್ಮ ಮಹಾಕವಿ ಲಕ್ಷ್ಮೀನಾರ್ಣಪ್ಪನ ಕಾವ್ಯಗಳು ಇಂಥವಲ್ಲ. ಅವುಗಳ ಮಾಧುರ್ಯವೇ ಬೇರೆ; ರಚನಾಕ್ರಮವೇ ಬೇರೆ. ಆತನೂ ಅಲ್ಲಲ್ಲಿ ಪೂರ್ವಕವಿಗಳ ವರ್ಣನಾ ವೈಖರಿಯನ್ನು ಎತ್ತಿತೋರಿಸಿ ನಕ್ಕಿರುವನು. ಅಂತೂ ಆತನು ಕಾವ್ಯರಚನೆಯಲ್ಲಿ ತೊಡಗಿದ ನೂತನ ಶೈಲಿಗಾಗಿ ಅವನನ್ನೆಲ್ಲ ಹೊಗಳಬೇಕಾಗುವುದು. ಕಾವ್ಯವನ್ನು ಹಿಡಿದ ಮೇಲೆ ಅದು ಮುಗಿಯುವವರೆಗೂ, ವೆಂಕಟಾಚಾರ್ಯರ ಕಾದಂಬರಿಗಳನ್ನೋದಿದಂತೆ, ಅವನ ಕಾವ್ಯಗಳೂ ಮನೋಹರಗಳಾಗಿವೆ. ಆತನ ಪ್ರತಿಯೊಂದು ವರ್ಣನೆಯೂ ಸ್ವಂತದ್ದೇ ಹೊರತು, ಪೂರ್ವಕವಿಗಳಿಂದ ಎರವು ಪಡೆದುದಲ್ಲ. ಇವನ ಕಾವ್ಯಗಳಲ್ಲೆಲ್ಲಾ 'ರಾಮಾಶ್ವಮೇಧ'ವು ಪರಾಕಾಷ್ಠೆಯನ್ನು ತಲುಪುತ್ತದೆ. ಪ್ರಾಸಬದ್ಧವಾದ ಶೈಲಿಯೊಂದಿಗೆ ರಸವನ್ನು ಸುರಿಸುವ ಹಳಗನ್ನಡದ ಪದಗಳನ್ನೇ ಒಂದೊಂದಾಗಿ ತೆಗೆದುಕೊಂಡದರಲ್ಲಿ ಮಾಲೆಗಟ್ಟಿ, ವಾಗ್ದೇವಿಯ ಕೊರಳಿಗಿಕ್ಕಿ, ಆ ಸೊಬಗನ್ನು ನೋಡಿ ತಾನು ಕುಣಿದಾಡಿದುದಲ್ಲದೆ ಕರ್ನಾಟಕ ಪ್ರಾಂತದವರೆಲ್ಲಾ ಕುಣಿದಾಡುವಂತೆ ಮಾಡಿದ ಈ ಕವಿವರ್ಯನನ್ನು ನಾನು ಮಹಾಕವಿಯೆಂದು ಕರೆದರೆ ಅದು ತಪ್ಪಾದೀತೇ? ಛೇ! ಎಂದಿಗೂ ಆಗಲಾರದು. ಹಳೆಗನ್ನಡವು ನೀರು ಕುಡಿದಷ್ಟು ಸುಲಭವಾಗಿ ಕವಿಯ ನಾಲಗೆಯಿಂದ ಒಸರುತ್ತಿರುವಲ್ಲಿ, ಮಜ್ಜಿಗೆಯೂಟದ ವೇಳೆ ನಡುನಡುವೆ ಉಪ್ಪಿನಕಾಯಿಯನ್ನು ಕಚ್ಚಿಕೊಂಡಂತೆ, ಮಧ್ಯೆ ಮಧ್ಯೆ ಒಂದೊಂದು ಸಂಸ್ಕೃತ ಪದವನ್ನು ತರುತ್ತಿರುವ ಈ ಕವಿಯನ್ನು ಯಾರು ಹೊಗಳರು?



ಕವಿ ನಂದಳಿಕೆ ಲಕ್ಷ್ಮೀನಾರಾಯಣಪ್ಪ (ಮುದ್ದಣ)
ರೇಖಾಚಿತ್ರ: ಕೆ. ಕೆ. ಹೆಬ್ಬಾರ
ಕೃಪೆ: ಸಾಹಿತ್ಯ ಸಂಘ ಮಣಿಪಾಲ

ಈ ಕವಿವರ್ಯರು ನನ್ನ ಪ್ರಾಣಮಿತ್ರರಾಗಿದ್ದವರು. ನಾನು ಅವರೊಡನೆ ಎಷ್ಟೋ ಬಾರಿ ಮಾತಾಡಿರುವೆನು; ಸಾಹಿತ್ಯ ಸಂಬಂಧ ವಿಚಾರಗಳ ಬಗ್ಗೆ ಚರ್ಚಿಸಿರುವೆನು. ಅವೆಲ್ಲವುಗಳಿಂದ ಅವರ ಬುದ್ಧಿಶಕ್ತಿಯನ್ನು ಮಟ್ಟ ಹಾಕಿರುವೆನು. ಅವರು ಗ್ರಂಥಗಳನ್ನು ಬರೆಯುವುದನ್ನು ಕಣ್ಣಾರೆ ಕಂಡಿರುವೆನು. ಕಂಡಿರುವುದು ಮಾತ್ರವಲ್ಲ, ಅವರ ಬರವಣಿಗೆಗೆ ಸಹಕರಿಸಿರುವೆನು. ಕನ್ನಡಕ್ಕೊಂದು ದೊಡ್ಡ ಕೋಶವು ಬೇಕೆಂದೂ, ಅದನ್ನು ಬರೆಯುವುದಕ್ಕಾಗಿ ಸಾಧ್ಯವಿರುವಷ್ಟು ಕನ್ನಡದ ಹಳೆಯ ಗ್ರಂಥಗಳನ್ನು ಸಂಗ್ರಹಿಸಿ ಕೊಡುವಂತೆ ನನ್ನೊಡನೆ ಅವರು ಹೇಳಿದರು. ನಾನು ಅವರ ಹೇಳಿಕೆಯನ್ನನುಸರಿಸಿ ನನಗೆ ಪರಿಚಯವಿರುವ ಸ್ಥಳಗಳಲ್ಲೆಲ್ಲಾ ತಿರುಗಾಡಿ, ಕೆಲವು ಓಲೆಯ ಪ್ರತಿಗಳನ್ನು ಸಂಗ್ರಹಿಸಿ, ಕಾರ್ಯವಾದ ಮೇಲೆ ತಿರುಗಿ ಕೊಡುವ ಷರತ್ತಿನಿಂದ ಕೊಟ್ಟಿದ್ದೆನು. ಆದರೆ ಕಾರ್ಯಾರಂಭದಲ್ಲಿಯೇ ನಿಷ್ಕರುಣಿಯಾದ

ದೈವವು, ಆ ಕವೀಶ್ವರನು ಇಹದಲ್ಲಿ ಬದುಕಿ, ಇನ್ನೂ ಎಷ್ಟೋ ಎಷ್ಟೋ ಅಮೂಲ್ಯ ಗ್ರಂಥಗಳನ್ನು ಬರೆಯುವುದನ್ನು ಸಹಿಸಲಾರದೆ, ಅವನನ್ನು ಪರಮಾತ್ಮನ ಬಳಿಗೆ ಕಳುಹಿಸಿತು. ನಾನು ಕೊಟ್ಟಿರುವ ಗ್ರಂಥಗಳೂ ತಿರುಗಿ ನನಗೆ ದೊರೆಯದೆ, ಅಮೂಲ್ಯವಾದ ಹತ್ತು ಹನ್ನೆರಡು ಗ್ರಂಥಗಳನ್ನೂ ಕಳಕೊಂಡೆನು ಗ್ರಂಥಗಳಿಗಿಂತಲೂ ಆ ಕವಿಯ ಆತ್ಮವೇ ಹೆಚ್ಚಿನದು.

ಈ ಕವಿಯ ಜನ್ಮಭೂಮಿಯು ಉಡುಪಿ ತಾಲೂಕಿನ ನಂದಳಿಕೆ ಗ್ರಾಮವೆಂದು ಮೇಲೆ ಹೇಳಿದೆನಷ್ಟೇ. ಅಲ್ಲೇ ತುಂಬ ಬಡತನದಿಂದ ಬದುಕುತ್ತಿದ್ದ ಅವನ ತಂದೆಯ ಹೆಸರು ತಮ್ಮಯ್ಯನೆಂದು, ತಾಯಿಯ ಹೆಸರು ಮಹಾಲಕ್ಷ್ಮಿಯೆಂದು. ಅವರು ದೇವಸ್ಥಾನದಲ್ಲಿ ದೇವರಿಗೆ ಹೂ ಕಟ್ಟಿಕೊಡುವ ಮಾಲೆಯರೆಂಬ ಸಮಾಜಕ್ಕೆ ಸೇರಿದವರು. ಲಕ್ಷ್ಮೀನಾರ್ಣಪ್ಪನಲ್ಲದೆ ಶಿವರಾಮಯ್ಯನೆಂಬ ಮತ್ತೊಬ್ಬ ಮಗನೂ ಅವರಿಗಿದ್ದನು. ಲಕ್ಷ್ಮೀನಾರ್ಣಪ್ಪನ ತಮ್ಮನಾಗಿದ್ದ ಆತ ಉಡುಪಿ ತಾಲೂಕಿನ ಹಬ್ರಿಯಲ್ಲಿ ಉಪಾಧ್ಯಾಯನಾಗಿದ್ದನು. ನನ್ನ ಮಿತ್ರರೊಬ್ಬರು ಹೇಳಿದ ಮೇರೆಗೆ ಆತ ಮೊದಲು ದಶಾವತಾರದ ಮೇಳದಲ್ಲಿ ಕೆಲವು ವರ್ಷ ಸೇರಿಕೊಂಡಿದ್ದು, ಆ ಮೇಲೆ ಆ ವೃತ್ತಿಯಲ್ಲಿ ಬೇಸತ್ತು ಉಪಾಧ್ಯಾಯನಾದುದೆಂದು ತಿಳಿಯಿತು.

ತಮ್ಮ ಊರಿನ ದೇವಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದ ಲಕ್ಷ್ಮೀನಾರ್ಣಪ್ಪನ ತಂದೆ ತಾಯಿಗಳು ತುಂಬ ಕಷ್ಟದಿಂದ ದಿನ ದೂಡುತ್ತಿದ್ದರು. ಅವರೇ ಬಾಲಕ ಲಕ್ಷ್ಮೀನಾರ್ಣಪ್ಪನನ್ನು ಅದೇ ಊರಿನ ಶಾಲೆಗೆ ಸೇರಿಸಿದರು. ಆ ಕಾಲದಲ್ಲಿ ಆತನಲ್ಲಿ ಯಾವ ವಿಶೇಷವಾದ ಚಟುವಟಿಕೆಯೂ ಕಂಡುಬರುದಿಲ್ಲ; ಇತರ ಹುಡುಗರಂತೆಯೇ ಅವನೂ ಒಬ್ಬನಾಗಿದ್ದನು. ಆದರೆ ಪದ್ಯಗಳನ್ನು ಓದುವುದಕ್ಕೆ ತುಸು ಹೆಚ್ಚು ಗಮನಕೊಡುತ್ತಿದ್ದನಂತೆ. ಅದೇನಿದ್ದರೂ ಬಡತನದ ದೆಸೆಯಿಂದಾಗಿ ಓದನ್ನು ಮುಂದುವರಿಸಲಾಗದೆ, ಆತ ಉದ್ಯೋಗಕ್ಕಾಗಿ ಪ್ರಯತ್ನಿಸತೊಡಗಿದನು.

೧೮೮೯ ನೇ ಇಸವಿ ಮೇ ೧೬ ರಂದು ಮಾಸೆಯಾನಾ ಹತ್ತು ರೂಪಾಯಿ ಸಂಬಳದ ಮೇರೆಗೆ, ಅಂಗಸಾಧನೆಯನ್ನು ಕಲಿಸುವ ಅಧ್ಯಾಪಕನಾಗಿ ಉಡುಪಿಯ ಬೋರ್ಡ್ ಮಿಡ್ಲ್ ಸ್ಕೂಲನ್ನಾತ ಸೇರಿದ. ಆಗ ಆತನಿಗೆ ೧೯ ವರುಷ ತುಂಬಿ ೨೦ ನೆಯ ವರುಷ ನಡೆಯುತ್ತಿತ್ತು. ಆಗ ಅವನ ಎತ್ತರ ೫ ಅಡಿ ೪ ಅಂಗುಲವಾಗಿತ್ತು. ಎಡ ಮುಂಗೈಯ ಮೇಲೆ N. L. N. ಎಂಬ ಇಂಗ್ಲಿಷ್ ಅಕ್ಷರಗಳನ್ನಾತ ಹಚ್ಚೆ ಚುಚ್ಚಿಸಿಕೊಂಡಿದ್ದನು. ಇದರಿಂದ ಅವನು ಚಿಕ್ಕಂದಿನಲ್ಲಿ ಕೊಂಚ ವಿನೋದಪ್ರಿಯನಾಗಿದ್ದನೆಂದು ಊಹಿಸಬಹುದಾಗುತ್ತದೆ.

ಉಡುಪಿಯ ಮಿಡ್ಲ್ ಸ್ಕೂಲಿನಲ್ಲಿರುವಾಗಲೇ ಆತ ಬೃಹತ್ಕಥಾಮಂಜರಿಯೊಳಗಿನ ಒಂದು ಕಥೆಯನ್ನು ಎತ್ತಿತೆಗೆದು, 'ರತ್ನಾವತೀ ಕಲ್ಯಾಣ'ವೆಂಬ ಯಕ್ಷಗಾನ ಪ್ರಸಂಗವೊಂದನ್ನು ಬರೆದನು. ಅದರಲ್ಲಿ ೩೪೮ ಪದ್ಯಗಳಿದ್ದವು. ಅದರ ಮೊದಲ ವೃತ್ತವಾದ–

'ಶ್ರೀ ಲಕ್ಷ್ಮೀವರ ಮಂಜುಜಾತ ಪಿತರು
ಬಾಲಾರ್ಕ ಕೋಟಿ ಪ್ರಭು ।'
ನೀಲೇಂದೀವರ ಶ್ಯಾಮ ಕೋಮಲವಪುಃ ॥...

ಎಂಬೊಂದು ಪದ್ಯವನ್ನು ಎರಡು ಮೂರು ಸಲ ತಿದ್ದಿಕೊಟ್ಟುದಾಗಿ, ಲಕ್ಷ್ಮೀನಾರ್ಣಪ್ಪನು ತನ್ನ ಗುರುವೆಂದು ಮನ್ನಿಸಿದ್ದ ಮಳಲಿ ಸುಬ್ಬರಾಯರು ಹೇಳಿದ್ದರು. ಮಳಲಿ ಸುಬ್ಬರಾಯರೂ ಆಗ ಅದೇ ಮಿಡ್ಲ್ ಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದರು. ಅಂತೂ ಆ ಇಡೀ ಗ್ರಂಥವನ್ನು ಸುಬ್ಬರಾಯರು ತಿದ್ದಿಕೊಟ್ಟಿರುವರಂತೆ. ಆ ಗ್ರಂಥವು ಆಗ ಉಡುಪಿಯಲ್ಲಿದ್ದ ಹಿಂದೂ ಪ್ರೆಸ್‌ನಲ್ಲಿ ಅಚ್ಚಾಗಿ, ಬೆಳಕು ಕಂಡಿತು. ಮುಂದೆ ಲಕ್ಷ್ಮೀನಾರ್ಣಪ್ಪನು ಶಂಕರ ಸಂಹಿತೆಯೊಳಗಿನ, ಶೂರ ಪದ್ಮಾಸುರ ಸಂಹಾರದ ಕಥೆಯನ್ನು ತೆಗೆದುಕೊಂಡು 'ಕುಮಾರ ವಿಜಯ'ವೆಂಬ ಇನ್ನೊಂದು ಯಕ್ಷಗಾನ ಪ್ರಸಂಗವನ್ನು ಬರೆದನು. ಆ ಪ್ರಸಂಗದಲ್ಲಿಯೇ ಅವನ ಕವಿತಾ

ಚಾತುರ್ಯದ ಜೋಡಣೆಗೆ ಪ್ರಾರಂಭವಾಯಿತು. ಅದು 'ರತ್ನಾವತೀ ಕಲ್ಯಾಣ'ದ ಎರಡು ಪಾಲಿಗಿಂತ ತುಸು ದೊಡ್ಡದಾಗಿದ್ದು, ದಶಾವತಾರ ಮೇಳದವರು ಅದನ್ನು ಆಡಲು ಎರಡು ದಿನ ತೆಗೆದುಕೊಳ್ಳುತ್ತಿದ್ದರಂತೆ. ಈ ಎರಡು ಬರಹಗಳು ಪೂರ್ತಿ ಮುಗಿಯುವ ವರೆಗೂ ಮುಳಿಯ ಸುಬ್ಬರಾಯರು ಅವನಿಗೆ ಗುರುವಾಗಿದ್ದರೆನ್ನುವುದಕ್ಕೆ ಆತನ [illegible] ಗಳೇ ಸಾಕ್ಷಿಗಳಾಗಿವೆ. 'ರತ್ನಾವತೀ ಕಲ್ಯಾಣ'ದ ಕೊನೆಗೆ '[illegible] ಪದ್ಯಕೆ ವಿವಾ। [illegible] ಪದ ಸಹಾಯಂದಿ ಬರೆದ ಗುರುವೆಂ। ಬುಡನಂ ಬಗೆದು॥ ಕುಂದುಕೊರತೆಗಳಿದರ ಕವಿತಾ। ಬಂಧ ಛಂದಸ್ಸಿನೊಳಗಿರ್ದುದ। ಛಂದದಿ ಸವಂಗೈಸಿರುವೆನದ। ರಿಂದಲಿದನು॥' ಎಂಬ ಪದ್ಯದಿಂದಲೂ 'ಕುಮಾರವಿಜಯ'ದಲ್ಲಿ 'ಸರ್ಪಭೂಷಣ ಭಕ್ತಕವಿತಾ। ದರ್ಪಣಾಬ್ಧಿಗಭೀರ ಗುರುವೆನಿ। ಸಿರ್ಪ ಮುಳಲೀ ಸುಬ್ಬರಾಯರಿಗರ್ಪಿಸುವೆನು॥' ಎಂಬ ಪದ್ಯದಿಂದಲೂ ಇದು ವ್ಯಕ್ತವಾಗುತ್ತದೆ. ಆದರೆ 'ಕುಮಾರವಿಜಯ'ವನ್ನು ಬರೆಯುವಾಗ, ಆ ಗ್ರಂಥವನ್ನು ಮುಳಿಯ ಸುಬ್ಬರಾಯರು ವಿಶೇಷವಾಗಿ ತಿದ್ದಲಿಲ್ಲ. ಆ ಗ್ರಂಥದಲ್ಲಿ ಆತನ ಕವಿತಾ ಬೀಜವು ಮೊಳೆತು ಎಲೆಬಿಟ್ಟಂತೆ ತೋರುತ್ತದೆ. ಈ ಎರಡೂ ಬರಹಗಳು ಅಚ್ಚಾಗುವ ಮೊದಲು, ಆಗ ಉಡುಪಿ ರೇಂಜ್ ಶಾಲೆಗಳಿಗೆ ಇನ್ಸ್‌ಪೆಕ್ಟಿಂಗ್ ಸ್ಕೂಲ್ ಮಾಸ್ತರರಾಗಿದ್ದ [illegible] ಕೃಷ್ಣಪ್ಪಯ್ಯ [illegible] ಮನೆಯಲ್ಲಿ ದೊಡ್ಡ ತಾಳಮದ್ದಲೆ ಮಾಡಿಸಿ, ಅದರ [illegible] ಪ್ರಸಂಗಗಳ ಪದ ಹೇಳಿದೆನೆಂದೂ ಕೃಷ್ಣಪ್ಪಯ್ಯ ಮೊದಲಾದವರು ಅರ್ಥ ಹೇಳಿದರೆಂದೂ ಆಮೇಲೆ ಅವಶ್ಯವಿರುವ ತಿದ್ದುಪಡಿಗಳನ್ನು [illegible] ಮುಳಿಯ [illegible] ಹೇಳಿದ್ದರು. ಅಲ್ಲದೆ 'ರತ್ನಾವತೀ ಕಲ್ಯಾಣ'ದಲ್ಲಿರುವ 'ಪಡುಗಡಲಿನಾ ದಡದಿ ರಂಜಿಪ। ಉಡುಪಿ ಕ್ಷೇತ್ರದಿ ನಿಂದು ಭಕ್ತರ। ಗಡಣ ಪಾಲಿಪ ಹರಿಯ ಕರುಣದೊಳೊಡನೆಯಿಂದನೂ॥' ಎಂಬ ಪದ್ಯದಿಂದಲೂ 'ಕುಮಾರ ವಿಜಯ'ದ [illegible] 'ಶ್ರೀ ಕೃಷ್ಣಂ [illegible]' [illegible] ಪದ್ಯದಿಂದಲೂ [illegible] ಸ್ಪಷ್ಟವಾಗುತ್ತದೆ.

[illegible] ಲಕ್ಷ್ಮೀನಾರಣಪ್ಪನು [illegible] ಕುಂದಾಪುರ [illegible] ಆದೇ ಸಮಯದಲ್ಲಿ ಲಕ್ಷ್ಮೀನಾರಣಪ್ಪನು [illegible] ರಾಮಾಯಣವನ್ನು ಗದ್ಯರೂಪದಲ್ಲಿ ಬರೆಯಲು ಪ್ರಾರಂಭಿಸಿದ್ದನು. ಆ ಗ್ರಂಥವನ್ನು ಬರೆಯುತ್ತಿದ್ದಾಗ [illegible] ಗಳ ಬರಹ ಮುಗಿದೊಡನೆಯೇ, ಅವುಗಳನ್ನು ತಿದ್ದುವುದಕ್ಕಾಗಿ, ಕುಂದಾಪುರದಲ್ಲಿದ್ದ [illegible] [illegible] ಕುಂದಾಪುರದ [illegible] ೧೮೯೨ ನೇ ಇಸವಿ ಮಾರ್ಚ್ ೨೬ ರಂದು ತಿಂಗಳೊಂದರ ಹದಿನೈದು ರೂಪಾಯಿ ಸಂಬಳದ ಮೇಲೆ ಕುಂದಾಪುರ ಬೋರ್ಡ್ [illegible] ವ್ಯಾಯಾಮ ಶಿಕ್ಷಕನಾಗಿ [illegible]ರಾದ.

ಲಕ್ಷ್ಮೀನಾರಣಪ್ಪನ [illegible] ಭಾರವಾದುದು [illegible]. ಅಂಗಸಾಧನೆಯನ್ನು ಕಲಿಸುವ [illegible] [illegible] ಕೆಲಸವಿರುತ್ತಿತ್ತು. ಉಳಿದ ಸಮಯವೆಲ್ಲ ಅವರಿಗೆ ಬಿಡುವು. ಸ್ವಾಭಾವಿಕವಾಗಿ [illegible] ಲಕ್ಷ್ಮೀನಾರಣಪ್ಪನು [illegible] ನೋಡುತ್ತಿದ್ದನು. ಆತ ಹೆಚ್ಚಾಗಿ ಓದುತ್ತಿದ್ದುದು ಕಿಟ್ಟೆಲ್ ನಿಘಂಟು ಮತ್ತು ಶಬ್ದ

ಮಾಗೆ ದರ್ಪಣಗಳನ್ನು. ಕಿಟ್ಟೆಲ್ ನಿಘಂಟನ್ನು ಹಿಡಿದುಕೊಂಡು ಅದರಲ್ಲಿರುವ ಪದಗಳನ್ನೂ ಪದಾರ್ಥಗಳನ್ನೂ ಗಟ್ಟಿ ಮಾಡಿಕೊಳ್ಳುವುದರಲ್ಲಿಯೇ ಆತ ಮಗ್ನನಾಗಿರುತ್ತಿದ್ದ. ರಾತ್ರಿಯ ವೇಳೆ ಮಳಲಿ ಸುಬ್ಬರಾಯರ ಮನೆಗೆ ಹೋಗಿ, ಸಂಸ್ಕೃತ ಗ್ರಂಥಗಳನ್ನು ಅವರಿಂದ ಓದಿಸಿ, ಅರ್ಥ ಮಾಡಿಕೊಂಡು ಅವಶ್ಯವಿದ್ದುದನ್ನು ಕಂಠಸ್ಥಮಾಡಿಕೊಳ್ಳುತ್ತಿದ್ದ. ಆ ಮಳಲಿ ಸುಬ್ಬರಾಯರಲ್ಲಿ ಕವಿತಾಶಕ್ತಿಯು ಇದ್ದುದಲ್ಲದೆ ಸಂಸ್ಕೃತದಲ್ಲಿಯೂ ಶ್ಲೋಕಾರ್ಥವನ್ನು ತಿಳಿಯುವಷ್ಟು ಸಾಮರ್ಥ್ಯವಿದ್ದಿತು. ಮರಾಠಿ ಭಾಷೆಯಲ್ಲೂ ಅವರಿಗೆ ವಿಶೇಷವಾದ ಪಾಂಡಿತ್ಯವಿದ್ದಿತು. ಆದರೆ ಲಕ್ಷ್ಮೀನಾರ್ಣಪ್ಪನಿಗೆ ಮಾತ್ರ ಆ ಕಾಲದಲ್ಲಿ ಸಂಸ್ಕೃತದ ಗಂಧಗಾಳಿಯೇ ಇದ್ದಿರಲಿಲ್ಲ.

ಮಳಲಿ ಸುಬ್ಬರಾಯರಿಂದ ಕೇಳಿದ ಸಂಸ್ಕೃತ ಅದ್ಭುತ ರಾಮಾಯಣದ ಕಥೆಯನ್ನೇ ಆಧರಿಸಿ 'ಅದ್ಭುತ ರಾಮಾಯಣ'ವನ್ನಾತ ಬರೆದ. ಅದನ್ನು ಬರೆದು ಮುಗಿಸಿದ ಕಾಲದಲ್ಲಿ ಅದನ್ನು ಪ್ರಕಟಿಸುವುದು ಹೇಗೆಂಬ ಯೋಚನೆ ಅವನಲ್ಲಿ ಉಂಟಾಯಿತು. ತನ್ನಲ್ಲಿ ಅದಕ್ಕೆ ಬೇಕಾದ ದ್ರವ್ಯ ಸಹಾಯವಿಲ್ಲದೆ ಮುಂದೇನು ಮಾಡಲೆಂದಾತ ಚಿಂತಿಸುತ್ತಿರುವಾಗಲೇ, ಮೈಸೂರಿನಿಂದ 'ಕಾವ್ಯಮಂಜರಿ' ಎಂಬೊಂದು ಮಾಸಿಕ ಪತ್ರಿಕೆಯು ಹೊರಡತೊಡಗಿತು. ಆ ಪತ್ರಿಕೆಗೆ ಸುಬ್ಬರಾಯರೂ, ಲಕ್ಷ್ಮೀನಾರ್ಣಪ್ಪನೂ ಚಂದಾದಾರರಾಗಿ ಸೇರಿದರು. ತನ್ನ ಅದ್ಭುತ ರಾಮಾಯಣವನ್ನು ಅದೇ ಪತ್ರಿಕೆಗೆ ಕಳುಹಿಸುವುದೆಂದು ಲಕ್ಷ್ಮೀನಾರ್ಣಪ್ಪನು ನಿಶ್ಚಯ ಮಾಡಿದನು. ಆದರೆ ತನ್ನ ಪಾಂಡಿತ್ಯದ ಬಲ ಸಾಲದೆ ಗ್ರಂಥದಲ್ಲಿ ಲೋಪದೋಷಗಳಿದ್ದಲ್ಲಿ, ಪತ್ರಿಕಾಧಿಕಾರಿಗಳು-ಅದರಲ್ಲಿಯೂ ಮೈಸೂರಿನವರು, ಪ್ರಕಟಿಸಲಾರರೆಂಬ ಭಯದಿಂದ, ತನ್ನ ಹೆಸರನ್ನೇ ಗ್ರಂಥದಲ್ಲಿ ಕೊಡದೆ ಯಾವನೋ ಒಬ್ಬ ಕನ್ನಡ ಕಬ್ಬಿಗನು ಬರೆದನು ಎಂಬಂತೆ ಮಾಡಿದ, ಯೊತ್ತಿ, ತಾನು ನಕಲು ತೆಗೆದವನು ಮಾತ್ರ ಎಂಬಂತೆ ತೋರಿಸಿಕೊಂಡು, ಅದನ್ನವರಿಗೆ ಕಳುಹಿಸಿದನು. ಅದರಲ್ಲಿರುವ ಕೆಲವು ಪ್ರಯೋಗಗಳ ಕುರಿತು ಆ ಪತ್ರಿಕಾಧಿಕಾರಿಗಳು ಕೇಳಿದ ಪ್ರಶ್ನೆಗಳಿಗೂ, ಗ್ರಂಥವನ್ನು ಬರೆದವನು ತಾನಲ್ಲವೆಂಬಂತೆಯೇ ಉತ್ತರ ಕೊಟ್ಟನು. ಹೀಗೆ ಅವನು ಉತ್ತರ ಕೊಟ್ಟುದು ಒಳ್ಳೆಯದೇ ಆಯಿತು. ಇಲ್ಲವಾದಲ್ಲಿ ಅದು ಆ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದಿಲ್ಲ.

ಮುಂದೆ ಪದ್ಮಪುರಾಣದೊಳಗಿನ ರಾಮಾಶ್ವಮೇಧವೆಂಬ ಭಾಗವನ್ನು ಆತನಿಗೆ ಮಳಲಿ ಸುಬ್ಬರಾಯರೇ ಪ್ರತಿದಿನವೂ ರಾತ್ರಿ ಸ್ವಲ್ಪ ಸ್ವಲ್ಪ ಓದಿ ಹೇಳಿ ಅರ್ಥವನ್ನು ವಿವರಿಸತೊಡಗಿದರು. ಆ ಕಾಲದಲ್ಲಿ ಲಕ್ಷ್ಮೀನಾರ್ಣಪ್ಪನು ಒಂದು ಸಣ್ಣ ಪುಸ್ತಕವನ್ನು ಮಾಡಿಕೊಂಡು, ಅದರಲ್ಲಿ ತಾನು ಕೇಳಿದ ಕಥೆಯ ಮುಖ್ಯ ವಿಷಯಗಳನ್ನು ಬರೆದಿಟ್ಟುಕೊಳ್ಳುತ್ತಿದ್ದನು. ಆ ಪ್ರಕಾರ ಪೂರ್ಣ ಕಥೆಯನ್ನು ಕೇಳಿ ಆದ ಮೇಲೆ, ಆ ವಿಷಯದಲ್ಲೊಂದು ಛಂದೋಬದ್ಧವಾದ ಗ್ರಂಥವನ್ನು ಬರೆಯಬೇಕೆಂದು ತೋರಿ, 'ರಾಮಾಭ್ಯುದಯ' ಎಂಬ ಹೆಸರಿನಿಂದ ವಾರ್ಧಿಕ ಷಟ್ಪದಿಯಲ್ಲಿ ಬರೆಯತೊಡಗಿದನು. ಅದೇ ಕಾಲದಲ್ಲೊಂದು ಘಟನೆ ಜರುಗಿತು.

ಕುಂದಾಪುರ ತಾಲೂಕಿನ ಬೈಂದೂರಿನ ಹತ್ತಿರ ಬಿಜೂರು ಎಂಬೊಂದು ಗ್ರಾಮವಿರುವುದು. ಅಲ್ಲಿದ್ದ ವೆಂಕಟರಮಣ ಹೆಬ್ಬಾರರೆಂಬ ಒಬ್ಬ ಮಹನೀಯರು, ತನಗಿದ್ದ ಸರಕಾರೀ ಶಾನಭೋಗೀ ಕೆಲಸದ ನಿಮಿತ್ತ ಕುಂದಾಪುರ ತಾಲೂಕು ಕಚೇರಿಗೆ ಬರುತ್ತಾ ಹೋಗುತ್ತಾ, ಒಮ್ಮೊಮ್ಮೆ ನಾಲ್ಕಾರು ದಿನ ಕುಂದಾಪುರದಲ್ಲಿ ನಿಲ್ಲುತ್ತಾ ಇದ್ದರು. ಅವರು ಒಳ್ಳೆಯ ಕಾವ್ಯ ಪ್ರಿಯರೂ, ಮೇಧಾವಿಗಳೂ ಆಗಿದ್ದರು. ದೈವಯೋಗದಿಂದ ಅಕಸ್ಮಾತ್ ಆಗಿ ಅವರೊಂದಿಗೆ ಲಕ್ಷ್ಮೀನಾರ್ಣಪ್ಪನ ಸಂಬಂಧವುಂಟಾಯಿತು. ಮಾತುಕತೆಗಳಿಂದಾಗಿ ಲಕ್ಷ್ಮೀನಾರ್ಣಪ್ಪನಿಗೆ ಹೆಬ್ಬಾರರ ಯೋಗ್ಯತೆಯು ಅರಿವಾಗಿ, ತಾನು ಬರೆಯುತೊಡಗಿದ್ದ 'ರಾಮಾಭ್ಯುದಯ'ವನ್ನು ಅವರಿಗೆ ತೋರಿಸಿದನು. ಅವರು ಆ ಪದ್ಯಗಳೊಳ

ಗಿನ ಶಬ್ದ ಶಬ್ದವನ್ನೂ ಆಕ್ಷೇಪಿಸಿ, ಆ ಮಾದರಿಯಲ್ಲಿ ಕಾವ್ಯವನ್ನು ಬರೆದರೆ ಏನೂ ಉಪಯೋಗವಾಗಲಾರದೆಂದು ನಿಷ್ಠುರವಾಗಿ ನುಡಿದು, ಆ ಕಾವ್ಯವನ್ನು ಅಲ್ಲಲ್ಲಿ ತಿದ್ದಿದರು. ಲಕ್ಷ್ಮೀನಾರ್ಣಪ್ಪನ ಮುಂದಿನ ಅಭಿವೃದ್ಧಿಗೆ ಬಹುಮಟ್ಟಿಗೆ ಈ ಹೆಬ್ಬಾರರೇ ಕಾರಣವೆಂದರೆ ಅತಿಶಯೋಕ್ತಿಯಾಗಲಾರದು. ಅವರೇ, ಆ ಕಾಲದಲ್ಲಿ, ಲಕ್ಷ್ಮೀನಾರ್ಣಪ್ಪನಿಗೆ ಸಂಸ್ಕೃತ ಭಾಷಾಜ್ಞಾನವನ್ನು ಮಾಡಿಕೊಡುವುದಕ್ಕಾಗಿ, ಭಾಂಡಾರಕರರ ಸಂಸ್ಕೃತ ಮೊದಲನೆಯ ಮತ್ತು ಎರಡನೆಯ ಪುಸ್ತಕಗಳನ್ನು ಕಲಿಸಿದರು. ಅವರ ಬೋಧನಾಶಕ್ತಿಯ ಬಲದಿಂದಲೂ, ತನ್ನ ತೀಕ್ಷ್ಣಬುದ್ಧಿಯ ದೆಸೆಯಿಂದಲೂ ಆ ಜ್ಞಾನವು ತುಂಬ ವಿಸ್ತರಿಸಿ, ಮುಂದಾತ ಸ್ವತಂತ್ರವಾಗಿ ಸಂಸ್ಕೃತ ಗ್ರಂಥಗಳನ್ನು ಓದಿಕೊಂಡು ಅರ್ಥ ತಿಳಿದುಕೊಳ್ಳಲು ಸಮರ್ಥನಾದ.

ನಾನೂ ಒಮ್ಮೆ ವೆಂಕಟರಮಣ ಹೆಬ್ಬಾರರೊಡನೆ ಅರ್ಧದಿನವಿಡೀ ಸಂಭಾಷಿಸುತ್ತಾ, ಪ್ರಶ್ನೆ ಹಾಕುತ್ತಾ ಕಳೆದಿದ್ದೆ. ಆ ಸಂಭಾಷಣೆಯಿಂದ ಅವರ ಬುದ್ಧಿಶಕ್ತಿಯ ಅಗಾಧತ್ವವು ನನಗೆ ಚೆನ್ನಾಗಿ ಮನವರಿಕೆಯಾಯಿತು. ಯಾರ ಉಪದೇಶವೂ ಇಲ್ಲದೆ ತಾವೇ ಸ್ವತಃ ಭಾಷ್ಯಾಂತದವರೆಗೂ ವ್ಯಾಕರಣ, ತರ್ಕ, ವೇದಾಂತ ಮೊದಲಾದ ಶಾಸ್ತ್ರಜ್ಞಾನವನ್ನು ಸಂಪಾದಿಸಿಕೊಂಡಿರುವುದು ಅವರ ಬುದ್ಧಿಯ ವಿಲಕ್ಷಣಶಕ್ತಿಯನ್ನು ತೋರಿಸುವುದಲ್ಲವೇ? ಕಾವ್ಯ ವಿಷಯದಲ್ಲಾಗಲೀ, ಭಾಷಾ ವಿಷಯದಲ್ಲಾಗಲೀ, ಅವರ ಚಿಂತನೆಯ ಕ್ರಮವು ತುಂಬ ವಿಶಿಷ್ಟವಾದದು. ಲಕ್ಷ್ಮೀನಾರ್ಣಪ್ಪನೊಡನೊಮ್ಮೆ ಮಾತಾಡುವಾಗಲೂ, "ವೆಂಕಟರಮಣ ಹೆಬ್ಬಾರರ ಮಿದುಳಿನ ಶಕ್ತಿಯ ಹತ್ತನೆಯ ಒಂದು ಪಾಲು ಶಕ್ತಿಯೂ ನನ್ನಲ್ಲಿಲ್ಲ"ವೆಂದು ಆತನೇ ಹೇಳಿದ್ದ. ಅಂತೂ ಆ ಹೆಬ್ಬಾರರು ಅಗಾಧವಾದ ಬುದ್ಧಿಶಕ್ತಿಯುಳ್ಳವರೆಂಬುದನ್ನು ನಾನೇ ಮನಗಂಡಿದ್ದೆನು.

ಲಕ್ಷ್ಮೀನಾರ್ಣಪ್ಪನಿಗೆ ಕವಿತಾ ವಿಷಯದಲ್ಲಿ ಹಳೆಯ ಪದ್ಧತಿಯನ್ನೆಲ್ಲಾ ತಳ್ಳಿ, ಹೊಸದೊಂದು ಪದ್ಧತಿಗೆ ಮೇಲ್ಪಂಕ್ತಿ ಹಾಕಿಕೊಟ್ಟವರು ವೆಂಕಟರಮಣ ಹೆಬ್ಬಾರರೇ. ಅವರು, 'ರಾಮಾಭ್ಯುದಯ'ದಲ್ಲಿ ಬರೆದ ಪದ್ಯಗಳನ್ನೆಲ್ಲಾ ತಿದ್ದಿ, ತಾವೂ ನಡುನಡುವೆ ಹೊಸ ಪದ್ಯಗಳನ್ನು ರಚಿಸಿ, ಸೇರಿಸಿಕೊಟ್ಟರು. ಇಷ್ಟೆಲ್ಲಾ ಕಾರ್ಯವು ನಡೆದ ಮೇಲೆ, ನಮ್ಮ ನಾರಾಣಪ್ಪನಿಗೆ ಈ ಹೊಸ ರೀತಿಯಲ್ಲಿ ತನ್ನ ಗ್ರಂಥವನ್ನು ಕೊನೆಮುಟ್ಟಿಸುವುದು ಅಸಾಧ್ಯವೆಂದು ತೋರಿ, ಅದರಲ್ಲಿ ಶ್ರೀರಾಮ ಪಟ್ಟಾಭಿಷೇಕದವರೆಗೂ ಐದು ಸಂಧಿಗಳನ್ನು ಬರೆದು, ಅಲ್ಲಿಗೇ ನಿಲ್ಲಿಸಿ, ಮುಂದಿನ ಕಥೆಯನ್ನು ತನ್ನ ನೂತನ ಗುರುವಾದ ಹೆಬ್ಬಾರರು ಹೇಳಿದ ಶೈಲಿಯನ್ನೇ ಅನುಸರಿಸಿ ಗದ್ಯರೂಪದಲ್ಲಿ ಬರೆಯಬೇಕೆಂದು ಎಣಿಸಿಕೊಂಡನು. ತಾನು ಬರೆದಷ್ಟು ಭಾಗಕ್ಕೆ 'ರಾಮಾಭ್ಯುದಯ'ವೆಂಬ ಹೆಸರಿನ ಬದಲಿಗೆ 'ಶ್ರೀರಾಮ ಪಟ್ಟಾಭಿಷೇಕ'ವೆಂದು ನಾಮಕರಣ ಮಾಡಿ, ಮುಂದಿನ ಭಾಗವನ್ನು 'ರಾಮಾಶ್ವಮೇಧ'ವೆಂಬ ಹೆಸರಿನಿಂದ ಬರೆಯಬೇಕೆಂದು ಸಂಕಲ್ಪಿಸಿಕೊಂಡನು. ಹಾಗಾಗಿ 'ಶ್ರೀರಾಮ ಪಟ್ಟಾಭಿಷೇಕ'ವು ಒಂದು ಬೇರೆ ಗ್ರಂಥವಾಯಿತು. ಗ್ರಂಥವು ಮುಗಿದೊಡನೆಯೇ ಅದು ಯಾರ ಕೃತಿಯೆಂದು ತೋರಿಸಲೆಂಬ ವಿಚಾರ ಬಂದಾಗ, ಲಕ್ಷ್ಮೀನಾರ್ಣಪ್ಪನ ತಾಯಿಯ ಹೆಸರೂ ವೆಂಕಟರಮಣ ಹೆಬ್ಬಾರರ ತಾಯಿಯ ಹೆಸರೂ ಮಹಾಲಕ್ಷ್ಮಿಯೆಂದಿದ್ದುದರಿಂದಲೂ, ಆ ಕಾವ್ಯದಲ್ಲಿ ಹೆಬ್ಬಾರರ ಕೈವಾಡವೂ ತುಸು ಇದ್ದುದರಿಂದಲೂ, ಅವರಿಬ್ಬರ ತಾಯಂದಿರ ಸಾಮಾನ್ಯ ಹೆಸರಾದ 'ಮಹಾಲಕ್ಷ್ಮಿ' ಎಂಬವಳು ಆ ಗ್ರಂಥವನ್ನು ಬರೆದು ಮುಗಿಸಿದಳೆಂದು ಲಕ್ಷ್ಮೀನಾರ್ಣಪ್ಪನು 'ಶ್ರೀರಾಮ ಪಟ್ಟಾಭಿಷೇಕ'ದ ಕೊನೆಯಲ್ಲಿ ಹೇಳಲು ಕಾರಣವಾಯಿತೆಂದು ಆ ಹೆಬ್ಬಾರರೇ ನನ್ನೊಡನೆ ಹೇಳಿದ್ದರು. ಚಾಪಡಿ ರಂಗಭಟ್ಟನೆಂಬುದು ಉಡುಪಿಯ ಶ್ರೀಕೃಷ್ಣನನ್ನು ಉದ್ದೇಶಿಸಿ ಹೇಳಿದ ಹೆಸರು, ಅದರಲ್ಲಿ ಬೇರೆ ವಿಶೇಷಾರ್ಥವೇನೂ ಇಲ್ಲವೆಂಬುದು

ಹೆಬ್ಬಾರರ ಹೇಳಿಕೆ.

ಅದೇ ಕಾಲದಲ್ಲಿ ಉಡುಪಿಯಲ್ಲಿ ಕ್ರಿಶ್ಚಿಯನ್ ಹೈಸ್ಕೂಲ್ ಪ್ರಾರಂಭವಾಯಿತು. ಅಲ್ಲಿ ಸ್ವಲ್ಪ ಹೆಚ್ಚು ಸಂಬಳ ದೊರೆಯುವಂತೆ ತೋರಿದುದರಿಂದ, ಲಕ್ಷ್ಮೀನಾರ್ಣಪ್ಪನು ಕುಸ್ತಿಯ ಮಾಸ್ತರನಾಗಿ ಕ್ರಿಶ್ಚಿಯನ್ ಹೈಸ್ಕೂಲನ್ನು ಸೇರಿದನು. ೧೮೯೪ನೇ ಇಸವಿ ನವಂಬರ ತಿಂಗಳಿನಲ್ಲಿ ಆತ ಕ್ರಿಶ್ಚಿಯನ್ ಹೈಸ್ಕೂಲನ್ನು ಸೇರಿರಬೇಕೆಂದು ತೋರುತ್ತದೆ. ಅದೇನಿದ್ದರೂ, ೧೮೯೪ ನೇ ಇಸವಿ ಜುಲೈ ೧೬ ನೆಯ ತಾರೀಕಿನಿಂದ, ೧೮೯೯ ನೇ ಇಸವಿ ಫೆಬ್ರವರಿ ೨೮ ನೇ ತಾರೀಕಿನ ವರೆಗೆ, ಸುಮಾರು ಐದು ವರ್ಷ ಕಾಲ ಆಗಾಗ ತೆಗೆದುಕೊಂಡ ದೀರ್ಘ ರಜೆಯ ಮೇಲೆ ಇದ್ದು, ಕೊನೆಗೆ ಕುಂದಾಪುರ ಹೈಸ್ಕೂಲಿನ ಕೆಲಸಕ್ಕೆ ರಾಜಿನಾಮೆ ಕೊಟ್ಟು, ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಕನ್ನಡ ಪಂಡಿತನಾದನು. ಆ ವೇಳೆಗೆ ಆತನಿಗಿದ್ದ ಕನ್ನಡದ ತಿಳುವಳಿಕೆಯ ಖ್ಯಾತಿ ಸುತ್ತಮುತ್ತಲೂ ಹಬ್ಬಿತ್ತು. ಆಗ ಆತನಿಗೆ ಕನ್ನಡ ಪಂಡಿತರ ಕೆಲಸಕ್ಕಾಗಿ ತಿಂಗಳೊಂದಕ್ಕೆ ರೂ. ೨೦ ಮಾತ್ರ. ಶಾಲೆಯ ಲೆಕ್ಕ ಪತ್ರಗಳನ್ನು ಬರೆದುದಕ್ಕಾಗಿ ರೂ. ೫—ಒಟ್ಟಿನಲ್ಲಿ ತಿಂಗಳೊಂದಕ್ಕೆ ರೂ. ೨೫ ವೇತನವಾಗಿ ದೊರೆಯುತ್ತಿತ್ತು.

'ಶ್ರೀ ರಾಮಪಟ್ಟಾಭಿಷೇಕ'ವನ್ನು ಮುಗಿಸಿದುದೂ 'ರಾಮಾಶ್ವಮೇಧ'ವನ್ನು ಪೂರ್ಣವಾಗಿ ಬರೆದುದೂ ಆತ ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿರುವಾಗಲೇ. ಆ ಪುಸ್ತಕವನ್ನು ಬರೆದು ಮುಗಿಸಿದ ಮೇಲೆ, ಸೂತ್ರಾತ್ಮಕವಾಗಿ ವ್ಯಾಕರಣ ಪುಸ್ತಕವೊಂದನ್ನು ಬರೆಯಲು ತೊಡಗಿದನಾತ. ಭಟ್ಟಾಕಳಂಕನ ಶಬ್ದಾನುಶಾಸನದಂತೆ, ಕನ್ನಡದಲ್ಲಿಯೇ ಸಣ್ಣ ಸಣ್ಣ ಸೂತ್ರಗಳನ್ನು ಕಲ್ಪಿಸಿ, ಅವುಗಳ ಕೆಳಗೆ ವಿಸ್ತಾರವಾಗಿ ವೃತ್ತಿಯನ್ನು ಬರೆದು, ಅಕ್ಷರ ಖಂಡದ ವರೆಗೂ ಬರೆದು ಮುಗಿಸಿದ್ದನು. ತತ್ಸಮತದ್ಭವಗಳ ದೊಡ್ಡದೊಂದು ಪಟ್ಟಿಯನ್ನೂ ತಯಾರಿಸಿ ಆ ಪುಸ್ತಕದಲ್ಲದನ್ನು ಸೇರಿಸಬೇಕೆಂದೂ ಎಣಿಸಿದ್ದನು. ಇಂಗ್ಲಿಷಿನಲ್ಲಿರುವ ಎನ್‌ಸೈಕ್ಲೋಪೀಡಿಯಾದ ಮಾದರಿಯಲ್ಲಿ ಕೋಶವೊಂದನ್ನು ಬರೆಯಬೇಕೆಂಬ ಹಂಬಲವನ್ನೂ ಆತ ನನ್ನೊಡನೆ ತೋಡಿಕೊಂಡುದುಂಟು. ಆದರೆ ಆ ಕನಸನ್ನು ನನಸಾಗಿಸಲು ವಿಧಿ ಅವನಿಗೆ ಅವಕಾಶವನ್ನು ಕೊಡಲಿಲ್ಲ.

'ರಾಮಾಶ್ವಮೇಧ'ವನ್ನು ಬರೆದ ಕವಿ ಮುದ್ದಣನೆಂದೂ, ಆತನು ತನ್ನ ಹೆಂಡತಿ ಮನೋರಮೆಗೆ ಆ ಕಥೆಯನ್ನು ಹೇಳಿದನೆಂದೂ ಬರೆಯಲು ಏನು ಕಾರಣವಿದ್ದಿತೆಂದು ವೆಂಕಟರಮಣ ಹೆಬ್ಬಾರರೊಡನೆಯೇ ನಾನೊಮ್ಮೆ ಕೇಳಿದ್ದೆ. ಆಗ ಅವರು, "ಲಕ್ಷ್ಮೀನಾರ್ಣಪ್ಪನನ್ನು ಮುದ್ದಣನೆಂದು ಚಿಕ್ಕಂದಿನಲ್ಲಿ ಕರೆಯುತ್ತಿದ್ದರು. ಆತನ ಹೆಂಡತಿಯು ಸ್ವಲ್ಪ ಕಪ್ಪಾಗಿದ್ದುದರಿಂದ, ವಿನೋದಪ್ರಿಯನಾದ ಆತ, ಆಕೆಗೆ 'ಮನೋರಮೆ' ಎಂಬ ಹೆಸರನ್ನಿಟ್ಟಿದ್ದನು" ಎಂದಿದ್ದರು.

ನೋಟಕ್ಕೆ ಲಕ್ಷ್ಮೀನಾರ್ಣಪ್ಪನು ಸುಂದರನಾಗಿದ್ದನು. ಆತನ ಕಣ್ಣುಗಳು ಬಹು ಚಂಚಲ, ಆ ಕಣ್ಣುಗಳಲ್ಲೇ ಆತನ ಅಸದೃಶ ಬುದ್ಧಿಶಕ್ತಿಯ ತೇಜಸ್ಸು ಮಿಂಚುತ್ತಿತ್ತು. ಆತನ ನಡಿಗೆಯೂ ಬಲು ದಿಟ್ಟವಾದುದು. ಆರೋಗ್ಯ ಸರಿಯಿದ್ದಾಗ ಎರಡು ಕೈಗಳಿಂದ ಎರಡು ಅಕ್ಕಿಯ ಮುಡಿಗಳನ್ನು ಎತ್ತುವ ತಾಕತ್ತು ಆತನಿಗಿತ್ತು. ಆತ ಮಿತಭಾಷಿಯೂ ಹೌದು, ಮೃದುಭಾಷಿಯೂ ಹೌದು. ಆತನ ಸ್ವರವು ಸ್ವಲ್ಪ ಕೀರಲಾಗಿದ್ದರೂ ಭಾಷೆಯು ಅತಿ ಶುದ್ಧ. ವಾಕ್ಯಗಳು ಚಿಕ್ಕವಾಗಿರುತ್ತಿದ್ದರೂ ಅವುಗಳಲ್ಲೆಲ್ಲ ಕನ್ನಡಪದಗಳೇ ತುಂಬಿತುಳುಕುತ್ತಿದ್ದುವು. ಒಂದು ಕ್ಷಣವನ್ನೂ ಹಾಳು ಮಾಡುವ ಸ್ವಭಾವದವನು ಅವನಲ್ಲ. ಆತ ಯಾವಾಗಲೂ ಓದುಬರಹಗಳಲ್ಲೇ ತಲ್ಲೀನ. ಆತನ ಸ್ವಂತ ಪುಸ್ತಕಾಲಯದಲ್ಲಿ ಅನೇಕ ಕನ್ನಡ, ಸಂಸ್ಕೃತ, ಮಲೆಯಾಳಿ ಗ್ರಂಥಗಳಿದ್ದುವು. ಇಂಗ್ಲಿಷಿನಲ್ಲೂ ಆತನಿಗೆ ತಿಳಿದಿತ್ತು. ಆತನ ಕನ್ನಡ ಅಕ್ಷರವಾಗಲೀ, ಇಂಗ್ಲಿಷ್ ಅಕ್ಷರವಾಗಲೀ ಬಲು ಮುದ್ದಾದುದು. ಬರೆಯುವಲ್ಲಿ ತ್ವರೆಯೂ ಬಹಳ. ಇತರರು ನಾಲ್ಕಾರು

ಪಂಕ್ತಿಗಳನ್ನು ಬರೆಯುವುದರೊಳಗಾಗಿ, ಅತನೊಂದರ್ಧ ತಾನನ್ನೇ ಬರೆದು ಮುಗಿಸಿಬಿಡುತ್ತಿದ್ದ. ಸಂಗೀತದಲ್ಲಿಯೂ ಆತನಿಗೆ ಪರಿಶ್ರಮವಿತ್ತು. ಕಣ್ಣಲ್ಲಿ ಕಂಡುದನ್ನು, ಕಿವಿಯಲ್ಲಿ ಕೇಳಿದುದನ್ನು ಸುಲಭವಾಗಿ ಗ್ರಹಿಸಿಬಿಡುವ ಸೂಕ್ಷ್ಮಮತಿತ್ವವು ಆತನಲ್ಲಿತ್ತು. ತಾರಾಯಂತ್ರದ (ತಾರು) ಕೆಲವು ನಿಯಮಗಳನ್ನು ಓದಿಕೊಂಡು, ಅದರ ಬಲದಿಂದಲೇ ಟಪಾಲು ಕಟ್ಟೆಯ ಹೊರಗೆ ನಿಂತುಕೊಂಡು, ಒಳಗಿರುವ ತಾರಾಯಂತ್ರವು ಸೂಚಿಸುವ ಸಂಕೇತಕ್ಕೆ ಅರ್ಥವನ್ನು ಆತ ಹೇಳಿಬಿಡುತ್ತಿದ್ದನಂತೆ!


ಇಂತಹ ಅದ್ಭುತ ಶಕ್ತಿಯುಳ್ಳ ಮನುಷ್ಯನಿಗೆ, ಅವಿಶ್ರಾಂತ ಮಾನಸಿಕ ಶ್ರಮದ ದೆಸೆಯಿಂದ ಕ್ಷಯರೋಗವು ಪ್ರಾಪ್ತವಾಗಿ ಹಾಸಿಗೆ ಹಿಡಿಯುವ ಗತಿಯೊದಗಿಬಂತು. ಹಾಸಿಗೆಯಲ್ಲಿದ್ದರೂ ಆತನ ಕೈಯಲ್ಲಿ ಪುಸ್ತಕ ತಪ್ಪುತ್ತಿದ್ದಿಲ್ಲ. ದಿನಗಳೆದಂತೆ ಆತನ ದೇಹ ಜೀರ್ಣವಾಗತೊಡಗಿತು. ಆ ವ್ಯಾಧಿಯೇ ಆತನನ್ನು ಕಬಳಿಸಿಬಿಟ್ಟು ಯಶಶ್ಶರೀರಿಯನ್ನಾಗಿ ಮಾಡಿತು. ೧೯೦೧ ನೇ ಇಸವಿ ಫೆಬ್ರವರಿ ೧೫ ನೇ ತಾರೀಕಿನಂದು ಲಕ್ಷ್ಮೀನಾರ್ಣಪ್ಪನು ಇಹಲೋಕ ವ್ಯಾಪಾರವನ್ನು ಮುಗಿಸಿ ಪರಂಧಾಮವನ್ನೈದಿದನು.

ಅವನ ಮರಣದ ತರುವಾಯ, ಆತನ ಪುಸ್ತಕ ಸಂಗ್ರಹದಿಂದ ಬೆಲೆಬಾಳುವ ಗ್ರಂಥಗಳನ್ನೆಲ್ಲ ಅವನ ತಂದೆಯೂ ತಮ್ಮನೂ ಮಾರಿದರೆಂದು ಕೇಳಿದೆ. ಅವನ ಕರಡು ಪುಸ್ತಕಗಳನ್ನೆಲ್ಲವನ್ನು ಆತನ ಸೋದರನು ಅಗ್ನಿದೇವತೆಗೆ ಅರ್ಪಿಸಿಬಿಟ್ಟನಂತೆ. ಆತನ ಕೈಗೆ ಆ ಗ್ರಂಥಗಳು ದೊರೆತುದು ಮಂಗನ ಕೈಗೆ ಮಾಣಿಕ್ಯ ದೊರೆತಂತಾಯಿತು!

ಲಕ್ಷ್ಮೀನಾರ್ಣಪ್ಪನು ಸತ್ತಮೇಲೆ, ಆತನ ಹೆಂಡತಿ ಕಮಲಾಬಾಯಿ, ಮಗ ರಾಧಾಕೃಷ್ಣನೊಂದಿಗೆ ತೌರನ್ನು ಸೇರಿದಳು. ಆಕೆಯ ತೌರೂರು ಮೈಸೂರು ಸೀಮೆಯ ಬೆಂಕೀಪುರ. ಅಲ್ಲೇ ಆಕೆ ತನ್ನ ಕೂಸನ್ನು ಬೆಳೆಸಿ ದೊಡ್ಡದು ಮಾಡಿದಳು. ಬಡತನದ ದೆಸೆಯಿಂದಾಗಿ ಆತನಿಗೂ ವಿದ್ಯಾಭ್ಯಾಸವನ್ನು ಹೆಚ್ಚು ಮುಂದುವರಿಸಲಾಗಲಿಲ್ಲ. ಸರಿಯಾದ ಉದ್ಯೋಗವೂ ದೊರೆಯಲಿಲ್ಲವೆಂದು ಒಮ್ಮೆ ನನ್ನೊಡನೆ ಕಷ್ಟಸುಖಗಳನ್ನಾತ ತೋಡಿಕೊಂಡಿದ್ದ. ಆತನಲ್ಲಿ ತಂದೆಯಲ್ಲಿದ್ದ ಯಾವ ಶಕ್ತಿಯೂ ಬಂದಂತೆ ನನಗನಿಸಲಿಲ್ಲ.

ಒಟ್ಟಿನಲ್ಲಿ ಲಕ್ಷ್ಮೀನಾರ್ಣಪ್ಪನು ತನ್ನ ಅದ್ಭುತವಾದ ಕಾವ್ಯರತ್ನಗಳಿಂದ ಕನ್ನಡಿಗರಿಗೆಲ್ಲ ರಸದೂಟವನ್ನುಣ್ಣಿಸಿದನು. ಅಷ್ಟು ಮಾತ್ರವಲ್ಲ, ಕನ್ನಡ ಕಾವ್ಯಗಳ ಶೈಲಿಯು ಹೇಗೆ ಇರಬೇಕು? ಅವುಗಳ ವರ್ಣನೆ ಯಾವ ಪ್ರಕಾರವಾಗಿ ಇರಬೇಕು? ಎಂಬುದಕ್ಕೆ ಮಾದರಿಯಾಗತಕ್ಕ ಗ್ರಂಥಗಳನ್ನು ಬರೆದನೆಂದೇ ಎನ್ನಬೇಕು. ಹಾಗಾಗಿ ಅವನನ್ನು ಮಹಾಕವಿ ಎಂದು ಮಾತ್ರವೇ ಅಲ್ಲ, ಮಾದರಿ ಕವಿಯೆಂದು ಕರೆದರೂ ತಪ್ಪಾಗಲಾರದಲ್ಲವೇ? ✡

(ಈ ಲೇಖನವನ್ನು ಪ್ರಕಟಣೆಗಾಗಿ ಒದಗಿಸಿದವರು ಎ. ನಾಥನ ಉಡುಪ)



ವಿಪತ್ತಿನಲ್ಲಿ ಧೈರ್ಯ, ಉತ್ಕರ್ಷದಲ್ಲಿರುವಾಗ ಕ್ಷಮಾಗುಣ, ಸಭೆಯಲ್ಲಿ ವಾಕ್ಚಾತುರಿ, ರಣಾಂಗಣದಲ್ಲಿ ಪರಾಕ್ರಮ, ಯಶಸ್ಸು ಸಂಪಾದಿಸುವದರಲ್ಲಿ ಆಸಕ್ತಿ, ಶಾಸ್ತ್ರದ ಮಾತು ಕೇಳುವದರಲ್ಲಿ ಉತ್ಸುಕತೆ ಇವು ಮಹಾಪುರುಷರ ಗುಣಗಳು.

—ಭರ್ತೃಹರಿ

ಬ್ಯಾಕ್ಟೀರಿಯಾ ನಾಶಕ ಫಾಜ್

ಹಿಂದಿ ಮೂಲ : ಡಾ. ಅರುಣ ಕುಮಾರ ಮಿಶ್ರ
ಅನುವಾದ : ಶ್ರೀಮತಿ ಶಾಂತಾ ಮಂಜುನಾಥ

ಇಪ್ಪತ್ತು ಇಪ್ಪತ್ತೈದು ವರ್ಷಗಳ ಹಿಂದೆ ನಮ್ಮ ದೇಶದಲ್ಲಿ ಕಾಲರಾದ ಹಾವಳಿ ಬಹಳವಾಗಿತ್ತು. ಈ ರೋಗದ ಔಷಧಿಗಳಲ್ಲಿ 'ಕಾಲರಾ ಫಾಜ್' ಮುಖ್ಯವಾದುದು ಎಂಬುದು ಅವಿದ್ಯಾವಂತ ಹಳ್ಳಿಗರಿಗೂ ಕೂಡ ತಿಳಿದ ವಿಷಯವಾಗಿದೆ. ಅದರಂತೆಯೇ ಗಂಗಾಜಲವು ಕೊಳೆಯುವುದಿಲ್ಲವೆಂಬುದೂ ಕೂಡ ಎಲ್ಲರಿಗೂ ಗೊತ್ತು. ಕಾಲರಾವು ಬ್ಯಾಕ್ಟೀರಿಯಾ (ಜೀವಾಣು) ಗಳಿಂದ ಉಂಟಾಗುತ್ತದೆ. ಕೊಳೆಯುವ ಕ್ರಿಯೆಯೂ ಕೂಡ ಬ್ಯಾಕ್ಟೀರಿಯಾ ಮೂಲಕವೇ ಆಗುತ್ತದೆ. ಗಂಗಾಜಲದಲ್ಲಿ 'ಫಾಜ್' ಎಂಬ ಸೂಕ್ಷ್ಮ ಜೀವಿಗಳು ಇರುತ್ತವೆ. 'ಕಾಲರಾಫಾಜ್' ಔಷಧಿಯಲ್ಲಿ ಅಥವಾ ಗಂಗಾಜಲದಲ್ಲಿರುವ 'ಫಾಜ್' ಸೂಕ್ಷ್ಮ ಜೀವಿಗಳು ಬ್ಯಾಕ್ಟೀರಿಯಾಗಳನ್ನು ನಾಶಪಡಿಸುವುದರ ಮೂಲಕ ಕಾಲರಾವನ್ನು ತಡೆಗಟ್ಟುತ್ತವೆ ಮತ್ತು ಗಂಗಾಜಲವನ್ನು ಕೊಳೆಯಲು ಬಿಡುವುದಿಲ್ಲ.

ಹತ್ತೊಂಬತ್ತನೆಯ ಶತಮಾನದಲ್ಲಿ ಅಮೇರಿಕದ ಹಾಸ್ಯ ಲೇಖಕ ಮಾರ್ಕ್ ಟ್ವೇನ್ ರವರು ಭಾರತ ಸಂಚಾರದಲ್ಲಿದ್ದಾಗ ಗಂಗಾಜಲವು ಕೊಳೆಯದಿರುವ ವಿಷಯವನ್ನು ಕೇಳಿ ಅವರಿಗೆ ಆಶ್ಚರ್ಯವಾಯಿತು. ಕಾಶಿಯ ಒಬ್ಬ ಆಂಗ್ಲ ರಸಾಯನ ಶಾಸ್ತ್ರಜ್ಞನಿಗೆ ಅವರು ಗಂಗಾಜಲವನ್ನು ಪರೀಕ್ಷಿಸಲು ಕೇಳಿಕೊಂಡರು. ಆ ವಿಜ್ಞಾನಿ ಗಂಗಾಜಲವು ನಿಜವಾಗಿಯೂ ಕೊಳೆಯುವವಿಲ್ಲವೆಂದು ಮಾತ್ರ ಹೇಳಬಲ್ಲವನಾದನು. ಇದಾದ ಬಹಳ ನಂತರದಲ್ಲಿ ಅಂದರೆ ೧೯೨೦ ರಲ್ಲಿ ಫಾಜಿನ ಪತ್ತೆಯಾಯಿತು. ಈಗಲೂ ಕೂಡ ಫಾಜ್ ಕೇವಲ ಗಂಗಾಜಲದಲ್ಲಿ ಮಾತ್ರ ಏಕೆ ಸಿಗುತ್ತದೆ ಮತ್ತು ಗಂಗೆಯಲ್ಲಿ ಸಂಗಮವಾಗುವ ಬೇರೆ ನದಿಗಳ ನೀರಿನಲ್ಲಿ ಅವುಗಳು ಏಕೆ ಹೋಗುವುದಿಲ್ಲ ಎಂಬ ಪ್ರಶ್ನೆಗಳಿಗೆ ಉತ್ತರ ಕೊಡುವುದು ಕಠಿಣವಾಗಿದೆ.

'ಫಾಜ್' ಶಬ್ದದ ಅರ್ಥ ಭೋಜ ಅಥವಾ 'ಭಕ್ಷಕ' ಎಂಬುದಾಗಿದೆ; ಫಾಜ್ ಬ್ಯಾಕ್ಟೀರಿಯಾಗಳನ್ನು (ಜೀವಾಣುಗಳನ್ನು) ತಿನ್ನುತ್ತವೆ ಅಥವಾ ನಾಶಪಡಿಸುತ್ತವೆ. ಆದ್ದರಿಂದ ಇವುಗಳನ್ನು 'ಬ್ಯಾಕ್ಟೀರಿಯಾ ಫಾಜ್' (ಜೀವಾಣುಭೋಜ) ಎಂದು ಹೇಳುತ್ತಾರೆ. 'ಫಾಜ್' ಇದರ ಸಂಕ್ಷಿಪ್ತ ರೂಪವಾಗಿದೆ. ಫಾಜ್ ಅತ್ಯಂತ ಸೂಕ್ಷ್ಮ ಜೀವಿಗಳಾಗಿವೆ, ಮತ್ತು ಇವುಗಳನ್ನು ಎಲೆಕ್ಟ್ರಾನ್ ಸೂಕ್ಷ್ಮ

ದರ್ಶಕದಿಂದ ಮಾತ್ರವೇ ನೋಡಬಹುದಾಗಿದೆ. ಆಕೃತಿಯಲ್ಲಿ ಇವುಗಳು ಛತ್ರಿ, ಟ್ಯಾಡ್‌ಪೋಲ್ (ಕಪ್ಪೆ ಮರಿ) ಅಥವಾ ಶುಕ್ರಾಣುವಿನಂತೆ ಕಾಣುತ್ತವೆ. ಫಾಜ್‌ಗಳಲ್ಲಿ ತಲೆ ಮತ್ತು ಬಾಲದ ವ್ಯತ್ಯಾಸವು ಸ್ಪಷ್ಟವಾಗಿ ಕಾಣುತ್ತದೆ. ತಲೆಯು ೪೫ ರಿಂದ ೯೫ ಮಿಲಿಮೈಕ್ರೋನ್‌ನಷ್ಟು ಉದ್ದವಾಗಿಯೂ ಮತ್ತು ೪೫ ರಿಂದ ೬೫ ಮಿಲಿ ಮೈಕ್ರೋನ್‌ಗಳಷ್ಟು ಅಗಲವಾಗಿಯೂ ಇರುತ್ತದೆ. [೨,೫೦೦ ಮಿಲಿ ಮೈಕ್ರೋನ್ = ೧ ಇಂಚು]

ತಲೆಯು ಆಕೃತಿಯು ಗುಂಡಗೆ ಅಂಡಾಕಾರದಲ್ಲಿ ಅಥವಾ ಷಟ್‌ಕೋಣದ ರೀತಿಯಲ್ಲಿ ಇರಬಹುದು. ಬಾಲವು ೧೭೫ ಮಿಲಿ ಮೈಕ್ರೋನ್ ಉದ್ದವಾಗಿಯೂ ಮತ್ತು ೧೫ ಮಿಲಿ ಮೈಕ್ರೋನ್ ಅಗಲವಾಗಿರುತ್ತವೆ. ಬಾಲದ ಕೊನೆಯಲ್ಲಿ ತಟ್ಟೆಯಂಥ ರಚನೆ ಇರುತ್ತದೆ. ಇದರಲ್ಲಿ ಆರು ಅಥವಾ ಅದಕ್ಕಿಂತಲೂ ಹೆಚ್ಚು ದೊಡ್ಡ ದೊಡ್ಡ ಎಳೆಗಳು ಅಂಟಿಕೊಂಡಿರುತ್ತವೆ. (ಚಿ.-೧)



ಚಿತ್ರ ೧) ಫಾಜದ ಬಗೆಗಳು

ಇದರ ತಲೆಯು ಒಳಗಡೆ ಡಿ. ಎನ್. ಎ. ಎಂಬ ರಾಸಾಯನಿಕ ವಸ್ತುವು ತುಂಬಿರುತ್ತದೆ. ಡಿ. ಎನ್. ಎ. ನ ರಚನೆ ಮತ್ತು ಅದರ ಮಹತ್ವವು ಒಂದು ಸ್ವತಂತ್ರ ವಿಷಯವಾಗಿರುವುದರಿಂದ ನಾವು ಇಲ್ಲಿ ಅದರ ವಿವರಣೆಗೆ ತೊಡಗುವುದಿಲ್ಲ. ತಲೆಯು ಆವರಣ, ಬಾಲ ಮತ್ತು ಇತರ ಎಲ್ಲ ಭಾಗಗಳೂ ಪ್ರೋಟೀನ್‌ನಿಂದ ಮಾಡಲ್ಪಟ್ಟಿರುತ್ತವೆ. ಫಾಜ್‌ನಲ್ಲಿ ಶೇ. ೪೦ ರಷ್ಟು ನ್ಯೂಕ್ಲೀಯಿಕ್ ಆಮ್ಲ (ಡಿ. ಎನ್. ಎ.) ಮತ್ತು ಶೇ. ೬೦ ರಷ್ಟು ಪ್ರೋಟೀನ್ ಇರುತ್ತದೆ. ಸ್ವಲ್ಪ ವಿಸ್ತಾರವಾಗಿ ಹೇಳುವುದಾದರೆ ಶೇ. ೪೨ ರಷ್ಟು ಇಂಗಾಲ ಶೇ. ೧೩.೨ ರಷ್ಟು ಸಾರಜನಕ ಶೇ. ೬.೪ ರಷ್ಟು ಜಲಜನಕ ಮತ್ತು ಶೇ. ೩೭ ರಷ್ಟು ರಂಜಕ ಇರುತ್ತದೆ. (ಚಿ.-೨)



೨) ಜೀವಾಣುಗಳ ಕರಗುವಿಕೆ

ಫಾಜ್ ಬ್ಯಾಕ್ಟೀರಿಯಾಗಳಿಂದಲೇ ಜೀವಿಸುತ್ತವೆ ಫಾಜ್‌ಗಳು ಯಾವುದಾದರೂ ಜೀವಾಣುಗಳ ಶರೀರದಲ್ಲಿ ನುಗ್ಗಿ ಅವುಗಳನ್ನು ತಮ್ಮ ಅಧಿಕಾರಕ್ಕೆ ಒಳಪಡಿಸಿಕೊಳ್ಳುತ್ತವೆ. ಪುನಃ ತನ್ನ ಇಷ್ಟಾನುಸಾರವಾಗಿ ಜೀವಾಣುಗಳಿಂದ ತಮ್ಮ ವಂಶಾಭಿವೃದ್ಧಿಯನ್ನು ಮಾಡಿಕೊಳ್ಳುತ್ತವೆ. ಈ ವಿಚಿತ್ರ ಪ್ರಕಾರದ ಜನನ ಪ್ರಕ್ರಿಯೆಯಿಂದ ಪ್ರತ್ಯೇಕ ಜೀವಾಣುವಿನ ಒಳಗೆ ಸುಮಾರು ನೂರರಷ್ಟು ಫಾಜ್ ಉಂಟಾಗಿರುತ್ತವೆ. ಪುನಃ ಜೀವಾಣುವಿನ ಕೋಶವು (ಚಿ -೩) ಒಡೆದು ನಷ್ಟವಾಗುತ್ತದೆ. ಹೊಸದಾಗಿ ಉಂಟಾದ ಫಾಜ್ ಇತರ ಬ್ಯಾಕ್ಟೀರಿಯಾದ ಮೇಲೆ ಆಕ್ರಮಣ ನಡೆಸುತ್ತವೆ. ಈ ರೀತಿಯಲ್ಲಿ ಇವುಗಳ ಜೀವನ ಕ್ರಮ ನಡೆಯುತ್ತವೆ. [ಚಿ ೫ ಮತ್ತು ೬ ನೋಡಿರಿ.]

ಫಾಜ್‌ಗಳಲ್ಲಿ ಅನೇಕ ವಿಧಗಳಿರುತ್ತವೆ. ವಿಭಿನ್ನ ಜೀವಾಣುವಿನ ಫಾಜಗಳೂ ಭಿನ್ನ ಭಿನ್ನವಾಗಿಯೇ ಇರುತ್ತವೆ. ನೀಲಿ ಹಸಿರು



೩) ಫಾಜದ ರಚನೆ

ಬಣ್ಣದ ಪಾಚಿ ಅಥವಾ ಶೈವಾಲ (ಬ್ಲ್ಯೂ ಗ್ರೀನ್ ಎಲ್ಗಿ) ಎಂಬ ಜೀವಿಯು ಜೀವಾಣುವಿನ ತರಹದ್ದೇ ಆದ ಜೀವಿಯಾಗಿದೆ. ಇದಕ್ಕೆ ವೈಜ್ಞಾನಿಕವಾಗಿ 'ಸಾಯನೋಫಾಯಸಿ' ಎಂದು ಹೇಳುತ್ತಾರೆ. ಇವುಗಳಲ್ಲಿಯೂ ಕೂಡ ಫಾಜ್‌ಗಳಿರುತ್ತವೆ. ಈ ಫಾಜ್‌ಗಳಿಗೆ 'ಸಾಯನೋ ಫಾಜ್' ಎಂದು ಹೇಳುತ್ತಾರೆ. ಜೀವಾಣುವಿನ ಫಾಜ್ ಮತ್ತು ನೀಲಿ ಹಸಿರು ಬಣ್ಣದ ಸಮುದ್ರ ಪಾಚಿಯ ಫಾಜ್‌ನ ಆಕಾರ, ರಚನೆ, ಮತ್ತು ಜೀವನ ಚಕ್ರ ಬಹಳಷ್ಟು ಒಂದೇ ತರಹದ್ದಾಗಿರುತ್ತದೆ. 'ಟೀಫೋರ್' ಎಂಬ ಹೆಸರಿನ ಬ್ಯಾಕ್ಟೀರಿಯಾ ಫಾಜ್ ಬಹಳ ಪ್ರಸಿದ್ಧವಾಗಿದೆ. ಇದರ ಸಂಬಂಧದಲ್ಲಿ ವಿಜ್ಞಾನಿಗಳು ಬಹಳಷ್ಟು ಸಂಶೋಧನೆ ನಡೆಸಿದ್ದಾರೆ. ವಾಸ್ತವದಲ್ಲಿ ಫಾಜ್‌ಗೆ ಸಂಬಂಧಪಟ್ಟ ತಿಳುವಳಿಕೆ ಇದರ ವಿಷಯದ್ದೇ ಆಗಿದೆ.

ಫಾಜ್ ಜೀವಾಣುವನ್ನು ನಾಶಪಡಿಸುವದರಿಂದ ಅನೇಕ ಉಪಯೋಗಗಳಿವೆ. ಟೆಂಪರೇಟ್ ಫಾಜ್ (ಸಮಶೀತೋಷ್ಣ ಫಾಜ್)ಗಳು ಸ್ವಲ್ಪ ಮೃದುವಾಗಿರುತ್ತವೆ; ಅವು ಜೀವಾಣುಗಳನ್ನು ಬೇಗ ನಾಶಪಡಿಸುವುದಿಲ್ಲ. ಆದರೆ ಅವು ಜೀವಾಣುವಿನಲ್ಲಿ ಅನೇಕ ಪೀಳಿಗೆಯುವರೆಗೆ ಸುಪ್ತ ರೀತಿಯಲ್ಲಿ ಇರುತ್ತವೆ. ಪುನಃ ಜಾಗೃತವಾಗಿ ಜೀವಾಣುವಿನ ಕೋಶವನ್ನು ನಾಶಪಡಿಸಿ ತನ್ನ ಸಂತಾನವನ್ನು ಹೆಚ್ಚಿಸಿಕೊಂಡು ಹೊರಗೆ ಬರುತ್ತವೆ.

ವಾಸ್ತವದಲ್ಲಿ ಫಾಜ್ ಒಂದು ರೀತಿಯ ವಿಷಾಣು (ವೈರಸ್) ಆಗಿದೆ. ೧೮೮೫-೯೮ ರ ನಡುವೆ ವಿಷಾಣು (ವೈರಸ್)ವನ್ನು ಕಂಡು ಹಿಡಿಯಲಾಯಿತು. ಇವುಗಳು ಗಿಡ-ಮರಗಳು ಮತ್ತು ಪ್ರಾಣಿಗಳಲ್ಲಿ ವಿವಿಧ ರೀತಿಯ ರೋಗಗಳನ್ನು ಉಂಟು ಮಾಡುತ್ತವೆ. [illegible] ಮತ್ತು ಜಂತುಗಳಲ್ಲಿ ವಿಷಾಣುಗಳು ಪತ್ತೆಯಾದ ನಂತರ ಫಾಜ್‌ನ ಪತ್ತೆಯಾಯಿತು.

ಜೀವಾಣುವಿನ ಸಮೂಹವು ಆಗಾಗ್ಗೆ ಕರಗಿ ನಷ್ಟವಾಗುತ್ತದೆ. ಮತ್ತು ಈ ರೀತಿಯಾಗಿ ಉತ್ಪನ್ನವಾಗುವ ಬಿಳಿಯ ಬಣ್ಣದ ಪದಾರ್ಥವು ಆರೋಗ್ಯವಂತ ಜೀವಾಣುಗಳನ್ನು ನಷ್ಟಪಡಿಸಬಲ್ಲದು ಎಂಬುವನ್ನು ಟಾರ್ಟರವರು ಕಂಡುಕೊಂಡರು. ಟಾರ್ಟ ಅವರು ೧೯೧೦ ರಲ್ಲಿ ಲಂಡನ್ನಿನ ಬ್ರೌನ್ ಇನ್‌ಸ್ಟಿಟ್ಯೂಟಿನಲ್ಲಿ ಡಾಕ್ಟರರಾಗಿದ್ದರು.

ಜೀವಾಣುವಿನ ಈ ರೋಗದ ಅನೇಕ ಗುಣಗಳು ವಿಷಾಣುವಿನಂತೆಯೇ ಇದ್ದವೆಂಬುದನ್ನು ತಿಳಿದುಕೊಳ್ಳಲಾಯಿತು. ಅಂದರೆ ಕೇವಲ ಜೀವಂತ ಜೀವಾಣುಗಳನ್ನು ನಾಶಪಡಿಸುವ ಯೋಗ್ಯತೆ, ಬಿಸಿ ಮಾಡಿದಲ್ಲಿ ನಾಶವಾಗುವಿಕೆ, ಅತ್ಯಂತ ಚಿಕ್ಕ ರಂಧ್ರಗಳ ಮೂಲಕ ಹಾದು ಹೋಗುವಿಕೆ ಮತ್ತು ಸೂಕ್ಷ್ಮದರ್ಶಕಕ್ಕೂ ಗೋಚರಿಸದಿರುವಿಕೆ, ಜೀವಾಣುಗಳು ನಾಶ ಹೊಂದುವ ಕ್ರಿಯೆಯ ಈ ರೀತಿಯ ವರ್ಣನೆಯನ್ನು ೧೯೨೦ ರಲ್ಲಿ ದ. ಹೆರೇಲ್ ಎಂಬುವವರು ಮಾಡಿದರು. ೧೯೨೫ ರ ನಂತರ ಈ ವಿಷಯದಲ್ಲಿ ಬಹಳ ಕೆಲಸ ನಡೆಯಿತು. ಮತ್ತು ಫಾಜ್‌ನ ವಿಷಯದಲ್ಲಿ ನಮ್ಮ ಜ್ಞಾನವು ವಿಸ್ತಾರವಾಗುತ್ತಾ ಹೋಯಿತು. ೧೯೬೩ ರಲ್ಲಿ ಸೈಫರ್‌ಮನ್ ಸಾಯನೋಫಾಜ್‌ನ್ನು ಕಂಡು ಹಿಡಿದನು.

ಪ್ರಜನನ ಶಾಸ್ತ್ರಗಳು ಫಾಜ್‌ನ ಸಂಬಂಧದಲ್ಲಿ ಹೆಚ್ಚಿನ ಕೆಲಸವನ್ನು ಮಾಡಿ ವಿಜ್ಞಾನದಲ್ಲಿ "ಫಾಜ್ ಜೆನಟಿಕ್ಸ್" (ಫಾಜ್ ಪ್ರಜನನ ಶಾಸ್ತ್ರ) ಎಂಬ ಹೊಸ ಶಾಖೆಯನ್ನು ತೆರೆದರು. ಜೀವಿಗಳ ಆನುವಂಶಿಕ ಕ್ರಿಯೆಯನ್ನು ಸೂಕ್ಷ್ಮಾತಿಸೂಕ್ಷ್ಮ ಮಟ್ಟದಲ್ಲಿ ತಿಳಿದುಕೊಳ್ಳಲು ಈ ರೀತಿಯ ಕೆಲಸಗಳು ಬಹಳ ಸಹಾಯಕವಾಗಿವೆ.

ಹೆಚ್ಚಿನ ವಿಸ್ತಾರದಲ್ಲಿ ತೊಡಗದೆ ನಾವು 'ಟ್ರಾನ್ಸ್‌ಡಕ್ಷನ್' ಎಂಬುವ ಕ್ರಿಯೆಯನ್ನು ನೋಡೋಣ. 'ಯು' ನಾಳದ ಪ್ರಯೋಗವು ಬಹಳ ಸರಳವಾಗಿದೆ. ' ನಾಳದ ಮಧ್ಯದಲ್ಲಿ ಜೀವಾಣುಗಳು ಆ ಕಡೆ ಈ ಕಡೆ ಹೋಗದಂತೆ ಸಣ್ಣ ರಂಧ್ರಗಳಿರುವ ಜಾಲರಿಯನ್ನು ಇಡಲಾಗುತ್ತದೆ. ನಾಳದ ಎರಡು ಭುಜಗಳಲ್ಲಿಯೂ ಎರಡು ಭಿನ್ನ ರೀತಿಯ ಜೀವಾಣುಗಳನ್ನು ಇಡಲಾಗುತ್ತದೆ. ಒಂದು ಕಡೆಯ



ಜಾಲರಿ ಪ್ರಯೋಗ


ಭುಂಜದಲ್ಲಿ ಕೆಲವು ಫಾಜ್‌ಗಳನ್ನು ಹಾಕಬೇಕು. ಸ್ವಲ್ಪ ಸಮಯದ ನಂತರ ನೋಡಿದರೆ ಇನ್ನೊಂದು ಕಡೆಯ ಭುಂಜದಲ್ಲಿರುವ ಜೀವಾಣುಗಳಲ್ಲಿ ಮೊದಲನೆ ತರಹದ ಜೀವಾಣುವಿನ ಗುಣಗಳು ಬಂದಿರುತ್ತವೆ. (ಚಿ. ೪)

ಈಗ ಜೀವಾಣುವಿನ ಯಾವುದಾದರೂ ಗುಣದ ಕಲ್ಪನೆಯನ್ನು ನೋಡೋಣ: ಅಂದರೆ ಸ್ಟ್ರೆಪ್ಟೋಮೈಸಿನ್ ಔಷಧಿಯಿಂದ ಸಾಯುವಂತಹ ಗುಣ. ಮೊದಲ ಭುಂಜದಲ್ಲಿ ಸ್ಟ್ರೆಪ್ಟೋಮೈಸಿನ್ನಿಂದ ಸಾಯಲಾರದ ಜೀವಾಣುಗಳು, ಆದರೆ ಇನ್ನೊಂದು ಕಡೆಯಲ್ಲಿ ಸಾಯುವಂತಹ ಜೀವಾಣುಗಳು ಇದ್ದವು. ಆದರೆ ಫಾಜನ್ನು ಸ್ವಲ್ಪ ಹೊತ್ತಿನವರೆಗೆ ಮೊದಲ ಭುಂಜದಲ್ಲಿ ಇಟ್ಟು ನೋಡಿದಾಗ ಎರಡನೆ ಕಡೆಯ ಜೀವಾಣುಗಳೂ ಕೂಡ ಸ್ಟ್ರೆಪ್ಟೋಮೈಸಿನ್ನಿಂದ ಸಾಯಲಾರದವು. ಇದು ಹೇಗಾಯಿತು? ಜಾಲರಿಯಲ್ಲಿ ಫಾಜ್ ಮಾತ್ರ ಹಾದು ಹೋಗಬಲ್ಲದು ಆದ್ದರಿಂದ ಗುಣಗಳ ಸ್ಥಳಾಂತರವನ್ನು ಫಾಜ್‌ಗಳೇ ಮಾಡುತ್ತವೆ.


ಈ ಗಹನವಾದ ಕ್ರಿಯೆಯನ್ನು ಹೀಗೆ ತಿಳಿದುಕೊಳ್ಳಬಹುದು.

ಫಾಜ್ ಜೀವಾಣುಗಳಲ್ಲಿ ಪ್ರವೇಶಿಸಿ ಹೊಸ ಫಾಜ್‌ಗಳನ್ನುಂಟುಮಾಡುತ್ತವೆ. ಈ ಸಮಯದಲ್ಲಿ ಜೀವಾಣುವಿನ ಶರೀರದ ಕೆಲವು ವಸ್ತುಗಳು ಮೋಸದಿಂದ ಫಾಜ್‌ಗಳಲ್ಲಿ ಬಂಧಿಸಲ್ಪಡುತ್ತವೆ. ಇಂಥ ಫಾಜ್ ಜಾಲರಿಯಿಂದ ಹಾದು ಇನ್ನೊಂದು ವಿಧದ ಜೀವಾಣುಗಳಲ್ಲಿ ಪ್ರವೇಶಿಸಿದಾಗ ಮೊದಲನೇ ರೀತಿಯ ಜೀವಾಣುವಿನ ಗುಣಗಳನ್ನು ಅದಕ್ಕೆ ಕೊಡುತ್ತವೆ.

ಈ ಕ್ರಿಯೆಯ ಅನೇಕ ಉಪಯೋಗಗಳನ್ನು ಯೋಚಿಸಲಾಗಿದೆ. ದ್ವಿದಳ ಧಾನ್ಯಗಳಲ್ಲಿ ಪ್ರೋಟೀನ್ ಹೆಚ್ಚಾಗಿರುತ್ತದೆ. ಏಕೆಂದರೆ ಅವುಗಳು ಮೂಲದಲ್ಲಿ ಜೀವಾಣುಗಳು ವಾಸಿಸುತ್ತವೆ. ಅವು ವಾತಾವರಣದಲ್ಲಿನ ಸಾರಜನಕವನ್ನು (ಚಿ. ೫) ಎಳೆದುಕೊಂಡು ಗಿಡಗಳಿಗೆ ಕೊಡುತ್ತವೆ. ಅಕ್ಕಿ, ಗೋದಿ, ಮೆಕ್ಕೆ ಜೋಳಗಳ ಒಂಡಗಳಲ್ಲಿ ನೈಟ್ರೋಜನ್ ಕೊಡುವಂತಹ ಜೀವಾಣುಗಳಿರುವುದಿಲ್ಲ ಆದ್ದರಿಂದ ಅವುಗಳ



೫) ಫಾಜದ ಜೀವನವೃತ್ತ ೩೦ ನಿಮಿಷಗಳಲ್ಲಿ ನಡೆಯುತ್ತದೆ



೬) ಟೆಂಪರೇಟ ಫಾಜ

ಕಾಳುಗಳಲ್ಲಿ ಪ್ರೋಟೀನ್ ಕಡಿಮೆ ಇರುತ್ತದೆ, ಮತ್ತು ಯೂರಿಯಾ ಗೊಬ್ಬರವನ್ನು ಅವುಗಳಿಗೆ ಕೊಡಬೇಕಾಗುತ್ತದೆ. ಒಂದು ವೇಳೆ ಫಾಜ್ ಯಾವುದಾದರೂ ಜೀವಾಣುವಿನಿಂದ ನೈಟ್ರೋಜನನ್ನು ಶೇಖರಿಸುವ ಗುಣವನ್ನು ಈ ಗಿಡಗಳ ಕೋಶದಲ್ಲಿ ತಂದು ಬಿಟ್ಟರೆ ಎಷ್ಟು ಚೆನ್ನಾಗಿರುತ್ತದೆ! ಆಗ ಈ ಗಿಡಗಳು ತಮ್ಮ ನೈಟ್ರೋಜನ್ನಿನ ಅವಶ್ಯಕತೆಯನ್ನು ಗಾಳಿಯಿಂದ ನೇರವಾಗಿ ತಾವೇ ಪೂರ್ಣಗೊಳಿಸಿಕೊಳ್ಳಬಹುದು. ಹಾಗಾದುದರಿಂದ ಈ ಗಿಡಗಳಿಗೆ ಯೂರಿಯಾ ಗೊಬ್ಬರವನ್ನು ಕೊಡುವ ಅವಶ್ಯಕತೆಯೇ ಇಲ್ಲದಂತಾಗುತ್ತದೆ. (ಚಿ. ೬) ಹಾಗಾದರೆ ಫಾಜ್‌ನ ಮೂಲಕ ಬುದ್ಧಿವಂತ ಮನುಷ್ಯರ ಬುದ್ಧಿವಂತಿಕೆಯ ಗುಣವನ್ನು ಯಾರಾದರೂ ಬುದ್ಧಿಹೀನನಲ್ಲಿ ಪ್ರಯೋಗಿಸುವ ಪ್ರಯತ್ನ ಮಾಡಿದರೆ ಅದು ಸಫಲವಾಗಬಹುದೆ? ಇದನ್ನು ಈಗ ಪ್ರಶ್ನೆಯ ರೂಪದಲ್ಲಿಯೇ ಬಿಡುವುದು ಸೂಕ್ತವಾಗಿದೆ. ★

ಪರ್ವತಾರೋಹಿಣಿ 'ಮಿತ್ಸಾ'

ಸ್ವಿಜರ್ಲೆಂಡಿನ ಮ್ಯಾಟರ್ ಹಾರ್ನ್ ಶಿಖರ ಪರ್ವತಾರೋಹಿಗಳ ಪ್ರಿಯ ಶಿಖರ. ಆದರೆ ೨೨ ವರ್ಷಗಳ ಹಿಂದೆ ಒಂದು ಬೆಕ್ಕು-ಮಿತ್ಸಾ-ಇದನ್ನೇರಿ ಜಗತ್ಪ್ರಸಿದ್ಧಿ ಪಡೆಯಿತು.

ಪರ್ವತದ ಬುಡದಲ್ಲಿದ್ದ ಒಂದು ಹೋಟೆಲಿನ ಮಾಲೀಕನಿಗೆ ಸೇರಿದ ಈ ಬೆಕ್ಕು, ಹೋಟೆಲಿನಿಂದ ಹೊರಟು ಪರ್ವತಾರೋಹಣ ಮಾಡುತ್ತಿದ್ದ ಸಾಹಸಿಗಳ ಅವರ ಮಾರ್ಗದರ್ಶಕರ ಆಗಮನ ನಿರ್ಗಮನಗಳನ್ನು ಕುತೂಹಲದಿಂದ ಗಮನಿಸುತ್ತಲೇ ಇತ್ತು.

ಒಂದು ದಿನ ಬೆಳಗ್ಗೆ ಇವರೆಲ್ಲ ಎತ್ತ ಹೋಗುತ್ತಿದ್ದಾರೆಂದು ಕಂಡುಹಿಡಿಯುವ ಹಂಬಲ ತಾಳಲಾರದೆ ಮಿತ್ಸಾ ಮಾರ್ಗದರ್ಶಕನ ಹಿಂದೆಯೇ ಹೊರಟಳು. ಸ್ವಲ್ಪ ಹೊತ್ತಿನಲ್ಲೇ ಅವಳು ಹಿಂದೆಬಿದ್ದಳು. ಆದರೆ ಅಂದು ರಾತ್ರಿ ಸಮುದ್ರ ಮಟ್ಟದಿಂದ ೧೨,೫೦೦ ಅಡಿ ಎತ್ತರದ ಮೇಲಿರುವ ವಿಶ್ರಾಂತಿ ಸ್ಥಾನವಾದ ಸಾಲ್ವೇ ಗುಡಿಸಲಿನಲ್ಲಿ ಮಿತ್ಸಾಳನ್ನು ಕಂಡು ಗುಡಿಸಲ ಕಾವಲುಗಾರನಿಗೆ ಸೋಜಿಗವಾಗಿ ರಾತ್ರಿ ಮಿತ್ಸಾಳಿಗೆ ಆತ ಆಶ್ರಯವಿತ್ತ. ಆದರೆ ನಸುಕಿನಲ್ಲೇ ಅವಳು ಕಣ್ಮರೆಯಾಗಿದ್ದಳು. ಅಂದು ಅವಳು ಒಬ್ಬಳೇ ಮೇಲೇರುತ್ತ ರಾತ್ರಿಯನ್ನು ಶಿಖರದ ಬದಿಗಿದ್ದ ಒಂದು ಗುಹೆಯಲ್ಲಿ ಕಳೆದಳು.

ಮರುದಿನ ಕೆಲ ಇಟಾಲಿಯನ್ ಆರೋಹಿಗಳು ಮಿತ್ಸಾಳನ್ನು ದಾರಿಯಲ್ಲಿ ಕಂಡರು. ಇದೆಲ್ಲಿ ಶಿಖರ ತಲುಪಬಲ್ಲದು ಎಂದು ಅವರು ಬೆಕ್ಕನ್ನು ದಾಟಿ ಹೋದರು. ಆದರೆ ಕೆಲ ಗಂಟೆಗಳ ನಂತರ ಅವರು ೧೪,೭೮೦ ಅಡಿ ಎತ್ತರದ ಮ್ಯಾಟರ್ ಹಾರ್ನ್ ಶಿಖರದ ನೆತ್ತಿಯಲ್ಲಿ ನಿಂತಿದ್ದಾಗ ಮಿತ್ಸಾ ಅವರಿದ್ದಲ್ಲಿಗೆ ಬಂದು ಮ್ಯಾಂಗುಟ್ಟತೊಡಗಿದಳು.

ಶಿಖರವನ್ನೇರಿದ ಮೊದಲನೇ ಬೆಕ್ಕಿಗೆ ಅವರು ರಾಜಭೋಗವನ್ನಿತ್ತರು!

ಇದೆಂಥ ಅನಾಸಕ್ತಿ !

ಟೇಕಲ ಕೃಷ್ಣಮೂರ್ತಿ

ಎಂಥ ಕೃತಘ್ನರು ನೀವು' ಎಂದು ಆಂಗ್ಲ ಮಹಿಳೆಯೊರ್ವಳು ನನಗೆ ಛೀಮಾರಿ ಹಾಕಿದರೂ ನಾನು ತೆಪ್ಪಗಿರಬೇಕಾಯಿತು. ೧೯೬೪ರಲ್ಲಿ ನನಗೆ ಬಂದ ಅನುಭವ ಇದು. ಮದ್ರಾಸ ರಾಜ್ಯದ ರೆಡ್‌ಕ್ರಾಸ್ ಸಂಸ್ಥೆಯ ಕಾರ್ಯದರ್ಶಿ ಮಿಸ್ ಸೈಮನ್ ನನಗೆ ಪರಿಚಿತರು. ವಿಶ್ವವಿಖ್ಯಾತ ಹಂಪಿಯ ಐತಿಹಾಸಿಕ ಅವಶೇಷಗಳನ್ನು ನೋಡಬಯಸುವದಾಗಿ, ಚರಿತ್ರೆ ವಿಷಯದಲ್ಲಿ ಆಸಕ್ತಿ ಇದ್ದ ಆಕೆ ನನಗೆ ಬರೆದು ತಿಳಿಸಿದಾಗ ನಾನು ತುಂಬಾ ಸಂತೋಷಪಟ್ಟೆ. ನಮ್ಮ ದೇಶದ ಐತಿಹಾಸಿಕ ವೈಭವವನ್ನು ಈ ವಿದೇಶೀ ಮಹಿಳೆಗೆ ತೋರಿಸುವ ಸದವಕಾಶ ನನಗೆ ಲಭಿಸಿತೆಂದು ಅಭಿಮಾನ ಎನಿಸಿದ್ದಿತು. ಆಕೆಯ ಆಸಕ್ತಿಯ ವಿಷಯ ಚರಿತ್ರೆ ಎಂಬುದೂ ನನಗೆ ತಿಳಿದಿತ್ತು.

ನಾನೂ ಆಕೆಯೂ ಬಳ್ಳಾರಿಯಿಂದ ಕಾರಿನಲ್ಲಿ ಪ್ರಯಾಣಿಸಿ ಹಂಪಿ ಸೇರಿದೆವು. ವಿಜಯನಗರದ ಇತಿಹಾಸವನ್ನು ನಾನು ಆಕೆಗೆ ಹೇಳಲು ಉಪಕ್ರಮಿಸಿದೆ. ಸಿವೆಲ್‌ರ "ಮರೆತು ಹೋದ ಸಾಮ್ರಾಜ್ಯ" ಗ್ರಂಥವನ್ನು ತಾನು ಓದಿಕೊಂಡಿರುವದಾಗಿ ಆಕೆ ಹೇಳಿದಾಗ ನನ್ನ ಕೆಲಸ ಅರ್ಧ ಸುಲಭವಾಯಿತು ಅಂದುಕೊಂಡೆ. ಅವಶೇಷಗಳನ್ನು ಒಂದೊಂದಾಗಿ ಸಂದರ್ಶಿಸಲಾರಂಭಿಸಿದೆವು. ಆ ಭವ್ಯ ದಿವ್ಯ ಅವಶೇಷಗಳನ್ನು ಆಸಕ್ತಿಯಿಂದ ವೀಕ್ಷಿಸುತ್ತ, ಆಕೆ ಹೊರಡಿಸುತ್ತಿದ್ದ, "ಅದ್ಭುತ, ಆಶ್ಚರ್ಯಕರ, ಅಪ್ರತಿಮ, ಅವರ್ಣನೀಯ," ಎಂಬ ಭಾವೋದ್ವೇಗದ ಉದ್ಗಾರಗಳು ನನ್ನನ್ನು ಪುಲಕಿತಗೊಳಿಸುತ್ತಿದ್ದವು.

ದೇವಾಲಯಗಳ ಗೋಡೆಗಳ ಮೇಲೆ ಕುಸುರು ಕುಸುರಾಗಿ ಕೆತ್ತಿದ ಆನೆ ಸಾಲು, ಕುದುರೆ ಸಾಲುಗಳ ಫೋಟೋಗಳನ್ನು ಆಕೆ ತನ್ನ ಕ್ಯಾಮರಾದಲ್ಲಿ ಹಿಡಿದಿಡುವ ಕಾರ್ಯದಲ್ಲಿ ನಿರತಳಾಗಿದ್ದಳು. ಆಗಾಗ ಕಲಾಪೂರ್ಣ ವಿಗ್ರಹಗಳ ಶಿಲ್ಪಶೈಲಿಯನ್ನು ಆಕೆ ಶಾಸ್ತ್ರೋಕ್ತವಾಗಿ ವಿವರಿಸುತ್ತಿದ್ದಾಗ, ನಾವು ಕನ್ನಡಿಗರು ಎಂಬುದನ್ನು ಹೆಮ್ಮೆ ಪಡಿಸುತ್ತಿರುವಂತೆ ಅನಿಸಿತು.

ಉಗ್ರ ನರಸಿಂಹನ ವಿಗ್ರಹದೆದುರು ನಾನು ಬಂದಾಗ ಆ ಭವ್ಯ ಶಿಲ್ಪ ಕಂಡು ಇಬ್ಬರೂ ಆಶ್ಚರ್ಯಭರಿತರಾಗಿ ಮೂಕರಂತೆ ಕೆಲ ನಿಮಿಷ ನಿಂತೆವು. "ಈ ಅದ್ಭುತ ವಿಗ್ರಹ ಕೆತ್ತಿದ ಶಿಲ್ಪಿ ಯಾರು? ನಾನು ತಿಳಿಯಬೇಕು," ಎಂದು ಆಕೆ ತನ್ನ ಡೈರಿ ಹೊರ ತೆಗೆಯುತ್ತಿದ್ದಂತೆ, "ನನಗೆ ತಿಳಿಯದು," ಎಂದು ಅವಳ ಉತ್ಸಾಹಕ್ಕೆ ನಾನು ತಣ್ಣೀರೆರಚಿದಂತೆ ಹೇಳಿದೆ.

"ಈ ವಿಷಯ ತಿಳಿದವರು ಇಲ್ಲಿ ಯಾರಾದರೂ ಇದ್ದರೆ ಕೇಳಿ ಅರಿತುಕೊಳ್ಳೋಣ ನಡೆಯಿರಿ," ಎಂದು ಆಕೆ ಆಗ್ರಹಪಡಿಸಲಾಗಿ

"ಇಲ್ಲಿ ಯಾರಿಗೂ ಈ ವಿವರ ಗೊತ್ತಿಲ್ಲ." ಎಂದು ನಾನು ಉತ್ತರಿಸಿದಾಗ ಆಕೆಗೆ ಆಶ್ಚರ್ಯವಾಯಿತು.

"ಈ ಕುರಿತು ಯಾರೂ ಸಂಶೋಧನೆ ಮಾಡಿಲ್ಲವೆ ?"

"ಇಲ್ಲ."

ಆಕೆ ನನ್ನನ್ನು ಕೆಕ್ಕರುಗಣ್ಣಿನಿಂದ ನೋಡುತ್ತ, "ನೀವೆಂಥ ಕೃತಘ್ನರು ! ಇಂಥ ಅದ್ಭುತ ಬೇರೆ ಇನ್ನಾವುದೋ ದೇಶದಲ್ಲಿ ಇದ್ದಿದ್ದರೆ ಅಲ್ಲಿಯ ವಿದ್ಯಾರ್ಥಿ ತನ್ನ ಜೀವ-ಮಾನವನ್ನೆಲ್ಲ ಇದರ ಸಂಶೋಧನದಲ್ಲಿಯೆ ಕಳೆದು ತನ್ನ ಕೀರ್ತಿ ಸ್ಥಾಪಿಸಿ, ಈ ಕಲಾವಿದನಿಗೆ ತನ್ನ ಕೃತಜ್ಞತೆ ಸಲ್ಲಿಸುತ್ತಿದ್ದ. ಇದೆಂಥ ಅನ್ಯಾಯ !" ಎಂದು ಗುಡುಗಿದಳು.

ಇಷ್ಟು ಆಡಿಕೊಂಡೂ ನಾನು ತೆಪ್ಪಗಿರಬೇಕಾಯಿತು. ನಮ್ಮ ಚರಿತ್ರೆಯನ್ನು ಕೂಲಂಕಷವಾಗಿ ಅರಿತುಕೊಳ್ಳದಿರುವ ನಾವು ಆಕೆಯ ದೃಷ್ಟಿಯಲ್ಲಿ ಕೃತಘ್ನರಾದುದರಲ್ಲಿ ಅಚ್ಚರಿಯೇನಲ್ಲ. ನಮ್ಮ ಸ್ವದೇಶಾಭಿಮಾನ ಈ ಮಟ್ಟದ್ದು !

ಪೂರ್ವಜರ ವಿಷಯ ನಾವು ತಿಳಿದುಕೊಳ್ಳಲಿಲ್ಲ; ಇಷ್ಟೇ ಅಲ್ಲ, ಅವರ ವಿಚಾರ ಮರೆತು ಬಿಡುವುದೂ ವಾಡಿಕೆಯಾಗಿ ಬಿಟ್ಟಿದೆ ನಮಗೆ, ಒಂದು ವಿಶ್ವವಿಖ್ಯಾತ ಸಾಮ್ರಾಜ್ಯದ ವೈಭವವನ್ನೇ ಮರೆತ ಕೀರ್ತಿ ನಮ್ಮದಾಗಿದೆ. ಇದನ್ನು ಗಮನಿಸಿಯೆ ಸಿವೆಲ್ Forgotten Empire ಗ್ರಂಥವನ್ನು ನಮಗೆ ನೀಡಿದ.

ಹಂಪಿಯಲ್ಲಿ ಗಾಣಗಿತ್ತಿ ದೇವಾಲಯ ವಿಜಯವಿಠಲರಾಯನ ದೇವಾಲಯದ ಹತ್ತಿರದಲ್ಲಿಯೆ ನಿಂತಿದೆ ಆದರೆ ಈ ದೇವಾಲಯ ಕಟ್ಟಿಸಿದ ಗಾಣಗಿತ್ತಿ ಯಾರು ? ಆಕೆಯ ಉದ್ದೇಶವೇನಿತ್ತು ? ಎಂಬುದು ಯಾವುದೂ ನಮಗೆ ತಿಳಿಯದು. ವಿಜಯವಿಠಲನ ದೇವಾಲಯದ ಸಮೀಪದಲ್ಲಿಯೆ ಈ ಗಾಣಗಿತ್ತಿ ದೇವಾಲಯ ನಿರ್ಮಾಣವಾಗಿದೆ ಎಂದರೆ ಆ ಗಾಣಗಿತ್ತಿ ಸಾಕಷ್ಟು ಪ್ರಭಾವಶಾಲಿನಿಯೆ ಆಗಿರಬೇಕು. ಆದರೆ ನಮಗೆ ಯಾವ ವಿಚಾರವೂ ತಿಳಿದಿಲ್ಲ.

ಅಷ್ಟು ಹಿಂದಿನ ಚರಿತ್ರೆ ಬೇಡ, ಹೋಗಲಿ ಬಿಡಿ. ಶಿವಾಜಿಯ ಕಾಲದಲ್ಲಿ ಬಳ್ಳಾರಿಯನ್ನು ಮುತ್ತಿದ ಮಹಾರಾಷ್ಟ್ರ ಸೇನೆಯನ್ನು ಎದುರಿಸಲು ವೀರ ನಾಯಕಿಯೋರ್ವಳು ಬಹಳವಾಗಿ ಹೋರಾಡಿದಳಂತೆ. ಶತ್ರುಗಳು ಕೂಡ ಈಕೆಯ ಹೋರಾಟವನ್ನು ಪ್ರಶಂಸಿಸಿದರಂತೆ. ಆದರೆ ಆಕೆಯ ಚರಿತ್ರೆಯನ್ನೂ ನಾವು ಮರೆತು ಬಿಟ್ಟಿದ್ದೇವೆ.

ಬಳ್ಳಾರಿಯಲ್ಲಿ ಈ ಹಿಂದೆ ನಗರ ಸಭೆಯ ಕಚೇರಿಯಿದ್ದ ಒಂದು ಭವನ ಈಗ ಶಿಥಿಲ ಸ್ಥಿತಿಯಲ್ಲಿದೆ. 'ಚಂದಮ್ಮ ಮಹಲ್' ಎಂಬುದು ಈ ಭವನದ ಹೆಸರು. ಆದರೆ ಈ ಚಂದಮ್ಮ ಯಾರು ? ಈ ಭವನಕ್ಕೆ ಆಕೆಯ ಹೆಸರು ಇರಲು ಕಾರಣವೇನು ? ಬಳ್ಳಾರಿಯಲ್ಲಿ ಆಕೆಯ ಪ್ರಭಾವವೇನಿತ್ತು ? ಯಾವುದೂ ನಮಗೆ ತಿಳಿದಿಲ್ಲ. ಕೇವಲ ಎರಡು ಶತಕದ ಒಳಗೇ ನಡೆದ ಈ ಘಟನೆಯ ವಿವರಗಳು ನಮ್ಮಂಥ ವಯಸ್ಕರಿಗೇ ಪರಿಚಿತವಿಲ್ಲ.

ಉಗ್ರ ನರಸಿಂಹ



ಈ ವಿಷಯ ವಿವರಿಸುವ ಫಲಕ ಹಾಕುವ ಶ್ರಮ ಕೂಡ ತೆಗೆದುಕೊಳ್ಳಲಿಲ್ಲ. ಈ ಭವನ ಮಣ್ಣುಪಾಲಾದಾಗ ಚಂದಪ್ಪನ ಹೆಸರು ಇತಿಹಾಸಕ್ಕೆ ಸೇರುತ್ತದೆ. ಕ್ರಮೇಣ ನಾವೂ ಮರೆತುಬಿಡುತ್ತೇವೆ.

‘ಅಸಾಧ್ಯ’ ಶಬ್ದವೇ ತನ್ನ ಶಬ್ದಕೋಶದಲ್ಲಿ ಇಲ್ಲ ಎಂದು ಮೆರೆದಾಡಿದ ನೆಪೋಲಿಯನ್ನನನ್ನು ಪರಾಭವಗೊಳಿಸಿ ಮಣ್ಣು ಮುಕ್ಕಿಸಿದ ಆರ್ಥರ್ ವೆಲ್ಲೆಸ್ಲಿ– ಡ್ಯೂಕ್ ಆಫ್ ವೆಲ್ಲಿಂಗ್ಟನ್–ಬಳ್ಳಾರಿಯಲ್ಲಿದ್ದಾಗ ಉಪಯೋಗಿಸುತ್ತಿದ್ದ ಮಂಟಪವನ್ನು ಗುರುತಿಸಿ, ಗೆಜೆಟಿಯರನಲ್ಲಿ ಬಳ್ಳಾರಿ ಪಟ್ಟಣದ ವರ್ಣನೆಯಲ್ಲಿ, ಕಾಣಿಸಿದ್ದಾರೆ. ಈ ಮಂಟಪವೂ ಈಗ ಶಿಥಿಲವಾಗುತ್ತಿದೆ. ಆದರೆ ಡ್ಯೂಕ್ ಆಫ್ ವೆಲ್ಲಿಂಗ್ಟನ್ ವಿದೇಶಿಯನಾದರೂ ವಿಶ್ವವಿಖ್ಯಾತ ವೀರ. ಆ ಸಾಹಸಿಯು ಇದ್ದ ಮಂಟಪವನ್ನು ಕಾಪಾಡಿಕೊಂಡು ಬಂದರೆ ನಮಗೇ ಘನತೆಯಲ್ಲವೆ? ಇದನ್ನೂ ಮರೆತುಬಿಡುತ್ತಿದ್ದೇವೆ. ಎಂಥ ಅನಾಸಕ್ತಿ ನಮ್ಮದು! ನಮಗೇನು, ನಮ್ಮವರೂ ಅಷ್ಟೇ. ವಿದೇಶೀಯರೂ ಅಷ್ಟೆ!

ತೀರ ಇತ್ತೀಚಿನ ಉದಾಹರಣೆ. ಬಳ್ಳಾರಿಯಲ್ಲಿ ದೊಡ್ಡ ಆಸ್ಪತ್ರೆ ಕಟ್ಟಿಸಲು ಸ್ವಂತ ಜಾಗ ಕೊಟ್ಟು ಪರಿಶ್ರಮಿಸಿದವರು ಶ್ರೀ ಸಭಾಪತಿ ಮೊದಲಿಯಾರ. ಅಂತೇ ಆ ಆಸ್ಪತ್ರೆಗೆ ಅವರ ಹೆಸರಿಡಲಾಯಿತು. ಈ ಸಭಾಪತಿ ಉಜ್ವಲ ದೇಶಭಕ್ತ. ಅಖಿಲ ಭಾರತ ಕಾಂಗ್ರೆಸ್ ಸಂಸ್ಥಾಪಕರಲ್ಲಿ ಈತ ಒಬ್ಬ. ಆತ ಕಟ್ಟಿಸಿದ್ದ ಆಸ್ಪತ್ರೆಯನ್ನು ಸಭಾಪತಿ ಮೊದಲಿಯಾರ ಆಸ್ಪತ್ರೆ ಎಂದೇ ಕರೆಯುತ್ತಿದ್ದರು. ಕಾಲಾಂತರದಲ್ಲಿ ಆ ಫಲಕ ಮಾಯವಾಯಿತು. ಸರಿ, ಮೊದಲಿಯಾರ ಆಸ್ಪತ್ರೆ ಹೆಡ್‌ಕ್ವಾರ್ಟರ್ಸ್ ಆಸ್ಪತ್ರೆ ಆಯಿತು. ಸಭಾಪತಿಯ ಹೆಸರನ್ನು ಮರೆತೇಬಿಟ್ಟೆವು.

ಸಭಾಪತಿ ಮೊದಲಿಯಾರರ ವಂಶದವರು ಪ್ರಯತ್ನಶೀಲರು. ಅಧಿಕಾರಿಗಳಲ್ಲಿ ಪ್ರಯತ್ನಿಸಿ ಪುನಃ ಆ ಆಸ್ಪತ್ರೆಗೆ “ಸಭಾಪತಿ ಮೊದಲಿಯಾರ ಆಸ್ಪತ್ರೆ” ಎಂಬ ಫಲಕ ಬರೆಸಿ ಹಾಕಿಸಿದರು. ಆದರೆ ಯಾರೂ ಆ ಫಲಕವನ್ನೇ ಗಮನಿಸುವಂತೆ ಕಾಣುವದಿಲ್ಲ. ಸಭಾಪತಿ ಮೊದಲಿಯಾರರ ಹೆಸರನ್ನೇ ಪೂರ್ತಿ ಮರೆತಂತೆ ಆಗಿದೆ.

ಇನ್ನು ಈ ಆಸ್ಪತ್ರೆಯಲ್ಲಿ ರೋಗಿಗಳಿಗಾಗಿ ಉದಾರಿಗಳು ತಮ್ಮ ಹೆಸರು ಶಾಶ್ವತವಾಗಿರಲೆಂದು ವಾರ್ಡುಗಳನ್ನು ಕಟ್ಟಿಸಿಕೊಟ್ಟರು. ಈಗ ಆ ವಾರ್ಡುಗಳಲ್ಲಿ ರೋಗಿಗಳಿಲ್ಲ. ಕಚೇರಿಗಳು ಬಂದು ನೆಲಸಿವೆ. ವಾರ್ಡುಗಳನ್ನು ಕಟ್ಟಿಸಿಕೊಟ್ಟ ಉದಾರಿಗಳ ಉದ್ದೇಶ ಈಡೇರಿಲ್ಲ. ಜನ ಅವರನ್ನು ಮರೆತುಬಿಟ್ಟಿದ್ದಾರೆ. ಕೇವಲ ಎರಡು ದಶಕಗಳಲ್ಲಿಯೇ ಸಂಭವಿಸಿದ ಘಟನೆ ಇದು.

ಇಂಥ ಉಪಕಾರಗೇಡಿಗಳನ್ನು ಆ ಆಂಗ್ಲ ಮಹಿಳೆ ‘ಕೃತಘ್ನರು’ ಎಂದು ಗೇಲಿಮಾಡಿದ್ದು ಏನೂ ತಪ್ಪಲ್ಲ ಎಂದು ಒಮ್ಮೊಮ್ಮೆ ಮನಸ್ಸಿಗೆ ಹೊಳೆಯದಿರದು.



“ಬನ್ನಿ ನೋಡಿ... ಮಾರ್ಕೂರಿ ಟೆಂ ಕೊಡಲಾ?”

ಡಾ. ವಿ. ಆರ್. ಭಟ್ಟ

ಅದೃಷ್ಟದ ಆಟ

"ಕಾಪಾಡಿರಿ! ನನ್ನ ಮಗುವನ್ನು ಯಾರಾದರೂ ಕಾಪಾಡಿರಿ!"– ಚಿತ್ತೋದ್ರೇಕದಿಂದ ಚೀತ್ಕರಿಸುತ್ತ [illegible] ವಿಮಾನದಲ್ಲಿ [illegible] ಮೊರೆಯಿಡುತ್ತಿದ್ದಳು.

ಡಾಕ್ಟರ್ ನಾಯಕ ತನ್ನ ವಿಚಾರಲಹರಿಯಿಂದ ಫಕ್ಕನೆ ಎಚ್ಚೆತ್ತು ತನ್ನ ಆಸನದಿಂದ ಎದ್ದು ಆ ಹೆಂಗಸಿನತ್ತ ನಡೆದರು. "ನನ್ನ ಮಗುವನ್ನು ಕಾಪಾಡಿರಿ!" ಮತ್ತೊಮ್ಮೆ ಹೇಳಿದಳು ಆ ಹೆಂಗಸು, ತನ್ನ ಮಡಿಲಲ್ಲಿದ್ದ ಎರಡೂವರೆ ವರ್ಷ ಪ್ರಾಯದ ಮಗುವನ್ನು ಅಪ್ಪಿ ಹಿಡಿಯುತ್ತ.

ಮಗು ಶ್ವಾಸಕ್ರಿಯೆಗಾಗಿ ಒದ್ದಾಡುವುದನ್ನು ಡಾಕ್ಟರ್ ನಾಯಕ್ ಮನಗಂಡರು. ಮಗುವಿನ ಮುಖ ನೀಲಿ ಆಗುತ್ತಲಿತ್ತು. ಬಾಯಿಯ ಅಂಚಿನಲ್ಲಿ ಸ್ವಲ್ಪ ನೊರೆಯೂ ಕಾಣುತ್ತಿತ್ತು. ಥಟ್ಟನೆ ಮಗು ಶ್ವಾಸಕ್ಕಾಗಿ ಒದ್ದಾಡುವುದನ್ನು ನಿಲ್ಲಿಸಿತು; ತಟಸ್ಥವಾಯಿತು. "ಅಯ್ಯೋ!" ತಾಯಿಯ ಉದ್ಗಾರ!

*

ಡಾಕ್ಟರ್ ನಾಯಕರಿಗೆ ಫಕ್ಕನೆ ಅದುತನಕ ತಾನೇ ದೇವರಲ್ಲಿ ಪ್ರಾರ್ಥಿಸುತ್ತಿದ್ದುದು ನೆನಪಾಯಿತು. "ದೇವರೇ, ನನ್ನ ತಾಯಿಯನ್ನು ಕಾಪಾಡು!" ಅವರೊಡನೆ ಈ [illegible] ದುಃಸ್ವಪ್ನಸದೃಶ ಸ್ಥಿತಿಯನ್ನು ಪ್ರಾರಂಭಿಸಿದ ಆ ಟೆಲಿಫೋನ್ ಕರೆಯೂ, ಅದರ ಹಿಂದೆ ನ್ಯೂಯಾರ್ಕ್ ರಾಜ್ಯದ ಬಫೆಲೋ ನಗರದಿಂದ ಪ್ರಾರಂಭವಾದ ವಿಮಾನಯಾನವೂ ನೆನಪಾದವು.

ಸಾಯಂಕಾಲ ಆಸ್ಪತ್ರೆಯಿಂದ ದಣಿದು ಮನೆಗೆ ಮರಳಿದ ತರುಣ ಡಾಕ್ಟರ್ ಪಿ. ಡಿ. ಎಲ್. ನಾಯಕರು ಉಪಾಹಾರವನ್ನು ಸೇವಿಸಿದ ಬಳಿಕ ನಸುನಿದ್ದೆಯಲ್ಲಿದ್ದರು. ಟೆಲಿಫೋನ್ ಗಂಟೆಯ ಕರ್ಕಶ ಧ್ವನಿಯು ಅವರನ್ನು ಫಕ್ಕನೆ ಎಚ್ಚರಗೊಳಿಸಿತು. ಕಣ್ತೆರೆದಾಗ ಮಡದಿ ಟೆಲಿಫೋನ್ ಎತ್ತಿ, ಆಲಿಸುತ್ತಿರುವುದು ಕಂಡಿತು. ಅವಳ ಮುಖಭಾವ ಬದಲಿಸಿತು. ಎಚ್ಚೆತ್ತ ಗಂಡನೆಡೆಗೆ ನೋಡಿ ಅವಳು ಕಾತರದಿಂದ ನುಡಿದಳು. "ಇಂಡಿಯಾದಿಂದ!"

ಸಂಪೂರ್ಣ ಎಚ್ಚೆತ್ತ ಡಾಕ್ಟರ್ ನಾಯಕ, "ಏನದು?" ಎಂದರು. "ಇಂಡಿಯಾದಿಂದ ಟೆಲಿಫೋನ್ ಕರೆ" ಎಂದಳು ಮಡದಿ ಇನ್ನೂ ಆತುರದಿಂದ.


ಅವಸರದಿಂದ ಟೆಲಿಫೋನ್ ಕೈಯಲ್ಲಿ ಹಿಡಿದು, ಒಡನೆ ಹೇಳಿದರು, "ಡಾಕ್ಟರ್ ನಾಯಕ ಮಾತನಾಡುವುದು." ಕೆಲ ಸೆಕೆಂಡುಗಳಲ್ಲಿ ಇಂಡಿಯಾದಿಂದ ಬರುವ ಕರೆ ಪ್ರಾರಂಭವಾಯಿತು.

ಬಳಿಯಲ್ಲಿ ಇದ್ದ ಮಡದಿ ಡಾಕ್ಟರರ ಮುಖಚರ್ಯೆ ಗಮನಿಸಿದಳು. ಅವರಾಡಿದ ಕೆಲವೇ ಪದಗಳನ್ನು ಆಲಿಸಿದಳು. "ಏನೋ ತೊಂದರೆಯಿದೆ" ಎಂದು ಅವಳಿಗೆ ಅರಿವಾಯಿತು.

"ಮಮ್ಮಿ!" ಎಂದು ಕರೆಯುತ್ತ ಮೂರೂವರೆ ವರ್ಷದ ಅವರ ಮಗ ಓಡುತ್ತ ಒಳ ಬಂದನು. ತಾಯಿ ಬಾಗಿ, ತನ್ನ ಬೆರಳುಗಳನ್ನು ತುಟಿಗಳಿಗೆ ಅಡ್ಡ ಹಿಡಿದು ಉಸುರಿದಳು, "ಡ್ಯಾಡಿ ಇಂಡಿಯಾಕ್ಕೆ ಮಾತನಾಡುತ್ತಾರೆ.–ಅವರ ಡ್ಯಾಡಿಯೊಡನೆಂದು ತೋರುತ್ತದೆ, ನಾವು ಸುಮ್ಮನಿರುವ!"

ಆದಾಗಲೇ ಅವಳಿಗೆ ತನ್ನ ಗಂಡ ಹೇಳಿದುದು ಕೇಳಿಸಿತು, "ಅಗತ್ಯವಾಗಿ, ನಾವು ಒಡನೆ ಹೊರಡುವೆವು!" ಕರೆ ಮುಗಿಯಿತು.

"ಅಪ್ಪ ಮಾತನಾಡುತ್ತಿದ್ದರು." ಮಡದಿಯ ಇಂಗಿತವರಿತು ಡಾಕ್ಟರ್ ನಾಯಕ ಹೇಳಿದರು. "ಅಮ್ಮನಿಗೆ ಸೌಖ್ಯವಿಲ್ಲ. ಅರ್ಧ ಪ್ರಜ್ಞೆಯಿಲ್ಲದಾರಂತೆ ಆಸ್ಪತ್ರೆಯಲ್ಲಿದ್ದಾರೆ. ನಾವು ಆದಷ್ಟು ಬೇಗನೆ ಹೊರಡಬೇಕೆಂದರು."



ಡಾ. ಪಿ. ವಿ. ಎಲ್ ನಾಯಕ್

"ಏನೆಂದು ವಿವರಿಸಿದರೋ?" ಮಡದಿ ಕೇಳಿದಳು.

"ಐದಾರು ದಿನಗಳ ಹಿಂದೆ ಅಮ್ಮ ಚೆನ್ನಾಗಿದ್ದರಂತೆ, ಸ್ವಲ್ಪ ಜ್ವರ, ತಲೆನೋವು ಕಾಣಿಸಿಕೊಂಡಿತಂತೆ, ಇವು ಸ್ವಲ್ಪ ಹೆಚ್ಚಾದುದರಿಂದ ನಿನ್ನೆ ಆಸ್ಪತ್ರೆಗೆ ಸಾಗಿಸಿದರಂತೆ. ಈಗ ಸ್ಥಿತಿ ವಿಷಮವಾಗಿದೆಯಂತೆ, ಸರಿಯಾಗಿ ಪ್ರಜ್ಞೆಯಿಲ್ಲವಂತೆ. ನಾವು ಆದಷ್ಟು ಬೇಗನೆ ಬರಬೇಕೆಂದಿದ್ದಾರೆ."

ಡಾಕ್ಟರ್ ನಾಯಕ ತುಂಬ ಚಿಂತೆಗೀಡಾದರು. ಬೆಂಗಳೂರಿನಲ್ಲಿರುವ ತಾಯಿಯ ಸ್ಥಿತಿ ಹೇಗಿರುವುದೆಂದು ಅವರಿಗೆ ಖಚಿತವಾಗಿ ತಿಳಿಯಬೇಕಿತ್ತು. ಅದೃಷ್ಟವೆಂಬಂತೆ ಅವರ ತಂದೆ ಚಿಕಿತ್ಸೆ ನಡೆಸುವ ಡಾಕ್ಟರರ ಹೆಸರು ಸೂಚಿಸಿದ್ದರು.

ಅವರು ಟೆಲಿಫೋನ್ ಎಕ್ಸ್‌ಚೇಂಜನ್ನು ಕರೆದು, ಪರಿಸ್ಥಿತಿ ವಿವರಿಸಿ, ಬೆಂಗಳೂರಿನ ಡಾಕ್ಟರರ ಹೆಸರನ್ನು ಸೂಚಿಸಿ, ತನಗೆ ಅವರ ನಂಬರ್ ತಿಳಿದಿಲ್ಲವೆಂದನು. ಆದರೂ ಅವರೊಡನೆ ಜರೂರು ಸಂಪರ್ಕದ ಅವಶ್ಯಕತೆ ತಿಳಿಸಿದರು. ಅಮೇರಿಕದಲ್ಲಿಯ ಟೆಲಿಫೋನ್ ವ್ಯವಸ್ಥೆಯ ಕಾರ್ಯದಕ್ಷತೆಯಿಂದಾಗಿ ಇಪ್ಪತ್ತೇ ನಿಮಿಷಗಳಲ್ಲಿ ಅವರು ಬೆಂಗಳೂರಿನ ಡಾಕ್ಟರ್ ಮ. ರೊಡನೆ ಸಂಭಾಷಿಸಿದರು.

ಡಾಕ್ಟರ್ ಮ. ರವರು ರೋಗಿಯ ರೋಗವನ್ನು ವಿವರಿಸಿದರು. ಸ್ಥಿತಿ ಚಿಂತಾಜನಕವೆಂದರು. ಡಾಕ್ಟರ್ ನಾಯಕರು ತಾಯಿಯನ್ನು ನೋಡಬರುವರೆಂದು ತಿಳಿದು ಸಂತೋಷ ವ್ಯಕ್ತಪಡಿಸಿದರು. ಭಾರತದಲ್ಲಿ ಸಿಗಲು ಕಷ್ಟವಾದ, ಅವಶ್ಯಕವಾದ ಯಾವ ಔಷಧಿಗಳನ್ನು ತಂದರಾದೀತೆಂದೂ ಸೂಚಿಸಿದರು.

ಮಾರುದಿನ ಪ್ರಾತಃಕಾಲವೇ ನಾಯಕ ದಂಪತಿಗಳು ಮಗುವಿನೊಡನೆ ನ್ಯೂಯಾರ್ಕಿಗೆ ತೆರಳಿ, ಬೇಕಾದ ಔಷಧಗಳನ್ನು ಸಂಗ್ರಹಿಸಿದರು. ನಾಯಕ್ ದಂಪತಿಗಳು ಚಿಂತೆಗೀಡಾಗಿದ್ದರು. ಬಹು ದಿನಗಳಿಂದ ಭಾರತಕ್ಕೆ

ಹೋಗುವ ಆತುರದಲ್ಲಿದ್ದ ಅವರ ಮಗನು ಈಗಿನ ಸಂಚಾರದ ಕುರಿತು ಉತ್ತೇಜಿತನಾಗಿದ್ದನು.

ನ್ಯೂಯಾರ್ಕ್ ವಿಮಾನ ನಿಲ್ದಾಣ ತಲುಪಿದಾಗ ಅವರಿಗೆ ಅಸಂತೋಷದ ವರ್ತಮಾನ ಕಾದಿತ್ತು—ಅವರು ಪ್ರವಾಸ ಮಾಡಲಿರುವ ವಿಮಾನ ಯಂತ್ರದೋಷದಿಂದಾಗಿ ನಾಲ್ಕು ಘಂಟೆಗಳ ಕಾಲ ವಿಳಂಬವಾಗಿ ಹೊರಡಲಿತ್ತು. ಇದರಿಂದ ಅವರು ಮುಂಬಯಿ ತಲುಪುವ ಸಮಯಕ್ಕೆ ಅವರು ಟಿಕೆಟ್ ಕಾದಿರಿಸಿದ ಬೆಂಗಳೂರಿಗೆ ಹೋಗುವ ಮೊದಲಿನ ವಿಮಾನವು ಅವರಿಗೆ ಸಿಗುವಂತಿರಲಿಲ್ಲ. ಈ ವಿಷಯದಲ್ಲಿ ಏನು ಮಾಡಲೂ ಆಗದಿದ್ದುದರಿಂದ ಅವರು ಸುಮ್ಮನಿದ್ದರು. ಕೊನೆಗೆ ವಿಮಾನ ನ್ಯೂಯಾರ್ಕಿನಿಂದ ಹೊರಟಿತು. ಪ್ರಯಾಣ ಹಿತಕರವಾಗಿತ್ತು. ಆದರೆ ನಾಯಕ ದಂಪತಿಗಳಿಗೆ ಯಾವ ಸಂತೋಷವೂ ಉಂಟಾಗಲಿಲ್ಲ!

ಅಂತೂ ಮುಂಬಯಿ ತಲುಪಿದ ಕೂಡಲೆ ಸಾಯಂಕಾಲ ಹೊರಡುವ ಬೆಂಗಳೂರು ವಿಮಾನದಲ್ಲಿ ಅವರು ತಮಗಾಗಿ ಸ್ಥಳ ಕಾದಿರಿಸಿದರು. ಬೆಂಗಳೂರಿನ ಡಾಕ್ಟರ್ ಮಿ.ರೊಡನೆ ಟೆಲಿಫೋನ್ ಸಂಪರ್ಕ ಬೆಳೆಸಲು ಎಷ್ಟು ಪ್ರಯತ್ನಿಸಿದರೂ ಅವರಿಗದು ಸಾಧ್ಯವಾಗದೆ ಹೋಯಿತು!

ಸಮಯಕ್ಕೆ ಸರಿಯಾಗಿ ಮೂವರೂ ಬೆಂಗಳೂರಿಗೆ ಹೋಗುವ ವಿಮಾನದಲ್ಲಿ ಹತ್ತಿ ಕೂತರು. ಡಾಕ್ಟರ್ ನಾಯಕ್ ಅತ್ಯಂತ ದಣಿದಿದ್ದುದರಿಂದ ಲಘು ನಿದ್ರೆಯಲ್ಲಿದ್ದರು. ಆದಾಗಲೇ ಅವರಿಗೆ ಆ ಆರ್ತಧ್ವನಿ ಕೇಳಿಸಿದುದು, "ಮೇರೆ ಬಚ್ಚಾಕೊ ಕೋಯಿ ಬಚಾದೊ!" (ನನ್ನ ಮಗುವನ್ನು ಯಾರಾದರೂ ಕಾಪಾಡಿರಿ!)

*

ಈ ಆರ್ತನಾದವನ್ನು ಕೇಳಿ, 'ಅದೆಲ್ಲಿಂದ ಬರುವುದು! ಏನಾಯಿತು?' ಎಂಬ ಕುತೂಹಲದಿಂದ ಎಲ್ಲರೂ ಅತ್ತಿತ್ತ ನೋಡಿದರು, ಗಗನಸಖಿಯೊಬ್ಬಳು ಓಡೋಡಿ ತಾಯಿ–ಮಗುವಿನ ಹತ್ತಿರ ಬಂದಳು. ಮಗುವು ಚಿಂತಾಜನಕ ಸ್ಥಿತಿಯಲ್ಲಿರುವುದನ್ನು ಗಮನಿಸಿ ಕಮಾಂಡರ (ವಿಮಾನಚಾಲಕ)ರಿಗೆ ಸಂಗತಿ ತಿಳಿಸಲು ಅವಳು ಹೋದಳು.

ಪ್ರಯಾಣಿಕರಲ್ಲಿ ಒಬ್ಬರಾದ ಲೇಡಿ ಡಾಕ್ಟರರು ಮಗುವಿನ ಬಳಿಹೋಗಿ ಅದನ್ನು ಪರೀಕ್ಷಿಸಿ ಗಂಟಲಿನಲ್ಲಿ ಅದೇನೋ ಸಿಕ್ಕಿಕೊಂಡುದರಿಂದ ಶ್ವಾಸಕ್ರಿಯೆ ಕಷ್ಟಕರವಾಗಿರುವುದೆಂದು ಅರಿತರು. ಮಗುವಿನ ಕೈಯಲ್ಲಿದ್ದ ಸಕ್ಕರೆ ಮಿಠಾಯಿ ಮಾಯವಾಗಿದ್ದು ಅದರ ಕಾಗದವು ಮಾತ್ರ ಸಾಕ್ಷಿಯಾಗಿ ಕಾಲುಬುಡದಲ್ಲಿ ಬಿದ್ದುದನ್ನು ಕಂಡು, ಬಹುಶಃ ಆ ಮಿಠಾಯಿ ಮಗುವಿನ ಗಂಟಲಲ್ಲಿ ಸಿಕ್ಕಿಬಿದ್ದಿರಬೇಕೆಂದು ಊಹಿಸಿದರು. ತನ್ನ ಕೈಬೆರಳುಗಳನ್ನು ಮಗುವಿನ ಗಂಟಲಲ್ಲಿ ಇಳಿಬಿಟ್ಟು ಮಿಠಾಯಿಯನ್ನು ಹೊರತೆಗೆಯಲು ಪ್ರಯತ್ನಿಸಿ ವಿಫಲರಾದರು. ಮಿಠಾಯಿ ಇನ್ನೂ ಕೆಳಗಿರಬೇಕೆಂದೆಣಿಸಿದರು. ನಿರಾಶರಾಗಿ ಅವರು ಸ್ವಸ್ಥಾನಕ್ಕೆ ಹಿಂದಿರುಗಿದರು.

ಡಾಕ್ಟರ್ ನಾಯಕರು ಆರ್ತಧ್ವನಿಯನ್ನು



ಫ. ಹಿಮ್ ಪಾಶಾ

ಕೇಳಿದರು. ತಾಯಿ ಪುನಃ ಪುನಃ ಅದನ್ನೇ ಹೇಳುವುದನ್ನು ಆಲಿಸಿದರು. ವಿಮಾನದಲ್ಲಿ ಥಟ್ಟನೆ ಪ್ರಾರಂಭವಾದ ಚಟುವಟಿಕೆಗಳನ್ನು ಗಮನಿಸಿದರು. ಲೇಡಿ ಡಾಕ್ಟರರು ಮಗುವಿನ ಬಾಯಿಯಲ್ಲಿ ಬೆರಳಿಟ್ಟು ಏನನ್ನೋ ತೆಗೆಯಲು ಪ್ರಯತ್ನಿಸುತ್ತಿದ್ದುದನ್ನು ಕಂಡರು. ಅವರು ಹೋದೊಡನೆ ಡಾಕ್ಟರ್ ನಾಯಕರು ತಾಯಿಯ ಬಳಿ ಹೋಗಿ, ಮಗುವನ್ನು ಕೈಗಳಲ್ಲಿ ತಲೆ ಕೆಳಗೆ ಮಾಡಿ ಹಿಡಿದು, ಎದೆಯ ಮೇಲೆ ಕೈಯಿಂದ ಬಡಿದು ಸಕ್ಕರೆ ಮಿಠಾಯಿಯನ್ನು ಹೊರಗೆಡಹಲು ಪ್ರಯತ್ನಿಸಿದರು. ಮಿಠಾಯಿ ಅಲುಗಲಿಲ್ಲ.

ಡಾಕ್ಟರ್ ನಾಯಕ್ ನಿಶ್ಚೇತನವಾಗಿದ್ದ ಮಗುವನ್ನು ತಾಯಿಯ ಮಡಿಲಲ್ಲಿರಿಸಿದರು. ಈ ನಿಮಿಷದಲ್ಲಿ ಬಹುಶಃ ಜೀವಕ್ಕಾಗಿ ಹೆಣಗಾಡುತ್ತಿರುವ ತನ್ನ ತಾಯಿಯ ನೆನಪಾಗಿ ಈ ಮಗುವಿನ ಸಾಮೀಪ್ಯವು ಅವರಿಗೆ ಹೃದಯಸ್ಪರ್ಶಿಯಾಯಿತು. ಮನಸ್ಸಿಲ್ಲದಿದ್ದರೂ ಅವರು ಮೆಲ್ಲಗೆ ತನ್ನ ಆಸನಕ್ಕೆ ಮರಳಿದರು.

ಶ್ರೀಮತಿ ನಾಯಕ್ ಕೇಳಿದರು (ಅವಳೂ ಡಾಕ್ಟರ್) "ಏನದು ಸಂಗತಿ?"

"ಮಗುವು ಸಕ್ಕರೆ ಮಿಠಾಯಿಯನ್ನು ಗಂಟಲಲ್ಲಿ ಸಿಕ್ಕಿಸಿಕೊಂಡಂತಿದೆ. ನಾವೇನೂ ಮಾಡುವಂತಿಲ್ಲ."

ಅದಾಗಲೇ ಅವರಿಗೆ ಧ್ವನಿವರ್ಧಕದಿಂದ ಬಂದ ಹೇಳಿಕೆ ಕೇಳಿಸಿತು. "ಪ್ರಯಾಣಿಕರಲ್ಲಿ ಯಾರಾದರೂ ಡಾಕ್ಟರಿದ್ದಾರೆಯೆ? ಉಸಿರಿಲ್ಲದ ಮಗುವಿಗೆ ಯಾವ ಸಹಾಯವನ್ನು ಮಾಡಿದರೂ ವಿಮಾನದ ಕಮಾಂಡರರು ಆಭಾರಿಯಾದವರು."

ಡಾಕ್ಟರ್ ನಾಯಕರೂ ಲೇಡಿ ಡಾಕ್ಟರರೂ ಕಮಾಂಡರರನ್ನು ಕಂಡು ಮಗುವಿನ ಸ್ಥಿತಿಯನ್ನು ವಿವರಿಸಿದರು. "[illegible] ಮರಳಿದರೆ ಮಗುವಿಗೆ ಪ್ರಯೋಜನವಾದೀತೆ?" ಎಂದು ಕಮಾಂಡರರು ಕೇಳಿದರು.

"ಮುಂಬಯಿಗೆ ಮರಳಿ, ಮಗುವನ್ನು ಆಸ್ಪತ್ರೆಗೆ ಸಾಗಿಸಲು ಎಷ್ಟು ಸಮಯ ಬೇಕಾದೀತು?" ಡಾಕ್ಟರ್ ನಾಯಕ್ ಕೇಳಿದರು.

"ಮೂವತ್ತು ನಿಮಿಷಗಳು ಸಾಕು." ಎಂದರು ಕಮಾಂಡರರು.

"ಅದರಿಂದ ಏನೂ ಪ್ರಯೋಜನವಾಗಲಾರದು." ಎಂದು ಡಾಕ್ಟರ್ ನಾಯಕರು ಖಚಿತವಾಗಿ ಹೇಳಿದರು. "ಮಗುವಿಗೆ [illegible] ಈಗಲೇ ಮಾಡಬೇಕು. ಮಗು ಈಗಲೇ ಸತ್ತಿರಲೂಬಹುದು. ಇಲ್ಲದಿದ್ದರೆ ಅದು ಇನ್ನು ಕೆಲವೇ ನಿಮಿಷಗಳು ಮಾತ್ರ ಬದುಕಿ ಉಳಿದೀತು."

ಕಮಾಂಡರರು ಕ್ಷಣಹೊತ್ತು ಆಲೋಚಿಸಿ, "ನಾವು 'ಎಮರ್ಜೆನ್ಸಿ' ಘೋಷಿಸಿ, ವಿಮಾನವನ್ನು ಅದರ [illegible]. ಹಾಗೆ ನಾವು ಬೆಂಗಳೂರನ್ನು ಸ್ವಲ್ಪ ಮುಂಚಿತವಾಗಿ ತಲುಪಬಹುದು. ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಡಾಕ್ಟರ್ ಮತ್ತು ಆಂಬುಲೆನ್ಸ್ ತಯಾರಾಗಿರಿಸಲು ಸೂಚಿಸುವೆವು. ಅಲ್ಲಿಯತನಕ ನೀವು ಯಾವ ರೀತಿಯಲ್ಲಾದರೂ ಮಗುವನ್ನು ಉಪಚರಿಸಿದರೆ ನಾವು ನಿಮಗೆ ಆಭಾರಿ," ಎಂದರು.

*

ಶ್ರೀ ಕರೀಮ್ ಸಿನ್ಹಾ ಮತ್ತು ಅವರ ಮಡದಿ ಶ್ರೀಮತಿ ಖುರ್ಶಿದ್ ಬೇಗಮ್ ಫ್ರಾನ್ಸಿನಲ್ಲಿ ಪ್ಯಾರಿಸ್ ಬಳಿಯ ಬೋಂಡೂಫ್ಲ್‌ನಲ್ಲಿದ್ದರು. ಅವರ ನಾಲ್ವರು ಮಕ್ಕಳು ಬೆಂಗಳೂರಿನಲ್ಲಿರುವ ಅವರ ಅಜ್ಜನ ಮನೆಯಲ್ಲಿದ್ದು ಶಾಲೆಗೆ ಹೋಗುತ್ತಿದ್ದರು.

ಫ್ರೆಂಚ್ ಸೇನಾದಳದಲ್ಲಿ ಎಡ್ಜುಟಂಟ್ ಆಗಿರುವ ಶ್ರೀ ಸಿನ್ಹಾರು ತನ್ನ ಶ್ರೀಮತಿ ಮತ್ತು ಎರಡೂವರೆ ವರ್ಷ ಪ್ರಾಯದ ಮಗ [illegible] ರುವ ತನ್ನ ಮಕ್ಕಳನ್ನು ಭೇಟಿಯಾಗುವ ಆತುರದಲ್ಲಿದ್ದರು. ಮುಂಬಯಿಗೆ ತಲುಪಿದ ಬಳಿಕ ಅವರು ಬೆಂಗಳೂರಿಗೆ [illegible] ವಿಮಾನದಲ್ಲಿ [illegible]

[illegible]

ತೆರೆದಲ್ಲಿದ್ದನು. ಅವನು ವಿಮಾನದಲ್ಲಿ [illegible] ಸಕ್ಕರೆ ಮಿಠಾಯಿ ಕೊಟ್ಟರು. "ನಾನಿದನ್ನು ತಿನ್ನಲೇ?" ಅವನು ತಾಯಿಯೊಡನೆ ಕೇಳಿದನು.

"ಈಗ ಬೇಡ ಮಗು, ಸ್ವಲ್ಪ ಹೊತ್ತು ಹೋಗಲಿ," ತಾಯಿ ಹೇಳಿದಳು. ಅವನು ಮಿಠಾಯಿ ಹಿಡಿದು ಸ್ವಲ್ಪ ಸಮಯ ಆಡಿದನು. ಕಿಟಕಿಯಿಂದ ಹೊರಗಡೆ ನೋಡುವ ಪ್ರಯತ್ನದಲ್ಲಿ [illegible] ಪೆಟ್ಟಿಗೆಯನ್ನು ಕೆಳಗಿಳಿಸಿ, ತಾಯಿ ಮಡಿಲಲ್ಲಿ ಸುಮ್ಮನಾದನು.

[illegible] ಶ್ರೀಮತಿ ಸಿನ್ಹಾ ಫಕ್ಕನೆ ಗಮನಿಸಿದಳು. ಮಗುವಿನತ್ತ ನೋಡಿದಾಗ ಅವಳಿಗೆ ದಿಗ್ಭ್ರಮೆಯಾಯಿತು. ಮಗುವು ಶ್ವಾಸಕ್ರಿಯೆಗಾಗಿ ಪ್ರಯಾಸಪಡುತ್ತಿತ್ತು. ಅವಳು ನೋಡುತ್ತಿದ್ದಂತೆಯೇ ಅದರ ಮುಖ ನೀಲಿಯಾಯಿತು. ಬಾಯಂಚಿನಲ್ಲಿ ನೊರೆ ಬಂತು. ಅವಳು ಕೂಡಲೇ ತನ್ನ ಗಂಡನಿಗೆ ಮಗುವಿನ ಸ್ಥಿತಿ ತೋರಿಸಿ ಕೇಳಿಕೊಂಡಳು, "ಮೇರೆ ಬಚ್ಚೆಕೋ ಕೋಯಿ ಬಚಾದೋ!"

*

ಮಗುವಿನ ಹೆತ್ತವರ ದೃಷ್ಟಿಯಿಂದ ಪಾರಾಗಿ ಅನಿರೀಕ್ಷಿತವಾಗಿ ಬಸಕ್ಕನೆ ಮರಳಿದ ಡಾಕ್ಟರ್ ನಾಯಕರಿಗೆ ಅವರ ಮೆಡಿಸಿನ್ ಪ್ರೊಫೆಸರ ಪಾಠದಲ್ಲಿ ಒಮ್ಮೆ ಹೇಳಿದ್ದು ನೆನಪಾಯಿತು. "ಡಿಫ್ತೀರಿಯಾ ರೋಗದ ಪೊರೆಯಿಂದ ಗಂಟಲು ಮುಚ್ಚಲ್ಪಟ್ಟು ಶ್ವಾಸಕ್ರಿಯೆಗಾಗಿ ಒದ್ದಾಡುವ ಮಗುವನ್ನು ನೀವು ಎಂದಾದರೂ ನೋಡಿದರೆ ಆ ಮಗುವನ್ನು ಆಸ್ಪತ್ರೆಗೆ ಸಾಗಿಸುವ ಪ್ರಯತ್ನವನ್ನು ಮೊದಲಾಗಿ ಮಾಡದಿರಿ; ಅದು ಅಲ್ಲಿಗೆ ಮುಟ್ಟುವವರೆಗೆ ಜೀವಿಸದು. ನಿಮ್ಮೊಡನೆ ಸ್ಕಾಲ್‌ಪೆಲ್ ಸಿದ್ಧವಿಲ್ಲದಿದ್ದರೆ ಎದೆಗುಂದದೆ [illegible] ಯೊಂದನ್ನು ತೆಗೆದುಕೊಳ್ಳಿರಿ. ಕುತ್ತಿಗೆಯ [illegible] ಮಾಡಿ. ಮೊದಲು ಮಗುವಿನ ಶ್ವಾಸಕ್ರಿಯೆ ಸಾಗಲಿ. ಪೊರೆಯ ಚಿಕಿತ್ಸೆ ಮತ್ತೆ ಮಾಡಬಹುದು!"

ಆತಂಕದ ಪರಿಸ್ಥಿತಿಯಲ್ಲಿದ್ದ ಮಗುವೊಂದು ಇಲ್ಲಿತ್ತು. ಗಂಟಲು ಮುಚ್ಚಲ್ಪಟ್ಟುದು ಮಾತ್ರ ಪೊರೆಯಿಂದಲ್ಲ; ಸಕ್ಕರೆ ಮಿಠಾಯಿಯಿಂದ.

"ತರಗತಿಯಲ್ಲಿ ಪಾಠ ಮಾಡುವುದು [illegible] ನಡೆಸುವುದು ಸಾಧ್ಯವೇ?" ಡಾಕ್ಟರ್ ನಾಯಕ ತನ್ನೊಳಗೇ ಯೋಚಿಸಿದರು.

ಡಾಕ್ಟರ್ ನಾಯಕ್ ಫಕ್ಕನೆ ತನ್ನೆಲ್ಲ ವ್ಯಥೆಯನ್ನು ಮರೆತರು. ಪುನಃ ಮಗುವಿನ ಬಳಿ ಹೋದರು. ಅದನ್ನು ಇನ್ನೊಮ್ಮೆ ಪರೀಕ್ಷಿಸಿದರು. ಮಗುವಿನ ಮುಖ ಕಪ್ಪಾಗಿತ್ತು. ಮಗು ನಿಶ್ಚೇಷ್ಟವಾಗಿತ್ತು. ನಾಡಿಯು ಪರೀಕ್ಷೆಗೆ ಸಿಗುತ್ತಿರಲಿಲ್ಲ. ಎದೆ ಬಡಿತ ಮೆಲ್ಲಗಾಗಿತ್ತು; ಸೌಮ್ಯವಾಗಿತ್ತು.

ಅವರು ಮಗುವಿನ ತಂದೆಯೊಡನೆ ಹೇಳಿದರು, "ನಿಮ್ಮ ಮಗು ಬಹಳ ಅಸ್ವಸ್ಥದ ಸ್ಥಿತಿಯಲ್ಲಿದೆ. ಇನ್ನು ಕೆಲವೇ ನಿಮಿಷಗಳಲ್ಲಿ ಅದು ಸಾಯುವುದು. ನಾನು ಅದರ ಕುತ್ತಿಗೆಯಲ್ಲಿ ಒಂದು ಸಣ್ಣ ಆಪರೇಶನ್ ಮಾಡಬಯಸುತ್ತೇನೆ. ಒಂದು ಚಿಕ್ಕ ಗಾಯ ಮಾಡುವೆನು. ಅದರಿಂದ ಮಗು ಬದುಕಲೂಬಹುದು. ಆದರೆ ಖಂಡಿತವಾಗಿ ಹೇಳಬರುವುದಿಲ್ಲ. ಆಪರೇಶನ್ ಮಾಡುವುದು ಒಳ್ಳೆಯದು. ಅದರಿಂದ ಮಗು ಬದುಕಿ ಉಳಿಯುವ ಸಾಧ್ಯತೆಯಿದೆ. ಆಪರೇಶನ್ ಮಾಡದಿದ್ದರೆ ಮಗು ಸಾಯುವುದು ಖಂಡಿತ. ಆಪರೇಶನ್ ಮಾಡಿಸುವ ನಿರ್ಣಯವನ್ನು ನಿಮಗೇ ಬಿಟ್ಟಿದ್ದೇನೆ."

ತಾಯಿ ತನ್ನ ಗಂಡನೊಡನೆ "ಡಾಕ್ಟರು ಏನೆನ್ನುವರು?" ಎಂದು ಕೇಳಿದಳು. ಗಂಡ ವಿವರಿಸಿದನು. ಅವಳು ಒಡನೆ ಹೇಳಿದಳು, "ಏನು ಬೇಕೋ ಅದೆಲ್ಲವನ್ನೂ ದಯವಿಟ್ಟು ಮಾಡಲು ಡಾಕ್ಟರರಿಗೆ ವಿನಂತಿಸಿರಿ, ಮತ್ತು ಅವರು ಅದನ್ನು ಆದಷ್ಟು ಬೇಗನೆ ಮಾಡಲಿ!" ಮಗುವಿನ ತಂದೆ ಇದಕ್ಕೆ ಸಮ್ಮತಿಸಿ, "ಡಾಕ್ಟ-

ರರೇ, ನಿಮಗೆ ಉಚಿತ ಕಂಡುದನ್ನು ಮಾಡಿರಿ. ದೇವರು ನಮ್ಮನ್ನು ರಕ್ಷಿಸಲಿ!" ಎಂದರು.

ಡಾಕ್ಟರ್ ನಾಯರ್ ಗಗನಸಖಿಯೊಡನೆ ತಾನು ಮಗುವಿಗೆ ಆಪರೇಷನ್ ಮಾಡುವುದಾಗಿಯೂ ಅದಕ್ಕಾಗಿ ಕಮಾಂಡರರ ಅನುಮತಿಯನ್ನು ಪಡೆಯಬೇಕೆಂದು ತಿಳಿಸಿದರು. ಅವರು ಹೋಗಿ ಮುದುಕಿಗೂ ತನ್ನ ತೀರ್ಮಾನವನ್ನು ತಿಳಿಸಿದರು. ತನ್ನ ಗಂಡ ಮಗುವಿಗೆ ಸಹಾಯ ಮಾಡಲುದ್ಯುಕ್ತರಾದುದನ್ನು ತಿಳಿದು ಅವಳಿಗೆ ಬಹಳ ಸಂತಸವಾಯಿತು!

ಗಗನಸಖಿ ಒಬ್ಬ ಸಹಾಯಕನೊಡನೆ ಮರಳಿ, "ಕಮಾಂಡರರು ನಿಮಗೆ ಖುಷಿಯೆಂದು ತಿಳಿಸಿದ್ದಾರೆ. ಡಾಕ್ಟರರೇ, ನಿಮಗೆ ಯೋಗ್ಯ ಕಂಡುದನ್ನು ಮಾಡುವಿರಂತೆ" ಎಂದಳು. ಡಾಕ್ಟರರು ಹೇಳಿದಂತೆ ಗಗನಸಖಿ ಫಸ್ಟ್‌ಏಯ್ಡ್ ಪೆಟ್ಟಿಗೆ ತಂದಳು. ಅದರಲ್ಲಿ ಚೂರಿಯಾಗಲಿ ಬೇರೆ ಯಾವ ಶಸ್ತ್ರವಾಗಲಿ ಇರಲಿಲ್ಲ.

ಡಾಕ್ಟರ್ ನಾಯರ್ ಒಂದು ಚೂರಿ ಬೇಕೆಂದರು. ಗಗನಸಖಿ ಚೂರಿಗಾಗಿ ಪ್ರಯಾಣಿಕರಲ್ಲಿ ಸುತ್ತಹೋದಳು.

"ಮುಖ ಕ್ಷೌರದ ಬ್ಲೇಡ್ ಬಳಸಿದರಾಗದೆ?" ಎಂದು ಶ್ರೀಮತಿ ನಾಯರ್ ಕೇಳಿದಳು. "ಆಗಬಹುದು. ಆದರೆ ರಕ್ತ ತಾಗಿದೊಡನೆ ಅದು ಬೆರಳುಗಳಿಂದ ಜಾರುವುದು. ಚೂರಿಯೇ ಉತ್ತಮ," ಎಂದರು ಡಾಕ್ಟರ್ ನಾಯರ್.

ಅಷ್ಟರಲ್ಲಿ ಗಗನಸಖಿ ಡಾಕ್ಟರರಿಗೆ ಒಂದು ಚೂರಿ ತಂದಳು. ಅದು ಬಹಳ ಮೊಂಡಾಗಿತ್ತು. ಆಗಲೆ ಪ್ರಯಾಣಿಕರೊಬ್ಬರು ಇನ್ನೊಂದು ಚೂರಿಯನ್ನು ತಂದಿತ್ತರು. "ಇದು ಚಿಕ್ಕದಾಗಿದೆ. ಇದರಿಂದ ಪ್ರಯೋಜನ ಇದೆಯೇ?" ಎಂದು ಕೇಳಿದರು.

ಡಾಕ್ಟರ್ ನಾಯರ್ ಅದನ್ನು ಪರೀಕ್ಷಿಸಿ ಹೇಳಿದರು, "ಸ್ವಲ್ಪ ದೊಡ್ಡದೂ ಹರಿತವೂ ಇದ್ದಿದ್ದರೆ ಒಳ್ಳೆಯದಿತ್ತು. ಆದರೆ ಈಗ ಇದನ್ನೇ ಉಪಯೋಗಿಸುವೆವು." ಅವರು ಗಗನಸಖಿಗೆ ಆಮ್ಲಜನಕ ಸಲಕರಣವನ್ನು ತಯಾರಿಸಲು ಹೇಳಿದರು.

ಆಸನಗಳ ನಡುವಿನ ಜಾಗದಲ್ಲಿ ಎರಡು ದಿಂಬುಗಳನ್ನಿಟ್ಟು ಅವುಗಳ ಮೇಲೆ ಹೊದಿಕೆ ಹಾಕಿದರು. ಅದರ ಮೇಲೆ ಡಾಕ್ಟರರು ಮಗುವನ್ನು ಮಲಗಿಸಿದರು. ಮಗುವಿನ ಕಾಲು ಚಾಚುವಂತಾಗಲು ಗಗನಸಖಿ ಸಹಕರಿಸಿದಳು. ಡಾಕ್ಟರ್ ನಾಯರ್ ಚೂರಿಯಿಂದ ನಿಶ್ಚೇತನವಾಗಿದ್ದ ಮತ್ತು ಬಹುಶಃ ನಿರ್ಜೀವವೂ ಆಗಿದ್ದ ಮಗುವಿನ ಕುತ್ತಿಗೆಯಲ್ಲಿ ಒಂದು ಗಾಯಮಾಡಿದರು. ಅವರು ಕಾತರದಿಂದ ನೋಡಿದರು. ಗಾಯದಿಂದ ರಕ್ತ ಬರಲಿಲ್ಲ! "ಇದು ಈಗಲೇ ನಿರ್ಜೀವವಾಗಿರುವುದೇ? ದೇವರೆ, ನನಗೆ ಸಹಾಯ ಮಾಡು. ಮಗುವನ್ನು ರಕ್ಷಿಸು!" ಡಾಕ್ಟರ್ ನಾಯರ್ ಮೌನವಾಗಿಯೇ ಪ್ರಾರ್ಥಿಸಿದರು.

ಗಾಯಮಾಡಿ ನಿರ್ಮಿಸಿದ ಸಣ್ಣ ರಂಧ್ರವನ್ನು ಹಿಗ್ಗಿಸಬೇಕಿತ್ತು. ಆದರೆ ಡಾಕ್ಟರರು ಚೂರಿಯಿಂದ ಎಷ್ಟು ಪ್ರಯತ್ನಿಸಿದರೂ ಬದಿಗಳು ಒಟ್ಟಾಗುತ್ತಿದ್ದುವು. ಡಾಕ್ಟರರು ಆಮ್ಲಜನಕ ಸಲಕರಣದ ಕೊಳವೆಯನ್ನು ಕೈಗೆತ್ತಿದರು. ಅದರ ತುದಿಯನ್ನು ಗಾಯದೆಡೆಗೆ ಕೊಂಡುಹೋದರು. ಪುಸ್ಸನೆ ಸದ್ದು ಮಾಡುತ್ತಿದ್ದ ಅದರ ತುದಿಯಿಂದ ರಂಧ್ರವನ್ನು ಅಗಲಗೊಳಿಸಲು ಯತ್ನಿಸಿದರು. ಕೊಳವೆಯ ತುದಿ ಒಳ ಹೋಯಿತು.

ಫಕ್ಕನೆ ಮಗು ಮೇಲುಸಿರು ಎಳೆಯಿತು! ಆಮ್ಲಜನಕ ಸರಾಗವಾಗಿ ಒಳಹೋಯಿತು. ಮಗು ಇನ್ನೊಮ್ಮೆ ಉಸಿರೆಳೆಯಿತು. ಆ ಮೇಲೆ ಶ್ವಾಸಕ್ರಿಯೆ ನಿಧಾನವಾಗಿ ಪ್ರಾರಂಭವಾಯಿತು.

ನೋಡುತ್ತಿದ್ದಂತೆ [illegible] ಡುವ ರಕ್ತವು ಗಾಯದಿಂದ ಹೊರ [illegible] ದನ್ನು ಕಂಡು ಡಾಕ್ಟರ್ ನಾಯರರಿಗೆ ಅತೀವ ಸಂತೋಷವಾಯಿತು. ರಕ್ತಸ್ರಾವವನ್ನು ತಡೆಗಟ್ಟಲು ಅವರು ವಸ್ತ್ರದ ತುಂಡುಗಳನ್ನು [illegible] ದರು.

[illegible] ಮಗು [illegible] ಕೂಗಿತು! [illegible]

ವನ್ನೂ ಉದ್ವಿಗ್ನಳಾಗಿ ನೋಡುತ್ತಲಿದ್ದ ತಾಯಿ ಫಕ್ಕನೆ ನಕ್ಕಳು; ಮತ್ತೆ ಅತ್ತಳು!

ಒಡನೆ ವಿಮಾನದಲ್ಲೆಲ್ಲ ಗುಂಜುಗುಂಜು-ಮಾತು ಪ್ರಾರಂಭವಾಯಿತು. ಎಲ್ಲರೂ ಭಾವೋದ್ರಿಕ್ತರಾಗಿದ್ದರು. ಖಚಿತ ಮರಣಕ್ಕೆ ಗುರಿಯಾಗಿದ್ದ ಮಗು ಪ್ರೊಫೆಸರ್ ಸಾವಿನ ದವಡೆಯಿಂದ ಪಾರಾಗಿ ಬಂದುದನ್ನು ಅವರು ಸ್ವತಃ ಕಂಡಿದ್ದರು. ಡಾಕ್ಟರ್ ನಾಯಕ ಮಗುವನ್ನು ಹತ್ತವರಿಗೆ ಒಪ್ಪಿಸಿ, ಹಲವರ ಅಭಿನಂದನೆಗಳನ್ನೂ ಗಮನಿಸದೆ ಆಸನಕ್ಕೆ ಮರಳಿದರು.

ಇನ್ನೊಂದು ಗಂಟೆಯೊಳಗೆ ವಿಮಾನವು ಬೆಂಗಳೂರಿನಲ್ಲಿಳಿಯಿತು. ಮಗುವನ್ನು ಒಯ್ಯಲು ಆಂಬುಲೆನ್ಸ್ ಒಂದು ವಿಮಾನ ನಿಲ್ದಾಣದಲ್ಲಿ ತಯಾರಿತ್ತು. ಹೆತ್ತವರು ಮಗುವಿನೊಡನೆ ಮೊದಲಾಗಿ ಇಳಿದರು. ಆಂಬುಲೆನ್ಸ್ ಹತ್ತಿ, ಸೂಚಿಸಿದ ಹತ್ತಿರದ ಆಸ್ಪತ್ರೆಯೆಡೆ ಓಡಿದರು. ಅಲ್ಲಿ ಗಂಟಲು ಸರ್ಜನರೊಬ್ಬರು ಮಗುವಿಗಾಗಿ ಕಾಯುತ್ತಿದ್ದರು. ಅವರು ಅವಶ್ಯವಿದ್ದ ಶಸ್ತ್ರಚಿಕಿತ್ಸೆ ಮಾಡಿ ಗಂಟಲಲ್ಲಿ ಸಿಕ್ಕಿಬಿದ್ದ ಸಕ್ಕರೆ ಮಿಠಾಯಿಯನ್ನು ಹೊರತೆಗೆದರು. ಮಗು ಸರಾಗವಾಗಿ ಉಸಿರಾಡಲು ಪ್ರಾರಂಭಿಸಿದೊಡನೆ ಕುತ್ತಿಗೆಯಲ್ಲಿನ ಗಾಯವನ್ನು ಹೊಲಿದು ಮುಚ್ಚಿದರು. ಇಂಜೆಕ್ಷನ್ ಕೊಟ್ಟರು. ಶುಶ್ರೂಷೆಯ ಕ್ರಮವನ್ನು ವಿವರಿಸಿದರು.

ಆಸ್ಪತ್ರೆ ಸೇರಿದ ಒಂದು ಗಂಟೆಯೊಳಗೆ ಮಗು ತನ್ನ ನಿವಾಸಕ್ಕೆ ಹಿಂತಿರುಗಿಹೋಯಿತು. ಮೂರು ದಿನಗಳವರೆಗೆ ಮಗು ಆಗಾಗ ಅಳುತ್ತಿತ್ತು. ನಾಲ್ಕನೆಯ ದಿನದಿಂದ ಯಥಾ ಪ್ರಕಾರ ತುಂಟಿ ಪ್ರಾರಂಭಿಸಿತು! ಏಳನೆಯ ದಿನ ಕುತ್ತಿಗೆಯಲ್ಲಿನ ಹೊಲಿಗೆಗಳನ್ನು ತೆಗೆದು ಹಾಕಿದರು. ಅಲ್ಲಿ ಸ್ವಲ್ಪವೇ ಮಾತ್ರ ಕಲೆ ಉಳಿದಿತ್ತು.

*

ಇತ್ತ ಡಾಕ್ಟರ್ ನಾಯಕ ವಿಮಾನ ನಿಲ್ದಾಣದ ಹೊರಗಿನ ತಲುಪಿದರು. ಅವರಿಗಾಗಿ ಕಾಯುತಿಂತ ಸ್ವಜನರನ್ನು ಕಂಡರು. "ಅಮ್ಮ ಹೇಗಿದ್ದಾರೆ?" ಎಂದು ಆತುರದಿಂದ ಕೇಳಿದರು. ಅವರ ತಾಯಿ ಬೆಳಿಗ್ಗೆ ನಾಲ್ಕೂವರೆಗೆ, ವಿಮಾನ ಇಂಡಿಯಾದಲ್ಲಿ ಬಂದಿಳಿಯುವ ಬಹಳ ಮೊದಲೇ, ಕಾಲವಶರಾಗಿದ್ದರು!

ಅದೃಷ್ಟದ ಆಟವು ನಿಜವಾಗಿಯೂ ವಿಚಿತ್ರ-ತ್ಮಾಲಕ! ✿

ಉತ್ತರ ಹೇಳಿರಿ

ದಯಾನಂದ ಸರಸ್ವತಿಯವರು ಶಿವನ ಭಕ್ತರು. ಚಿಕ್ಕವರಿದ್ದಾಗ ಒಂದು ಶಿವರಾತ್ರಿ ದಿವಸ ಮಹಾದೇವನ ಪೂಜೆ ಮಾಡಿದರು. ಎಲ್ಲರೂ ನಿದ್ದೆ ಮಾಡಿದರು. ಇವರು ಮಾತ್ರ ಪೂರ್ಣ ರಾತ್ರಿ ಎಚ್ಚರವಿದ್ದರು. ಒಂದು ಚಿಕ್ಕ ಇಲಿ ಮಹಾದೇವನ ಮೈಮೇಲೆಲ್ಲ ಓಡಾಡಿದ್ದನ್ನು ಕಂಡರು. ಅದು ನೈವೇದ್ಯ ಪದಾರ್ಥವನ್ನು ತಿಂದಿರಬೇಕು. ಆ ಚಿಕ್ಕ ಇಲಿಯಿಂದ ತನ್ನನ್ನು ರಕ್ಷಿಸಿಕೊಳ್ಳದೇ ಮೈಲಿಗೆಯಾದ ಆ ಮೂರ್ತಿಯನ್ನು ಪೂಜಿಸಬಾರದೇ ತಪ್ಪೆಂದು ಅವರು ಜ್ಞಾನಸ್ಥರಾಗಿ ಮೂರ್ತಿ ಪೂಜೆಯನ್ನೇ ಬಿಟ್ಟರು. ಮುಂದೆ ಆರ್ಯ ಸಮಾಜ ಸ್ಥಾಪಿಸಿದರು. ಇದು ನಿಜ. ಆದರೆ ಆ ಮಹಾದೇವನಿಗೆ ಇಲಿಯು ಎಷ್ಟೋ, ಮನುಷ್ಯನು ಅಷ್ಟೇ. ತಾಳಿಕೊಳ್ಳುವ ಪಡಿಸು ಶಿವನು ಮಾತ್ರ. ನಾವು ಮುಟ್ಟಿದರೆ ಶಿವನಿಗೆ ಮೈಲಿಗೆಯಾಗುವದಿಲ್ಲ. ಇಲಿ ಮುಟ್ಟಿದರೆ ಮೈಲಿಗೆ ಯಾಕೆ? ಈ ಮಾತನ್ನು ದಯಾನಂದ ಸರಸ್ವತಿಯವರ ತಂದೆ ಹೇಳಬಾರದಾಗಿತ್ತಲ್ಲ?"

ಇದು ಶಾಲೆಯಲ್ಲಿ ಕಥೆ ಕೇಳಿ ಬಂದು ಮಗು ಕೇಳಿದ ಪ್ರಶ್ನೆ. ಉತ್ತರವಿದ್ದರೆ ಹೇಳಿರಿ.

—ಎಸ್. ಬಿ. ಜೋಡಿದಾಸಪೂರ

ದಂತವೈದ್ಯರು ಹೇಳುತ್ತಾರೆ.

ನಿಯಮಿತವಾಗಿ ಹಲ್ಲುಗಳನ್ನು ಸ್ವಚ್ಛಮಾಡಿ ಒಸಡುಗಳನ್ನು ಮಸಾಜು ಮಾಡಿಕೊಂಡರೆ ದಂತಕ್ಷಯ ತಡೆದು ಒಸಡುಗಳ ತೊಂದರೆ ನಿವಾರಣೆಯಾಗುತ್ತದೆ

ಫೋರ್‌ಹನ್ಸ್ ಉಪಯೋಗಿಸುತ್ತಿರುವವರು ಸಸಂತೋಷದಿಂದ ಹೇಳುತ್ತಾರೆ

"ನನ್ನ ಒಸಡುಗಳು ಸುದೃಢ ಮತ್ತು ಸ್ವಾಸ್ಥ್ಯಪೂರ್ಣವಾಗಿವೆ"

"ನಿಮ್ಮ ಫೋರ್‌ಹನ್ಸ್ ಟೂಥ್‌ಪೇಸ್ಟ್' ಉಪಯೋಗಿಸಿ ನನ್ನ ಒಸಡುಗಳು ಸುದೃಢ ಮತ್ತು ಸ್ವಾಸ್ಥ್ಯಪೂರ್ಣವಾಗಿವೆ. ಮೊದಲು ನನ್ನ ಒಸಡುಗಳು ತೊಂದರೆ ಕೊಡುತ್ತಿದ್ದವು... ಈಗ ನಾನು ನಿಮ್ಮ ಟೂಥ್‌ಪೇಸ್ಟಿನಿಂದಾಗಿ ಈ ತೊಂದರೆಯಿಂದ ಪಾರಾಗಿದ್ದೇನೆ"

(ಸಹಿ) ಡಿ.ಎನ್. ದಾಸ್, ಶಿಖರಪುರ್.

"ನನ್ನ ಬಾಯಿಯ ದುರ್ವಾಸನೆ ಹೋಯಿತು ಒಸಡುಗಳ ತೊಂದರೆ ಇಲ್ಲವಾಯಿತು"

"....ರಾಜಮಹೇಂದ್ರಿಯ ಒಬ್ಬ ದಂತವೈದ್ಯರು... ಫೋರ್‌ಹನ್ಸ್ ಉಪಯೋಗಿಸಲು ನನಗೆ ಹೇಳಿದರು. ಮತ್ತು ಅತ್ಯಲ್ಪ ಕಾಲದಲ್ಲಿ ನನ್ನ ಬಾಯಿಯ ದುರ್ವಾಸನೆ ಹೋಯಿತು. ಒಸಡುಗಳ ತೊಂದರೆ ಇಲ್ಲವಾಯಿತು."

(ಸಹಿ) ಪಿ.ಜೆ. ಲಾಝರ್, ಚೀರಾಲಾ, ಆಂಧ್ರಪ್ರದೇಶ್.

(ಈ ಪತ್ರಗಳ ಫೋಟೋ-ಪ್ರತಿಗಳನ್ನು ಜೆಫ್ರೀ ಮೇನರ್ಸ್ ಅಂಡ್ ಕಂ.ಲಿ. ಅವರ ಯಾವುದೇ ಆಫೀಸಿನಲ್ಲಿ ಬೇಕಾದರೂ ನೀವು ಕಾಣಬಹುದು).

ಹಲ್ಲುಗಳ ಸರಿಯಾದ ಸಂರಕ್ಷಣೆಗಾಗಿ ಪ್ರತಿದಿನ ರಾತ್ರಿ ಮತ್ತು ಮುಂಜಾನೆ ನಿಮ್ಮ ಹಲ್ಲುಗಳನ್ನು ಬ್ರಶ್ ಮಾಡಲು ಮತ್ತು ನಿಮ್ಮ ಒಸಡುಗಳನ್ನು ಮಸಾಜು ಮಾಡಲು ಫೋರ್‌ಹನ್ಸ್ ಉಪಯೋಗಿಸಿರಿ. ಜೊತೆಗೆ ಫೋರ್‌ಹನ್ಸ್ ಡಬ್ಬಲ್ ಆ್ಯಕ್ಷನ್ ಟೂಥ್‌ಬ್ರಶ್ ಉಪಯೋಗಿಸಿರಿ, ಯಾಕೆಂದರೆ ಹಲ್ಲುಗಳನ್ನು ಸ್ವಚ್ಛಗೊಳಿಸಲು ಮತ್ತು ಒಸಡುಗಳನ್ನು ಮಸಾಜು ಮಾಡಲು ಇದನ್ನು ವಿಶೇಷವಾಗಿ ತಯಾರಿಸಲಾಗಿದೆ.

ಆಕರ್ಷಕ ಕಿತ್ತಳೆ– ಬಣ್ಣದ ಪ್ಯಾಕ್‌ನಲ್ಲಿ



ಫೋರ್‌ಹನ್ಸ್

ದಂತವೈದ್ಯರಿಂದ ಸೃಷ್ಟಿಸಲ್ಪಟ್ಟ ಟೂಥ್‌ಪೇಸ್ಟ್

ಉಚಿತ! ಹಲ್ಲು ಮತ್ತು ಒಸಡುಗಳ ರಕ್ಷಣೆಯ ಬಗ್ಗೆ ಬೋಧಪ್ರದ ವರ್ಣರಂಜಿತ ಪುಸ್ತಿಕೆ. ಕೃಪೆಮಾಡಿ 25 ಪೈಸೆಯ ಅಂಚೆಯ ಸ್ಟ್ಯಾಂಪನ್ನು ಜೊತೆಗಿಟ್ಟು ಫೋರ್‌ಹನ್ಸ್ ಡೆಂಟಲ್ ಎಡ್ವೈಸರಿ ಬ್ಯೂರೋ. ಡಿಪಾರ್ಟ್‌ಮೆಂಟ್ T 139-168 ಪೋಸ್ಟ್ ಬ್ಯಾಗ್ ನಂ. 11463. ಬೊಂಬಾಯಿ 400 020. ಈ ವಿಳಾಸಕ್ಕೆ ಬರೆಯಿರಿ. ಬೇಕಾದ ಭಾಷೆಯನ್ನು ನಮೂದಿಸಿ.

PIN CODE FOR FAST MAIL

168 F-152 Kan

ವಸಂತ ಗುಮಾಸ್ತೆ

ಜನಸಂಖ್ಯೆಯ ಸಮಸ್ಯೆ ನಿಜವೆಷ್ಟು? ಬೊಬ್ಬೆ ಎಷ್ಟು?

ಭಾರತದಲ್ಲಿ ಇಂದು ಜನಸಂಖ್ಯಾ ನಿಯಂತ್ರಣಕ್ಕಾಗಿ ಆಕಾಶ-ಪಾತಾಳ ಒಂದು ಮಾಡಲಾಗುತ್ತಿದೆ. ನಮ್ಮ ದೇಶದಲ್ಲಿ ಪ್ರತಿ ವರ್ಷ, "ಒಂದು ಆಸ್ಟ್ರೇಲಿಯಾ ಹುಟ್ಟುತ್ತದೆ." "ಈ ಭಾಷಣ ಮುಗಿಯುವಷ್ಟರಲ್ಲಿ ೨೦೦೦ ಶಿಶುಗಳ ಜನ್ಮವಾಗಿರುತ್ತದೆ." "ಈ ಶತಮಾನದ ಅಂತ್ಯದಲ್ಲಿ ನಮ್ಮ ದೇಶದ ಜನಸಂಖ್ಯೆ ೧೦೦ ಕೋಟಿಯಾಗುತ್ತದೆ." ಎಂದು ಏನೇನೋ ಹೇಳಿ ಸಮಸ್ಯೆಯ ಗಾತ್ರವನ್ನು ಜನರ ಮುಂದೆ ಇಡಲು ರಂಜಕವಾಗುವಂತೆ ಶಬ್ದಗಳ ಮತ್ತು ಸಂಖ್ಯೆಗಳ ಡೊಂಬರಾಟ ನಡೆದಿರುತ್ತದೆ. ನಮ್ಮ ಬಡತನದ ಕಾರಣ ಜನಸಂಖ್ಯೆ, ನಮ್ಮ ಆರ್ಥಿಕ ಮುಗ್ಗಟ್ಟಿನ ಕಾರಣ ಜನಸಂಖ್ಯೆ, ನಮ್ಮ ನಿರಕ್ಷರತೆಯ ಕಾರಣ ಜನಸಂಖ್ಯೆ, ನಮ್ಮ ಅಂತಾರಾಷ್ಟ್ರೀಯ ವ್ಯಾಪಾರದಲ್ಲಿಯ ಅಸಮತೋಲದ ಕಾರಣ ಜನಸಂಖ್ಯೆ... ಇತ್ಯಾದಿ ಇತ್ಯಾದಿ. ಹೀಗೆ ನಮ್ಮ ಎಲ್ಲ ಬವಣೆಗಳ ಕಾರಣವೆಂದು ಜನಸಂಖ್ಯೆಯತ್ತ ಬೊಟ್ಟು ಮಾಡಲಾಗುತ್ತಿದೆ. ಕಾರಣ ಜನಸಂಖ್ಯೆಯ ಹೆಚ್ಚಳವನ್ನು ತಡೆಗಟ್ಟದಿದ್ದರೆ, ನಾವು ನಮ್ಮ ವಿರುದ್ಧ ಟೈಂ ಬಾಂಬ್ ಹಚ್ಚಿಕೊಳ್ಳುತ್ತಿದ್ದೇವೆ ಎಂದು ಸಾರಲಾಗುತ್ತದೆ.

ಜನಸಂಖ್ಯೆಯ ಹೆಚ್ಚಳದ ವಿರುದ್ಧದ ಈ ಕೂಗಾಟ ಬರೀ ನಮ್ಮ ದೇಶದಲ್ಲಷ್ಟೇ ಅಲ್ಲ, 'ತೃತೀಯ ಬಣ' (Third world) ಎಂದು ಕರೆಯಲ್ಪಡುವ ಜಗತ್ತಿನ ಎಲ್ಲ ಬಡ ದೇಶದಲ್ಲಿ ಕಿವಿಗಡಚಿಕ್ಕುವ ಮಟ್ಟಿಗೆ ಎದ್ದಿದೆ. ಸುಮಾರು ೩೦ ಬಡದೇಶಗಳು ಜನಸಂಖ್ಯೆಯ ಹೆಚ್ಚಳದ ವಿರುದ್ಧ ಖಚಿತವಾದ ಕ್ರಮಗಳನ್ನು ತೆಗೆದುಕೊಂಡಿವೆ. ಅಷ್ಟೇ [illegible] ಅನ್ನು 'ಜನಸಂಖ್ಯಾ ವರ್ಷ'ವೆಂದು ಸಂಯುಕ್ತ ರಾಷ್ಟ್ರಸಂಘ ಕೂಡ ಆಚರಿಸಿ ಜನಸಂಖ್ಯೆಯ ಸಮಸ್ಯೆಯನ್ನು ಅಂತಾರಾಷ್ಟ್ರೀಯ ಪಾತಳಿಗೆ ಏರಿಸಿತು. ಅಮೇರಿಕೆಯ ಸರಕಾರ ಮತ್ತು ಅಲ್ಲಿಯ ಜಾಗತಿಕ ವಿಸ್ತಾರದ ಕೆಲ ಖಾಸಗಿ ಕಂಪನಿಗಳು ಒಟ್ಟುಗೂಡಿ ಕೋಟ್ಯವಧಿ ಡಾಲರುಗಳನ್ನು ಬಡದೇಶಗಳಲ್ಲಿಯ ಜನನ ನಿಯಂತ್ರಣಕ್ಕಾಗಿ ವೆಚ್ಚ ಮಾಡುತ್ತಿವೆ. ಇದರ ಮೇಲಿಂದ ಸಾಮಾನ್ಯ ಮನುಷ್ಯನಿಗೆ ಜನಸಂಖ್ಯೆ ನಿಜಕ್ಕೂ ಒಂದು ಸಮಸ್ಯೆಯಾಗಿದೆ ಮತ್ತು ಅದರ ಹೆಚ್ಚಳವನ್ನು ತಡೆಗಟ್ಟಬೇಕು ಎಂದು ಅನ್ನಿಸುತ್ತಿದ್ದಲ್ಲಿ ಸೋಜಿಗವಿಲ್ಲ. ಆದರೆ ವಸ್ತುಸ್ಥಿತಿ ವಿಪರೀತವಾಗಿದೆ. ಜನಸಂಖ್ಯೆ ಬಡತನದ ಕಾರಣ ಸುತರಾಂ ಅಲ್ಲ ಎಂದು ಹೇಳಿದರೆ ತಮಗೆ ನಂಬಿಕೆಯಾಗಲಿಕ್ಕಿಲ್ಲ. ತದ್ವಿರುದ್ಧ ಜನಸಂಖ್ಯೆಯ ಭಾರ, ಅದು ಇದ್ದರೆ, ಶ್ರೀಮಂತ ರಾಷ್ಟ್ರಗಳಲ್ಲಿದೆಯೇ ವಿನಾ ಬಡ ದೇಶಗಳಲ್ಲಿ ಅಲ್ಲ ಎಂದು ಹೇಳಿದರೆ ಈ ಲೇಖಕನು ಹುಚ್ಚನೆಂದು, ಈ ವರೆಗೆ ಮಾತ್ರ ಓದಿದವರು ಅಂದುಕೊಂಡರೂ

ಅದರಲ್ಲಿ ಆಶ್ಚರ್ಯವಿಲ್ಲ. ಆದರೆ ಮೇಲೆ ಹೇಳಿದ ಹಾಗೆಯೇ ವಸ್ತುಸ್ಥಿತಿಯಾಗಿದೆ. ಬಡ ರಾಷ್ಟ್ರಗಳಲ್ಲಿ ಬಡತನದ ಸಮಸ್ಯೆ ಇದೆ. ಆದರೆ ಅದು ನಮಗೆ ವಿವರಿಸಲ್ಪಡುವಂತೆ ಇಲ್ಲ.

ಜನಸಂಖ್ಯಾಶಾಸ್ತ್ರದ ಪಿತಾಮಹ ಮಾಲ್ಥಸ್ ೧೮ನೆಯ ಶತಮಾನದ ಕೊನೆಯಲ್ಲಿ ಜನಸಂಖ್ಯೆಯ ಭಾರದ ಬಗ್ಗೆ ಕೂಗು ಎಬ್ಬಿಸಿದವರಲ್ಲಿ ಮೊದಲಿಗ. ಅವನ ಪ್ರಕಾರ ಆಹಾರ ಧಾನ್ಯದ ಹುಟ್ಟುವಳಿಯಲ್ಲಿ ೨, ೪, ೬, ೮,... ಹೀಗೆ ಅಂಕಗಣಿತದ ಶ್ರೇಣಿಯಲ್ಲಿ ಹೆಚ್ಚಳವಾಗುತ್ತ ಹೋದರೆ, ಜನಸಂಖ್ಯೆ ೨, ೪, ೮, ೧೬,... ಹೀಗೆ ಭೂಮಿತಿ ಶ್ರೇಣಿಯಲ್ಲಿ ಹೆಚ್ಚುತ್ತ ಹೋಗಿ ಆಹಾರ ಮತ್ತು ಜನಸಂಖ್ಯೆಯಲ್ಲಿಯ ಸಮತೋಲ ತಪ್ಪುತ್ತದೆ. ಇದರಿಂದ ಬಡತನ, ದುಃಖ, ದಾರಿದ್ರ್ಯಗಳು ನಿರ್ಮಾಣವಾಗುತ್ತವೆ. ಕಾರಣ ಜನಸಂಖ್ಯೆಯು ಹೆಚ್ಚಳ ಆಗದಂತೆ ವಿವಿಧ ಗರ್ಭನಿರೋಧಕ ಉಪಾಯಗಳನ್ನು ಕೈಕೊಳ್ಳಬೇಕು ಎಂದು ಸೂಚಿಸಿದ. ಮಾಲ್ಥಸ್‌ನ ಸಿದ್ಧಾಂತದಲ್ಲಿ ಕೆಲ ದೋಷಗಳನ್ನು ತೋರಿಸಿಕೊಡಲಾಯಿತಾದರೂ ಅದರ ಮೂಲ ಪ್ರಮೇಯವನ್ನು ಯಾರೂ ಅಲ್ಲಗಳೆಯಲಿಲ್ಲ. ಈ ಮೂಲ ಪ್ರಮೇಯದ ಮೇಲೆಯೇ ಆಧಾರಭೂತವಾಗಿ 'ನವ-ಮಾಲ್ಥಸ್‌ವಾದ' (Neo-Malthusianism)ದ ಉದಯವಾಯಿತು. ಈ ವಾದದ ಪ್ರಕಾರ ಜನಸಂಖ್ಯೆ ಒಟ್ಟು ಸಂಪನ್ಮೂಲಗಳಿಗೆ ಪ್ರಮಾಣಬದ್ಧವಾಗಿರಬೇಕು. ಹಾಗೆ ಪ್ರಮಾಣಬದ್ಧವಾಗಿರದಿದ್ದರೆ ಅದು ಬಡತನ, ಆರ್ಥಿಕ ಪ್ರಗತಿಗೆ ಆತಂಕವಾಗುತ್ತದೆ. ಬಡದೇಶಗಳಲ್ಲಿ ಅಪ್ರಮಾಣಬದ್ಧ ಜನಸಂಖ್ಯೆಯೇ ಅವುಗಳ ದಾರಿದ್ರ್ಯಕ್ಕೆ ಕಾರಣ ಎಂದು ನವಮಾಲ್ಥಸ್ ವಾದಹೇಳುತ್ತದೆ.

ಬಡ ದೇಶಗಳಲ್ಲಿ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ನವಮಾಲ್ಥಸ್‌ವಾದದ ತಾತ್ವಿಕ ಸಮರ್ಥನೆಯಿಂದಲೇ ಜನಸಂಖ್ಯೆಯ ಹೆಚ್ಚಳದ ವಿರುದ್ಧವಾಗಿ ಕೂಗು ಮತ್ತು ಕಾರ್ಯಕ್ರಮಗಳು ಕೈಕೊಳ್ಳಲ್ಪಡುತ್ತಿವೆಯಾದ್ದರಿಂದ ನವಮಾಲ್ಥಸ್‌ವಾದದ ಸತ್ಯಾಸತ್ಯತೆಗಳನ್ನು ಪರೀಕ್ಷಿಸಿ ನೋಡಬೇಕಾಗುತ್ತದೆ. ಈ ವಾದದ ಪ್ರಕಾರ ಒಟ್ಟು ಸಂಪನ್ಮೂಲಗಳ ತುಲನೆಯಲ್ಲಿ ಜನಸಂಖ್ಯೆಯ ಸಮಸ್ಯೆಯನ್ನು ಕಾಣಲಾಗುತ್ತಿದೆಯಾದ್ದರಿಂದ ನಾವು ಬಡದೇಶಗಳು ಮತ್ತು ಶ್ರೀಮಂತ ದೇಶಗಳಲ್ಲಿಯ ಸಂಪನ್ಮೂಲಗಳ ಮತ್ತು ಜನಸಂಖ್ಯೆಗಳ ತೌಲನಿಕ ಸ್ಥಿತಿಯನ್ನು ನೋಡುವಾ. ಮೊದಲನೆಯದಾಗಿ ನೆಲ:

ಕೋಷ್ಟಕ ೧. ಜಗತ್ತಿನ ವಿವಿಧ ಪ್ರದೇಶಗಳ ಕ್ಷೇತ್ರಫಲ ಮತ್ತು ಜನಸಂಖ್ಯೆ (೧೯೭೧)

ಪ್ರದೇಶ (೧)	ಕ್ಷೇತ್ರಫಲ (ಕೋಟಿ ವರ್ಗ ಕಿ. ಮಿ.ಗಳಲ್ಲಿ) (೨)	ಜನಸಂಖ್ಯೆ (ಕೋಟಿಗಳಲ್ಲಿ) (೩)
ಯುರೋಪ್	೧.೦೫	೬೫.೦
ಏಶಿಯಾ	೪.೪೪	೨೧೬.೦
ಆಫ್ರಿಕ	೩.೦೩	೩೫.೩
ಅಮೇರಿಕ	೪.೨೧	೫೨.೨
ಆಸ್ಟ್ರೇಲಿಯಾ ಇ	೦.೮೫	೨.೦
ಒಟ್ಟು	೧೩.೫೮	೩೭೦.೫

ಕೋಷ್ಟಕ-೧ರಲ್ಲಿ ಜಗತ್ತಿನ ವಿವಿಧ ಪ್ರದೇಶಗಳ ಕ್ಷೇತ್ರಫಲ ಮತ್ತು ಜನಸಂಖ್ಯೆಯನ್ನು ತೋರಿಸಲಾಗಿದೆ. ಈ ಕೋಷ್ಟಕದಲ್ಲಿ ಕಂಡು ಬರುವಂತೆ ಆಫ್ರಿಕೆಯ ಕ್ಷೇತ್ರಫಲ ಯುರೋಪಿನ ಕ್ಷೇತ್ರಫಲದ ೩ ಪಟ್ಟು ಹೆಚ್ಚಿದ್ದು ಅದರ ಜನಸಂಖ್ಯೆ ಮಾತ್ರ ಯುರೋಪಿನ ಸುಮಾರು ಅರ್ಧದಷ್ಟು ಮಾತ್ರವಿದೆ. ಏಶಿಯಾದಲ್ಲಿ ಜನಸಂಖ್ಯೆ ಹೆಚ್ಚಿದೆಯೇನೋ ಸರಿ ಆದರೆ ಯುರೋಪಿನ ತುಲನೆಯಲ್ಲಿ ಏಶಿಯಾದ ಜನಸಂಖ್ಯೆ ಕಡಿಮೆ ಇದೆ. ಏಕೆಂದರೆ ಏಶಿಯಾದಲ್ಲಿ ನೆಲದ ಕ್ಷೇತ್ರಫಲಯುರೋಪಿಗಿಂತ ತುಲನೆಯಲ್ಲಿ ೪ ಪಟ್ಟು ಹೆಚ್ಚಿದೆ. ಆದರೆ ಜನಸಂಖ್ಯೆ ಮಾತ್ರ ೩ ಪಟ್ಟು ಮಾತ್ರವಿದೆ.

ಇದು ಪ್ರದೇಶವಾರು ಜನಸಂಖ್ಯೆ-ಕ್ಷೇತ್ರಫಲಗಳ ತುಲನೆಯಾಯಿತು. ನಾವೀಗ ದೇಶವಾರು ಕೂಡ ಈ ಪ್ರಕಾರದ ತುಲನೆ ಮಾಡಿದರೆ ಮೇಲೆ ಮೂಡಿ ಬಂದ ಸಂಗತಿ ಇನ್ನೂ

ಸ್ಪಷ್ಟವಾಗುತ್ತದೆ. ಕೆಲ ಶ್ರೀಮಂತ ಮತ್ತು ಬಡ ದೇಶಗಳ ಜನಸಂಖ್ಯೆ ದಟ್ಟಣೆಯನ್ನು ಕೋಷ್ಟಕ: ೨ರಲ್ಲಿ ತೋರಿಸಲಾಗಿದೆ.

ಕೋಷ್ಟಕ : ೨

ಜನಸಂಖ್ಯೆಯು ದಟ್ಟಣೆ (೧೯೭೨)

ದೇಶ (೧)	ಜನಸಂಖ್ಯೆ ಪ್ರತಿ ವರ್ಗ ಕಿ. ಮಿ. ಗೆ (೨)
ಇಂಗ್ಲೆಂಡ್ (ವೇಲ್ಸ ಸಹಿತ)	೩೨೪
ನೆದರ್‌ಲ್ಯಾಂಡ್	೩೧೯
ಬೆಲ್ಜಿಯಮ್	೩೧೭
ಜಪಾನ	೨೮೦
ಪಶ್ಚಿಮ ಜರ್ಮನಿ	೨೪೦
ಇಟಲಿ	೧೭೮
ಭಾರತ	೧೬೪
ಫಿಲಿಫೈನ್ಸ	೧೨೩
ಇಂಡೋನೇಶಿಯಾ	೮೧
ಪಾಕಿಸ್ತಾನ	೭೭
ಬಾಂಗ್ಲಾದೇಶ	೪೨೫

ಏಶಿಯಾ ಖಂಡದ ದೇಶಗಳು ಅವಾಸ್ತವ ಜನಸಂಖ್ಯೆಗೆ ಪ್ರಸಿದ್ಧವಾಗಿದ್ದು (ಬೇಕೆಂದೇ ಮಾಡಲ್ಪಟ್ಟವೆ) ಆದರೆ ಕೋಷ್ಟಕ ೨ ಏಶಿಯಾ ಖಂಡದ ರಾಷ್ಟ್ರಗಳನ್ನು ಜನಸಂಖ್ಯೆಯ ಬಗ್ಗೆ ವಿನಾಕಾರಣ ಕಂಗೆಡಿಸಲಾಗುತ್ತಿದೆ ಎಂಬುದನ್ನು ತೋರಿಸುತ್ತದೆ. ಬಾಂಗ್ಲಾ ದೇಶವೊಂದನ್ನು ಹೊರತುಪಡಿಸಿದರೆ, ಏಶಿಯಾ ಖಂಡದಲ್ಲಿ ಎಲ್ಲ ದೇಶಗಳ ಜನದಟ್ಟಣೆ ಯುರೋಪಿನ ರಾಷ್ಟ್ರಗಳಿಗಿಂತ ಕಡಿಮೆ ಇದ್ದುದು ಕಂಡುಬರುತ್ತದೆ. ನಮ್ಮ ದೇಶವನ್ನೇ ತೆಗೆದುಕೊಳ್ಳಿರಿ. ನಮ್ಮ ದೇಶದ ಜನದಟ್ಟಣೆ ಇಂಗ್ಲೆಂಡಿನ ಜನದಟ್ಟಣೆಯ ಅರ್ಧದಷ್ಟಿದೆ. ಉಳಿದ ಯುರೋಪೀಯನ್ ದೇಶಗಳಿಗಿಂತ ಕೂಡ ನಮ್ಮ ದೇಶದ ಜನದಟ್ಟಣೆ ಸಾಕಷ್ಟು ಕಡಿಮೆ ಇದೆ. ಇಂಡೋನೇಶಿಯ ಮತ್ತು ಪಾಕಿಸ್ತಾನಗಳ ಜನದಟ್ಟಣೆಯಂತೂ ಅತೀವ ಕಡಿಮೆಯಾಗಿದೆ. ಇದರ ಮೇಲಿಂದ ಜನಸಂಖ್ಯೆಯ ಭಾರ ಶ್ರೀಮಂತ ದೇಶಗಳಲ್ಲಿದೆಯೋ ಅಥವಾ ಬಡ ದೇಶಗಳಲ್ಲಿದೆಯೋ ಎಂಬುದನ್ನು ಪ್ರತ್ಯೇಕವಾಗಿ ಹೇಳುವ ಅವಶ್ಯಕತೆ ಇಲ್ಲ.

ಒಂದು ದೇಶದ ಬಳಿ ಇರುವ ನೆಲವೆಲ್ಲ ಉಪಯೋಗಕ್ಕೆ (ಇರಲು, ಉಳಲು ಇತ್ಯಾದಿ-ದಳಿಗಾಗಿ) ಬರುವಂತಹದಿರುವದಿಲ್ಲ. ಕಾರಣ ಪ್ರತಿ ವರ್ಗ ಕಿಲೊಮೀಟರುಗಳಿಗೆ ಜನಸಂಖ್ಯೆ ಎಷ್ಟಿದೆ ಎಂಬುದರಮೇಲೆ ನಿಜ ಸ್ಥಿತಿಯು ಬಚ್ಚಿ ಹೋಗುವದು ಎಂಬ ಆಕ್ಷೇಪ ಕೋಷ್ಟಕ-೨ರ ಬಗ್ಗೆ ಬರಬಹುದು. ಕಾರಣ ಕೋಷ್ಟಕ ೩ ರಲ್ಲಿ ಕೆಲ ಬಡ ಮತ್ತು ಶ್ರೀಮಂತ ರಾಷ್ಟ್ರ

ಕೋಷ್ಟಕ : ೩

ಸಾಗುವಳಿ ಮಾಡಲ್ಪಟ್ಟ ನೆಲದ ತುಲನೆಯಲ್ಲಿ ಜನದಟ್ಟಣೆ (೧೯೪೮-೫೯)

ದೇಶ (೧)	ಸಾಗುವಳಿಯಾದ ಪ್ರತಿ ಎಕರೆಗೆ ಜನಸಂಖ್ಯೆ (೨)
ಜಪಾನ	೭.೪
ನೆದರ್‌ಲ್ಯಾಂಡ್ಸ	೪.೪
ಇಜಿಪ್ತ	೩.೯
ಇಂಗ್ಲೆಂಡ್	೨.೯
ಚೀನ	೨.೫
ಪೆರು	೨.೪
ಇಂಡೋನೇಶಿಯಾ	೨.೦
ನಾರ್ವೆ	೧.೭
ಬ್ರೆಝಿಲ್	೧.೪
ಇಟಲಿ	೧.೨
ಭಾರತ	೧.೧
ಮೆಕ್ಸಿಕೊ	೦.೭೦
ನೈಜೇರಿಯಾ	೦.೬೦
ಅಮೇರಿಕ	೦.೩೮
ರಶಿಯಾ	೦.೩೮
ಅರ್ಜೆಂಟೈನಾ	೦,೨೮
ಆಸ್ಟ್ರಿಯಾ	೦.೧೭
ಆಸ್ಟ್ರೇಲಿಯಾ/ಕ್ಯಾನಡಾ	೦.೧೭

ಗಳಲ್ಲಿಯೂ ಸಾಗುವಳಿ ಮಾಡಲ್ಪಟ್ಟ ನೆಲದ ತುಲನೆಯಲ್ಲಿ ಎಷ್ಟು ಜನ ಇರುವರು ಎಂಬುದನ್ನು ತೋರಿಸಲಾಗಿದೆ. ಸಾಗುವಳಿ ಮಾಡಿದ ಪ್ರತಿ ಎಕರೆಗೆ ಭಾರತದಲ್ಲಿ ಜಪಾನ, ನೆದರ್‌ಲ್ಯಾಂಡ್ಸ್, ಇಂಗ್ಲೆಂಡ್, ನಾರ್ವೆ, ಇಟಲಿ ಮೊದಲಾದ ಶ್ರೀಮಂತ ದೇಶಗಳಲ್ಲಿಗಿಂತ ಕಡಿಮೆ ಜನದಟ್ಟಣೆ ಇರುವದು. ಇದರ ಮೇಲಿಂದ ಭಾರತದಲ್ಲಿ ಸಾಗುವಳಿಯಾದ ಜಮೀನಿನ ತುಲನೆಯಲ್ಲಿಯೂ ಜನಸಂಖ್ಯೆ ಹಾಹಾಕಾರ ಮಾಡುವ ಮಟ್ಟಿಗೆ ಹೆಚ್ಚಿಲ್ಲ ಎಂದು ಹೇಳಬಹುದು. ವಿಶೇಷವಾಗಿ ಉಲ್ಲೇಖಿಸಬೇಕಾದ ಸಂಗತಿ ಎಂದರೆ ಎಲ್ಲ ಬಡ ದೇಶಗಳಲ್ಲಿ ಅವುಗಳ ಸಾಗುವಳಿ ಮಾಡಬಹುದಾದ ನೆಲದ ಶೇಕಡಾ ೧೦ ಕ್ಕಿಂತಲೂ ಕಡಿಮೆ ನೆಲ ಉಳಲ್ಪಡುತ್ತದೆ. ನಮ್ಮ ದೇಶದ ಬಗ್ಗೆಯೇ ಹೇಳಬೇಕಾದರೆ, ಮೊದಲನೆಯದಾಗಿ ಭಾರತದಲ್ಲಿ ಕೇವಲ ಶೇ. ೨೧ ರಷ್ಟು ನೆಲ ನೀರಾವರಿಯಾಗಿದ್ದು ಅದರಲ್ಲಿ ಕೇವಲ ಶೇ. ೨೩.೩ ರಷ್ಟು ನೆಲದ ಮೇಲೆ ಎರಡು ಅಥವಾ ಎರಡಕ್ಕಿಂತ ಹೆಚ್ಚು ಬೆಳೆಗಳನ್ನು ತೆಗೆದುಕೊಳ್ಳಲಾಗುತ್ತದೆ (೧೯೭೧ ರಲ್ಲಿ) ಅಂದ ಮೇಲೆ ನಮ್ಮ ದೇಶದಲ್ಲಿ ಒಕ್ಕಲುತನ ಸಂಪನ್ಮೂಲದ ಕೇವಲ ಶೇ. ೪.೬ ರಷ್ಟು ಲಾಭವನ್ನು ನಾವು ತೆಗೆದುಕೊಳ್ಳುತ್ತೇವೆ ಎಂದಾಯಿತು. ಉಳಿದೆಲ್ಲ ಬಡ ದೇಶಗಳಲ್ಲಿಯೂ ಸುಮಾರು ಇದೇ ಸ್ಥಿತಿ ಇರುವದು.

ನೆಲದ ನಂತರ ಇತರ ಸಂಪನ್ಮೂಲಗಳನ್ನು ತೆಗೆದುಕೊಳ್ಳಿರಿ: ಎಲ್ಲ ಬಡ ದೇಶಗಳಲ್ಲಿ ವಿಪುಲ ಪ್ರಮಾಣದಲ್ಲಿ ಖನಿಜ ದ್ರವ್ಯಗಳಿವೆ. ವಿರೋಧಾಭಾಸವೆಂದರೆ, ನಿಸರ್ಗ ಖನಿಜ ದ್ರವ್ಯಗಳನ್ನು ಬಡ ದೇಶಗಳಿಗೆ ಹೆಚ್ಚು ಕೊಡಮಾಡಿದೆ. ಜಗತ್ತಿನಲ್ಲಿ ಅತಿ ಹೆಚ್ಚು ಕಬ್ಬಿಣದ ಅದಿರು ಇರುವ ದೇಶಗಳೆಂದರೆ ಭಾರತ ಮತ್ತು ಬ್ರೆಝಿಲ್. ಜಗತ್ತಿನ ಒಟ್ಟು ಕಬ್ಬಿಣದ ಅದಿರಿನ ಶೇ.೨೧ ರಷ್ಟು ಅದಿರು ಭಾರತದಲ್ಲಿದೆ ಎರಡನೆಯ ದೇಶವಾದ ಬ್ರೆಝಿಲ್‌ದಲ್ಲಿ ಒಟ್ಟು ಜಗತ್ತಿನ ಶೇ ೧೫ ರಷ್ಟು ಕಬ್ಬಿಣದ ಅದಿರು ಇದೆ. ಆದರೆ ಇವೆರಡೂ ದೇಶಗಳು ಆರ್ಥಿಕವಾಗಿ ಹಿಂದುಳಿದ ದೇಶಗಳಾಗಿವೆ. ನಮ್ಮ ದೇಶದಲ್ಲಿ ಕಲ್ಲಿದ್ದಲು ಕೂಡ ವಿಪುಲ ಪ್ರಮಾಣದಲ್ಲಿದೆ. ಈಚೆಗಿನ ಒಂದು ಅಂದಾಜಿನ ಪ್ರಕಾರ ೫೦೦ ವರ್ಷಗಳವರೆಗೆ ಸಾಲುವಷ್ಟಿದೆ! ಇಲ್ಲಿಯೆ ಬಡದೇಶಗಳಲ್ಲಿಯ ಎಷ್ಟೋ ಭೂಗತ ಸಂಪತ್ತು, ಜಲ ಸಂಪತ್ತು, ಮತ್ತು ಅರಣ್ಯ ಸಂಪತ್ತಿನ ಕೇವಲ ಸ್ವಲ್ಪ ಭಾಗ ಮಾತ್ರ ಸದ್ಯ ಗೊತ್ತಿದೆ. ಇನ್ನೂ ಎಷ್ಟೋ ಭಾಗ ಗೊತ್ತಾಗಬೇಕು. ಉದಾಹರಣೆಗೆ ಭಾರತದಲ್ಲಿಯ ತೈಲ, ನಾವು ಮೇಲಿಂದ ಮೇಲೆ ಹೊಸ ತೈಲನಿಕ್ಷೇಪಗಳು ದೊರಕಿದ್ದು ಓದುತ್ತೇವೆ. ಇಂತು ಈ ವಿಷಯದಲ್ಲಿಯೂ ಬಡ ದೇಶಗಳು ಬಹು ಸಮೃದ್ಧ ರಾಷ್ಟ್ರಗಳಾಗಿವೆ, ತದ್ವಿರುದ್ಧವಾಗಿ ಶ್ರೀಮಂತ ಪಾಶ್ಚಿಮಾತ್ಯ ರಾಷ್ಟ್ರಗಳ ನೈಸರ್ಗಿಕ ಸಂಪತ್ತು ಬಹು ಕೊರತೆಯುದಾಗಿದೆ, ಅವುಗಳಿಗೆ ಕಚ್ಚಾ ಮಾಲಿಗಾಗಿ ಬಡ ದೇಶಗಳನ್ನು ಅವಲಂಬಿಸಿರಬೇಕಾಗುತ್ತದೆ, ತೈಲ ಉತ್ಪಾದಕ ಅರಬ್ ರಾಷ್ಟ್ರಗಳು ಈಚೆಗೆ ತೈಲ ನಿರ್ಯಾತದ ಮೇಲೆ ಅಂಕಿತ ಹಾಕಿದಾಗ ಶ್ರೀಮಂತ ಪಾಶ್ಚಿಮಾತ್ಯ ರಾಷ್ಟ್ರಗಳ ಸ್ಥಿತಿ ಹೇಗೆ ಶೋಚನೀಯವಾಗಿತ್ತು ಎಂಬುದು ಎಲ್ಲರಿಗೂ ವಿದಿತವಾದ ಸಂಗತಿ.

ನೈಸರ್ಗಿಕ ಸಂಪತ್ತಿನ ತುಲನೆಯಲ್ಲಿ ಜನಸಂಖ್ಯೆ ಬಡರಾಷ್ಟ್ರಗಳಲ್ಲಿ ಹೆಚ್ಚಿರದೆ ಶ್ರೀಮಂತ ರಾಷ್ಟ್ರಗಳಲ್ಲಿ ಹೆಚ್ಚಿದೆ ಎಂದು ಕಂಡಾಯಿತು. ಬಡ ದೇಶಗಳಲ್ಲಿಯ ಜನಸಂಖ್ಯೆಯ ಬೆಳವಣಿಗೆಯ ದರ ಕಂಗೆಡುವಷ್ಟು ಹೆಚ್ಚಿದೆ ಎಂದೂ ಬಡರಾಷ್ಟ್ರಗಳಿಗೆ ಹೇಳಲಾಗುತ್ತಿದೆ. ತಮಗೆ ಅನುಕೂಲವಿರುವ ಅಂಕಿಸಂಖ್ಯೆಗಳನ್ನು ತೆಗೆದುಕೊಂಡು ಪಾಶ್ಚಿಮಾತ್ಯ ಪಂಡಿತರು (ಮತ್ತು ಬಡ ದೇಶಗಳಲ್ಲಿ ಅವರ ಪಾದ ಉಪ್ಪೋಷಣೆಗೆ ಹಾತೊರೆಯುತ್ತಿರುವ ಭಟ್ಟಂಗಿಗಳಾದ ವಿದ್ವಾಂಸರು) ಬಡ ದೇಶಗಳಲ್ಲಿಯ ಜನಸಂಖ್ಯೆಯ ವೃದ್ಧಿಯ ದರ ಭಯಾನಕವಾಗಿದೆ ಎಂದು ಹೇಳುತ್ತಾರೆ, ಆದರೆ ಇತಿಹಾಸ ಹೇಳುವದು ಇದಕ್ಕೆ ವಿಪರೀತ ಸಂಗತಿಯಾಗಿದೆ. ಕೋಷ್ಟಕ ೪ರಲ್ಲಿ ಯಾವ ಪ್ರದೇಶ

ಕೋಷ್ಟಕ-೪ ಜಗತ್ತಿನ ಒಟ್ಟು ಜನಸಂಖ್ಯೆಯಲ್ಲಿ ವಿವಿಧ ಪ್ರದೇಶದ ಭಾಗ
(ಜನಸಂಖ್ಯೆ ಕೋಟಿಗಳಲ್ಲಿ) (೧೬೫೦-೧೯೫೭)

ವರ್ಷ	ಆಫ್ರಿಕ		ಏಶಿಯ		ಲ್ಯಾ. ಅಮೇರಿಕ		ಉ. ಅಮೇರಿಕ		ಯುರೋಪ	
	ಜ. ಸಂ.	ಶೇ.	ಜ. ಸಂ.	ಶೇ.	ಜ. ಸಂ.	ಶೇ.	ಜ. ಸಂ.	ಶೇ.	ಜ. ಸಂ.	ಶೇ.
೧೬೫೦	೧೦.೦	೧೮.೩	೩೨.೭	೬೦.೦	೧.೨	೨.೨	೦.೧	೦.೨	೧೦.೩	೧೮.೯
೧೭೫೦	೯.೫	೧೩.೦	೪೭.೫	೬೫.೨	೧.೧	೧.೫	೦.೧	೦.೧	೧೪.೪	೧೯.೮
೧೮೫೦	೯.೫	೮.೧	೭೪.೧	೬೩.೩	೩.೩	೨.೮	೨.೬	೨.೨	೨೭.೪	೨೩.೪
೧೯೦೦	೧೨.೦	೭.೫	೯೧.೫	೫೬.೯	೬.೩	೩.೯	೮.೧	೫.೦	೪೨.೩	೨೬.೩
೧೯೨೦	೧೪.೦	೭.೭	೯೬.೭	೫೩.೪	೯.೦	೫.೦	೧೧.೭	೬.೫	೪೮.೬	೨೬.೯
೧೯೩೦	೧೫.೫	೭.೭	೧೦೭.೩	೫೩.೫	೧೦.೯	೫.೩	೧೩.೫	೬.೭	೫೩.೧	೨೬.೩
೧೯೪೦	೧೭.೨	೭.೭	೧೨೧.೩	೫೪.೦	೧೩.೧	೫.೮	೧೪.೬	೬.೫	೫೭.೨	೨೫.೫
೧೯೫೦	೧೯.೯	೮.೦	೧೩೭.೯	೫೫.೩	೧೬.೨	೬.೫	೧೬.೮	೬.೭	೫೭.೪	೨೩.೦
೧೯೫೭	೨೨.೫	೮.೦	೧೫೫.೬	೫೫.೭	೧೯.೨	೬.೯	೧೮.೯	೬.೮	೬೧.೮	೨೨.೧

ಗಳಲ್ಲಿಯ ಜನಸಂಖ್ಯೆ ಹೆಚ್ಚು ಬೆಳೆದಿದೆ ಮತ್ತು ಬೆಳೆಯುತ್ತಿದೆ ಎಂಬುದನ್ನು ತೋರಿಸಲಾಗಿದೆ.

೧೬೫೦ ರ ನಂತರದ ೩೦೦ ವರ್ಷಗಳಲ್ಲಿ ಬಡ ದೇಶಗಳ ಜನಸಂಖ್ಯೆ ಒಟ್ಟು ಜಗತ್ತಿನ ಜನಸಂಖ್ಯೆಯ ತುಲನೆಯಲ್ಲಿ ಶೇ. ೧೦ ರಷ್ಟು ಕಡಿಮೆಯಾಗಿದೆ. ೧೬೫೦ ರಲ್ಲಿ ಆಫ್ರಿಕ, ಏಶಿಯಾ ಮತ್ತು ಲ್ಯಾಟಿನ್ ಅಮೇರಿಕೆಗಳಲ್ಲಿ ಒಟ್ಟು ಜನಸಂಖ್ಯೆ ಜಗತ್ತಿನ ಜನಸಂಖ್ಯೆಯ ಶೇ. ೮೦.೫ ರಷ್ಟು ಇದ್ದಿತಾದರೆ, ೧೯೫೭ ರಲ್ಲಿ ಈ ಪ್ರಮಾಣ ಶೇ. ೭೦.೬ ರಷ್ಟು ಇಳಿದಿದೆ. ತದ್ವಿರುದ್ಧ, ಯುರೋಪ ಹಾಗು ಉತ್ತರ ಅಮೇರಿಕೆಗಳಲ್ಲಿಯ ಜನಸಂಖ್ಯೆಯ ಪ್ರಮಾಣ ಒಟ್ಟು ಜಗತ್ತಿನ ಜನಸಂಖ್ಯೆಯಲ್ಲಿ ೧೬೫೦ ರಲ್ಲಿ ಅನುಕ್ರಮವಾಗಿ ಶೇ. ೧೮.೯ ಮತ್ತು ೦.೨ ಇದ್ದುದು ೧೯೫೭ ರಲ್ಲಿ ಶೇ. ೨೨.೧ ಮತ್ತು ೬.೮ ಆಗಿದೆ. ಈ ಕಾಲದಲ್ಲಿ ಬಡ ಪ್ರದೇಶಗಳಾದ ಆಫ್ರಿಕೆ ಮತ್ತು ಏಶಿಯಾದ ಜನಸಂಖ್ಯೆಗಳು ಅನುಕ್ರಮವಾಗಿ ೨¼ ಪಟ್ಟಿನಿಂದ ಮತ್ತು ೪¾ ಪಟ್ಟಿನಿಂದ ಏರಿದರೆ ಶ್ರೀಮಂತ ಭಾಗಗಳಾದ ಯುರೋಪದ ಜನಸಂಖ್ಯೆ ೬ ಪಟ್ಟಿನಿಂದ ಮತ್ತು ಉತ್ತರ ಅಮೇರಿಕೆಯ ಜನಸಂಖ್ಯೆ ೧೮೯ ಪಟ್ಟಿನಿಂದ ಏರಿತು! ಈ ರೀತಿ ಶ್ರೀಮಂತ ರಾಷ್ಟ್ರಗಳಲ್ಲಿಯ ಜನಸಂಖ್ಯೆಯ ಹೆಚ್ಚಳದ ದರ ಬಡ ದೇಶಗಳಿಗಿಂತ ಪ್ರಚಂಡ ಪ್ರಮಾಣದಲ್ಲಿ ಹೆಚ್ಚಿದೆ. ಈಚೆಗೆ ಬಡ ದೇಶಗಳಲ್ಲಿಯ ಜನಸಂಖ್ಯೆಯು ಹೆಚ್ಚಳದ ದರ ಶೇ. ೩ ರ ನೆರೆಹೊರೆಯಲ್ಲಿರುವ ದೇನೋ ನಿಜ (೧೯೬೬-೭೦ ರ ಅವಧಿಯಲ್ಲಿ ಭಾರತದ ಜನಸಂಖ್ಯೆಯು ಹೆಚ್ಚಳದ ದರ ಪ್ರತಿ ವರ್ಷ ಶೇ. ೨.೧೧ ರಷ್ಟು ಇದ್ದಿತು). ಆದರೆ ಇಂಗ್ಲೆಂಡಿನಲ್ಲಿ ೧೮೮೧ ರ ವರೆಗೆ ಮತ್ತು ಜರ್ಮನಿಯಲ್ಲಿ ೧೯೦೪ ರ ವರೆಗೆ ಜನಸಂಖ್ಯೆಯ ಹೆಚ್ಚಳದ ದರ ಶೇ. ೩.೪ ಇದ್ದಿತು. ಜಪಾನದಲ್ಲಂತೂ ೧೯೩೧ ರ ವರೆಗೆ ಕೂಡ ಈ ದರ ಶೇ. ೩.೨ ರಷ್ಟು ಇದ್ದಿತು.

ಈ ರೀತಿ ತೃತೀಯ ಬಣ ದೇಶಗಳಲ್ಲಿಯ ಜನಸಂಖ್ಯೆ, ಜನಸಂಖ್ಯೆಯ ವೃದ್ಧಿಯ ದರ ಹಾಗು ಸಂಪನ್ಮೂಲಗಳು ಇವುಗಳಲ್ಲೊಂದೂ ಸಂಗತಿ ಚಿಂತೆಗೀಡು ಮಾಡುವಂತಿಲ್ಲ.

ಹಾಗಾದರೆ ಈ ಬೊಬ್ಬೆ ಏಕೆ? ಇದಕ್ಕೆ ಕಾರಣವಿದೆ. ತೃತೀಯ ಬಣದ ದೇಶಗಳು ಸಂಪನ್ಮೂಲಗಳಿಂದ ಸಮೃದ್ಧ ದೇಶಗಳಿದ್ದರೂ ಕಡು ಬಡವ ದೇಶಗಳಾಗಿವೆ. ಅವು ಬಡ ದೇಶಗಳಾಗಿದ್ದ ಕಾರಣ ಅವುಗಳ ಜನಸಂಖ್ಯೆಯಲ್ಲ ಅಥವಾ ಜನಸಂಖ್ಯೆಯ ವೃದ್ಧಿಯ ದರವೂ ಅಲ್ಲ. ಅವು ಬಡವರಾಗಿರುವ ಕಾರಣ ಬೇರೆಯೇ ಇದೆ, ಅವೆಂದರೆ ತೃತೀಯ ಬಣದ ಎಲ್ಲ ದೇಶಗಳು ಸುಮಾರು ೧೯೫೦ ರ ವರೆಗೆ (ರ್ಹೊಡೇಶಿಯ ಮತ್ತು ದಕ್ಷಿಣ ಆಫ್ರಿಕೆಗಳಂತಹ ದೇಶಗಳು ಇಂದಿಗೂ ಕೂಡ)

ಪಾಶ್ಚಿಮಾತ್ಯ ದೇಶಗಳ ಅಧಿಪತ್ಯದಲ್ಲಿದ್ದವು. ಅವು ತಮ್ಮ ಅಧಿಪತ್ಯದಲ್ಲಿದ್ದಾಗ ಪಾಶ್ಚಿಮಾತ್ಯ ರಾಷ್ಟ್ರಗಳು ತೃತೀಯ ಬಣದ ದೇಶಗಳನ್ನು ಸುಲಿದಿವೆ. ಅವುಗಳನ್ನು ಕೊಳ್ಳೆ ಹೊಡೆದಿವೆ. ಇಂದು ತೃತೀಯ ಬಣದ ದೇಶಗಳು ರಾಜಕೀಯವಾಗಿ ಸ್ವತಂತ್ರವಾಗಿದ್ದರೂ ಆರ್ಥಿಕವಾಗಿ ಈಗಲೂ ಅವು ಪಾಶ್ಚಿಮಾತ್ಯ ರಾಷ್ಟ್ರಗಳ ಅಧಿಪತ್ಯದಲ್ಲಿಯೇ ಉಳಿದಿವೆ. ಅಂತಾರಾಷ್ಟ್ರೀಯ ವ್ಯಾಪಾರ, ಆರ್ಥಿಕ ನೆರವು, ಸಹಾಯ, ಸಾಲಗಳ ಮುಖಾಂತರ ಬಡ ದೇಶಗಳನ್ನು ಸುಲಿಯುವ ಕ್ರಿಯೆ ಇಂದಿಗೂ ನಿಂತಿಲ್ಲ. ತಾವು ಮಾಡುತ್ತಿರುವ ಹೀನ ಶೋಷಣೆಯ ಕ್ರಿಯೆ ಮುಚ್ಚಿಹೋಗಲೆಂದು ಮತ್ತು ತಮ್ಮ ಸುಲಿಗೆಯ ಕ್ರಿಯೆ ಅಬಾಧಿತವಾಗಿ ಅನಿರ್ದಿಷ್ಟ ಕಾಲದ ವರೆಗೆ ನಡೆಯಲೆಂದು ಪಾಶ್ಚಿಮಾತ್ಯ ರಾಷ್ಟ್ರಗಳು ತೃತೀಯ ಬಣದ ದೇಶಗಳಲ್ಲಿಯ ಬಡತನದ ಕಾರಣ ಜನಸಂಖ್ಯೆ ಎಂದು ಹೇಳುತ್ತಿವೆ. ಇದಲ್ಲದೆ ಬಡ ದೇಶಗಳಲ್ಲಿಯ ಆರ್ಥಿಕ ಸಂಘಟನೆಯೂ ಕೆಲ ಮಟ್ಟಿಗೆ ಬಡತನದ ಕಾರಣವಾಗಿದೆ. ಬಡ ದೇಶಗಳಲ್ಲಿಯ ಶ್ರೀಮಂತರು ಬಡವರನ್ನು ಶೋಷಿಸಿ ಜೀವಿಸುತ್ತಾರೆ. ಈ ಶೋಷಣೆಯಿಂದ ಬಡವರು ಬಡವರಾಗಿ ಉಳಿಯುತ್ತಾರಷ್ಟೇ ಅಲ್ಲ, ಇದ್ದ ಸಂಪನ್ಮೂಲಗಳ ಮಹತ್ತರ ಲಾಭ ಪಡೆಯಲು ಈ ಉತ್ಪಾದನೆಯ ಸಂಬಂಧಗಳು ಅಡ್ಡ ಬರುತ್ತಿವೆ.

ಶ್ರೀಮಂತ ರಾಷ್ಟ್ರಗಳು ಗೈಯುತ್ತಿದ್ದ ಬಡ ದೇಶಗಳ ಶೋಷಣೆಯ ಬಗ್ಗೆ ಹೇಳಿದಷ್ಟು ಕಡಿಮೆಯೇ. ನಮ್ಮ ಭಾರವನ್ನೇ ತೆಗೆದುಕೊಳ್ಳಿರಿ. ಇಂಗ್ಲೆಂಡ ದೇಶ ನಮ್ಮನ್ನು ೨೦೦ ವರ್ಷಗಳ ವರೆಗೆ ಆಳಿತು. ಈ ಕಾಲದಲ್ಲಿ ಇಂಗ್ಲೆಂಡು ಭಾರತದಲ್ಲಿಯ ಸಂಪತ್ತನ್ನು ಪ್ರಚಂಡ ಪ್ರಮಾಣದಲ್ಲಿ ಲೂಟಿ ಮಾಡಿತು. ಬ್ರಿಟಿಶರು ಭಾರತಕ್ಕೆ ಬರುವ ಮೊದಲು ನಮ್ಮ ದೇಶ ಆರ್ಥಿಕವಾಗಿ, ಆಗಿನ ಮಾನದಿಂದ, ಒಂದು ಮುಂದುವರೆದ ದೇಶವಾಗಿದ್ದು, ಬ್ರಿಟಿಶರು ಬಂದು ನಮ್ಮ ದೇಶವನ್ನು ಒಂದು ಬಡ ದೇಶವನ್ನಾಗಿ ಮಾರ್ಪಡಿಸಿದರು. ಬ್ರಿಟಿಶರು ಮಾಡಿದ ಭಾರತದ ಲೂಟಿಯಲ್ಲಿಯ ಕೆಲ ಉದಾಹರಣೆಗಳನ್ನಿಲ್ಲಿ ಕೊಡಬಹುದು :

೧೭೫೦ ರಿಂದ ೧೮೦೦ ರ ೫೦ ವರ್ಷಗಳ ಅವಧಿಯಲ್ಲಿ ೧೦ ರಿಂದ ೧೫ ಕೋಟಿ ಪೌಂಡು ಸಂಪತ್ತು ಭಾರತದಿಂದ ಬ್ರಿಟನ್ನಿಗೆ ಹೋಯಿತೆಂದು ಸರ್ ಪೆರವಿಲ್ ಗ್ರಿಫಿತ್ ಎಂಬ ಬ್ರಿಟಿಶ್ ವಸಾಹತು ಅಧಿಕಾರಿಯೆಂದೇ ಅಂದಾಜಾಗಿದೆ. ೧೮೦೦ ರ ಸುಮಾರಿಗೆ ಇಂಗ್ಲೆಂಡಿನಲ್ಲಿದ್ದ ಎಲ್ಲ ಉದ್ಯಮಗಳಲ್ಲಿಯ ಬಂಡವಾಳಗಿಂತ ಹೆಚ್ಚು ಹಣ ಭಾರತದಿಂದ ಇಂಗ್ಲೆಂಡಿಗೆ ಹೋಯಿತು ! ಅಷ್ಟೇ ಏಕೆ, ಇಂಗ್ಲೆಂಡಿನಲ್ಲಿಯ ಔದ್ಯೋಗಿಕ ಕ್ರಾಂತಿಯ ಪ್ರಾರಂಭ ಮತ್ತು ಭಾರತದಲ್ಲಿ ಬ್ರಿಟಿಶರು ಆಡಿದ ಪ್ಲಾಸಿ ಕಾಳಗ ಇವುಗಳಲ್ಲಿ ಸಮಯಾಂತರವಿಲ್ಲ. ಅಂದರೆ ಬ್ರಿಟಿಶರು ಭಾರತದಲ್ಲಿ ರಾಜಕೀಯ ತಳ ಹಾಕಿದ ನಂತರವೇ! ಇಂಗ್ಲೆಂಡಿನ ಔದ್ಯೋಗಿಕ ಕ್ರಾಂತಿ ಪ್ರಾರಂಭವಾಯಿತು.

ಇದಲ್ಲದೆ ಭಾರತದ ಅತೀವ ವಿಕಸಿತ ವಸ್ತ್ರ ಉದ್ಯಮವನ್ನು ಸದೆಬಡಿದು ಬ್ರಿಟಿಶರು ತಮ್ಮ ವಸ್ತ್ರೋದ್ಯೋಗಕ್ಕೆ ಭಾರತದಲ್ಲಿ ಮಾರುಕಟ್ಟೆ ನಿರ್ಮಿಸಿಕೊಂಡರು. ಭಾರತದ ಬಟ್ಟೆಗಳು ಇಂಗ್ಲೆಂಡಿನಲ್ಲಿ ಔದ್ಯೋಗಿಕ ಕ್ರಾಂತಿಯಾದ ನಂತರ ಕೂಡ ೫೦ ವರ್ಷಗಳ ವರೆಗೆ ಆ ದೇಶದ ಮಾರುಕಟ್ಟೆಗಳಲ್ಲಿದ್ದವು. ೧೮೧೫ ರ ವರೆಗೆ ಕೂಡ ಭಾರತ ಇಂಗ್ಲೆಂಡಿಗೆ ೧೩ ಲಕ್ಷ ಪೌಂಡು ಬೆಲೆಯ ನೂಲಿನ ಬಟ್ಟೆಗಳನ್ನು ನಿರ್ಯಾತ ಮಾಡುತ್ತಿತ್ತಾದರೆ ಅದು ಇಂಗ್ಲೆಂಡಿನಿಂದ ಕೇವಲ ೨೬ ಸಾವಿರ ಪೌಂಡು ಬೆಲೆಯ ಬಟ್ಟೆಗಳನ್ನು ಅಂದರೆ ನಿರ್ಯಾತ ಬೆಲೆಯ ಕೇವಲ ಶೇ. ೨೦ ರಷ್ಟು ಆಯಾತ ಮಾಡಿಕೊಳ್ಳುತ್ತಿತ್ತು. ಇದರ ಕಾರಣವೆಂದರೆ ಭಾರತದ ಬಟ್ಟೆಗಳು ಬ್ರಿಟಿಶ್ ಬಟ್ಟೆಗಳಿಗಿಂತ ಶೇ. ೫೦ ರಿಂದ ೬೦ ರಷ್ಟು ಅಗ್ಗವಾಗಿದ್ದವು. ಹೀಗಿದ್ದಾಗ ಬ್ರಿಟಿಶರಿಗೆ ತಾವು ಸಾಮಾನ್ಯ ಆರ್ಥಿಕ ಸ್ಪರ್ಧೆಯಿಂದ ಭಾರತದ ಪೇಟೆಗಳಲ್ಲಿ ಪದಾರ್ಪಣ ಮಾಡುವದು ಮತ್ತು ಇಂಗ್ಲೆಂಡಿನ ಪೇಟೆಗಳಿಂದ ಭಾರತೀಯ ವಸ್ತ್ರಗಳ ಉಚ್ಚಾಟನೆ ಮಾಡುವದು ಅಸಾಧ್ಯ

ವೆಂದು ಮನದಟ್ಟಾಯಿತು. ಕಾರಣ ಅವರು ರಾಜಕೀಯ ಮಾರ್ಗ ಅವಲಂಬಿಸಿದರು. ಇಂಗ್ಲಂಡಿನಲ್ಲಿ ಭಾರತದ ಬಟ್ಟೆಗಳ ಮೇಲೆ ಶೇ. ೭೦ ರಿಂದ ೮೦ ರಷ್ಟು ಕರ ಹೇರಿದರಾದರೆ ಬ್ರಿಟಿಶ್ ಬಟ್ಟೆಗಳು ಮಾತ್ರ ಭಾರತದ ಪೇಟೆಗಳಲ್ಲಿ ಸುಮಾರಾಗಿ ಕರ ಮುಕ್ತವಾಗಿದ್ದವು. ಭಾರತದ ರೇಶಿಮೆಯ ಬಟ್ಟೆಗಳ ಮೇಲೆ ಇಂಗ್ಲಂಡಿನಲ್ಲಿ ಶೇ.೨೦ ರಷ್ಟು ಕರವಿದ್ದಾಗ ಭಾರತದಲ್ಲಿ ಬ್ರಿಟಿಶ್ ರೇಶಿಮೆಯ ಬಟ್ಟೆಯ ಮೇಲೆ ಕೇವಲ ಶೇ. ೩.೫ ರಷ್ಟು ಕರವಿದ್ದಿತು! ಎಚ್ ವರ್‍ಸಲ್ಟ್ ಎಂಬುವವರು A View Of The Rise Of English Government In Bengal ಎಂಬ ಪುಸ್ತಕದಲ್ಲಿ ಬ್ರಿಟಿಶರ ನೀಚತನದ ವರ್ಣನೆಯನ್ನು ಹೀಗೆ ಮಾಡಿದ್ದಾರೆ, "ಅವರು (ಬ್ರಿಟಿಶರು) ಒಕ್ಕಲಿಗರಿಂದ ಮತ್ತು ವ್ಯಾಪಾರಿಗಳಿಂದ ವಸ್ತುಗಳನ್ನು ಅವುಗಳ ೧/೪ ಬೆಲೆಯಲ್ಲಿ ಬಲಪ್ರಯೋಗದಿಂದ ಕಸಿದುಕೊಂಡು ನಿರ್ಯಾತ ಮಾಡುತ್ತಾರೆ ಮತ್ತು ಹಿಂಸೆ ಹಾಗು ದಬ್ಬಾಳಿಕೆಗಳಿಂದ ತಮ್ಮ ಒಂದು ರೂಪಾಯಿ ಬೆಲೆಯ ವಸ್ತುಗಳನ್ನು ಕನಿಷ್ಠಪಕ್ಷ ಐದು ರೂಪಾಯಿಗಳಿಗೆ ಮಾರುತ್ತಾರೆ." ಹೀಗೆ ಭಾರತದ ಅನಿರ್ಬಂಧ ಸುಲಿಗೆ ಬ್ರಿಟಿಶರ ಕಾಲದಲ್ಲಿ ನಡೆದಿತ್ತು. ನಾವು ಬಡವರಾಗಿ ಉಳಿದದ್ದು ಈ ಪರದೇಶಗಳ ದರೋಡೆ-ಖೋರತನದಿಂದ. ಎಲ್ಲ ಬಡ ದೇಶಗಳ ಬವ-ಣೆಯ ಕಾರಣವೂ ವಾಸ್ತವವಾಗಿ ಇದೇ ಆಗಿದೆ.


ಹೀಗೆ ಕಪ್ಪು ಮತ್ತು ಕಂದು ಜನರನ್ನು ಸುಲಿದು ಬಿಳಿಯ ಮನುಷ್ಯ ಶ್ರೀಮಂತನಾದ. ಬಡ ರಾಷ್ಟ್ರಗಳಿಗೆ ರಾಜಕೀಯ ಸ್ವಾತಂತ್ರ್ಯ ಕೊಟ್ಟ ನಂತರವೂ ಬಿಳಿಯ ಮನುಷ್ಯನ ಆರ್ಥಿಕ ಶೋಷಣೆ ನಿಲ್ಲಲಿಲ್ಲ. ಬಡ ರಾಷ್ಟ್ರಗಳೆಲ್ಲ ಒಕ್ಕಲುತನ ಹುಟ್ಟುವಳಿ, ಸಮುದ್ರ ಹುಟ್ಟುವಳಿ, ಗಣಿಗಳ ಕಚ್ಚಾಮಾಲುಗಳಂತಹ ಪ್ರಾಥಮಿಕ ವಸ್ತುಗಳನ್ನು ಮಾರುವ ದೇಶಗಳಾಗಿವೆ. ಈ ವಸ್ತುಗಳ ಬೆಲೆಗಳಲ್ಲಿ ಕಳವಳಜನಕ ಏರಿಳಿತಗಳಾಗುತ್ತವೆ (ಅಂತಾ-ರಾಷ್ಟ್ರೀಯ ಮಾರುಕಟ್ಟೆಯಲ್ಲಿ); ಆದರೆ ಬಡ ರಾಷ್ಟ್ರಗಳು ಪಾಶ್ಚಿಮಾತ್ಯ ರಾಷ್ಟ್ರಗಳಿಂದ ಕೊಳ್ಳುವ ವಸ್ತುಗಳ ಬೆಲೆಗಳು ಕ್ರಮಶಃ ಏರುತ್ತಿವೆಯೇ ವಿನಾ ಇಳಿಯುವ ಹೆಸರಿಲ್ಲ. ಎಷ್ಟೊ UNCTAD ದಳ, ಜಿನೇವಾ ಮತ್ತು ಪ್ಯಾರಿಸ್ ಸಭೆಗಳು ಸೇರಿದರೂ ಅವುಗಳಿಂದ ಬಡ ರಾಷ್ಟ್ರಗಳಿಗಾದ ಲಾಭ ಸೊನ್ನೆಯಾಗಿದೆ. ಅಂತಾರಾಷ್ಟ್ರೀಯ ವ್ಯಾಪಾರದ ಯಂತ್ರಣದಿಂದಾಗಿ ಬಡ ರಾಷ್ಟ್ರಗಳ ಸಂಪತ್ತು ಇಂದಿಗೂ ಶ್ರೀಮಂತ ರಾಷ್ಟ್ರಗಳ ಬೊಕ್ಕಸದಲ್ಲಿ ಹೋಗಿಬೀಳುತ್ತದೆ. ಇದರಿಂದಾಗಿ ಬಡ ರಾಷ್ಟ್ರಗಳು ಬಡವಾಗಿ ಉಳಿದಿವೆ. ತಮ್ಮ ಶೋಷಣೆಯ ನೀಚ ಕೃತ್ಯ ಹೊರಬಿದ್ದೀತೆಂದು ಪಾಶ್ಚಿಮಾತ್ಯ ರಾಷ್ಟ್ರಗಳು ಬಡ ರಾಷ್ಟ್ರಗಳ ಲಕ್ಷ್ಯವನ್ನು ಈ ಸಂಗತಿಯಿಂದ ಹೊರಳಿಸಿ ಜನಸಂಖ್ಯೆಯ ಮೇಲೆ ಕೇಂದ್ರೀಕರಿಸಿವೆ. ಒಂದು ಸುಳ್ಳನ್ನು ಸಾವಿರ ಸಲ ಹೇಳಿದರೆ ಅದು ಸತ್ಯವೆಂದು ಅನ್ನಿಸುತ್ತದೆ. ಕಾರಣ, ಜನಸಂಖ್ಯೆಯೇ ನಮ್ಮ ಬಡತನದ ಆದಿ ಎಂದು ನಾವೆಲ್ಲ ತಿಳಿದುಕೊಂಡಿದ್ದೇವೆ.


ಇದರ ಅರ್ಥ ಜನಸಂಖ್ಯೆಯ ಬೆಳವಣಿಗೆಯನ್ನು ನಿಯಂತ್ರಿಸಬಾರದೆಂದಲ್ಲ. ಕುಟುಂಬ ನಿಯೋಜನೆಯ ಕಾರ್ಯಕ್ರಮ ಇರಲೇಬೇಕು. ತಾಯಂದಿರಿಗೆ ಆರೋಗ್ಯಕಾರಕ ಜೀವನ ಬಾಳಲು, ಮಕ್ಕಳಿಗೆ ಪ್ರಾಥಮಿಕ ಅವಸ್ಥೆಯಲ್ಲಿ ಚೆನ್ನಾಗಿ ಕಾಳಜಿ ಸಿಗಲು ಮತ್ತು ಒಟ್ಟಾರೆ ಕೌಟುಂಬಿಕ ನೆಮ್ಮದಿಗಾಗಿ ಕುಟುಂಬ ನಿಯೋಜನೆ-ಗರ್ಭನಿರೋಧಕ ಕಾರ್ಯಕ್ರಮಗಳು ಅತ್ಯವಶ್ಯವಾಗಿವೆ. ಆದರಿಷ್ಟೇ, ನಾವು ಬಹಳ ಜನರಿರುವೆವು ಎಂದು ಕೈಕಾಲು ಕಳೆದುಕೊಂಡು ಕೂಡುವ ಕಾರಣವಿಲ್ಲ. ತದ್ವಿರುದ್ಧ ಹೊಸ ಹುಮ್ಮಸ್ಸಿನಿಂದ ಹೆಚ್ಚು ಉತ್ಪಾದನೆ ಮಾಡಿ ಸ್ವಯಂಪೂರ್ಣರಾಗಬೇಕು. ಇದರಿಂದ ಶ್ರೀಮಂತ ರಾಷ್ಟ್ರಗಳ ಮೇಲಿನ ಅವಲಂಬನೆ ಕಡಿಮೆಯಾಗುತ್ತದೆ. ನಮ್ಮ ಜುಟ್ಟನ್ನು ಶ್ರೀಮಂತ ರಾಷ್ಟ್ರಗಳ ಕೈಯಲ್ಲಿ ಕೊಡದಿದ್ದರೆ ಅವರು ನಮ್ಮನ್ನು ಸತಾಯಿಸುವದು ಹೇಗೆ?



ಕಾಲ್ಗೇಟ್ ಡೆಂಟಲ್ ಕ್ರೀಮ್‌ನಿಂದ ಉಸಿರಿನ ದುರ್ವಾಸನೆಯನ್ನು ನಿವಾರಿಸಿರಿ... ದಿನವಿಡೀ ದಂತಕ್ಷಯವನ್ನು ಎದುರಿಸಿರಿ!

ವೈಜ್ಞಾನಿಕ ಪರೀಕ್ಷೆಗಳು ಪ್ರತಿ 10 ಮಂದಿ ಜನರಲ್ಲಿ 7 ಜನರ ಉಸಿರಿನ ದುರ್ಗಂಧವನ್ನು ಕಾಲ್ಗೇಟ್ ಕೂಡಲೇ ನಿಲ್ಲಿಸುತ್ತದೆಂದು ಸಿದ್ಧಗೊಳಿಸಿವೆ. ಏಕೆಂದರೆ : ಕಾಲ್ಗೇಟ್ ಡೆಂಟಲ್ ಕ್ರೀಮ್ ನಿಂದ ನಿಮ್ಮ ಹಲ್ಲುಜ್ಜಿದರೆ, ದುರ್ವಾಸನೆ ಮತ್ತು ದಂತಕ್ಷಯವನ್ನು ಉಂಟುಮಾಡುವ ಶೇಕಡಾ 85ರಷ್ಟು ರೋಗಾಣುಗಳ ನಿವಾರಣೆಯಾಗುತ್ತದೆ. ಮಕ್ಕಳಿಗೂ ಅದರ ಪೆಪ್ಪರ್ ಮಿಂಟ್‌ನ ರುಚಿಯಿಂದ ಆನಂದ.





[illegible]
ಪೂರ್ಣ ಒಸಡುಗಳು ಮತ್ತು ಸ್ವಚ್ಛವಾದ ಬಾಯಿ—ಇವುಗಳಿಗಾಗಿ
ಕಾಲ್ಗೇಟ್ ಟೂಥ್ ಬ್ರಶ್ ಬಳಸಿರಿ!
16 ಮಾದರಿಗಳಿವೆ—ನಿಮ್ಮ ಕುಟುಂಬದ ಪ್ರತಿಯೊಬ್ಬರಿಗೂ ಅನುಕೂಲ!

ಅಧಿಕ ಶುಚಿಯಾದ, ದುರ್ಗಂಧರಹಿತವಾದ ಉಸಿರಿಗಾಗಿ ಮತ್ತು ಅಧಿಕ ಬಿಳುಪಾದ ಹಲ್ಲುಗಳಿಗಾಗಿ...ಕಾಲ್ಗೇಟನ್ನು ಕೊಳ್ಳಿರಿ

DC.G.56 KN

ಹುಟ್ಟು-ಹಬ್ಬ

ಅಶ್ವತ್ಥ

ಚಿನ್ನಾ,

ನಾಳೆ ನಿನ್ನ ಹುಟ್ಟುಹಬ್ಬ.

ನಿನಗೆ ಏನನ್ನು ಕೊಡಲಿ?

ನಿನಗಾಗಿ ನೀನು ಏನನ್ನೂ ಕೇಳಿದವಳಲ್ಲ, ಕೇಳುವವಳೂ ಅಲ್ಲ. ಕೊಡಲಿಲ್ಲವೆಂದು ಕೊರಗುವವಳೂ ಅಲ್ಲ. ಆ ಯೋಚನೆಯೇ ನಿನಗೆ ಹೊಳೆಯುಲಾರದು... ಒಂದು ವೇಳೆ ನಿನ್ನಿಷ್ಟವೇನಾದರೂ ಇದ್ದರೆ ಇಷ್ಟೊಂದು ವರ್ಷಗಳಲ್ಲಿಯೂ ಅದನ್ನು ನನ್ನಿಂದ ಬಚ್ಚಿಟ್ಟುಕೊಂಡೇ ಬಂದಿದ್ದೀಯೆ. ನಿನ್ನದು ನಿನಗಾಗಿ ಎನ್ನುವುದು ಏನೂ ಇಲ್ಲವೇ ಇಲ್ಲವೆ. ?

ಹಾಗೆಂದು ನಾನು ಸುಮ್ಮನೆ ಇರಲಾಗುತ್ತದೆಯೇ? ಇಲ್ಲ... ನಾನೇ ಊಹಿಸಿ ಏನನ್ನಾದರೂ ಕೊಡಬೇಕು.

ಆದರೆ ನಾಳೆಯ ಕೊಡುಗೆಯನ್ನು ನಿರ್ಧರಿಸುವುದು ಸುಲಭವಾಗುತ್ತಿಲ್ಲ.

ನಿನ್ನಂಥವಳಿಗೆ ಕೊಡುವುದೆಂದರೆ ಹಾಗೆಯೇ.

ನಿನ್ನಂಥವಳು... ಎಂದರೆ!

ಸಹಜವಾಗಿಯೇ ಈಗ ನನ್ನ ಮನಸ್ಸು ಕಳೆದ ಆ ದಶಕಗಳಿಗೆ ಹೋಗುತ್ತದೆ.

ಮದುವೆಯಾಗಿ ಬಂದವಳು ಅಂದೂ, ಇಂದೂ, ನೀನು ಇನ್ನೂ ಮುಗ್ಧೆಯೇ. ಆ ನಮ್ಮ ಕಾಲಕ್ಕೆ ತಕ್ಕಂತೆಯೇ ನಮ್ಮದು ಸಾಂಪ್ರದಾಯಿಕ ಮದುವೆ, ಸಂಬಂಧ, ಸಂಸಾರ. ನಿನ್ನ ಹಿರಿಯರು ಒಪ್ಪಿದ ವರನೆಂದು ತುಟಿಯೆರಡು ಮಾಡದೆ ನನ್ನ ಕೈ ಹಿಡಿದೆ. ನನ್ನನ್ನು ನಿನ್ನನ್ನು ನೋಡಿದರೆ ಈಗಲೂ ನನಗೆ ಆಶ್ಚರ್ಯ ವಿಷಾದಗಳಾಗುತ್ತವೆ... ಒಂದು ರೂಪವೇ, ಅನುರೂಪ ವಯಸ್ಸೇ, ಅಂತಸ್ತೇ ಐಶ್ವರ್ಯವೇ– ಹ್ಞ. ಏನಿತ್ತು ನನಗೆ?... ಸುಕನ್ಯಾ.

ನೀನು ಇಲ್ಲಿಗೆ ಕಾಲಿಟ್ಟಾಗಿನಿಂದ ಇಂದಿನವರೆಗೂ ಈ ಮನೆಯನ್ನು ನಿನ್ನದನ್ನಾಗಿಯೂ ಮಾಡಿಕೊಳ್ಳಲೇ ಇಲ್ಲವೆನ್ನಿಸುವಂತಿದೆ. ಇದು ನನ್ನದು, ನನ್ನ ತಾಯಿ ತಂದೆ ಅಕ್ಕ ತಂಗಿ ಅಣ್ಣ ತಮ್ಮ. ಒಂದು ಹೊರೆಯ ಜನ ನಮ್ಮ ಮಕ್ಕಳು ಮೊಮ್ಮಕ್ಕಳದು. ನೀನಿಲ್ಲಿ ಗಾಳಿಯಂತೆ ಕಾಣಿಸಿಕೊಳ್ಳದೆ ಸುಳಿದಾಡುವ ಶಕ್ತಿಯೊಂದು; ಪೂರ್ಣ ನಿರಪೇಕ್ಷೆಯಿಂದ ಸಂಬಳವಿಲ್ಲದ ಆಳಾಗಿ ನಮ್ಮಗಳೆಲ್ಲರ ಸೇವೆ ಮಾಡುತ್ತಿರುವವಳು... ಕಾರ್ಯೇಷು ದಾಸೀ... ಇಲ್ಲಿ ಎಷ್ಟು ಜನ ಬೆಳೆದರು, ಓದಿದರು, ಎಷ್ಟು ಹಬ್ಬ ಹರಿಸಲು, ಮುಂಜಿ ಮದುವೆ ಉತ್ಸವ, ನಿನ್ನದೂ ಅಲ್ಲದೆ ಅದೆಷ್ಟು ಬಸಿರು ಬಾಣಂತನ, ಕರೆಸಿಕೊಳ್ಳುವುದು, ಕಳುಹಿಸಿ ಕೊಡುವುದು, ಕಾಯಿಲೆ ಕಸಾಲೆ, ಕಡೆಗೆ ಶ್ರಾದ್ಧಕರ್ಮಗಳೂ ಕೂಡ. ಒಂದೊಂದೆ?

245-10


ಯಾವುದಕ್ಕೆ ತಾನೆ ನೀನು, ಹಿರಿಯ ಸೊಸೆ, ಹೆಗಲು ಬೆನ್ನು ಕೊಡದಿರಲಾಗುತ್ತಿತ್ತು? ಹ್ಞು, ದಿನದಿನವೂ ಅದೆಷ್ಟು ಕಾಲ ಗೊಣಗದೆ ಗಾಣ ಸುತ್ತಿದ್ದೀಯೆ. ಆ ಮೊದ ಮೊದಲ ದಿನಗಳಲ್ಲಿಯೂ ಕೂಡ ಬೆಳಗ್ಗೆ ನಾನು ಕಣ್ಣು ಬಿಟ್ಟಾಗ ನಿನ್ನನ್ನು ಪಕ್ಕದಲ್ಲಿ ಕಂಡದ್ದೇ ಇಲ್ಲ; ರಾತ್ರಿ ನನ್ನ ಪಕ್ಕಕ್ಕೆ ಬರುತ್ತಿದ್ದುದೂ ಮನೆಯೆಲ್ಲ ಮಲಗಿದ ಮೇಲೆಯೇ. ಅದು ಹೇಗೆ ಗಡಿಯಾರದಂತೆ ದುಡಿಯುತ್ತಿದ್ದೆಯೋ... ಈಗಲೂ ಹಾಗೆಯೇ.

ಹುಂ, ಆ ಕೆಲಸದ ಮಾತಿರಲಿ. ಸೇವೆಯೊಂದಿಗೆ ನಿನ್ನ ಅತ್ತೆ ಮಾವ ಅತ್ತಿಗೆ ನಾದಿನಿ ಓರಗಿತ್ತಿಯರಿಂದ, ಮಕ್ಕಳಿಂದಲೂ ನೀನು ಎಷ್ಟೆಷ್ಟು ಕಷ್ಟ ನಿಷ್ಠುರ ಹಿಂಸೆಗಳನ್ನು ಮೌನವಾಗಿ ಸಹಿಸಿದ್ದೀಯೆ! ನನ್ನ ಒರೆಕೋರೆಗಳಿಗೂ ಯಾವಾಗಿನಿಂದಲೋ ಒಗ್ಗಿಕೊಂಡು ಬಿಟ್ಟೆ; ಕೋಪ ತಾಪಗಳನ್ನು ನುಂಗಿಕೊಂಡೇ ಬಂದಿದ್ದೀಯೆ, ಬರುತ್ತಿದ್ದೀಯೆ, ಗರಳ ಕಂಠೆಯಾಗಿ, ಎದುರು ಮಾತಾಡುವುದನ್ನೇ ಅರಿಯೆ... ಕ್ಷಮಯಾ ಧರಿತ್ರೀ.

ಇನ್ನು ನಾನು ಒಗ್ಗಿಸಿಕೊಳ್ಳುವುದು ಸೈರಿಸಿಕೊಳ್ಳುವುದು ಏನು ತಾನೆ ಇರುತ್ತದೆ? ಎಲ್ಲ ಹೇಳಿ ಕೇಳಿ ಬೇಕುಬೇಕಾದದ್ದನ್ನೆಲ್ಲ ನಿನ್ನಿಂದ ಪಡೆದುಕೊಳ್ಳುತ್ತಿರುವುದೆ. ಮಾಡಿಸಿಕೊಳ್ಳುತ್ತಿರುವುದೆ.

ಊಹುಂ. ಹೇಳಿಕೇಳುವ ಅಗತ್ಯವೂ ಕೂಡ ಅಷ್ಟಕ್ಕಷ್ಟೆ— ನೀನೇ ಸೂಕ್ಷ್ಮವರಿತುಕೊಳ್ಳುತ್ತಿರುವಾಗ.

ನಾವು ನಾವು, ನಮ್ಮ ಮಕ್ಕಳು, ಈದಾಗಲೂ ಹಾಗೆಯೇ. ಎದ್ದಂತೆಯೇ ಮುಖಕ್ಕೆ ಬಿಸಿ ನೀರು. ಮಾಮೂಲು ದೋಸೆಗಳಲ್ಲದೆ ಬೇಕೆಂದಾಗಲೆಲ್ಲ ಎಕ್ಸ್‌ಟ್ರಾ ಡೋಸ್ ಕಾಫಿ. ಬಂದುಬಂದವರಿಗೆಲ್ಲ ಕಾಫಿ— ಹೊತ್ತು ಗೊತ್ತಿಲ್ಲದ ಕಾಫಿ. ತಿಂಡಿಗಳ ಸತತ ಸಮಾರಾಧನೆ. ಸ್ನಾನಕ್ಕೆ ತೋಡಿದ ನೀರು. ಹಗ್ಗದ ಮೇಲೆ ಮಡಿ ಬಟ್ಟೆ. ಬೆಳಗ್ಗೆ ಸಂಜೆ ಬಗೆ ಬಗೆಯ ಭಾರಿ ಉಪಹಾರ. ದಿನವೂ ಎರಡು ಹೊತ್ತೂ ಕಾಲವರಿತು ಬಿಸಿ ಬಿಸಿ ರುಚಿ ರುಚಿ ವೈವಿಧ್ಯಮಯ ಭೋಜನ. ಉಂಡೊಡನೆ ಕೈಯಿಗೆ ಚಿಗುರೆಲೆ, ಬಣ್ಣ ಕಟ್ಟಿದ ಅಡಿಕೆ ಸುಗಂಧ ಚೂರ್ಣ ವೀಳ್ಯ. ಕಚೇರಿಗೆ ಹೊರಡುವಾಗ ಬಟ್ಟೆ ಬರೆ ಕೈವಸ್ತ್ರ ಪೆನ್ ಕಾಗದ ಪತ್ರಗಳ ಸಂವರಣೆಯಲ್ಲಿ ಸಹಾಯ. ಸಂಜೆಯಲ್ಲಿ ಮನೆಗೆ ಆಗಮಿಸಿದಾಗ ಮೌನ ನಸುನಗೆಯ ಸುಸ್ವಾಗತ— ಗೃಹಕೃತ್ಯವನ್ನೆತ್ತದೆ. ಕ್ಲಬ್



ನಿಂದ ಕರಟಿ ಗೋಪಿ, ಇಸ್ಪೀಟ್ ಕಚೇರಿಗಳನ್ನು ಮುಗಿಸಿಕೊಂಡು ಎಷ್ಟೆಷ್ಟೋ ಹೊತ್ತಿಗೆ ಹಿಂತಿರುಗಿದರೂ ನನಗಾಗಿ ಕಾದಿದ್ದು ಬಡಿಸಿ ನಂತರವೇ ನಿನ್ನ ಊಟ–ನಾನುಂಡ ಮೇಲೆ ಉಳಿದದ್ದು ಉಳಿದಷ್ಟು. ನನ್ನ ಹಾಸಿಗೆಯ ಬಳಿಗೇ ಹಾಲು ನೀರು. ನನ್ನ ಕಾಯಿಲೆಗಳಲ್ಲಿ ಹತ್ತಿರವೇ ಕುಳಿತು ಅನ್ನ ಬಿಟ್ಟು ನಿದ್ದೆ ಬಿಟ್ಟು ತಾಯಾಗಿ ನೋಡಿಕೊಂಡು ನಡೆದವಳು ನೀನು. ಮನೆಗೆ ಅಂಗಡಿ ಸಾಮಾನು ತರಕಾರಿ ಹಣ್ಣು ತರುವವಳು ನೀನು, ಬ್ಯಾಂಕಿಗೆ ಹೋಗಿಯೂ ಬರುತ್ತೀಯೆ. ಅಗಸನ ಲೆಕ್ಕ, ಮಕ್ಕಳ ತಯಾರಿ ಜವಾಬುದಾರಿ... ಹುಂ, ಬಿಡಿ ಬಿಡಿಯಾಗಿ ಹೇಳಲೇಕೆ, ಮುಗಿಯದ ಪಟ್ಟಿ, ಮುಗಿಯದ ಯುದ್ಧ ನಿನ್ನದು, ನನ್ನದು ಮುಗಿಯದ ಆಟವಾದರೆ.

ಬಾ ಎಂದ ದಿನ, ಎಂದಾಗ, ಲಕ್ಷಣವಾಗಿ ಅಲಂಕರಿಸಿಕೊಂಡು ವಾಯು ವಿಹಾರ ಸಂಗೀತ ಸಿನಿಮಾ ನಾಟಕಗಳಿಗೆ ಸಿದ್ಧಳು; ನಿನ್ನ ಕೆಲಸ ಅನಾನುಕೂಲ ಆಯಾಸ ಇತರ ಬೇಸರಗಳನ್ನು ಎಂದೂ ಅಡ್ಡ ಹೇಳಲಿಲ್ಲ, ನಾನು ಕೇಳಲೂ ಇಲ್ಲ; ಎಲ್ಲವನ್ನೂ ಅತ ಕೊಡವಿ ಬಂದು ಬಿಡುವವಳು.

'ಶಯನೇಷು...'ವೂ ಅಂತೆಯೇ. ಕುಲ ಧರ್ಮಪತ್ನಿ. ನನ್ನ ಪುರೂರವ ಧೃತರಾಷ್ಟ್ರ ಕಾಮೇಷ್ಟಿಯಲ್ಲಿ, ಇಷ್ಟವಿದ್ದೋ ಇಲ್ಲದೆಯೋ ಸಹಕರಿಸಿ ಪರಿಣಾಮವನ್ನು ಬಹಳವಾಗಿ ಅನುಭವಿಸಿದವಳು ನೀನೇ. ಮೂರು ಬಾರಿ, ಹೆರಿಗೆಯ ಆಸ್ಪತ್ರೆಯಿಂದ ಸತ್ತು ಬದುಕಿ ಬಂದಿದ್ದೀಯೆ. ಒಂದು ಮಾತನ್ನೂ ಆಡಿಲ್ಲ. ಅಷ್ಟೊಂದು ಮಕ್ಕಳನ್ನು ಧರಿಸಿ ಹೆತ್ತು ಹೊತ್ತು ಬೆಳೆಸಿ ಜೀವ ಸವೆಸಿದ್ದೀಯೆ. ಮೈದುನ ನಾದಿನಿಯರನ್ನೂ ಹೊಟ್ಟೆಗೆ ಹಾಕಿಕೊಂಡು ನಿನ್ನ ಮಕ್ಕಳಂತೆಯೇ ಸಾಕಿದ್ದೂ ಸಾಲದೆ.

ಈಗಂತೂ, ಮಕ್ಕಳು ನೆಲೆಹೊಂದಿ ದೂರವಾದ ಮೇಲೆ ನಿನ್ನ ಸೇವೆ ನನಗೊಬ್ಬನಿಗೇ ಮೀಸಲು. ಇಮ್ಮಡಿ ಮುಮ್ಮಡಿಯಾಗಿ ನಡೆಯುತ್ತಲೇ ಇದೆ, ಕುಡಿದ ನೀರು ಅಲ್ಲಾಡದಂತೆ ಇದ್ದಲ್ಲಿಯೇ ನನಗೆ ಎಲ್ಲ ಉಪಚಾರ... ಅನಸೂಯಾ ಸೇವೆ.

ಇನ್ನೂ ವಿಚಿತ್ರವೆಂದರೆ ಇವೆಲ್ಲ, ಇನ್ನೂ ಏನೆಲ್ಲವೂ, ಒಂದೊಂದೂ ನನ್ನ ಇಚ್ಛೆಯ ಪ್ರಕಾರವೇ. ಸ್ಪಷ್ಟವಾಗಿ ತಿಳಿಸದಿದ್ದರೂ ಸೂಚನೆ ಸನ್ನೆ ನನ್ನ ರೀತಿಗಳಿಂದಲೇ. ಸ್ಪಷ್ಟವಾಗಿದ್ದರಂತೂ, ಹೇಳಿದರಂತೂ ಸರಿಯೇ ಸರಿ. ಎಂದು ಒಂದು ಸೌಟು ಕೂಟನ್ನು ಹೆಚ್ಚು ಹಾಕಿಸಿಕೊಂಡೆನೋ, ಇಂದಿಗೂ ವಾರಕ್ಕೊಂದು ಬಾರಿಯಾದರೂ ಮೇಲೋಗರ. ಹಸಿರು ಸೀರೆಯನ್ನು ಉಟ್ಟಾಗ ದೃಷ್ಟಿಸಿದ ಮೇಲೆ, ಸೀರೆ ಕೊಂಡಾಗಲೆಲ್ಲ ಒಂದಾದರೂ ಆ ಬಣ್ಣದ್ದು ಇದ್ದೇ ಇರುತ್ತದೆ. ಅಂದರೆ ಉಚಿತ, ಮಾತ್ರವು ಹೇಳಬೇಕಾಗಿಯೇ ಇಲ್ಲ. ಇಷ್ಟು ಗಂಟೆಗೆ ಇಂಥಾದ್ದು ಎಂದರೆ ಅಷ್ಟಕ್ಕೆ ಸರಿಯಾಗಿ ಎಲ್ಲ ಸಿದ್ಧ. ನನ್ನ ಗಡಿಯಾರವನ್ನೇ ಸರಿಗೊಳಿಸಿಕೊಳ್ಳಬಹುದು. ಹ್ಞಾ, ಹೆಚ್ಚೇಕೆ, ಸರ್ವಜ್ಞನ 'ಇಚ್ಛೆಯನರಿತು ನಡೆಯುವ ಸತಿ?' ಹಾಗೆಂದೇ ನಾನು ಸ್ವರ್ಗಕ್ಕೆ ಕಿಚ್ಚು ಹಚ್ಚಿ ನಿನ್ನ ವಿಶ್ವಾಮಿತ್ರ ಸೃಷ್ಟಿಯಲ್ಲಿ ಹಾಯಾಗಿ ಇದ್ದುಬಿಟ್ಟಿದ್ದೇನೆ... ಹೌದು, ಏಕಿರಬಾರದು— ನನಗಾಗಿಯೇ ನೀನು ಎಂದು ನೀನಿರಬೇಕಾದರೆ?

ಹಾಗೆಂದರೆ ನಿನಗಾಗಿ ನೀನು ಇಲ್ಲವೇ ಇಲ್ಲವೆ? ನಿನ್ನ ಆಸೆ ಆಕಾಂಕ್ಷೆಗಳೋ? ಒಂದು ವೇಳೆ ಅದು ಇದು ಅಷ್ಟಿಷ್ಟು ಇದ್ದರುಗಿದ್ದರೂ ಅವು ನಿನ್ನ 'ನಿಮ್ಮಿಷ್ಟ' ತ್ರ್ಯಕ್ಷರೀ ಮಂತ್ರ, 'ನೀವು ಹೇಗೆ ಹೇಳಿದರೆ ಹಾಗೆ' ದಶಾಕ್ಷರೀ ಮಂತ್ರ ಜಪದಲ್ಲಿ ಮುಳುಗಿ ಹೋಗಿವೆ, ನಿನ್ನ ಎದೆಯಲ್ಲಿ ಗೋರಿಯಾಗಿಬಿಟ್ಟಿವೆ. ಕಡೆಗೆ ತುಟಿ ಬಾಗಿಲ ಹಿಂದೆ ಬಂಧನದಲ್ಲಂತೂ ಇದ್ದುಬಿಟ್ಟಿವೆ. ನನಗೆ ಬೇಕಾದದ್ದೇ ನಿನಗೂ ಸಾಕಾದ, ನನಗೆ ಬೇಡವಾದದ್ದು ನಿನಗೂ ಬೇಡವಾದ ಗಾಂಧಾರಿಯಾಗಿದ್ದೀಯೆ— ನಾನಾದರೋ ಈವರೆಗೂ ನಿನ್ನ ಬಗ್ಗೆ ಕಣ್ದೆರದೂ ಕುರುಡಾದ ಧೃತರಾಷ್ಟ್ರನೇ. ಎಷ್ಟು ಕೆದಕಿದರೂ ನನ್ನ ಹೆಂಡತಿ ಸಿಕ್ಕಿದಳೇ ಹೊರತು ನೀನು ಸಿಕ್ಕಲಿಲ್ಲ.

ಎಂಥ ಅಪರೂಪ ವಸ್ತು ನೀನು! ತಲೆ ಬಿಚ್ಚಿಕೊಂಡು ನೆರೆಹೊರೆಯನ್ನು ನಿರ್ಲಕ್ಷಿಸಿ ಕೂಗಾಡುವ ಗ್ರಾಮ್ಯ ಹೆಂಗಸರು, ಪತಿ ಪ್ರೀತಿಯಾಗಿ ಮಾತು ಮಾತಿಗೂ ವಾದಿಸುವ ವಿರೋಧಿಸುವ ಚಂಡಿ ಚಾಮುಂಡಿಯರು, ಲಟಿ ಅರ್ಭಟಗಳ ಮಾರಿ ಮಸಣಿಯರು, ರಕ್ತ ಶಕ್ತಿ ಸಂಪತ್ತನ್ನು ಸದಾ ಹೀರುವ ಶಾಕಿನಿ ಡಾಕಿನಿಯರು— ಎಂಥೆಂಥವರೂ ಪತಿವ್ರತೆಯರೆಂದಿರಬಹುದಾದಾಗ ಈ ಕಲಿಗಾಲದಲ್ಲೂ! ಅಂತರ ರಾಷ್ಟ್ರೀಯ ಮಹಿಳಾ ವರ್ಷದ ಉಗ್ರ ಚಳುವಳಿ ನಿನ್ನನ್ನು ಬಳಸಿಕೊಂಡು ಹೋಯಿತು. ಫೆಮಿನಾ (Femina) ಪತ್ರಿಕೆಯ ಉದ್ರೇಕ ಪ್ರಚೋದಕ ಅಗ್ನಿ ಲೇಖನಗಳನ್ನು ನುಂಗಿಯೂ ತಣ್ಣಗೇ ಇದ್ದೀಯೇ. ಹೌದು, ನೀನು ನಿಜವಾದ ಪತಿವ್ರತೆಯೇ. ಹೇಳಿಬಿಡುತ್ತೇನೆ, ಹೇಳಲೇಬೇಕು. ಯಾರೇನಾದರೂ ಅಂದುಕೊಳ್ಳಲಿ. ನಗಲಿ. ಇದು ಒಮ್ಮುಖದ ಚಿತ್ರವಾಯಿತೆ? ಇರಬಹುದು. ಆದರೇನು? ಇರುವುದೇ ಹಾಗಲ್ಲ, ಏನು ಮಾಡಲಿ? ಬೇರೇನು ಬರೆಯಲಿ?

ಅಯ್ಯೋ, ನಿನ್ನ ಕಾರ್ಯೇಷು ದಾಸೀ ಸೇವೆಯಿರಲಿ, ಕ್ಷಮಯಾ ಧರಿತ್ರೀ ಸಹನೆಯೂ ಇರಲಿ, ಐಕ್ಯವೂ ಇರಲಿ, ನಿಃಸ್ವಾರ್ಥತೆ ನಿರಪೇಕ್ಷೆಗಳೂ ಇರಲಿ, ನಿನ್ನದೆನ್ನುವ ಒಂದು ಅಭಿಪ್ರಾಯವನ್ನು ನಾನು ಕೇಳಿಲ್ಲ. ಸಾಮಾಜಿಕವಾಗಿ ಸಾಂಸಾರಿಕವಾಗಿ ಆರ್ಥಿಕವಾಗಿ ರಾಜಕೀಯವಾಗಿಯೂ ಧಾರ್ಮಿಕ ತಾತ್ತ್ವಿಕವಾಗಿಯೂ ನನ್ನ ಅಭಿಪ್ರಾಯ ನಂಬಿಕೆಗಳೇ ನಿನ್ನವೂ. ನೀನು ಡಿಟ್ಟೋ ಮಾಡುತ್ತಿರುತ್ತೀಯೆ. ನೀನು ಯೋಚನೆಯನ್ನೇ ಮಾಡುವುದಿಲ್ಲವೆ? ಮಾಡಲೂ ಅರಿವೆಯೊ? ಮಾಡಲು ಇಷ್ಟವಿಲ್ಲವೊ. ಮಾಡಿಯೂ ಹೇಳುವುದಿಲ್ಲವೊ. ಕಾಣೆ ಕಾಣೆ.

ನನ್ನ ನೆರಳಿನಲ್ಲಿ ಬೆರೆತು ಹೋದ ನೀನೊಂದು ನೆರಳು, ನನ್ನ ಮಾತನ್ನೇ ಕೇಳುವ ಗೊಂಬೆ, ನನ್ನ ಇಷ್ಟವನ್ನೇ ಅನುಮೋದಿಸುವ ಮಂದ್ರ. ಅರ್ಧಾಂಗಿ— ಪೂರ್ಣಾಂಗಿ ಪಡಿಯಚ್ಚು.

ಎಂಥವಳು, ಎಂಥವಳು! ನಿನಗೇನು ಕೊಡಬಹುದು ನಾನು? ಏನು, ಏನು ಕೊಟ್ಟರೂ ಸಾಲದು. ಸಾಲದು. ಹುಂ.

ಅಂದರೆ, ನಿನಗೆ ಬೇರೆಯ ವ್ಯಕ್ತಿತ್ವವೇ ಇಲ್ಲವೇ? ನಿನ್ನತನವೇ ಇಲ್ಲವೇ? ನೀನೇ ಇಲ್ಲವೇ?

ಉಹುಂ ಉಹುಂ. ಯಾಕಿಲ್ಲ. ಇರಬೇಕು. ಇರಲೇಬೇಕು, ನೀನು ಮುಚ್ಚಿಟ್ಟುಕೊಂಡಿದ್ದರೂ, ಅದುಮಿಟ್ಟುಕೊಂಡಿದ್ದರೂ ಇದ್ದೇ ಇದೆ. ಖಂಡಿತವಾಗಿ. ಯಾರು ತಾನೇ— ನೀನು ತಾನೇ— ಇನ್ನೊಬ್ಬರ ನೆರಳು ಹೋಲುವ ಮುದ್ರೆ ಪಡಿಯಚ್ಚು ಆಗಲು ಸಾಧ್ಯ?... ನಿನ್ನ ಅಭಿಪ್ರಾಯಗಳೂ ಇಷ್ಟಗಳೂ ಇದ್ದೇ ಇರಬೇಕು, ಇವೆ— ನೀನು ತಿಳಿಸದಿದ್ದರೂ. ನನ್ನವು ನಿನ್ನವು ಯಾರಿಬ್ಬರದೂ, ಯಾವಾಗಲೂ ಎಲ್ಲದರಲ್ಲೂ ಒಂದೇ ಆಗಿರುವುದು ಸಾಧ್ಯವಿಲ್ಲ. ನಿಜ. ನಿನ್ನನ್ನು ಅಳಿಸಿಕೊಂಡಿದ್ದೀಯೆ. ನನ್ನ ತಂದೆ-ತಾಯಿಯರಿಗಾಗಿ ಬಾಳಿದ್ದೀಯೆ, ನನ್ನ ಸೋದರ ಸೋದರಿಯರಿಗಾಗಿ ಬಾಳಿದ್ದೀಯೆ, ನಮ್ಮ ಮಕ್ಕಳಿಗಾಗಿ ಬಾಳಿದ್ದೀಯೆ. ಈಗ ನನಗಾಗಿ ನನಗಾಗಿಯೇ ಬಾಳುತ್ತಿದ್ದೀಯೆ ಬಳಲುತ್ತಿದ್ದೀಯೆ ಸವೆಯುತ್ತಿದ್ದೀಯೆ. ಆದರೆ ಈ ವರೆಗೆ ಆಗ ಈಗಲಾದರೂ ನೀನಾಗಿ, ನಿನಗಾಗಿಯೂ ನಿನಗಾಗಿಯೇ ಕೂಡ, ಬಾಳುವ ಯೋಚನೆ ನಿನ್ನ ಮನಸ್ಸಿನಲ್ಲಿ ಹಾಯ್ದು ಹೋಗಿರಬೇಕು, ಹೋಗಿಯೇ ಇರಬೇಕು. ನೀನೂ ಮನುಷ್ಯಳು ತಾನೆ? ಮಣ್ಣಿನ ಮುದ್ದೆ ಬೊಂಬೆಯಲ್ಲ— ಯೋಚನೆಯನ್ನು ಮಾಡದಿರುವುದಕ್ಕೆ, ನಡೆಸುವುದರ ಮಾತು ಹೇಗಿದ್ದರೂ... ಆಗ ನನ್ನ ತರುವಾಯದ ಚಿತ್ರವೂ ಒಂದಿರಬಹುದು. ನೀನು ಏನಾದರೂ, ಇದೇನು ಪತಿಯೊಡನೆ ಸತಿಯೂ ಹೋಗುವ ಕಾಲವೇನಲ್ಲ. ಅದನ್ನು ಯಾರೂ ನಿರೀಕ್ಷಿಸುವುದಿಲ್ಲ. ಹಾಗೆ ಆಗಲೂ ಕೂಡದು. ಅದೇ ನ್ಯಾಯ— ಹಿರಿಯರು ಹೋಗಿ ಕಿರಿಯರು ಉಳಿಯುವುದು.

ಬಂದ ಮೇಲೆ ಆ ಚಿತ್ರ, ನನ್ನ ತರುವಾಯದ ಕಲ್ಪನೆ, ನಿನ್ನ ಕಣ್ಣಿಂದೆ ಸುಳಿದು ಹೋಗಿದ್ದರೆ ಆಶ್ಚರ್ಯವೇನು? ಒಂದು ವೇಳೆ ಮನಸ್ಸು ಅದಕ್ಕಾಗಿ ಹಂಬಲಿಸಿದೆ ; ಇದ್ದರೂ ಅಸಹಜವೇನಲ್ಲ, ನಾಚಿಕೊಳ್ಳುವುದು ಭಯಪಡುವುದೂ ಅಲ್ಲ. ಮಾನವೀಯ ಲಕ್ಷಣ, ಕ್ಷಮಾರ್ಹ. ಈ ಇಚ್ಛೆ ಈ ಹಂಬಲ ಇಲ್ಲವೇ ಇಲ್ಲವೆಂದು, ಅಂಥ ಯೋಚನೆಯೇ ಬಂದಿಲ್ಲ ಬರುವುದೂ ಇಲ್ಲವೆಂದು ನೀನು ಹೇಳಬಹುದು. ಹಾಗೆ ತಿಳಿದುಕೊಂಡೂ ಇರಬಹುದು, ಪ್ರಾಮಾಣಿಕವಾಗಿ. ಆದರೆ ನೀನರಿಯದಂತೆಯೇ ಆ ಬಯಕೆ ನಿನ್ನ ಸುಪ್ತ ಚೇತನದಲ್ಲಿ ಮನೆ ಮಾಡಿಕೊಂಡಿರಬಹುದಲ್ಲ? ಅದನ್ನು ನಾನು ಆಗ ಈಗ ನಿನ್ನ ಒಂದೊಂದು ದೃಷ್ಟಿಯ ರೀತಿಯಲ್ಲಿ ಧ್ವನಿಯಲ್ಲಿ, ಅಪ್ಪಿತಪ್ಪಿ ತೋರಿಬಿದ್ದ ನುಡಿಗಳಲ್ಲಿ, ನಡೆವಳಿಕೆಗಳಲ್ಲಿ ಗುರುತಿಸಿದ್ದೇನೆ— ಹಾಗೆಂದುಕೊಂಡಿದ್ದೇನೆ. ಅದೇನು ಸರಿಯೋ ಅಲ್ಲವೋ ಹೇಳಲಾರೆ....

ಇರಲಿ. ಆ ಚಿತ್ರ-ನನ್ನ ತರುವಾಯದ ಚಿತ್ರ—ಹೇಗಿರಬಹುದು? ಇಷ್ಟೊಂದು ಕಾಲ ಇತರರಿಗಾಗಿಯೇ ಬಾಳಿದ ಮೇಲೆ, ನಿನ್ನ ಕಾಲ, ನಿನ್ನದೇ ಕಾಲ. ಇನ್ನೊಬ್ಬರಿಗಾಗಿ ಏನನ್ನೂ ಮಾಡಬೇಕಾಗಿಯೇ ಇಲ್ಲ, ಏಳುವುದರಿಂದ ಮಲಗುವವರೆಗೆ ದಿನದಿನವೂ, ವರ್ಷ ವರ್ಷಗಳೂ ನಿನಗಾಗಿ ಎಷ್ಟೋ ಅಷ್ಟು. ಅದೂ ಬೇಡವಾದರೆ, ಬೇಡವಾದಾಗ, ಬೇಡವೇ ಬೇಡ. ಕೇಳುವವರು ಯಾರು? ಹೇಳುವವರು ಯಾರು? ಯಾರನ್ನೂ ಯೋಚಿಸಿಕೊಂಡು ಗಂಡ ಗಡಿಯಾರ ನೋಡಿ ಹೊತ್ತು ಗೊತ್ತನ್ನು ಅನುಸರಿಸಬೇಕಾಗಿಲ್ಲ. ತಾಳ ಮೇಳಕ್ಕಾಗಿ ಕುಣಿತವಿಲ್ಲ, ಯಾರ ಮುಖವನ್ನೂ ನೋಡಿಕೊಂಡು ಮಾತಾಡಬೇಕಾಗಿಲ್ಲ. ಧೈರ್ಯವಾಗಿ ಏನನ್ನಾದರೂ ಆಡಬಹುದು, ಎಷ್ಟನ್ನಾದರೂ ಆಡಬಹುದು, ಬಿಡಲೂಬಹುದು. ಉಣ್ಣಬಹುದು, ಉಡಬಹುದು, ನೋಡಬಹುದು, ಮಾಡಬಹುದು, ನಿನ್ನ ವಯೋಧರ್ಮ ಇಷ್ಟಾನಿಷ್ಟಗಳನ್ನು ಮಾತ್ರ ಅನುಸರಿಸಿ. ನನ್ನ ವಯೋಧರ್ಮ ಮನೋಧರ್ಮಗಳನ್ನೇ ಅವಲಂಬಿಸುವುದಿರಲಿ, ಆ ಬೆರಕೆಯೂ ಇಲ್ಲ. ಇನ್ನೊಬ್ಬರ ಹೊರೆಯನ್ನು ನೀಗಿಸುವ ಆತಂಕ ಬೇಸರಗಳಿಲ್ಲ. ಎಷ್ಟೋ ಹಗುರ. ಶುಶ್ರೂಷೆ ಮಾಡುವ ಕ್ಲೇಶವಿಲ್ಲ......ಎಲ್ಲ ಸ್ವತಂತ್ರ, ಸ್ವತಂತ್ರ, ಸರ್ವ ಸ್ವತಂತ್ರ! ಎಂಥ ಕಲ್ಪನೆ! ನನ್ನ ತರುವಾಯದ್ದು, ನಿನ್ನದು! ನಿನಗೆ ಬಂದಿದ್ದರೆ. ಅದಕ್ಕೆ ನೀನೆಷ್ಟು ಅರ್ಹಳು!... ಅದು ಸರಿ...ನಿನ್ನನ್ನು ನೀನು ನೋಡಿಕೊಳ್ಳಬಲ್ಲೆಯಾ?... ಏಕಿಲ್ಲ! ನಮ್ಮೆಲ್ಲರನ್ನೂ, ಮುಖ್ಯವಾಗಿ ನನ್ನನ್ನು ಇಷ್ಟು ಕಾಲವೂ ಇಷ್ಟು ಚೆನ್ನಾಗಿ ನೋಡಿಕೊಂಡ ಶಕ್ತಿವಂತೆ ತಿಳಿವಳಿಕೆಯುಳ್ಳವಳು ನೀನು. ನಿನ್ನನ್ನು ನೀನು ನೋಡಿಕೊಳ್ಳಲಾರೆಯಾ? ಹ್ಞ! ಮನೆ, ಹಣ, ಕೆಲಸದವರು, ನೆರೆಹೊರೆ, ನೆಂಟರಿಷ್ಟರು— ಯಾವ ಕೊರತೆಯೂ ಇಲ್ಲ. ಹೌದು, ನಿನ್ನ ಬಗ್ಗೆ ನನಗೆ ಯಾವ ಚಿಂತೆಯೂ ಇಲ್ಲ. ಅಲ್ಪ ಸ್ವಲ್ಪ ಕಷ್ಟ ಬಂದರೆ ಸಹಿಸಿಕೊಳ್ಳಬಲ್ಲೆ ನೀನು. ಅದು ನೀನು ಅಷ್ಟೊಂದು ಸ್ವಾತಂತ್ರ್ಯಕ್ಕೆ ಕೊಡುವ ಕೊಡಬೇಕಾದ ಸಣ್ಣ ಬೆಲೆ.

ಆದರೆ...ಅದು ನನ್ನ ತರುವಾಯ... ಹುಂ, ನನ್ನ ತರುವಾಯ...ಅದಕ್ಕೆ ಇನ್ನೂ ಎಷ್ಟೊಂದು ಕಾಲ ಬೇಕೋ ಏನೋ? ಅಲ್ಲಿಯವರೆಗೂ...ಅಥವ ಈ ಲೆಕ್ಕ ತಲೆಕೆಳಗಾಗಿ ನೀನೇ ಮುಂದಾಗಿ ಹೋಗಿಬಿಟ್ಟರೆ?... ಓ ಎಂಥ ಕನಿಕರ ದುರಂತ! ..ಅನಂತರ ಆತ್ಮ ಏನು ಫಲ?...ಉಹುಂ ಉಹುಂ, ಹಾಗಾಗಬಾರದು. ಕೆಲವು ವರ್ಷಗಳಾದರೂ ಆ ಪೂರ್ಣ ಸ್ವಾತಂತ್ರ್ಯದ ಕನಸನ್ನ ನನಸಾಗಿಸಿಕೊಂಡು ಅನುಭವಿಸಬಾರದೇಕೆ? ಅದು ನೀನು ಆರ್ಜಿಸಿದ ಸಂಪತ್ತು—ನಿನ್ನ ಸೇವೆಯಿಂದ ಅಂದರೂ. ಏಕೆ, ಹುಟ್ಟಿನಿಂದಲೂ ತಂದ ನಿನ್ನ ಹಕ್ಕು, ಸಂಪತ್ತು. ಸಂದರ್ಭ ಸಂಪ್ರದಾಯ ಕಿತ್ತುಕೊಂಡದ್ದು. ನೀನು, ಮುಗ್ಧೆ, ನೀನಾಗಿಯೇ— ಹಾಗೆಯೇ ಅನ್ಯೋಣ—ಕೊಟ್ಟುಬಿಟ್ಟದ್ದು.

'ಅಯ್ಯೋ, ಇದೆಲ್ಲ ಏನು?' ಎಂದನ್ನುತ್ತೀಯಾ— ನಿನ್ನ ಸ್ವಭಾವಕ್ಕೆ ತಕ್ಕಂತೆ?...

ಅನ್ನೂ, ಚಿನ್ನಾ, ಇದು ಸೀತಾ ಸಾವಿತ್ರಿ ದಮಯಂತಿಯರ ಯುಗವಲ್ಲ. ಮೌಲ್ಯಗಳು ಬದಲಾಗಿವೆ, ಇನ್ನೂ ಬೇಗ ಬೇಗ ಆಗುತ್ತಿವೆ. ನೆನಸಿಕೋ ಯೋಚಿಸಿಕೊ. ಏನೂ ತಪ್ಪಿಲ್ಲ ಇದರಲ್ಲಿ.

ಇರಲಿ, ಆದದ್ದಾಗಿ ಹೋಯಿತು...ಈಗಲಾದರೂ ಆ ಸ್ವಾತಂತ್ರ್ಯ ನನಗೆ ಹೇಗೆ ಸಾಧ್ಯ?

ಹುಂ...ಹುಂ...ನಾವು ಒಟ್ಟಿಗಿರುವಂತೆಯೇ ಈಗಿನಂತಲ್ಲದೆ ನೀನು ಸ್ವತಂತ್ರಳಾಗಿ ನಡೆದುಕೊಳ್ಳಬಾರದೇಕೆ? ಆ? ಹಾಗೇಕೆ ಆಗಬಾರದು?...... ಹಯ್ಯೋ, ಹುಚ್ಚು ಹುಚ್ಚು!...ರಕ್ತಗತ ಪರಂಪರಾಗತವಾಗಿ—ನಾವು Conditioned ಆಗಿ-ನಡೆದು ಬಂದಿರುವ ಈ ನಮ್ಮ ಸತಿಪತಿ ಸಂಬಂಧದಲ್ಲಿ ಆ ಸ್ವಾತಂತ್ರ್ಯಾನುಭವ ಬಯಸಿದರೂ ಒಪ್ಪಿದರೂ ಕಾರ್ಯಗತವಾಗಬೇಕಲ್ಲ! ಅಸಾಧ್ಯ ಅಸಾಧ್ಯ. ಪೂರ್ವೇತಿಪೂರ್ವಃ ಛೆ! ಈಗಿನ ಸ್ಥಿತಿಯೇ ಮುಂದುವರಿಯುತ್ತದೆ. ಅದೇ ಭಾರ ಅನಾನುಕೂಲ ನಿರ್ಬಂಧಗಳಲ್ಲಿ ನಿನ್ನನ್ನು ಬಹಳವಾಗಿ ಬಿಡದಿರುವ, ಅವುಗಳನ್ನು ನೀನೂ ಬಿಡದಿರುವ ಸಂಭವವೇ...ಹೀಗೆ ಬೆಳೆದಿರುವ, ನೀನು ಬೆಳೆಯಿಸಿರುವ ಸಾಂಪ್ರದಾಯಿಕ ಮನುಷ್ಯ ನಾನು ಇಷ್ಟಪಟ್ಟರೂ ಹೊಟ್ಟೆ ಹಿಡಿದು ಸಹಕರಿಸುವ ಸಂಭವವೂ ಅಷ್ಟಕ್ಕಷ್ಟೆ. ಒಂದು ವೇಳೆ ನಾನು ಕೊಟ್ಟೆನೆಂದರೂ ನೀನು ತೆಗೆದುಕೊಳ್ಳಬೇಕಲ್ಲ! ಉಹುಂ, ಉಹುಂ ಪ್ರಯೋಜನವಿಲ್ಲ. ಬದಲಾವಣೆಯಾಗುವುದಿಲ್ಲ. ನಾವು ರೂಢಿಯ ಗುಲಾಮರು—ಚಿಂತನ ನಡೆವಳಿಕೆಗಳೆರಡರಲ್ಲೂ. ಹುಂ, ನಾನೂ ಗುಲಾಮನೇ. ಸುಖದ ಗುಲಾಮನೂ.

ಮತ್ತೆ?...

ಆ?...

ಸ್ಲ!... ಸ್ಲ!...ಅದು ಸರಿ...ಅದು ಸರಿ... ಅದೇ ಸರಿ... ಚಿನ್ನ, ಬಹಳ ಚಿನ್ನ!

ಮೊದಲು ಮಾಡಿದ ಯೋಚನೆ ಬೇರೆ ದಾರಿ ಹಿಡಿದು ಎಲ್ಲೆಲ್ಲಿಗೋ ಹೋದರೂ ಸರಿಯಾದ ಘಟ್ಟಕ್ಕೇ ಮುಟ್ಟಿತು. ಮುಕ್ತಾಯವಾಯಿತು.

ಹೇಗೂ ನಾಳೆ ನಿನ್ನ ಹುಟ್ಟುಹಬ್ಬ. ಹಬ್ಬದ ಕೊಡುಗೆಗಾಗಿ ಹುಡುಕುತ್ತಿದ್ದೆನಲ್ಲವೆ? ನಿನಗೆ, ನಿನ್ನಂಥವಳಿಗೆ ತಕ್ಕ ಕೊಡುಗೆಗಾಗಿ?... ಇಗೊ, ಕೊಡುತ್ತೇನೆ ಅಂಥಾದ್ದನ್ನು! ನಿನ್ನ ಹುಟ್ಟುಹಬ್ಬ ನಿಜವಾಗುತ್ತದೆ. ನಾಳೆ ನೀನು ನಿಜವಾಗಿ ಹುಟ್ಟುತ್ತೀಯೆ ಮತ್ತೆ— ನೀನಾಗಿ. ನಿನಾಗಿ ಬೆಳೆಯುತ್ತೀಯೆ; ನೀನಾಗಿ ನಿನಗಾಗಿ, ನಿನಗಾಗಿಯೇ ಮಾತ್ರ, ನಡೆಯುತ್ತೀಯೆ ನಡೆಯುತ್ತಿರುತ್ತೀಯೆ.

ಹೌದು, ಆಗಲಿ, ನನ್ನ ಕೊಡುಗೆ ನಿನಗೆ—ನನ್ನ ಬೀಳ್ಕೊಡುಗೆಯೇ!

ಮತ್ತೆ... ನನ್ನ... ಮತ್ತೇನು ಗತಿ ಏನು? ನನ್ನ ನಿನ್ನ? ಇಷ್ಟು ವರ್ಷಗಳೂ ನಾನು ಸೇವೆ ಮಾಡಿಸಿಕೊಳ್ಳಲಿಲ್ಲವೆ? ಇಷ್ಟೊಂದು ಸುಖ ಪಡಲಿಲ್ಲವೆ? ಇನ್ನೂ ಆಸೆಯೆ? ಛಿ!

......

ಹುಟ್ಟುಹಬ್ಬದ ಬೆಳಗ್ಗೆ ಹಾಸಿಗೆಯಲ್ಲಿ ಕಣ್ಣು ಬಿಟ್ಟಾಗ ಪಕ್ಕದಲ್ಲಿ ಕಂಡ ಪತ್ರವನ್ನು ಓದುತ್ತಿದ್ದ ಅನಸೂಯ ಮುಂದೆ ಓದದೆ, ಪತ್ರವನ್ನು ಹಿಡಿದೇ ದಿಗ್ಗನೆದ್ದಳು. ಮಲಗುವ ಮನೆಯ ಬಾಗಿಲು ತೆರೆದಿತ್ತು. ಧಾವಿಸಿ ದಿವಾನ್ ಖಾನೆಗೆ ಬಂದಳು.

'ಎಲ್ಲಿದೀರಿ?... ಎಲ್ಲಿದೀರೀ?... ಇಲ್ಲಿನೋ?...' ಕೂಗಿಕೊಂಡಳು. ಅವಳ ಧ್ವನಿಯಂತೇ ಮನೆಯಲ್ಲೆಲ್ಲ ಸೋಳಲುಗೆಟ್ಟಿತು.

ಸುತ್ತ ಕಣ್ಣಾಡಿಸಿದಳು. ದಿವಾನ್ ಖಾನೆಯ ಕಿಟಕಿ ಬಾಗಿಲುಗಳೆಲ್ಲ ಅಗಲವಾಗಿ ಪೂರ್ತಿಯಾಗಿ ತೆರೆದಿದ್ದವು. ಪಡಸಾಲೆಗೆ ಓಡಿದಳು. ಆ ಬಾಗಿಲೂ ತೆರೆದಿತ್ತು ಹಾಗೆಯೇ. ಮುಂದಿನ ಅಂಗಳಕ್ಕೆ ನೆಗೆದಳು. ಗೇಟೂ ತೆಗೆದಿತ್ತು. ಗೇಟನ್ನು ದಾಟಿ ಹೊರಗೆ ಬಂದಳು. ಅತ್ತ ಇತ್ತ ಎತ್ತಲೂ ನೋಡುತ್ತ ನಿಂತುಬಿಟ್ಟಳು.—...ಬಿಸಿದ ಪತ್ರವನ್ನು ಹಿಡಿದುಕೊಂಡು.

ಜೀವಿ, ಜೀವ, ಜೀವನಗಳ ಮೂಲಮಂತ್ರ —ಜೀನ್

ಪಿ. ಕೆ. ರಾಜಗೋಪಾಲ
ಬಿ. ಎಸ್. ಕೃಷ್ಣಪ್ರಸಾದ

ನಮ್ಮ ಜಗತ್ತೊಂದನ್ನಷ್ಟೇ ಎಣಿಸಿಕೊಂಡರೆ ಅಪಾರ ವೈವಿಧ್ಯದ ವಿಭಿನ್ನರೂಪ, ಬಣ್ಣ, ಆಕಾರ, ಚಲನಾ ವೈಖರಿ, ವಿನ್ಯಾಸಗಳ ಜೀವಿಗಳನ್ನು ಗುರುತಿಸಬಹುದು. ಹಚ್ಚಹಸುರಿನ ಮರಸಸ್ಯಗಳ ಮೇಲೆ ಉನ್ಮತ್ತ ಭಂಗಿಯಲ್ಲಿ ಜಿಗಿದು ನಲಿಯುವ ವಿವಿಧ ಬಣ್ಣದ ಕೀಟಗಳು, ಕುರಿದಾಡುವ ಅಸಂಖ್ಯಾತ ಪ್ರಾಣಿಗಳು, ಕಣ್ಣು ತಣಿಸುವ ಅನೇಕ ಬಣ್ಣದ ಹಲವು ಜಾತಿಯ ಪುಷ್ಪಕೋಟಿಗಳು, ನೀಲಾಕಾಶದಲ್ಲಿ ಸಾಲುಗಟ್ಟಿ ಹಾರುವ ಸುಂದರ ಪಕ್ಷಿಗಳು, ಸದ್ದಿಲ್ಲದೆ ನೀರಲ್ಲಿ ಹರಿಯುವ ಹಲವು ಜಾತಿಯ ಸುಂದರ ಮತ್ಸ್ಯ ಸಮೂಹಗಳು ನಮ್ಮನ್ನು ಮಂತ್ರಮುಗ್ಧರನ್ನಾಗಿಸುತ್ತವೆ. ಸಾಮಾನ್ಯ ಸೂಕ್ಷ್ಮದರ್ಶಕದ ಕಣ್ಣಿಗೂ ಕಾಣದ ವೈರಸ್‌ಗಳಲ್ಲೇ ಅನೇಕ ಜಾತಿಗಳಿವೆ. ಒಂದೊಂದಕ್ಕೂ ತನ್ನದೇ ಗುಣ, ರೂಪಧರ್ಮಗಳಿವೆ. ಇಷ್ಟು ದೂರ ಹೋಗಬೇಕಾಗಿಲ್ಲ– ಮಾನವ ಪ್ರಭೇದವೊಂದನ್ನೇ ಗಣನೆಗೆ ತಗೆದುಕೊಂಡರೆ, ಚರ್ಮದ ಬಣ್ಣ, ಕೂದಲ ಬಣ್ಣ, ಮಾತನಾಡುವ ನಮೂನೆ, ದೇಹದ ಬೆಳವಣಿಗೆ... ಹೀಗೆ ಎಣಿಸುತ್ತಾ ಹೋದರೆ ಸಾವಿರಗಟ್ಟಲೆ ವೈವಿಧ್ಯ ಗುಣಗಳನ್ನು ಪಟ್ಟಿ ಮಾಡಬಹುದು. ಜೀವಿಗಳಿಗೆ ಈ ರೀತಿಯ ಗುಣಗಳು ಹೇಗೆ ಬಂದುವು? ಅವು ಹೇಗೆ ನಿರ್ಧಾರವಾದುವು? ಅವು ಹೇಗೆ ಸಂತತಿಯಿಂದ ಸಂತತಿಗೆ ಸಾಗುವುವು? ಶತಮಾನಗಳ ಕಾಲ ನಿಗೂಢ ಸಮಸ್ಯೆಗಳಾದ ಇವುಗಳಿಗೆ ಉತ್ತರ ಇಂದಿನ ವಿಜ್ಞಾನ ಕ್ಷೇತ್ರದ ರೋಮಾಂಚಕ ಸಾಹಸಗಳಲ್ಲಿವೆ.

ವೈಜ್ಞಾನಿಕ ದೃಷ್ಟಿ

ಜೀವಿಗಳಲ್ಲಿನ ವೈವಿಧ್ಯತೆಯು ಬಗ್ಗೆ ವೈಜ್ಞಾನಿಕ ಗಮನ ಹರಿಸಿದ ಪ್ರಥಮ ವಿಜ್ಞಾನಿ ಚಾರ್ಲ್ಸ್ ಡಾರ್ವಿನ್. ಸಸ್ಯ ಮತ್ತು ಪ್ರಾಣಿ ಜೀವಿಗಳಲ್ಲಿ ಕಂಡುಬರುವ ವ್ಯತ್ಯಾಸ, ಹೋಲಿಕೆಗಳನ್ನು ಅವಲೋಕಿಸಿ ಅವುಗಳ ಕ್ರಮಾಂತರ ನಿರಂತರ ಮಾರ್ಪಾಟುಗಳಿಂದ ಉನ್ನತ ಜೀವಿಗಳು ವಿಕಾಸವಾಗಿವೆ ಎಂದು ಅವನು ಅಭಿಪ್ರಾಯ ಪಟ್ಟನು. ಪ್ರಕೃತಿಯಲ್ಲಿ ಎಲ್ಲಿ ನೋಡಿದರೂ, ಒಂದು ಜೀವಿಯಂತೆ ಮತ್ತೊಂದಿಲ್ಲ. ಮಾವಿನಮರ ಮಾವಿನಕಾಯಿಯನ್ನು ಬಿಡುವುದೇ ಹೊರತು ಬೇವಿನ ಕಾಯನ್ನಲ್ಲ. ಒಂದೇ ತಂದೆ ತಾಯಿಯ ಹತ್ತು ಮಕ್ಕಳು ಹತ್ತು ರೀತಿಯಿರುತ್ತಾರೆ. ಒಂದು ಮಗುವಿಗೆ ತಂದೆಯ ಮುಖವಿದ್ದರೆ, ತಾಯಿಯ ಬಣ್ಣವಿರುತ್ತದೆ. ಇನ್ನೊಂದು ಮಗುವಿಗೆ ತಾಯಿಯ ಬಣ್ಣವೂ ಅಜ್ಜನ ಕೂದಲಿನ ವೈಖರಿಯೂ ಬಂದರೆ ಆಶ್ಚರ್ಯವಿಲ್ಲ.

೧೮೫೭ರ ಸುಮಾರಿಗೆ ಆಸ್ಟ್ರಿಯಾದ ಕ್ರೈಸ್ತ ಸಂನ್ಯಾಸಿಯು ವೈಜ್ಞಾನಿಕವಾಗಿ ಇಂತಹ ಸಾರ್ವತ್ರಿಕ ವ್ಯತ್ಯಾಸಗಳಿಗೆ 'ಇದಮಿತ್ಥಂ' ಎಂಬ ಒಂದು ಸಿದ್ಧಾಂತವನ್ನು ಕೊಟ್ಟನು. ಅನುವಂಶೀಯ ಗುಣಗಳು ನಿರುತರವಾಗಿ ಪೀಳಿಗೆಯಿಂದ ಪೀಳಿಗೆಗೆ ನಡೆದು ಹೋಗುವ ವಿಧಾನವನ್ನು ಪ್ರಯೋಗಗಳ ಮೂಲಕ ವಿವರಿಸಿದನು. ಬಟಾಣಿ ಗಿಡಗಳಲ್ಲಿ ಆರು ವರ್ಷಗಳ ಕಾಲ ಅಡ್ಡಹಾಯಿಸುವಿಕೆ (Hybridisaton) ಪ್ರಯೋಗಗಳನ್ನು ನಡೆಸಿದನು. ವಿವಿಧ ಗುಣಗಳ ವರ್ಗಾವಣೆಗಳ ವಿಚಾರವನ್ನು ಪ್ರಮಾಣ ಪಡಿಸಿದನು. ದುರದೃಷ್ಟವಶಾತ್, ಅವನ ಇಂತಹ ಮಹತ್ವಪೂರ್ಣ ಸಂಶೋಧನೆ ೩೦ ವರ್ಷಗಳ ಕಾಲ ಯಾರ ಗಮನವನ್ನೂ ಸೆಳೆಯಲಿಲ್ಲ. ತನ್ನ ಸಂಶೋಧನೆಯ ಮಹತ್ವವನ್ನೂ ಅದರ ಮುಂದಣ ಬೆಳವಣಿಗೆಯ ಕನಸನ್ನೂ ಕಾಣದೆ ಆತ ಸತ್ತ. ಅಂದು ಸೂಕ್ಷ್ಮ ದರ್ಶಕವನ್ನೇ ಕಂಡುಹಿಡಿಯದ ಕಾಲ. ಜೀವ ಕೋಶವನ್ನಾಗಲೀ ಕ್ರೊಮೋಸೋಮ್‌ಗಳನ್ನಾಗಲೀ ತಿಳಿಯದೆ ಅನುವಂಶಿಕ ಸಿದ್ಧಾಂತಗಳನ್ನು ರೂಪಿಸಿದುದು ಆತನ ವೈಜ್ಞಾನಿಕ ಪ್ರತಿಭೆಗೆ ಸಾಕ್ಷಿ. ಅನಂತರ ಬೇಟ್ಸನ್ ಮೊದಲಾದವರು ಕ್ರೊಮೋಸೋಮ್‌ಗಳಲ್ಲಿರುವ ಅಂಶಗಳು ಸಂತತಿಯಿಂದ ಸಂತತಿಗೆ ಹೇಗೆ ಹೋಗುವವೆಂಬುದನ್ನು ಪ್ರಯೋಗಗಳ ಮೂಲಕ ತಿಳಿಸಿದರು. ಆದರೂ ಅನುವಂಶಿಕ ನಿಯಮಗಳನ್ನು ನಿರ್ಧರಿಸುವ ಅಂಶಗಳಾವುವು? ಅವು ಎಲ್ಲಿರುತ್ತವೆ? ಈ ಪ್ರಶ್ನೆಗಳಿಗೆ ಉತ್ತರ ಅಂದು ಸಾಧ್ಯವಿರಲಿಲ್ಲ.

೧೯೨೮ ರಲ್ಲಿ ಜೀವಶಾಸ್ತ್ರಜ್ಞ ಫ್ರೆಡರಿಕ್ ಗ್ರಿಫಿತ್ ಎಂಬವರು ನ್ಯೂಮೋನಿಯಾ ಕಾಯಿಲೆಯನ್ನು ತರುವ ಡಿಪ್ಲೋಕಾಕಸ್ ನ್ಯೂಮೊಕಾಕ್ಸೈ ಬ್ಯಾಕ್ಟೀರಿಯಾವನ್ನು ಇಲಿಗಳ ಮೇಲೆ ಉಪಯೋಗಿಸಿ ನಡೆಸಿದ ಪ್ರಯೋಗದಿಂದ DNA (ಡಿಯೋಕ್ಸಿರೈಬೋನ್ಯೂಕ್ಲಿಯಿಕ್ ಆಮ್ಲ) ಯೇ ವಂಶವಾಹಿ ಅಥವಾ ಜೀನ್ ಅಥವಾ ಗುಣ ನಿರ್ಧಾರಕ ವಸ್ತು ಎಂದು ನಿರ್ಧರಿಸಿದರು. DNA ಎಂಬುದು ಒಂದು ನ್ಯೂಕ್ಲಿಕ್ ಆಮ್ಲ. ಇದನ್ನು ಕಳೆದ ಶತಮಾನದಲ್ಲೇ ಜೀವ ರಸಾಯನ ಶಾಸ್ತ್ರಜ್ಞ ಮಿಷರ್ ಎಂಬವರು ಸಾಮನ್ ಮೀನಿನ ರೇತಃ ಪ್ರಾಣಿಗಳಲ್ಲಿ ಕಂಡು ಹಿಡಿದಿದ್ದರು. ಅದರ ಆಮ್ಲೀಯ ರೂಪದಿಂದಲೂ ನ್ಯೂಕ್ಲಿಯಸ್ (ಕಣಕೇಂದ್ರ) ಬಹಳ ಪ್ರಮಾಣದಲ್ಲಿ ಕಂಡು ಬಂದುದರಿಂದಲೂ ಅದಕ್ಕೆ ನ್ಯೂಕ್ಲಿಕ್ ಆಮ್ಲವೆಂದು ನಾಮಧೇಯವಾಯಿತು. ಆದರೆ ಅವುಗಳ ಮೇಲೆ ಪ್ರಖರ ವೈಜ್ಞಾನಿಕ ಬೆಳಕು ಈ ಶತಮಾನದಲ್ಲಿ ಅದರಲ್ಲೂ ಕಳೆದ ೨೫ ವರ್ಷಗಳಲ್ಲಿ ಬಿತ್ತು.

೧೯೪೧ ರಲ್ಲಿ ಬೀಡಲ್ ಮತ್ತು ಟಾಟಂ ಎಂಬ ವಿಜ್ಞಾನಿಗಳು ನ್ಯೂರೋಸ್ಪೋರ ಎಂಬ ಬೂಸ್ಟನಲ್ಲಿ ನಡೆಸಿದ ಪ್ರಯೋಗಗಳಿಂದ ಜೀನ್ ಎಂದರೆ ಒಂದು ನಿರ್ದಿಷ್ಟ ಕ್ರಮದಲ್ಲಿ ಅಮೈನೋ ಆಮ್ಲಗಳ ಸರಣಿಯಾದ ಪ್ರೊಟೀನಿನ ಸಂಶ್ಲೇಷಣಾ ಸಾಮರ್ಥ್ಯವಿರುವ ಜೀವಧಾತುವಿನ ಅಂಗವೆಂದು ತಿಳಿಸಿದರು. ಇದುವೇ ಒಂದು ಜೀನ್-ಒಂದು ಕಿಣ್ವ ಸಿದ್ಧಾಂತ. ಒಂದು ಜೀನ್ ಒಂದು ಕಿಣ್ವದ ಉತ್ಪಾದನೆಯನ್ನು ನಿಯಂತ್ರಿಸುತ್ತದೆ ಎಂದು ಇದರರ್ಥ. ಜೀನ್‌ನ ಬಗ್ಗೆ ಇದು ಒಂದು ಹೊಸ ನಂಬುಗೆಯನ್ನು ಮೂಡಿಸಿತು.

೧೯೪೪ ರಲ್ಲಿ ಒ. ಟಿ. ಅವೇರಿ, ಮೆಕ್ಲಿನ್ ಮೆಕಾರ್ತಿ ಮತ್ತು ಮೆಕಾಲ್ಡ್ ಇವರು ಕೆಲವು ವಿಶಿಷ್ಟ ಬಗೆಯ ವೈರಸ್‌ಗಳನ್ನೂ (ವೈರಸ್ ಎಂದರೆ ನ್ಯೂಕ್ಲಿಕ್ ಆಮ್ಲ ಮತ್ತು ಪ್ರೊಟೀನ್ ಇವಿಷ್ಟೇ ಪಡೆದ ಸೂಕ್ಷ್ಮಾತಿಸೂಕ್ಷ್ಮ ಜೀವಿಗಳು) ರೇಡಿಯೋ ಪಟು ವಸ್ತುಗಳನ್ನೂ ಉಪಯೋಗಿಸಿ ಪ್ರೊಟೀನ್ ಜೀನ್ ಅಲ್ಲ-ನ್ಯೂಕ್ಲಿಕ್ ಆಮ್ಲವಾದ DNA ಯೇ ಅನುವಂಶಿಕ ವಸ್ತು ಎಂದು ಅತ್ಯಂತ ಸಮರ್ಥವಾಗಿ ಸಾಬೀತು ಪಡಿಸಿದರು.

೧೯೩೪ರ ಹೊತ್ತಿಗಷ್ಟೇ ಕ್ರೊಮೋಸೋಮ್‌ಗಳು ಗುಣ ನಿರ್ಧಾರಕಗಳಾದ ಜೀನ್‌ಗಳನ್ನು ಸಾಗಿಸುವ ವಾಹಕಗಳೆಂದು ಗೊತ್ತಾದುವು. ಮುಂದಿನ ವರ್ಷಗಳಲ್ಲಿ ಡ್ರೊಸೊಫೈಲಾ

ಕೀಟದ ಬೃಹತ್ ಕ್ರೊಮೋಸೋಮ್‌ಗಳಲ್ಲಿ ಅಪಾರವಾದ ವೈಜ್ಞಾನಿಕ ಸಂಶೋಧನೆಗಳಿಂದ ಆ ಕೀಟದ ಯಾವ ಗುಣ ಯಾವ ಕ್ರೋಮೋಸೋಮ್‌ನಲ್ಲಿ ವ್ಯವಸ್ಥಿತವಾಗಿದೆ ಇತ್ಯಾದಿ ವಿಚಾರಗಳು ಬೆಳಕಿಗೆ ಬಂದುವು.

೧೯೫೭ ರಲ್ಲಿ ಬೆನ್‌ಜರ್ ಎಂಬವರು ಬೆಕ್ಟೀರಿಯಾಗಳ ಮೇಲೆ ಆಕ್ರಮಣ ಮಾಡುವ ವೈರಸ್ T^4ನ್ನು ಉಪಯೋಗಿಸಿ ಜೀನ್ ಪದಕ್ಕೆ ಸ್ಪಷ್ಟವಾದ ಅರ್ಥವನ್ನು ಕೊಡಲು ಸಮರ್ಥರಾದರು. ಒಂದು ಬಹು ಪೆಪ್‌ಟೈಡ್ ಸರಣಿಯನ್ನು ಸಂಶ್ಲೇಷಿಸಬಲ್ಲ ಜೀವ ಧಾತುವಿನ ಭಾಗವನ್ನು ಸಿಸ್ಟ್ರಾನ್ ಎಂದು ಕರೆದರು. ಒಂದು ಜೀನ್‌ನಲ್ಲಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ಸಿಸ್ಟ್ರಾನ್‌ಗಳಿರಬಹುದು. ಮರು ಸಂಯೋಗ ಹೊಂದುವಂತಹ ಜೀವ ಧಾತುವಿನ ಭಾಗಕ್ಕೆ ರೇಕಾನ್ ಎಂದರು. ಒಂದು ಸಿಸ್ಟ್ರಾನ್‌ನಲ್ಲಿ ಅನೇಕ ರೇಕಾನ್‌ಗಳಿರಬಹುದು. ವಿಕೃತಿಗೊಳ್ಳುವಂತಹ ಸಾಮರ್ಥ್ಯವಿರುವ ಭಾಗಕ್ಕೆ ಮ್ಯೂಟಾನ್ ಎಂಬ ಹೆಸರನ್ನಿತ್ತರು. ಈ ಮೇಲಿನ ಹಾಗೂ ಇನ್ನೂ ಎಷ್ಟೋ ವಿಜ್ಞಾನಿಗಳ ಶ್ರಮದ ಫಲಶ್ರುತಿಯಿಂದ ಜೀವ-ಜೀನ್‌ಗಳ ಗುಟ್ಟು ರಟ್ಟಾಗಿದೆ. ಈ ಗುಟ್ಟಿನ ಕಥೆಯ ಸ್ಥೂಲ ರೂಪ ಇಲ್ಲಿದೆ:

ಜೀವಿಗಳ ರಚನೆ

ಸಜೀವಿಗಳಲ್ಲಿ ಹೆಚ್ಚಿನವೂ ಅಸಂಖ್ಯಾತ ಜೀವಕೋಶಗಳಿಂದ ರಚಿತವಾಗಿವೆ. ಯಾವುದೇ ಜೀವಕೋಶವಾದರೂ ಅನೇಕ ಕ್ಲಿಷ್ಟ, ಸರಳ, ರಾಸಾಯನಿಕ ವಸ್ತುಗಳ ಒಂದು ಸೂಕ್ಷ್ಮ ಆಗರವಾಗಿರುತ್ತದೆ. ಜೀವಕೋಶದ ಕೇಂದ್ರವಾಗಿ ನ್ಯೂಕ್ಲಿಯಸ್ (ಕಣಕೇಂದ್ರ) ಎಂಬ ಒಂದು ಭಾಗವಿದೆ. ಜೀವಕೋಶದ ಎಲ್ಲಾ ಆಗುಹೋಗುಗಳನ್ನು ಅರ್ಥಾತ್ ಜೀವಿಯನ್ನು ಇದು ನಿಯಂತ್ರಿಸುತ್ತದೆ. ಅಂದರೆ ಇದರೊಳಗೆ ಗುಣ ನಿರ್ಧಾರಕ ಜೀನ್‌ಗಳಿರುತ್ತವೆ. ಈ ಜೀನ್‌ಗಳು ನ್ಯೂಕ್ಲಿಯಸ್‌ನ ತಂತುಗಳಂತಹ ರಚನೆಯಾದ ಕ್ರೊಮೋಸೋಮ್‌ನಲ್ಲಿ ವ್ಯವಸ್ಥಿತವಾಗಿವೆ. ಪ್ರತಿಯೊಂದು ಪ್ರಭೇದದ ಜೀವಿಗೂ ನಿರ್ದಿಷ್ಟ ಸಂಖ್ಯೆಯ ಕ್ರೊಮೋಸೋಮ್‌ಗಳಿರುತ್ತವೆ. ಉದಾ: ಮಾನವನ ಪ್ರತಿಯೊಂದು ಜೀವಕೋಶದಲ್ಲೂ ೪೬ (೨೩ ಜೊತೆ) ಇರುತ್ತವೆ. ಇವುಗಳ ಉದ್ದಕ್ಕೂ ಅಸಂಖ್ಯಾತ ಸೂಕ್ಷ್ಮ ಜೀನ್‌ಗಳು ಸಾಲಾಗಿ ಮುತ್ತಿನ ಮಣಿ ಹಾರದಂತೆ ಪೋಣಿಸಿರಬೇಕೆಂದು ನಂಬಲಾಗಿದೆ. ಕ್ರೊಮೋಸೋಮ್‌ಗಳೇ ವಂಶವಾಹಿ ಜೀನ್‌ಗಳನ್ನು ಪೀಳಿಗೆಯಿಂದ ಪೀಳಿಗೆಗೆ ಸಾಗಿಸುವ ವಸ್ತುಗಳು. ಜೀವಕೋಶ ವಿಭಜನೆಯಾಗುವಾಗ ಇವೆರಡೂ ವಿಭಜನೆ ಹೊಂದಿ ಮುಂದಿನ ಪೀಳಿಗೆಗೆ ಸಾಗುತ್ತವೆ.

ಸರ್ವಕಾರ್ಯಕರ್ತ—ಜೀನ್

ಜೀನ್ ಎಂಬುದು ಒಂದು ರಾಸಾಯನಿಕ ಆಮ್ಲವಾದ DNA ಎಂದು ಇಂದು ಗೊತ್ತಾಗಿದೆ. ನಮ್ಮ ಕೋಪ, ಪ್ರೇಮ, ಕರುಣೆ, ತಿರಸ್ಕಾರ, ದುಃಖ ಇವಕ್ಕೆಲ್ಲಾ ಮೂಲಕಾರಣ ನಮ್ಮ ದೇಹದೊಳಗಿನ ಒಂದು ರಾಸಾಯನಿಕ ಆಮ್ಲವೆಂದರೆ ನಿಮಗೆ ಆಶ್ಚರ್ಯವಾಗಬಹುದು. ನೀವು ಓದುವ ಶೈಲಿಗಾಗಿಯೇ ನಿಮಗೊಂದು ಜೀನ್ ಇದೆ; ನಿಮ್ಮ ಬುದ್ಧಿಶಕ್ತಿ ನಿಮ್ಮ ಜೀನ್‌ನ ಶಕ್ತಿ; ನೀವು ಹೇಗೆ ನಿಮ್ಮ ಕೈ ಬೆರಳನ್ನು ಮಡಚುತ್ತೀರಿ, ಹೇಗೆ ಕೆಮ್ಮುತ್ತೀರಿ, ಹೇಗೆ ಸೀನುತ್ತೀರಿ ಎಂಬವುಗಳಿಗೂ ಜೀನ್‌ಗಳಿವೆ. ಮಾನವನ ಪ್ರತಿಯೊಂದು ಜೀವಕೋಶದಲ್ಲೂ ೧,೨೦,೦೦೦ ದಳಿಗೆ ಕಡಿಮೆಯಿರದಷ್ಟು ಜೊತೆ ಜೀನ್‌ಗಳಿವೆ. ಒಂದು ಜೀನ್‌ನ ತೂಕ, ನೋಟ, ಗಾತ್ರಗಳನ್ನು ಅರಿಯಲು ವಿಜ್ಞಾನಿಗಳು ಬಹಳ ಸಾಹಸ ಮಾಡಿದ್ದಾರೆ. ೧೯೩೪ ರ ವರೆಗೆ ಇದು ಸಾಧ್ಯವಾಗಲಿಲ್ಲ. ಇಲೆಕ್ಟ್ರಾನ್ ಸೂಕ್ಷ್ಮದರ್ಶಕದಿಂದಲೂ (ಇದು ಸಾಧಾರಣ ೨ ಲಕ್ಷ ಪಾಲು ದೊಡ್ಡದು ಮಾಡಿ ತೋರಿಸಬಲ್ಲುದು) ಜೀನನ್ನು ಕಾಣಲು ಸಾಧ್ಯವಿಲ್ಲ. ಇತ್ತೀಚೆಗೆ ಸ್ಕೇನಿಂಗ ಇಲೆಕ್ಟ್ರಾನ್ ಸೂಕ್ಷ್ಮದರ್ಶಕದ ಮೂಲಕ ಇದನ್ನು ನೋಡಲು

ಸಾಧ್ಯವಾಗಿದೆಯಂತೆ.

ವಿವಿಧ ರೀತಿಯ ಜೀನ್ ಸಂಯೋಗ ಪ್ರತ್ಯುತ್ಪಾದನೆ ಸಮಯದಲ್ಲಿ ನಡೆದು ಬೆರಗುಗೊಳಿಸುವ ಗುಣ ಸಂಯೋಗಗಳನ್ನು ಮುಂದಿನ ಪೀಳಿಗೆಯಲ್ಲಿ ತೋರಿಸುವುದು. ಇಷ್ಟು ಮಾತ್ರವಲ್ಲ, ಜೀನ್‌ಗಳು ಸ್ಥಾನ-ಪಲ್ಲಟಗೊಂಡರೆ, ನಷ್ಟಗೊಂಡರೆ, ಸೂಕ್ಷ್ಮ ವಿಕೃತಿಗೊಳಗಾದರೆ ಪರಿಣಾಮ ಜೀವಿಯ ಗುಣಗಳಲ್ಲಿ ವ್ಯತ್ಯಾಸ.

ಒಂದು ಜೀವಕೋಶದಲ್ಲಿರುವ ಜೀನ್‌-ಗಳನ್ನು ನಿಯಂತ್ರಿಸಲು ಅದೇ ಜೀವಕೋಶದಲ್ಲಿ ನಿಯಂತ್ರಣ ಜೀನ್‌ಗಳಿವೆ. ಒಂದು ಜೀನ್ ಅನೇಕ ಗುಣಲಕ್ಷಣಗಳನ್ನು ನಿಯಂತ್ರಿಸುವ ಸಂದರ್ಭಗಳಿವೆ. ಕೆಲವು ಸಂದರ್ಭಗಳಲ್ಲಿ ಅನೇಕ ಜೀನ್‌ಗಳು ಒಂದು ಗುಣಲಕ್ಷಣವನ್ನು ನಿಯಂತ್ರಿಸುತ್ತವೆ. ಸಾಧಾರಣ ೫ ಬಿಲಿಯ ವರ್ಷಗಳ ಮೊದಲು ತೆರೆದ ಬಿಸಿ ಸಮುದ್ರಗಳಲ್ಲಿ ರಾಸಾಯನಿಕ ಕ್ರಿಯೆಯ ಪರಿಣಾಮವಾಗಿ ಉಂಟಾದ ನ್ಯೂಕ್ಲಿಕ್ ಆಮ್ಲವಾದ D N A ಯೇ ತಲೆತಲಾಂತರಗಳಲ್ಲಿ ಅಸಂಖ್ಯಾತ ಜೀವಕೋಟಿಗಳಲ್ಲಿ ಹಾದು ಬಂದು ನಮ್ಮ ನಿಮ್ಮ ಹಾಗೂ ಎಲ್ಲಾ ಸಸ್ಯ ಪ್ರಾಣಿ ಜೀವಕೋಶಗಳೊಳಗೆ ಕಾರ್ಯಪ್ರವೃತ್ತವಾಗಿವೆ ಎಂದರೆ ಆಶ್ಚರ್ಯವಾದರೂ ಸತ್ಯ.

ಜೀನ್‌ನ ರಾಸಾಯನಿಕ ರಚನೆ

ಕ್ರೋಮೋಸೋಮ್‌ನ ರಾಸಾಯನಿಕ ವಿಶ್ಲೇಷ ನಡೆಸಿದರೆ ಅದರಲ್ಲಿ ಮೂರು ರೀತಿಯ ಬೃಹದಣುಗಳು ದೊರೆಯುವವು.

೧. ಡಿಯೋಕ್ಸಿರೈಬೋ ನ್ಯೂಕ್ಲಿಯಿಕ್ ಆಮ್ಲ (DNA)

೨. ರೈಬೋ ನ್ಯೂಕ್ಲಿಯಿಕ್ ಆಮ್ಲ (RNA)

೩. ಪ್ರೊಟೀನ್.


ಇವುಗಳ ಪೈಕಿ DNA ಯೇ ಅನುವಂಶಿಕ ಲಕ್ಷಣ ಸಂಜ್ಞೆ ಆಜ್ಞೆಗಳನ್ನು ಪಡೆದ ಜೀನ್ ಆಗಿದೆ. ಇವುಗಳಲ್ಲಿನ ಸಂಕೇತದ ಶೇಖರಣೆ ಹಾಗೂ ಪ್ರಸಾರವೆ ಒಂದು ದೊಡ್ಡ ಸತ್ಯ. ಕೆಲವು ವೈರಸ್‌ಗಳಲ್ಲಿ ಮಾತ್ರ DNA ಇಲ್ಲ. ಇವುಗಳಲ್ಲಿ RNA ಅನುವಂಶಿಕ ವಸ್ತುವಾಗಿ ವರ್ತಿಸುತ್ತದೆ. ಅಂತೂ DNA ಯು ಜೀವವಿರುವ ಏಕಮಾತ್ರ ರಾಸಾಯನಿಕ ಅಣು. ಎ. ಕೊಸೆಲ್ ಎಂಬ ರಾಸಾಯನಿಕ ಜೀವಶಾಸ್ತ್ರಜ್ಞ ಪ್ರತಿಯೊಂದು ನ್ಯೂಕ್ಲಿಕ್ ಆಮ್ಲದಲ್ಲೂ ೪ ಬಗೆಯ ಸಾರಜನಕಯುಕ್ತ ಪ್ರತ್ಯಾಮ್ಲಗಳಿವೆಯೆಂದು ತಿಳಿಸಿದ್ದನು. ಹಾಗೂ ೫ ಕಾರ್ಬನ್ ಪರಮಾಣುಗಳುಳ್ಳ ಶರ್ಕರ (ರೈಬೋಸ್ ಅಥವಾ ಡಿಯೋಕ್ಸಿ ರೈಬೋಸ್) ವಿರುವುದನ್ನೂ ಆತನು ಗಮನಿಸಿದ್ದನು. ಶರ್ಕರವನ್ನು ಹೊಂದಿಕೊಂಡು RNA ಮತ್ತು DNA ಎಂಬ ಎರಡು ನ್ಯೂಕ್ಲಿಕ್ ಆಮ್ಲಗಳನ್ನು ೧೯೨೦ ರಲ್ಲಿ ಎ. ಜೋನ್ಸ್ ಕಂಡುಹಿಡಿದರು.

ಪ್ರತಿಯೊಂದು ನ್ಯೂಕ್ಲಿಕ್ ಆಮ್ಲವೂ ಅನೇಕ ನ್ಯೂಕ್ಲಿಯೋಟೈಡುಗಳಿಂದ ರಚಿಸಲ್ಪಟ್ಟ ಒಂದು ಬೃಹದಣು. ಪ್ರತಿಯೊಂದು ನ್ಯೂಕ್ಲಿಯೋಟೈಡಿನಲ್ಲಿ ಒಂದು ಶರ್ಕರ ಒಂದು ಸಾರಜನಕಯುಕ್ತ ಪ್ರತ್ಯಾಮ್ಲ ಹಾಗೂ ಒಂದು ಫೋಸ್ಫೋರಿಕ್ ಆಮ್ಲಗಳಿರುತ್ತವೆ.

೧೯೫೩ ರಲ್ಲಿ ಕೇಂಬ್ರಿಜ್ ವಿಶ್ವವಿದ್ಯಾನಿಲಯದ ಜೆ. ಡಿ. ವಾಟ್‌ಸನ್ ಮತ್ತು F. H. C. ಕ್ರಿಕ್ ಎಂಬ ತರುಣ ವಿಜ್ಞಾನಿಗಳು DNA ಅಣುವಿನ ಮಾದರಿಯನ್ನು (ಚಿತ್ರ ೧) ನಿರ್ಮಿಸಿದರು. ಇದಕ್ಕಾಗಿ ಅವರಿಗೆ ೧೯೬೨ ರಲ್ಲಿ ನೋಬೆಲ್ ಬಹುಮಾನವೂ ಬಂತು. ಇವರ DNA ಅಣು ಮಾದರಿ ಜೀವವಿಜ್ಞಾನ ಕ್ಷೇತ್ರದಲ್ಲಿ ಒಂದು ಹೊಸ ಕ್ರಾಂತಿಯನ್ನೇ ಎಬ್ಬಿಸಿತು. ಈ ಮಾದರಿಯಿಂದ ಜೀನ್‌ಗಳ ಪ್ರತ್ಯುತ್ಪಾದನೆ ಗೂಢಕೀಲಿಯ ಸಂಕೇತಗಳ ಸಾಗಾಟ ಆಕಸ್ಮಿಕ ವಿಕೃತಿಗಳನ್ನು ಉತ್ತಮ ರೀತಿಯಲ್ಲಿ ವಿವರಿಸಲು ಸಾಧ್ಯವಾಯಿತು.

ಇವರ ಮಾದರಿಯಂತೆ DNA ಯಲ್ಲಿ ಎರಡು ಸಮಾನಾಂತರ ಎಳೆಗಳಿವೆ. ಇವು

ಒಂದು ತಿರುಗು ಏಣಿಯಂತೆ ವ್ಯವಸ್ಥಿತವಾಗಿವೆ. ದೊಡ್ಡ ದೊಡ್ಡ ಕಟ್ಟಡಗಳಲ್ಲಿ ಎತ್ತರದ ಮಾಳಿಗೆಯನ್ನೇರಲು ಸುರುಳಿ ಏಣಿಯನ್ನು ನೀವು ಕಂಡಿರಬಹುದು. ನಮ್ಮೆಲ್ಲರ ಜೀನ್‌ನ ರಚನೆಯು ಹೆಚ್ಚು ಕಡಿಮೆ ಹೀಗೇ ಇದೆ. ೧೦ ಲಕ್ಷಕ್ಕೂ ಮೀರಿದ ನ್ಯೂಕ್ಲಿಯೋಟೈಡು ಜೊತೆಗಳು ಹೀಗೆ ಈ ಮೇಲಿನಂತೆ ವ್ಯವಸ್ಥಿತವಾಗಿರಬಹುದು.



ಒಂದು DNA ಅಣುವಿನಲ್ಲಿ ಲಕ್ಷಕ್ಕೂ ಮೀರಿದ ನ್ಯೂಕ್ಲಿಯೋಟೈಡುಗಳಿದ್ದರೂ ಬರೇ ನಾಲ್ಕು ರೀತಿಯ ನ್ಯೂಕ್ಲಿಯೋಟೈಡುಗಳಿವೆ. ಒಂದು ನ್ಯೂಕ್ಲಿಯೋಟೈಡು ಎಂದರೆ ರೈಬೋಸ್ ಶರ್ಕರ, ಫೋಸ್ಫೋರಿಕ್ ಆಮ್ಲ ಹಾಗೂ ಒಂದು ಸಾರಜನಕಯುಕ್ತ ಪ್ರತ್ಯಾಮ್ಲ ಸೇರಿ ಆದುದು. DNA ಯಲ್ಲಿ ಕಂಡುಬರುವ ೪ ನ್ಯೂಕ್ಲಿಯೋಟೈಡುಗಳು ಈ ಕೆಳಗಿನವು.

೧ ಫೋಸ್ಫೇಟ್ ಶರ್ಕರ ಥೈಮೀನ್ (T)
೨ " " ಎಡಿನೀನ್ (A)
೩ " " ಗ್ವಾನೀನ್ (G)
೪ " " ಸೈಟೋನಿನ್ (C)

ಒಂದು ಎಳೆಯ ನ್ಯೂಕ್ಲಿಯೋಟೈಡು ಇನ್ನೊಂದು ಎಳೆಯ ನ್ಯೂಕ್ಲಿಯೋಟೈಡಿಗೆ ಜಲಜನಕ ಬಂಧಗಳ ಮೂಲಕ ಕೂಡಿ ಮೆಟ್ಟಲುಗಳುಂಟಾಗುತ್ತವೆ. DNA ಮೆಟ್ಟಲುಗಳು ಈ ಕೆಳಗಿನ ರೀತಿಯಲ್ಲಿ ಮಾತ್ರ ಇರಲು ಸಾಧ್ಯ.

A — T
C — G

A - G ಮೆಟ್ಟಲುಗಳಾಗಲೀ T - C ಮೆಟ್ಟಲುಗಳಾಗಲೀ ಉಂಟಾಗುವುದಿಲ್ಲ. (ಚಿ. ೨)


ಈ ನಾಲ್ಕು ಪ್ರತ್ಯಾಮ್ಲಗಳು ಸೇರಿ (A-T; C—G) (ಒಂದು DNA ಯಲ್ಲಿ ಸಾವಿರ ಮಿಲಿಯ ಅಥವಾ ಲಕ್ಷ ಇಂತಹ ಮೆಟ್ಟಲುಗಳಿರಬಹುದು.) ಅಸಂಖ್ಯಾತ DNA ಅಣುಗಳನ್ನು ರಚಿಸುತ್ತವೆ. ಇದುವೇ ಜಗತ್ತಿನಲ್ಲಿರುವ ಅಸಂಖ್ಯಾತ ಗುಣಗಳ ಗುಟ್ಟು—ಜೀವದ ಭಾಷೆಯ ಮರ್ಮ. ಎಲ್ಲಾ DNA ಗಳೂ ಮೂಲಭೂತವಾಗಿ ೪ ರೀತಿಯ ನ್ಯೂಕ್ಲಿಯೋಟೈಡುಗಳಿಂದ ರಚಿತವಾಗಿದ್ದರೂ A-T, C-G ಮೆಟ್ಟಲುಗಳ ಕ್ರಮಾಗತ ವ್ಯವಸ್ಥೆ

ಅವುಗಳೊಳಗೆ ಅದ್ಭುತ ವ್ಯತ್ಯಾಸವನ್ನು ತರಬಲ್ಲದು. ಈ ವ್ಯವಸ್ಥೆಯಲ್ಲಿ ಒಂದು ಸಣ್ಣ ವ್ಯತ್ಯಾಸವಾದರೂ ಅದು ವಿಕೃತಿಯಾಗಿ ಕಂಡು ಬರುವುದು.

DNA ಅಣುವಿನ ಒಂದು ಎಳೆಯ ನ್ಯೂಕ್ಲಿಯೋಟೈಡುಗಳು ಕ್ರಮಾನುಗತಿ ಮತ್ತೊಂದು ಎಳೆಯ ಕ್ರಮಾನುಗತಿಯನ್ನವಲಂಬಿಸುತ್ತದೆ. ಆದುದರಿಂದ ಅಣುವು ದ್ವಿಪ್ರತೀಕರಣವಾದಾಗ ಸರಾಸರಿ ವಾಕ್ಯಗಳ ಪಡಿಯಚ್ಚಾಗುವುದು.

ಜೀವಕೋಶಗಳಲ್ಲಿರುವ ಇನ್ನೊಂದು ರೀತಿಯ ನ್ಯೂಕ್ಲಿಯಿಕ್ ಆಮ್ಲ RNA ಇವು DNAದ ಸಹಾಯಕ. DNA ಯಂತೆ ಇವು ಬಹು ನ್ಯೂಕ್ಲಿಯೋಟೈಡು ಸರಪಳಿಗಳು. ಆದರೆ ಒಂಟಿ ಎಳೆಗಳು. ಇವುಗಳ ಸಕ್ಕರೆ ರೈಬೋಸ್ ಹಾಗೂ ಥೈಮಿನ್ (T) ಬದಲು ಯುರಾಸಿಲ್ (U) ಇರುತ್ತದೆ.

ಚಿ. ೨



ಪ್ರೋಟೀನ್ ರಚನೆ

ಇವು ಜೀವಕೋಶದಲ್ಲಿರುವ ಇನ್ನೊಂದು ರೀತಿಯ ಬೃಹದಣುಗಳು. ಇವುಗಳು ಅಮೈನೊ ಆಮ್ಲಗಳ ಜೋಡಣೆಯಿಂದ ರಚಿತವಾಗಿವೆ. ಒಟ್ಟು ೨೦ ಜಾತಿಯ ಅಮೈನೊ ಆಮ್ಲಗಳಿವೆ. ಒಂದು ಪ್ರೋಟೀನಿನಲ್ಲಿ ಒಂದೇ ಜಾತಿಯವು ಇರಬಹುದು ಅಥವಾ ಹಲವು ಜಾತಿಯವು ಇರಬಹುದು. ಅಂತೂ ಒಂದು ಪ್ರೋಟೀನ್ ಅಣು ನೂರುಗಟ್ಟಲೆ ಅಥವಾ ಸಾವಿರಗಟ್ಟಲೆ ಅಮೈನೊ ಆಮ್ಲಗಳ ಜೋಡಣೆಯಿಂದ ಆಗುತ್ತದೆ. ಹೇಗೆ ೪ ಜಾತಿಯ ನ್ಯೂಕ್ಲಿಯೋಟೈಡ್‌ಗಳಿಂದ ಅಸಂಖ್ಯ ನಮೂನೆಯ DNA ಗಳಾಗಬಹುದೋ ಹಾಗೆಯೇ ೨೦ ರೀತಿಯ ಅಮೈನೊ ಆಮ್ಲಗಳ ವಿವಿಧ ಕ್ರಮಾನುಗತ ವ್ಯವಸ್ಥೆಯಿಂದ ಅಂತ್ಯವಿಲ್ಲದ ರೀತಿಯ ಪ್ರೋಟೀನು ಅಣುಗಳು ಉಂಟಾಗುವವು.

ಪ್ರೋಟೀನುಗಳು ಜೀವಕೋಶಗಳನ್ನು, ದೇಹವನ್ನು ಕಟ್ಟುವ ವಸ್ತುಗಳು ಮಾತ್ರವಲ್ಲ. ಜೀವಕೋಶದಲ್ಲಿ ನಡೆಯುವ ಪ್ರತಿಯೊಂದು ರಾಸಾಯನಿಕ ಕ್ರಿಯೆಯ ಪ್ರತಿಯೊಂದು ಹಂತಕ್ಕೂ ಒಂದು ನಿರ್ದಿಷ್ಟ ಪ್ರೋಟೀನ್ ಕಿಣ್ವದ ರೂಪದಲ್ಲಿ ಕೆಲಸ ಮಾಡುತ್ತದೆ. ಉಳಿದ ರಾಸಾಯನಿಕ ವಸ್ತುಗಳಾದ ಲಿಪಿಡ್, ಕಾರ್ಬೋಹೈಡ್ರೇಟ್, ನೀರು ಮೊದಲಾದವುಗಳ ರಾಸಾಯನಿಕ ರಚನೆ, ಗುಣ, ಕಾರ್ಯಗಳು ಎಲ್ಲಾ ಜೀವಿಗಳಲ್ಲೂ ಒಂದೇ ಆಗಿದ್ದರೆ, ಈ ಪ್ರೋಟೀನ್‌ಗಳು ಒಂದೇ ತಂದೆ-ತಾಯಿ ಮಕ್ಕಳೊಳಗೆ ವ್ಯತ್ಯಾಸವಾಗಿವೆ. ಒಂದೇ ವ್ಯಕ್ತಿಯಲ್ಲಿ ಸಾವಿರಗಟ್ಟಲೆ ಜಾತಿಯ ಪ್ರೋಟೀನ್‌ಗಳಿವೆ.

ಆದುದರಿಂದ ಪ್ರತಿಯೊಬ್ಬ ವ್ಯಕ್ತಿಯ ವೈಶಿಷ್ಟ್ಯ ಅವನು ಪಡೆದ ಪ್ರೋಟೀನ್‌ಗಳಿಂದಾಗಿದೆ. ಈ ಪ್ರೋಟೀನ್‌ಗಳ ವೈಶಿಷ್ಟ್ಯ DNAಯಿಂದ ನಿರ್ಧಾರವಾಗುವುದು. ಆದುದರಿಂದ DNA ಪ್ರೋಟೀನುಗಳೊಳಗಿನ ಈ ಗುಪ್ತಭಾಷೆಯು ಜೀವದ ಭಾಷೆ: ತಳಿ ಸಂಕೇತ ಭಾಷೆ. ಭಾಷೆಯನ್ನು ತರ್ಜುಮೆ

ಗೋಳಿಸಬಲ್ಲ ಎಲ್ಲ ಅಣುಗಳೇ RNA.

DNA ಯು RNAಯನ್ನು ಮಾಡುತ್ತದೆ. RNAಯು ಪ್ರೋಟೀನನ್ನು ಮಾಡುತ್ತದೆ. ಇದೇ! ಜೀವ ಜೀವಿಗಳ ಮೂಲ ಮಂತ್ರ.

ಜೀವನ ಗುಪ್ತ ಭಾಷೆ

ಜೀವಕೋಶದ ನ್ಯೂಕ್ಲಿಯಸ್ ಒಂದು ದೊಡ್ಡ ಗ್ರಂಥಾಲಯವಿದ್ದಂತೆ. ಅನೇಕ ಪ್ರೋಟೀನ್ ಅಣುಗಳ ತಯಾರಿಕೆಗೆ ಬೇಕಾದ ಸುದ್ದಿ ಸಂದೇಶಗಳು ಇದರ ಜೀನ್‌ಗಳಲ್ಲಿವೆ. ಒಂದು ಕಾರ್ಖಾನೆಯ ಮುಖ್ಯಾಧಿಕಾರಿಯಂತೆ, ಎಲ್ಲಾ ಕಾರ್ಯಗಳನ್ನು ಇವು ನಡೆಸುತ್ತವೆ. DNA ಯಿಂದ ಸಂದೇಶಗಳು RNA ನ್ಯೂಕ್ಲಿಯೋ ಟೈಡುಗಳ ಸಂಕೇತ ರೂಪದಲ್ಲಿ ಬರುತ್ತದೆ ಇಂಗ್ಲಿಷ್ ಭಾಷೆಯು ಬರೇ ೨೬ ಅಕ್ಷರಗಳಿಂದ ಊಹೆಗೂ ನಿಲುಕಲಾರದಷ್ಟು ವಾಕ್ಯಗಳನ್ನು, ಗ್ರಂಥಗಳನ್ನೂ, ಸಂದೇಶಗಳನ್ನೂ ನಿರ್ಮಿಸಬಹುದಷ್ಟೆ. ಆದರೆ ಇಂಗ್ಲಿಷ್ ಭಾಷೆ ಬರುವವನಿಗಷ್ಟೇ ಇದು ಅರ್ಥ ಗ್ರಾಹ್ಯ. ಹಾಗೆಯೇ ಜೀನ್‌ನ ಈ ನಾಲ್ಕು ಅಕ್ಷರಗಳಿಂದ ಅಂತ್ಯವಿಲ್ಲದಷ್ಟು ರೀತಿಯ ಪ್ರೋಟೀನ್‌ಗಳನ್ನು ಸಂಶ್ಲೇಷಿಸಲು ಬೇಕಾದ ಸಂದೇಶಗಳನ್ನು ಕೊಡಲು ಸಾಧ್ಯ. ಈ ಸಂಕೇತ ಜೀವಕೋಶದ ಒಳಗಷ್ಟೇ ಚಲಾವಣೆ.

DNA ಯ ಈ ಸಂಕೇತ ಅಕ್ಷರಗಳು ಯಾವ ರೀತಿ ಶಬ್ದಗಳನ್ನು, ವಾಕ್ಯಗಳನ್ನು ನಿರ್ಮಿಸುತ್ತದೆಂಬುದು ಖೊರಾನಾ, ಹಾಲಿ, ನೀರನ್‌ಬರ್ಗರ ಸಂಶೋಧನೆಗಳಿಂದ ಗೊತ್ತಾಗಿದೆ. ಮೂರು ಅಕ್ಷರಗಳನ್ನು ಸೇರಿಸಿ ಸಂದೇಶದ ಶಬ್ದಗಳಾಗಿವೆ. DNAಯ ಸಂದೇಶದ ಶಬ್ದಗಳು RNAಯ ಸಂದೇಶದ ಶಬ್ದಗಳಾಗುತ್ತವೆ. ಇಂತಹ ಮೂರಕ್ಷರಗಳ ಶಬ್ದಕ್ಕೆ ತ್ರಿನ್ಯೂಕ್ಲಿಯೋಟೈಡು ಸಂಕೇತ ಎಂದು ಹೆಸರು. ಪ್ರತಿಯೊಂದು ಇಂತಹ ಶಬ್ದದ ಅರ್ಥ ಒಂದು ಅಮೈನೋ ಆಮ್ಲ. A, U, C, G ಈ ನಾಲ್ಕು ಅಕ್ಷರಗಳನ್ನುಪಯೋಗಿಸಿ ೬೪ ಮೂರಕ್ಷರ ಶಬ್ದಗಳನ್ನು ನಿರ್ಮಿಸಬಹುದು. ಈ ಮೇಲಿನ ಮೂವರು ವಿಜ್ಞಾನಿಗಳು ಈ ೬೪ ಶಬ್ದಗಳ ಅರ್ಥವನ್ನು ಸಂಶೋಧಿಸಿ ಅನುವಂಶಿಕ ನಿಘಂಟನ್ನು ರಚಿಸಿದ್ದಾರೆ.

ಮೂರು ನ್ಯೂಕ್ಲಿಯೋಟೈಡುಗಳ ಗುಂಪು ಒಂದು ಅಮೈನೊ ಆಮ್ಲವಾಗಿ ಭಾಷಾಂತರವಾಗುವುದು. ಅಮೈನೊ ಆಮ್ಲವನ್ನು ಸಾಗುವ ಕೆಲಸವನ್ನು ಜೀವ ರಸವಲ್ಲಿನ ವಾಹಕ RNA ಗಳು ಮಾಡುವುವು. ೨೦ ರೀತಿಯ ಅಮೈನೊ ಆಮ್ಲಗಳಿಗೆ ೨೦ ರೀತಿಯ ವಾಹಕ RNAಗಳಿವೆ. ಈ RNAಗಳ ಒಂದು ಬದಿಯಲ್ಲಿ ಮೂರು ನ್ಯೂಕ್ಲಿಯೋಟೈಡುಗಳ ಗುಂಪಿದ್ದು ಇದಕ್ಕೆ ಪ್ರತಿಸಂಕೇತ ಎಂದು ಹೆಸರು. UCA ಪ್ರತಿ ಸಂಕೇತವನ್ನು ಪಡೆದ t–RNAಯು m–RNAಯ AGU ಮಾತ್ರ ಓದಬಲ್ಲುದು. ಹೀಗೆ ಓದುವಾಗ ಪ್ರತ್ಯಾಮ್ಲಗಳು ಪರಸ್ಪರ ಕೊಂಡಿಯಂತೆ ಸಿಕ್ಕಿಕೊಳ್ಳುವುವು. ಪರಿಣಾಮ, ನಿಶ್ಚಿತ ಅಮೈನೊ ಆಮ್ಲ ತನ್ನ ಸ್ಥಾನವನ್ನು ಪಡೆಯುವುದು.

ಮೇಲಿನ DNA ಅಥವಾ m–RNA ಓದುವಿಕೆಯಲ್ಲಿ ಸ್ವಲ್ಪ ವ್ಯತ್ಯಾಸವಾದರೆ ಭಯಂಕರ ವ್ಯತ್ಯಾಸಗಳುಂಟಾಗುವುವು. DNA, RNA ಭಾಷೆಯಲ್ಲಿ ಇಂತಹವೇ ಸೂಕ್ಷ್ಮ ವ್ಯತ್ಯಾಸಗಳು ಜೀವಿಯ ಗುಣಗಳ ಮಹತ್ತರ ಬದಲಾವಣೆಗೆ ಕಾರಣವಾಗಬಲ್ಲುವು. ಮಾನವನ ಒಂದು ಆನುವಂಶಿಕ ರೋಗವಾದ Sickle cell anaemia, DNAಯ ಒಂದು ನ್ಯೂಕ್ಲಿಯೋಟೈಡ್ (ಒಂದಕ್ಷರ) ವ್ಯತ್ಯಾಸದಿಂದ ಆಗುವಂತಹುದು. DNA ಯ ವ್ಯವಸ್ಥೆಯಲ್ಲಾದ ಸೂಕ್ಷ್ಮ ವ್ಯತ್ಯಾಸ m–RNA ಯಲ್ಲಿ ಪ್ರತಿಫಲಿಸಲ್ಪಡುವುದು. ಇದು ಪ್ರೊಟೀನಿನ ಅಮೈನೊ ಆಮ್ಲ ವ್ಯವಸ್ಥೆಯಲ್ಲಿ ವ್ಯತ್ಯಾಸ ತರುವುದು. ಕಿಣ್ವವು ವ್ಯತ್ಯಾಸವಾಗುವುದು. ಪರಿಣಾಮವಾಗಿ ರಾಸಾಯನಿಕ ಕ್ರಿಯೆ ವ್ಯತ್ಯಾಸವಾಗಿ ಜೀವಿಯ ಗುಣದಲ್ಲೂ ವ್ಯತ್ಯಾಸ. ಒಟ್ಟಿನಲ್ಲಿ ಜೀನ್‌ನ

ಕಾರ್ಯಾಚರಣೆ ಹೀಗಿದೆ:-

ಡಿ. ಎನ್. ಎ (ಜೀನ್)→ಎಂ. ಆರ್. ಎನ್. ಎ→ಅಮೈನೊ ಆಮ್ಲಗಳ ವ್ಯವಸ್ಥಿತ ಮಾಲೆ→ಪ್ರೊಟೀನ್→ಕಿಣ್ವ (ಎನ್‌ಜೈಮ್)→ಜೈವಿಕ ಕ್ರಿಯೆ→ಗುಣನಿರ್ಧಾರ.

ಜಾಕೋಬ್ ಮತ್ತು ಮೊನಾಡರ ಪ್ರಕಾರ (೧೯೬೦)- ಡಿ ಎನ್ ಎ ಸರಪಳಿಯ ಒಂದು ನಿರ್ದಿಷ್ಟ ಕಿಣ್ವದ ತಯಾರಿಕೆಯಲ್ಲಿ ಪ್ರಭಾವ ಬೀರುವ ಘಟಕವನ್ನು ರಚನಾತ್ಮಕ ಜೀನ್ (Structural gene) ಎನ್ನುವರು. ಅದಕ್ಕೆ ಸಮೀಪವಿರುವ ಇನ್ನೊಂದು ಘಟಕಕ್ಕೆ Operator gene ಎಂದು ಹೆಸರು. ಕಿಣ್ವದ ಅವಶ್ಯಕತೆ ಇಲ್ಲದಿದ್ದರೆ ರೆಗ್ಯುಲೇಟರ್ ಜೀನ್ ಒಂದು ಸಂಕ್ಲಿಷ್ಟ ರಿಪ್ರೆಸರ್ ವಸ್ತುವನ್ನು ಬಿಡುಗಡೆ ಮಾಡಿ ಜೀನಿನ ಕ್ರಿಯಾ ಘಟಕವನ್ನು ಸುಪ್ತಗೊಳಿಸುತ್ತದೆ. ಕಿಣ್ವವು ಅವಶ್ಯವೆನಿಸಿದಾಗ ರಿಪ್ರೆಸಾರ್ ವಸ್ತು ಸುಪ್ತಗೊಂಡು ಅಪರೇಟರ್ ಘಟಕವನ್ನು ಸಕ್ರಿಯಗೊಳಿಸುವಂತೆ ಮಾಡಿ ರಚನಾತ್ಮಕ ಜೀನನ್ನು ಪ್ರೇರೇಪಿಸುತ್ತದೆ. ಹೀಗೆ ಕಿಣ್ವವು ಉತ್ಪತ್ತಿಯಾಗುತ್ತದೆ.

ಮಹತ್ತರ ಸಾಧನೆ

ಟೊಮೆಟೋದ ಕೆಂಪು ವರ್ಣದಿಂದ ಹಿಡಿದು ಮಾನವನ ಮೂಗಿನ ಮಾಟದವರೆಗೆ ಎಲ್ಲದರಲ್ಲೂ ನಿರ್ಣಾಯಕ ಪಾತ್ರ ವಹಿಸುವ ವಂಶಪರಂಪರೆಯ ಮೂಲ ಘಟಕವಾದ ಜೀನನ್ನು ಸಂಪೂರ್ಣ ನಿಯಮಿತ ವ್ಯವಸ್ಥೆಯೊಂದಿಗೆ ನಿರ್ಮಿಸಿದುದು ಈ ಶತಮಾನದ [illegible] ಅಮೇರಿಕ ವಿಜ್ಞಾನಿ [illegible] ಮಾಗಿ ಪ್ರಯೋಗಾಲದಲ್ಲಿ [illegible] ಸೃಷ್ಟಿಸಿದವರೂ ಇವರೇ. [illegible] ಕೃತಕವಾಗಿ ಪ್ರಯೋಗಾಲಯದಲ್ಲಿ ಸೃಷ್ಟಿಸಿದ್ದರು. ಆದರೆ ಅವರು ಸಜೀವ ಕೋಶಗಳಿಂದ ಸ್ವಲ್ಪ ಅನುವಂಶೀಯ ವಸ್ತುಗಳನ್ನು ಹೊರ ತೆಗೆದು ಅದೇ ಸ್ವಭಾವದ ಅನುವಂಶೀಯ ವಸ್ತುಗಳ ನಕಲುಗಳನ್ನು ಪ್ರಯೋಗ ನಳಿಗೆಯಲ್ಲಿ ತಯಾರಿಸಿದ್ದರು. ಆದುದರಿಂದ ಸಂಪೂರ್ಣ ಕೃತಕ ಜೀನ್ ಸೃಷ್ಟಿಸಿದ ಕೀರ್ತಿ ಖೋರಾನಾ ಅವರದ್ದೇ ಆಗಿದೆ. U. S. A.ಯ ಮೆಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಪ್ರೊಫೆಸರ್ ಆಗಿರುವ ಡಾ. ಖೊರಾನಾ ಈಸ್ಟ್ (yeast) ಜೀವ ಕೋಶದಲ್ಲಿ ಟೈರೋಸೀನ್ t RNA ಯನ್ನು ಉತ್ಪಾದಿಸುವ ಜೀನನ್ನು ಸೃಷ್ಟಿಸಿದರು (೧೯೭೦). ಇದರ ಮೊದಲು ತಳಿ ಸಂಕೇತ ಗುಪ್ತಭಾಷೆಯ ಸಂಶೋಧನೆಗೆ ಅವರಿಗೆ ನೀರೆನ್‌ಬರ್ಗ್ ಮತ್ತು ಹೋಲಿ ಅವರೊಂದಿಗೆ ನೋಬೆಲ್ ಪಾರಿತೋಷಕ ದೊರೆತಿತ್ತು. ಈ ಮೇಲಿನವಷ್ಟೇ ಅಲ್ಲದೆ, ಈ ವರ್ಷದ ಅವರ ಸಂಶೋಧನೆಯು ಮತ್ತಷ್ಟು ಮಹತ್ತರವಾದುದು. ಕೃತಕವಾಗಿ ಸೃಷ್ಟಿಸಿದ ಜೀನನ್ನು ಬೆಕ್ಟೀರಿಯಾ ಜೀವಕೋಶದೊಳಗೆ ಸೇರಿಸಿದಾಗ ನಿಜ ಬೆಕ್ಟೀರಿಯಾ ಜೀನ್‌ನಂತೆ ಅದು ಕಾರ್ಯವೆಸಗಿತು. ಈ ಕೆಲಸದಲ್ಲಿ ಅವರಿಗೆ ಡಾ. ರಾಮಮೂರ್ತಿ ಬೆಲಗಜೆ (ಕರ್ನಾಟಕದ ದಕ್ಷಿಣ ಕನ್ನಡದವರು) ಹಾಗೂ ಡಾ. ಹ್ಯಾನ್ಸ್ ಜೋಕಿ ಫ್ರಿಟ್ಸ್ ಸಹಾಯಕರಾಗಿದ್ದರು. ವಂಶವಾಹಿಯು ನಿಶ್ಚಿತ ಸಮಯದಲ್ಲಿ ಕಾರ್ಯಪ್ರವೃತ್ತವಾಗುವಂತೆ, ಅಗತ್ಯವಿಲ್ಲದಾಗ ಕಾರ್ಯ ನಿರ್ವಹಿಸದೆ ಅರ್ಥಾತ್ ಸಂಪೂರ್ಣ ನಿಯಮಿತ ವ್ಯವಸ್ಥೆಯ ಕೃತಕ ವಂಶವಾಹಿಯನ್ನು ಸೃಷ್ಟಿಸಿ, ಶಾಶ್ವತವಾಗಿ ಅದನ್ನು ಜೀವಿಯೊಳಗೆ ಸೇರಿಸಿ ಅದರ ಕಾರ್ಯವನ್ನು ನಡೆಸಿದುದು ಖೊರಾನಾ ತಂದ ಸಾಧನೆ. ಅಂದರೆ ಜೀನನ್ನು ಮಾನವನ ಹಿಡಿತಕ್ಕೆ ತಂದಂತಾಯಿತು. "Gene types can be engineered" ಎಂದು ತೋರಿಸಿದಂತಾಯಿತು. ಒಮ್ಮೆ ಕೃತಕ DNA ಸಿದ್ಧ- [illegible] ಇವುಗಳ ಪ್ರತ್ಯುತ್ಪಾದನೆಯಾಗುವುದು.

ಕಲ್ಪನಾ ಲೋಕ

ಕೆಮಿಕಲ್ ಇಂಜನಿಯರಿಂಗ್, ಇಲೆಕ್ಟ್ರಿಕಲ್ ಇಂಜಿನಿಯರಿಂಗ್ ಏರೋನಾಟಿಕಲ್ ಇಂಜಿನಿಯರಿಂಗ್, ಸಿವಿಲ್ ಇಂಜಿನಿಯರಿಂಗ್, ಜೆನೆಟಿಕಲ್ ಇಂಜನಿಯರಿಂಗ್— ಇದು ಕೊನೆಯದು ಏನಪ್ಪಾ ಎಂದು ಆಶ್ಚರ್ಯ ಪಡಬೇಡಿ; ಜೀವಿಗಳಿಗೆ ಜೀನ್‌ಗಳನ್ನು ಸೇರಿಸುವುದು; ಜೀವಿಗಳಿಂದ ಜೀನನ್ನು ತೆಗೆಯುವುದು ಅಥವಾ ಜೀನ್‌ಗಳನ್ನು ಬೇಕಾದಂತೆ ಮಾರ್ಪಡಿಸುವುದು ಇದುವೆ ಜೆನೆಟಿಕಲ್ ಇಂಜಿನಿಯರಿಂಗ್. ಜಗತ್ತಿನ ಸಾಧಾರಣ ೧೦೦ ಪ್ರಯೋಗಾಲಯಗಳು ಈ ದೃಷ್ಟಿಯಿಂದ ಕೆಲಸ ಮಾಡುತ್ತಿವೆ. ಸಂಶೋಧನೆಗಳು ಇದೇ ರೀತಿ ಮುಂದುವರಿದಾಗ ಅನೇಕ ಆನುವಂಶಿಕ ರೋಗಗಳನ್ನು ನಾವು ತಡೆಹಿಡಿಯಬಹುದು. ಕ್ಯಾನ್ಸರಿನಂತಹ ಮಾರಕ ರೋಗಗಳನ್ನೂ ವಿಕಾರಗಳನ್ನೂ ತಡೆಹಿಡಿಯಬಹುದು. ಉದಾಹರಣೆಗೆ ಡಯಾಬಿಟೀಸ್ ರೋಗವನ್ನು ತೆಗೆದುಕೊಳ್ಳಿ. ಇದು ಇನ್ಸುಲಿನ್ನಿನ ಕೊರತೆಯಿಂದಾಗಿ ಉಂಟಾಗುತ್ತದೆ. ಇನ್ಸುಲಿನ್, ಪೆಂಕ್ರಿಯಾಸನ (islands of the hagerhanes) ಎಂಬ ಜೀವಕೋಶಗಳಿಂದ ಮಾತ್ರ ಉತ್ಪಾದನೆಯಾಗುವುದು. ಆದರೆ ಈ ಸಂದೇಶಗಳಿಗಾಗಿ ಜೀನ್‌ಗಳು ಇತರ ಜೀವಕೋಶಗಳಲ್ಲೂ ಇರಬೇಕು. ಅಲ್ಲಿ ಅವು ಕಾರ್ಯಪ್ರವೃತ್ತವಾಗಿಲ್ಲ ಅಷ್ಟೆ. ಇತರ ಕೋಶಗಳಲ್ಲಿ ಇನ್ಸುಲಿನ್ನನ್ನು ಉತ್ಪಾದಿಸುವ ಜೀನ್‌ಗಳನ್ನು ತಡೆಹಿಡಿಯುವ ಜೀನ್‌ಗಳು ಕಾರ್ಯಪ್ರವೃತ್ತವಾರಬಹುದು. ಜೆನಿಟಿಕಲ್ ಇಂಜಿನಿಯರಿಂಗ್ ವೃದ್ಧಿಗೊಂಡಾಗ ಇದನ್ನು ಸರಿಪಡಿಸಬಹುದೇನೊ?

ಕೃಷಿ ಕ್ಷೇತ್ರದಲ್ಲಿ ಬತ್ತದಂತಹ ಗಿಡಗಳಿಗೆ ಜೀನ್‌ಗಳನ್ನು ಕೊಟ್ಟು ಸಾರಜನಕ ಸ್ಥಿರೀಕರಣವನ್ನು ಪ್ರೇರೇಪಿಸಬಹುದು. ಒಣಗುಡ್ಡಗಳಲ್ಲೂ, ಸಮುದ್ರ ಕಿನಾರೆಯ ಪೊಯ್ಗೆಯಲ್ಲೂ ಕೃಷಿ ಸಾಧ್ಯವಾಗಬಹುದು. ನೆನಪಿನ ಗುಳಿಗೆಗಳಿಂದ (ಅದಕ್ಕಾಗಿರುವ ಜೀನ್ ಹೊಂದಿದ) ನೆನಪಿನ ಶಕ್ತಿ ಹೆಚ್ಚಿಸಬಹುದು. ಹೆಡ್ಡ ದಡ್ಡರು ಶೀಘ್ರಮತಿಗಳಾದಬಹುದು.

೭೭ ನ್ಯೂಕ್ಲಿಯೋಟೈಡುಗಳುಳ್ಳ ಜೀನೊಂದನ್ನು ಸೃಷ್ಟಿಸಲು ನಾಲ್ಕಾರು ವಿಜ್ಞಾನಿಗಳಿಗೆ ೫ ವರ್ಷ ತಗಲಿದ್ದು, ಉನ್ನತ ಜೀವಿ ಮಾನವನ ಒಂದು ಜೀವಿನಲ್ಲಿ ೬ ಸಾವಿರ ನ್ಯೂಕ್ಲಿಯೋಟೈಡುಗಳಿರುವಾಗ ಈ ಮೇಲಿನ ಕನಸು ಕನಸಾಗಿಯೇ ಇರಬಹುದೇ ಎಂದು ನೀವು ಸಂಶಯಪಡಬಹುದು. ಆದರೆ ವಿಜ್ಞಾನವು ಶರವೇಗದಲ್ಲಿ ಮುನ್ನುಗ್ಗುತ್ತಿದೆ. ಕಳೆದ ಒಂದು ಶತಮಾನದಲ್ಲಿ ಆದ ಕಾರ್ಯ ಇಂದು ಒಂದು ದಶಕದಲ್ಲಿ ಆಗುತ್ತಿದೆ. ಇಂದು ಹತ್ತು ವರ್ಷದಲ್ಲಾಗುತ್ತಿರುವ ಕಾರ್ಯ ಮುಂದಿನ ಶತಮಾನದ ೧೦ ದಿನದಲ್ಲೇ ಆಗಬಹುದೆಂಬ ನಮ್ಮ ವಾದದಲ್ಲಿ ಹುರುಳಿಲ್ಲದೆ ಇಲ್ಲ. ಅಂತೂ ಔಷಧಿಯ ಉತ್ಪಾದನೆಗಳಲ್ಲಿ ಬಳಕೆಯಾಗುವಂತಹ ಬ್ಯಾಕ್ಟೀರಿಯಾದಲ್ಲಿನ ಕೆಲವು ನಿರ್ದಿಷ್ಟ ರಾಸಾಯನಿಕ ವಸ್ತುಗಳ ಉತ್ಪಾದನೆಯನ್ನು ತ್ವರಿತಗೊಳಿಸುವಂತೆ ಬ್ಯಾಕ್ಟೀರಿಯಾಕ್ಕೆ ಆದೇಶಿಸಲು ಸದ್ಯ ಭವಿಷ್ಯದಲ್ಲೇ ಸಾಧ್ಯವಾಗಬಹುದು. ಖೊರಾನಾ ಅವರು ಈ ನಿಟ್ಟಿನಲ್ಲಿ ವೈಜ್ಞಾನಿಕ ಹಾಗೂ ಸಾಮಾನ್ಯ ಜನರ ನಡುವಿನ ಪ್ರಪಂಚಕ್ಕೆ ಮಹತ್ಸಾಧ್ಯತೆಗಳ ಹೊಸ ಕ್ಷೇತ್ರವನ್ನು ನಿರ್ಮಿಸಿದ್ದಾರೆ.

ಕಳೆದ ಶತಮಾನದಲ್ಲಿ ಮಾನವನ ಚಂದ್ರಯಾತ್ರೆ, ಮಂಗಳ ಯಾತ್ರೆಯ ಕುರಿತು ಯಾರಾದರೂ ಹೇಳಿದ್ದರೆ ಅವರು ಹಾಸ್ಯಾಸ್ಪದ ವ್ಯಕ್ತಿಯಾಗುತ್ತಿದ್ದರು. ಆದರೆ ಇವೆಲ್ಲಾ ಇಂದು ಸಾಧ್ಯವಾಗುತ್ತಿವೆ. ಇದೇ ರೀತಿ ನಮ್ಮ ವಿಚಾರಗಳು ಈ ಕೆಳಗಿನ ಕಲ್ಪನಾ ಲೋಕದಲ್ಲಿ ವಿಹರಿಸಿದರೆ ಉತ್ಪ್ರೇಕ್ಷೆ ಎಂದು ಕಂಡುಬಂದರೂ ಅಸಂಭಾವ್ಯವೇನೂ ಅಲ್ಲ.

ಬರುವ ಶತಮಾನದಲ್ಲಿ ನಮಗೊಂದು ಜೀನ್ ಸಂಗ್ರಹಾಲಯ ದೊರೆಯಬಹುದು. ಯಾವ ಜೀನ್ ಯಾವ ಕಾರ್ಯ ಮಾಡುವುದು? ಅದರ ನ್ಯೂಕ್ಲಿಯೋಟೈಡ್

ವ್ಯವಸ್ಥೆ ಹೇಗೆ? ಈ ವ್ಯವಸ್ಥೆಯಲ್ಲಿ ವ್ಯತ್ಯಾಸ ಮಾಡಿದಾಗ ವ್ಯಕ್ತಿಯಲ್ಲಿ ಯಾವ ವ್ಯತ್ಯಾಸ ಆಗುವುವು? ವ್ಯಕ್ತಿಯು ಬುದ್ಧಿ ಬೆಳೆಯಲು ಎಂತಹ ಜೀನ್ ಬೇಕು? ರಸಭರಿತ ರುಚಿಯುಳ್ಳ ಮಾವಿಗೆ ಯಾವ ಜೀನ್ ಕಾರಣ? ಭತ್ತ ಬೆಳೆ ಹೆಚ್ಚಿಸಲು ಯಾವ ಜೀನ್ ಬೇಕು? ಇದೇ ರೀತಿ ಅಸಂಖ್ಯಾತ ಜೀನ್‌ಗಳ ವಿವರಣೆಯ ಗ್ರಂಥವೇ ದೊರೆಯಬಹುದು. ಬುದ್ಧಿವಂತಿಕೆ, ದೇಹದ ಬಣ್ಣ, ಎತ್ತರ, ಜ್ಞಾಪಕ ಶಕ್ತಿ ಏನು ಬೇಕೆಂದರೆ ಅದನ್ನು ನಮ್ಮ ಅನುವಂಶಿಕ, ತಾಂತ್ರಿಕ ವಿಜ್ಞಾನದಿಂದ ಸಾಧಿಸಬಹುದು. ಸಿಹಿಮೂತ್ರ, ಹಿಮೋಫೀಲಿಯಾ, ಶ್ವೇತಕುಷ್ಠ, ಮನೋವಿಕಾರ, ನರದೌರ್ಬಲ್ಯ ಇಂದು ಗುಣವಾಗದ ರೋಗಗಳು ಹೇಳಹೆಸರಿಲ್ಲದಾಗುವುವು. ಜಗಳಗಂಟರನ್ನು ಮಧುರ ಸ್ವಭಾವಿಗಳಾಗಿಯೂ, ಕಳ್ಳರನ್ನು ಸಜ್ಜನರನ್ನಾಗಿಯೂ ಮಾಡಬಹುದು. ಇಷ್ಟಾದಾಗ ಕೃತಕ ಮಾನವನೂ ಸಿದ್ಧನಾದಂತಲ್ಲವೆ? ಸಿದ್ಧಗೊಳಿಸಿದ ಮಕ್ಕಳು ಮಾರುಕಟ್ಟೆಗೆ ಬರಬಹುದೇನೋ? ಇನ್ನೊಬ್ಬ ಗಾಂಧಿ, ವಿಶ್ವೇಶ್ವರಯ್ಯ, ವಿವೇಕಾನಂದ ಸೃಷ್ಟಿಯೂ ಸಾಧ್ಯವಾಗಬಹುದೇನೊ? "ಎಲ್ಲಾ ವಿಧದ ಕ್ವಾಲಿಟೀ ಜೀನ್‌ಗಳ ರಖಂ ಮಾರಾಟಗಾರರು ನಾವು", "ಬುದ್ಧಿವಂತಿಕೆ ಜೀನ್‌ಗಳ ಉತ್ತಮ ತಯಾರಕರು ನಾವು" ಈ ರೀತಿಯಾದ ಜಾಹೀರಾತುಗಳನ್ನು ಮುಂದಿನ ಶತಮಾನದ ಜನ ತಮ್ಮ ವಾರ್ತಾ ಪತ್ರಿಕೆಗಳಲ್ಲಿ ಓದಬಹುದೇನೊ? ನಾವು ಸಾವನ್ನೇ ಗೆದ್ದು ಅಮರರೂ ಆಗಬಹುದೇನೋ? (ಆಗ ಉಂಟಾಗುವ ಜನಸಂಖ್ಯಾ ಸ್ಫೋಟಕ್ಕೆ ಪರಿಹಾರವೇನು?) ಆನುವಂಶೀಯ ತಂತ್ರಕೌಶಲವು ಹೇಗೆ ಈ ಮೇಲಿನ ಸ್ವರ್ಗಸುಖವನ್ನು ಕೊಡಬಹುದೋ ಅದೇ ರೀತಿ ಅಧಃಪತನಕ್ಕೂ ಕಾರಣವಾಗಬಹುದು. ಎಲ್ಲರೂ ಬುದ್ಧಿವಂತರೂ, ಸ್ಫುರದ್ರೂಪಿಗಳೂ ಆದರೆ ಜೀವನಕ್ಕೆ ಸೊಗಸು ಎಲ್ಲಿ! ಅಥವಾ ಜೀನ್‌ಗಳು ಶ್ರೀಮಂತರ ಸೊತ್ತಾಗಿ, ಸಮಾಜದಲ್ಲಿ ಆಂದೋಲನ, ಗುಡಾಂತರಗಳನ್ನು ತರಬಲ್ಲುದು. ಸಾಮಾಜಿಕ ಜೀವನದ ಮೇಲೆ ಅನಪೇಕ್ಷಿತ ಪ್ರಭಾವ ಬೀರಬಹುದು. ಶ್ರೀಮಂತ ರಾಷ್ಟ್ರಗಳು ಅಪಾಯಕಾರೀ ಜೀನ್‌ಗಳನ್ನು ಸೃಷ್ಟಿಸಿ, ಇವನ್ನೇ ಆಯುಧವನ್ನಾಗಿ ಮಾಡಿ ವೈರಿ ರಾಷ್ಟ್ರವನ್ನು ನಿರ್ನಾಮ ಮಾಡಲು ಉಪಯೋಗಿಸಬಹುದು. ಆದುದರಿಂದ ನಾವು ಸುಖೀ ಜಗತ್ತಿನ ನಿರ್ಮಾಣ ಮಾಡುತ್ತಿದ್ದೇವೆಯೋ, ಸೈತಾನನ ವಿನಾಶಕ ಮಾರ್ಗ ಹಿಡಿಯುತ್ತಿದ್ದೇವೆಯೋ ಕಾದು ನೋಡಬೇಕು. ಈಗಾಗಲೇ ಆನುವಂಶೀಯ ತಂತ್ರಕೌಶಲದ ಸಂಶೋಧನೆಗಳಿಗೆ ವಿವಿಧ ದೇಶಗಳು ಲಗಾಮು ಹಾಕಿವೆ. ನಮ್ಮ ವೈಜ್ಞಾನಿಕ ಸಂಶೋಧನೆಗಳು ನಮ್ಮ ಉನ್ನತಿಗಾಗಬೇಕೇ ಹೊರತು ಅವನತಿಗಲ್ಲ. ❖



ಹುಚ್ಚರ ಆಸ್ಪತ್ರೆಯಲ್ಲಿ ನಾಲ್ವರು ಹುಚ್ಚರು ಖುಶಿ ಪಡುತ್ತಲಿದ್ದರು. ಅವರಲ್ಲಿ ಒಬ್ಬನೆಂದ "ನಾನು ದೇವರ ಹನ್ನೊಂದನೇ ಅವತಾರ"

ಅದಕ್ಕೆ ಎರಡನೆಯವನೆಂದ "ಏನು! ಯಾರು ಹೇಳಿದರು ನಿನಗೆ?"

ಆಗ ಮೂರನೆಯವನೆಂದ "ಸ್ವತಃ ದೇವರೇ ಅವನಿಗೆ ಹೇಳಿದ. ನಾನೂ ಇದ್ದೆ."

ಇಷ್ಟರವರೆಗೆ ಸುಮ್ಮನಿದ್ದ ನಾಲ್ಕನೆಯವನು ಮೂರನೆಯವನ ಕಪಾಳಕ್ಕೊಂದು ಬಿಗಿದ "ಯಾಕೆ ಸುಳ್ಳು ಹೇಳ್ತೀಯಾ! ಹಾಗೆಂದು ನಾನು ಎಂದೂ ಅವನಿಗೆ ಹೇಳಲಿಲ್ಲ"

—ಶ್ರೀ. ಗೊ. ಮೊಖಾಶಿ

ಭೂಗರ್ಭದಿಂದ ವಿದ್ಯುತ್ತು

ಸ. ಅನಂತಸ್ವಾಮಿ

ಮಾನವನ ಆರ್ಥಿಕ ಪ್ರಗತಿಯು ಔದ್ಯೋಗೀಕರಣವನ್ನವಲಂಬಿಸಿದೆ. ಇದಕ್ಕಾಗಿ ವಿದ್ಯುಚ್ಛಕ್ತಿಯು ಒಂದು ಅತಿ ಮುಖ್ಯವಾದ ಸಾಧನವೆಂಬುದು ನಿರ್ವಿವಾದ. ಈ ವಿದ್ಯುತ್ತನ್ನು ಕಲ್ಲಿದ್ದಲು, ತೈಲ ಮತ್ತು ಜಲಪಾತಗಳಿಂದ ಉತ್ಪಾದಿಸುವುದು ಸಾಮಾನ್ಯವಾದ ಮಾರ್ಗಗಳು. ಸಮುದ್ರದ ಉಬ್ಬರವಿಳಿತಗಳು, ಅಣುಶಕ್ತಿ, ಸೂರ್ಯನ ತಾಪ ಮತ್ತು ಭೂಗರ್ಭೋಷ್ಣಗಳಿಂದಲೂ ವಿದ್ಯುದುತ್ಪಾದನೆ ಸಾಧ್ಯ.

ಭೂಗರ್ಭೋಷ್ಣದಿಂದ ವಿದ್ಯುದುತ್ಪಾದನೆಯು ಇಟಲಿ ದೇಶದಲ್ಲಿ ೧೯೦೪ ರಲ್ಲೇ ಅಲ್ಪ ಪ್ರಮಾಣದಲ್ಲಿ ಆರಂಭವಾದರೂ ಈ ಕಡೆ ಜಗತ್ತಿನ ಲಕ್ಷ್ಯ ಹರಿದಿರುವುದು ಕೇವಲ ಇತ್ತೀಚೆಗೆ ಅಂದರೆ ೧೯೫೦ ರ ಅನಂತರ ಎನ್ನಬಹುದು. ಜಗತ್ತಿನಲ್ಲಿ ಸದ್ಯದ ಉತ್ಪಾದನೆಯಾಗುವ ವಿದ್ಯುತ್ತಿನ ಹೆಚ್ಚು ಭಾಗಕ್ಕೆ ಕಲ್ಲಿದ್ದಲೇ ಮೂಲ. ಆದರೆ ಕಲ್ಲಿದ್ದಲಿನ ಅಭಾವ ಹೆಚ್ಚಿದಂತೆಲ್ಲಾ ಅನ್ಯಮಾರ್ಗಗಳಿಂದಲೂ ಸಹ ವಿದ್ಯುತ್ತನ್ನು ಉತ್ಪಾದಿಸಲು ಪ್ರಯತ್ನ ನಡೆದಿದೆ. ಇವುಗಳಲ್ಲಿ ಭೂಗರ್ಭೋಷ್ಣದ ಮಾರ್ಗವೂ ಒಂದು.

ಪೃಥ್ವಿಯ ಮಧ್ಯಭಾಗದಲ್ಲಿ ಉಷ್ಣತೆ ಅಧಿಕವಾಗಿದೆ ಎಂಬುದು ಸರ್ವವಿದಿತ. ಗಣಿಗಳಲ್ಲಿ ಕೆಳಭಾಗಕ್ಕೆ ಹೋಗಲಾರಂಭಿಸಿದರೆ ಉಷ್ಣತಾಮಾನವು ಹೆಚ್ಚುತ್ತಾ ಹೋಗುವುದು ಎಲ್ಲರ ಅನುಭವ. ಇದರ ಕಾರಣವನ್ನು ತಿಳಿಯಬೇಕಾದರೆ ನಮ್ಮ ಪೃಥ್ವಿಯು ಯಾವ ರೀತಿಯಲ್ಲಿ ಸೃಷ್ಟಿಯಾಯಿತು ಎಂಬುದನ್ನು ತಿಳಿಯಬೇಕು.

ಸೂರ್ಯನು ಮೂಲತಃ ಕೆಲವು ಅನಿಲಗಳಿಂದ ಕೂಡಿದ, ಧಗಧಗಿಸುತ್ತಿರುವ ಒಂದು ದೊಡ್ಡ ಉಂಡೆ ಎನ್ನಬಹುದು. ಅಗಾಧ ಉಷ್ಣತೆಯುಳ್ಳ ಈ ಸೂರ್ಯನಲ್ಲಿರುವ ವಸ್ತುಗಳು ಕೇವಲ ಅನಿಲ ರೂಪದಲ್ಲಿರಲು ಮಾತ್ರ ಸಾಧ್ಯ. ಈ ಅನಿಲಗಳಲ್ಲಿನ ಅದರಲ್ಲೂ ಮುಖ್ಯವಾಗಿ ಬೀಜಾಣುಗಳ ಒಗ್ಗೂಡುವಿಕೆ (nuclear fusion) ಯಿಂದ ಅಗಾಧ ಉಷ್ಣತೆಯು ಉತ್ಪನ್ನವಾಗುವುದು. ಇದೇ ತತ್ವವನ್ನು ಆಧರಿಸಿ ಜಲಜನಕ ಬಾಂಬನ್ನು ತಯಾರಿಸಲಾಗಿದೆ. ಸೂರ್ಯನಲ್ಲಿ ಇಂತಹ ಲಕ್ಷಾಂತರ ಜಲಜನಕ ಬಾಂಬುಗಳು ಒಂದೇ ವೇಳೆಗೆ ನಿರಂತರವಾಗಿ ಸ್ಫೋಟವಾಗುತ್ತಿರುತ್ತವೆ. ಈ ಸ್ಫೋಟದಿಂದ ದೊರೆಯುವ ಉಷ್ಣತೆಯೇ ಸೂರ್ಯನ ತಾಪಕ್ಕೆ ಮೂಲ

ಸುಪ್ರಸಿದ್ಧ ಬ್ರಿಟಿಶ್ ಖಗೋಳ ಶಾಸ್ತ್ರಜ್ಞ ಸರ್ ಜೇಮ್ಸ್ ಜೀನ್ಸ್ ಅವರು ಪ್ರತಿಪಾದಿಸಿರುವ ತತ್ವದ ಪ್ರಕಾರ ನಮ್ಮ ಭೂಮಿಯು ಕೋಟ್ಯಂತರ ವರ್ಷಗಳ ಹಿಂದೆ ಈ ಸೂರ್ಯನ ಒಂದು ಭಾಗವಾಗಿತ್ತೆಂದು ತೋರುತ್ತದೆ. ಖಗೋಳದಲ್ಲಿ ಚಲಿಸುತ್ತಿದ್ದ ದೊಡ್ಡದಾದ ಗ್ರಹವೊಂದು ಸೂರ್ಯನ ಬಳಿ ಬಂದಾಗ ಉಂಟಾದ ಪರಸ್ಪರ ಆಕರ್ಷಣೆಯ ಬಲದಿಂದ ಸೂರ್ಯನ ಒಂದು ಭಾಗವು ಪುರಿಸುಂ[illegible] ಕೊನೆಗೆ ಇದು ಬಲಾತ್ಕಾರದಿಂದ ಸೂರ್ಯನಿಂದ ಬೇರ್ಪಟ್ಟು ಬುಗುರಿಯಂತೆ ಸುತ್ತುತ್ತಾ ಸೂರ್ಯನಿಂದ ದೂರ ದೂರ ಸರಿಯುತ್ತಾ ಹೋಗಿರಬೇಕು. ಈಗಲೂ ಸಹ ಭೂಮಿಯು ಸೂರ್ಯನಿಂದ ದೂರ ಸಾಗುತ್ತಿದೆ ಎಂಬುದು

ಠವುನಾರ್ದ. ಈ ರೀತಿಯಲ್ಲಿ ಸೂರ್ಯನ ಒಂದು ಭಾಗವು ಸೂರ್ಯನಿಂದ ದೂರ ಸಾಗುತ್ತಾ ಹೋದಾಗ ಅದರ ಕಾವು ಕ್ರಮೇಣ ಕಡಿಮೆಯಾಗಲಾರಂಭಿಸಿತು. ಇದರ ಪರಿಣಾಮವಾಗಿ ಅದರ ಹೊರ ಭಾಗವು ಘನೀಭೂತವಾಗಿ ಅದೇ ನಮ್ಮ ಪೃಥ್ವಿಯಾಯಿತು ಮತ್ತು ಕಡಿಮೆಯಾಗುತ್ತಿರುವ ತಪಮಾನದಿಂದಾಗಿ ಅದರ ಮೇಲ್ಭಾಗದಲ್ಲಿ ಜೀವವು ಅಸ್ತಿತ್ವಕ್ಕೆ ಬರಲು ಸಾಧ್ಯವಾಯಿತು.

ಜೀನ್ಸ್‌ರ ತತ್ತ್ವದಂತೆ ಪೃಥ್ವಿಯು ಸೂರ್ಯನಿಂದ ನಿರಂತರವಾಗಿ ದೂರ ಸಾಗುತ್ತಿದೆ. ಇದರಿಂದ ಭೂಮಿಯ ಮೇಲ್ಭಾಗದಲ್ಲಿ ತಪಮಾನವು ಕ್ರಮೇಣ ಕಡಿಮೆಯಾಗುತ್ತಾ ಹೋಗುವುದು. ಮೇಲಾಗಿ ಐನ್‌ಸ್ಟೈನರ ಸಾಪೇಕ್ಷ ತತ್ವದ ಪ್ರಕಾರ ಊರ್ಜ (energy) ಕ್ಕೂ ತೂಕವಿರುವುದರಿಂದ ಸೂರ್ಯಕಿರಣಗಳ ಪ್ರಸಾರದಿಂದ ಸೂರ್ಯನ ತೂಕವೂ ಕಡಿಮೆಯಾಗುತ್ತಾ ಹೋಗುವುದು. ಸುಮಾರು ೫೦,೦೦೦ ಕೋಟಿ ವರ್ಷಗಳ ಅನಂತರ ಮೇಲಿನ ಎರಡೂ ಕಾರಣಗಳಿಂದ ಭೂಮಿಯ ಮೇಲಿನ ತಪಮಾನವು ಅತ್ಯಂತ ಕೆಳಮಟ್ಟಕ್ಕೆ ಇಳಿದು ಪೃಥ್ವಿಯ ಮೇಲೆ ಜೀವಿಸಲು ಅಸಾಧ್ಯವಾಗುವುದು. ಇದನ್ನು ಜೀನ್ಸ್ ಅವರು 'ಉಷ್ಣತಾಮರಣ' ಎಂದು ಕರೆದಿದ್ದಾರೆ ಆದರೆ ಈ ಕಾಲಾವಧಿಯು ಅಗಾಧವಾಗಿರುವುದರಿಂದ ಮಾನವಕುಲವೇನೂ ಈ ಮರಣದ ಬಗ್ಗೆ ಯೋಚಿಸಬೇಕಾಗಿಲ್ಲ!

ಪೃಥ್ವಿಯ ಹೊರಭಾಗವು ಘನೀಭೂತವಾದರೂ ಅದರ ಕೇಂದ್ರಬಿಂದುವನ್ನು ಸಮೀಪಿಸಿದಂತೆ ಒಳಭಾಗವು ದ್ರವರೂಪದಲ್ಲಿರುವುದು. ಘನೀಭೂತವಾದ ಭೂಮಿಯ ಮೇಲ್ಭಾಗವು ನೂರಾರು ಮೈಲಿಗಳಷ್ಟು ದಪ್ಪವಾಗಿರುವುದು. ಈ ಭಾಗದಲ್ಲಿ ಕೆಲವೆಡೆ ಬಿರುಕುಗಳೂ ಸಹ ಉಂಟಾಗುತ್ತವೆ. ಕೆಲವು ವೇಳೆ ಪೃಥ್ವಿಯ ದ್ರವವು ಈ ಬಿರುಕುಗಳ ಮೂಲಕ ಕಾದ ಲಾವಾರಸವಾಗಿ ಅಗ್ನಿಪರ್ವತಗಳ ಮೂಲಕ ಹೊರಬರುವುದು. ಕೆಲವು ವೇಳೆ ಭೂಮಿಯ ಮೇಲ್ಭಾಗದಲ್ಲಿರುವ ನೀರು ಒಳಬಿ ಜಿನುಗಿ ಈ ದ್ರವದೊಡನೆ ಬೆರೆತು, ಅದರ ಉಷ್ಣತೆಯಿಂದ ಕಾದು, ಬಿಸಿನೀರಿನ ಊಟೆ ಹೊರಬರುವುದು.

ಈ ರೀತಿಯ ಭೂಭಾಗದಲ್ಲಿ ಸುಮಾರು ೩೦೦ ರಿಂದ ೩೦೦೦ ಮೀಟರುಗಳಷ್ಟು ಆಳವಾದ ಬಾವಿಗಳನ್ನು ತೋಡಿದರೆ ಮೇಲ್ಕಂಡ ರೀತಿಯಲ್ಲಿ ಕಾದ ಬಿಸಿನೀರು ಹೆಚ್ಚಿನ ಒತ್ತಡದೊಡನೆ ಹೊರಬರುವುದು. ಈ ನೀರಿನ ಒತ್ತಡವನ್ನು ಕಡಿಮೆಮಾಡಿದರೆ ಅದರ ಕೆಲವು ಅಂಶವು ಹಬೆಯಾಗಿ ಮಾರ್ಪಡುವುದು. ಈ ರೀತಿಯಲ್ಲಿ ನಿರ್ಮಿತವಾದ ಹಬೆಯನ್ನು ಮತ್ತು ಉಳಿದ ಬಿಸಿನೀರನ್ನೂ ಸಹ ವಿದ್ಯುಚ್ಛಕ್ತಿಯ ಉತ್ಪಾದನೆಗೆ ಬಳಸಬಹುದು. ಕೆಲವು ವೇಳೆ ಈ ಬಿಸಿ ನೀರಿನ ಉಷ್ಣತೆಯನ್ನು ಅಲ್ಪ ಉತ್ಕಲನ ಬಿಂದು (Low boiling point)ವನ್ನುಳ್ಳ ಬೇರೊಂದು ದ್ರವಕ್ಕೆ ಉಷ್ಣತಾ ವಿನಿಮಯ ಸಾಧನದಲ್ಲಿ ವರ್ಗಾಯಿಸಿ ಅದರಿಂದ ವಿದ್ಯುತ್ತನ್ನು ಉತ್ಪಾದಿಸಬಹುದು.

ಮೇಲ್ಕಂಡ ರೀತಿಯಲ್ಲಿ ನಿರ್ಮಿತವಾದ ಹಬೆಯಲ್ಲಿ ಬಹಳ ಸೂಕ್ಷ್ಮವಾದ ಕಲ್ಲಿನ ಧೂಳು ಮತ್ತು ದ್ರವೀಕರಿಸಲಾಗದ ಕೆಲವು ಅನಿಲಗಳು ಬೆರೆತಿರುತ್ತವೆ. ಇಂಗಾಲಾಮ್ಲ (CO_2) ಮೀಥೇನ್, ಸಾರಜನಕ, ಆರ್ಗಾನ್, ಹೈಡ್ರೋಜನ್ ಸಲ್ಫೈಡ್ ಮತ್ತು ಅಮೋನಿಯಾ ಈ ಅನಿಲಗಳಲ್ಲಿ ಮುಖ್ಯವಾದವು. ಕಲ್ಲಿನ ಧೂಳನ್ನು ಹಬೆಯಿಂದ ಬೇರ್ಪಡಿಸಿದ ನಂತರ, ಹಬೆಯನ್ನು ದೊಡ್ಡ ಕೊಳಾಯಿಗಳಲ್ಲಿ, ಬಳಿಯಲ್ಲಿಯೇ ನಿರ್ಮಿತವಾದ ವಿದ್ಯುದಾಗಾರಕ್ಕೆ ಒಯ್ಯಲಾಗುವುದು. ಅಲ್ಲಿ ಈ ಹಬೆಯನ್ನು ಹಬೆ-ಟರ್ಬೈನುಗಳಲ್ಲಿ ಉಪಯೋಗಿಸಿ ವಿದ್ಯುತ್ತನ್ನು ಉತ್ಪಾದಿಸಲಾಗುವುದು. ಹಬೆ-ಟರ್ಬೈನಿನಲ್ಲಿ ಹಬೆಯನ್ನು ಪ್ರಸರಣ ಮಾಡಿದ ನಂತರ ಅದನ್ನು ದ್ರವಕಾರಕಗಳಲ್ಲಿ ದ್ರವೀಕರಿಸಲಾಗುವುದು. ಈ ದ್ರವಕಾರಕಗಳಲ್ಲಿ ಹೊರಗಿನ ವಾತಾವರಣಕ್ಕಿಂತಲೂ ಕಡಿಮೆಯಾದ ಒತ್ತಡ ಇರುವುದರಿಂದ ಪ್ರತಿಯೊಂದು

ಕೆ. ಜಿ. ಹಬೆಯಿಂದಲೂ ಹೆಚ್ಚಿನ ಯಾಂತ್ರಿಕ ಶಕ್ತಿಯನ್ನು ಪಡೆಯಲು ಸಾಧ್ಯವಾಗುವದು.

ಹಬೆ-ಟರ್ಬೈನಿನಲ್ಲಿ ಬಳಸುವ ಹಬೆಯ ಒತ್ತಡವು ಒಂದು ಚದುರ ಸೆಂಟಿಮೀಟರಿಗೆ ಸುಮಾರು ೪ರಿಂದ ೭ ಕೆ ಜಿ ತನಕ ಇರುವುದು. ಮತ್ತು ಅದರ ತಾಪಮಾನವು ಸುಮಾರು ೧೭೫ ಡಿಗ್ರಿ ಸೆಂಟಿಗ್ರೇಡ್ ನಷ್ಟು ಇರುವುದು. ಬಳಸಿದ ಹಬೆಯ ಒತ್ತಡವು ಸುಮಾರು ೧೦ ಸೆ. ಮೀ. ಪಾದರಸದಷ್ಟು ಇರುವುದು.

ಹಬೆಯಲ್ಲಿರುವ ದ್ರವೀಕರಿಸಲಾಗದ ಅನಿಲಗಳಿಂದ ಯಂತ್ರಸಾಮಗ್ರಿಗಳು ತುಕ್ಕು ಹಿಡಿಯುವ ಸಂಭವವುಂಟು. ಇದನ್ನು ತಡೆಗಟ್ಟಲು ಯಂತ್ರಸಾಮಗ್ರಿಗಳನ್ನು ಮಿಶ್ರಲೋಹಗಳಿಂದ ತಯಾರಿಸಬೇಕಾಗುವುದು. ಹಬೆಯ ಕೊಳಾಯಿಗಳನ್ನು ಕಾರ್ಬನ್ ಸ್ಟೀಲ್ ನಿಂದಲೂ, ದ್ರವೀಕರಣದ ನಂತರ ದ್ರವವನ್ನು ಒಯ್ಯುವ ಕೊಳವೆಗಳನ್ನು, ಆ ದ್ರವವನ್ನು ಪಂಪುಮಾಡುವ ಪಂಪುಗಳನ್ನು ಹಬೆ-ಟರ್ಬೈನಿನ ಅಲಗುಗಳ ಕೆಲವು ಭಾಗಗಳನ್ನು ತುಕ್ಕು ಹಿಡಿಯದ ಉಕ್ಕಿನಿಂದಲೂ ತಯಾರಿಸಬೇಕಾಗುವುದು.

ಭೂಗರ್ಭೋಷ್ಣ ವಿದ್ಯುದಾಗಾರಕ್ಕೂ ಮತ್ತು ಸಾಂಪ್ರದಾಯಿಕ ಉಷ್ಣತಾ ವಿದ್ಯುದಾಗಾರಕ್ಕೂ ಇರುವ ಮುಖ್ಯ ವ್ಯತ್ಯಾಸವೆಂದರೆ, ಭೂಗರ್ಭೋಷ್ಣ ವಿದ್ಯುದಾಗಾರದಲ್ಲಿ ಪೃಥ್ವಿಯೇ ಹಬೆ-ಹಂಡೆ (Steam boiler) ಯ ಕೆಲಸವನ್ನು ನಿರ್ವಹಿಸುವುದು. ಇದರಿಂದ ದೊರೆಯುವ ಅತಿ ಮುಖ್ಯವಾದ ಪ್ರಯೋಜನವೆಂದರೆ ವಿದ್ಯುದಾಗಾರದ ಸುತ್ತಮುತ್ತಲಿನ ವಾತಾವರಣವು ಕಲುಷಿತವಾಗುವುದಿಲ್ಲ. ಸಾಂಪ್ರದಾಯಿಕ ಉಷ್ಣತಾ ವಿದ್ಯುದಾಗಾರದಲ್ಲಿ ಕಲ್ಲಿದ್ದಲನ್ನು ಉರಿಸುವುದರಿಂದ ನಿರ್ಮಿತವಾದ ಇಂಗಾಲಾಮ್ಲ, ಕಾರ್ಬನ್ ಮಾನಾಕ್ಸೈಡ್, ಕಲ್ಲಿದ್ದಲಿನ ಧೂಳು ಇತ್ಯಾದಿ ಕಶ್ಮಲಗಳು ಸುತ್ತಮುತ್ತಲಿನ ವಾತಾವರಣವನ್ನು ದೂಷಿತಗೊಳಿಸುತ್ತವೆ. ಅಂತೆಯೇ ಅಣು ವಿದ್ಯುದಾಗಾರದಲ್ಲಿ ಉತ್ಪನ್ನವಾಗುವ ಕಿರಣೋತ್ಸರ್ಗಿ ನಿರುಪಯೋಗಿ ವಸ್ತುಗಳೂ ಸಹ ವಾತಾವರಣವನ್ನು ಕಲುಷಿತಗೊಳಿಸುವುವು. ಮಿತಿಮೀರಿದ ಔದ್ಯೋಗೀಕರಣದಿಂದಾಗಿ ನಿಸರ್ಗದತ್ತವಾದ ಸ್ವಚ್ಛ ಗಾಳಿ ಮತ್ತು ನೀರು ದುರ್ಲಭವಾಗುತ್ತಿರುವ ಈ ಪರಿಸ್ಥಿತಿಯಲ್ಲಿ ಈ ರೀತಿಯ ಕಶ್ಮಲರಹಿತ ವಿದ್ಯುದುತ್ಪಾದನೆ (ಜಲ ವಿದ್ಯುದುತ್ಪಾದನೆಯಂತೆ) ಎಷ್ಟು ಯೋಗ್ಯವೂ ಮತ್ತು ಸಮಂಜಸವೂ ಆಗಿದೆಯೆಂದು ಒತ್ತಿ ಹೇಳಬೇಕಾಗಿಲ್ಲ.

ಪ್ರಪಂಚದ ಮೊದಲನೆಯ ಭೂಗರ್ಭೋಷ್ಣ ವಿದ್ಯುದಾಗಾರವು ೧೯೧೩ರಲ್ಲಿ ಇಟಲಿ ದೇಶದಲ್ಲಿಯ ಲಾರ್ಡೆರೆಲ್ಲೊ ಎಂಬಲ್ಲಿ ನಿರ್ಮಿತವಾಯಿತು. ೧೯೫೮ ರಲ್ಲಿ ನ್ಯೂಜಿಲೆಂಡಿನ ವೈರಾಕೈ ಎಂಬಲ್ಲಿ ಈ ರೀತಿಯ ದೊಡ್ಡ ವಿದ್ಯುದಾಗಾರವು ನಿರ್ಮಿತವಾಯಿತು. ಅಮೇರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಈ ರೀತಿಯ ಮೊದಲನೆಯ ವಿದ್ಯುದಾಗಾರವು ಸ್ಥಾಪಿತವಾದದ್ದು ಕೇವಲ ೧೯೬೦ರಲ್ಲಿ. ಜಪಾನ್, ಐಸ್ ಲೆಂಡ್, ಸೋವಿಯತ್ ರಷ್ಯಾ, ಚಿಲಿ, ಫಿಲಿಪೀನ್ಸ್, ಟರ್ಕಿ ಮತ್ತು ಇತರ ದೇಶಗಳಲ್ಲೂ ಸಹ ಈ ರೀತಿಯ ವಿದ್ಯುದಾಗಾರಗಳ ನಿರ್ಮಾಣ ಕಾರ್ಯವು ಸಾಗಿದೆ.

ಈ ರೀತಿಯ ವಿದ್ಯುದುತ್ಪಾದನೆಯನ್ನು ಸಾಂಪ್ರದಾಯಿಕ ರೀತಿಯಲ್ಲಿ ಉತ್ಪಾದಿಸುವ ವಿದ್ಯುತ್ತಿನೊಡನೆ ಹೋಲಿಸಿದಾಗ ಅದರ ಪ್ರಮಾಣವು ಅತ್ಯಲ್ಪವೆನಿಸಿದರೂ, ಇದು ವಿದ್ಯುತ್ತಿಗಾಗಿ ಹಾತೊರೆಯುತ್ತಿರುವ ಈ ಜಗತ್ತಿನ ಶಕ್ತಿದಾಹವನ್ನು ಈ ಮಾರ್ಗದಿಂದ ಸ್ವಲ್ಪಮಟ್ಟಿಗಾದರೂ ತಣಿಸಲು ಸಾಧ್ಯವಾಗಿದೆ. ✲

ಇದುವೆ ಜೀವ ಇದು ಜೀವನ

'ಮರೆಗುಳಿ' ಪ್ರಾಧ್ಯಾಪಕ

ಒಮ್ಮೆ ಒಬ್ಬ ವ್ಯಕ್ತಿ ಒಂದು ನಾಟಕದಲ್ಲಿ 'ಮರೆಗುಳಿ ಪ್ರಾಧ್ಯಾಪಕ' (Absent minded Professor) [illegible] ಅವನು [illegible] ಒಂದು [illegible] ಅವನು [illegible] ಬಳಿ [illegible] ಸಿಗರೇಟಿನ [illegible] ಬಾಯಿಗೆ [illegible] ಸಿಗರೇಟನ್ನು [illegible] ಗಿದ್ದಿತು.

ಆದರೆ ಆ ವ್ಯಕ್ತಿ ವಾಸ್ತವ ಜೀವನ [illegible] ಸಿಗರೇಟನ್ನೇ [illegible] "ಅಯ್ಯೊ, ಇದು ಸೀಮೆಸುಣ್ಣವಲ್ಲವೇ?" [illegible] ಸಲ್ಲಿದ್ದ ಸೀಮೆ ಸುಣ್ಣವನ್ನು ತೆಗೆದು [illegible] ಗಿಬಿದನು. ಆದರೆ 'ಸಿಗರೇಟು' ಹೊತ್ತಿ ಕೊಳ್ಳುವುದೇ ಇಲ್ಲ. [illegible] ಅರಿತ [illegible] ದಾಗ ಆ 'ಮರೆಗುಳಿ' ಪ್ರೊಫೆಸರನ ಮುಖ [illegible]!

—ಕೆ. ಚಕ್ರಧರ

ಸಿಳ್ಳಿನ ಬೆಲೆ

ಪೂರ್ವ ಯುರೋಪಿನ ಒಂದು ದೇಶದ [illegible]

ಸಿಳ್ಳು (ಸೈರನ್) ಕೇಳಿದ ಕೂಡಲೇ [illegible] ಹೊರಟು ಹೋದರು

[illegible] ಆಶ್ಚರ್ಯವಾಯಿತು. "ಅಯ್ಯೊ", [illegible] ತಪ್ಪಿಸಿಕೆಂಡ. [illegible] ಇದ್ದಿಲ್ಲವೇ!" ಎಂದು [illegible] ಅದಕ್ಕೆ ಆ ಕಾರ್ಖಾನೆಯ ಮಾಲೀಕ [illegible] "[illegible], ಇಲ್ಲಿಗೆ [illegible] ಬಂದೇ ಬರುತ್ತಾರೆ" ಎಂದ.

[illegible] ಆಶ್ಚರ್ಯವಾಯಿತು

ಇದರ ಮೇಲೆ ಗಮನವೇ ಇಲ್ಲದಿದ್ದ ಕಾರ್ಖಾನೆಯ ಮಾಲೀಕ ಆ ವಿದೇಶಿ [illegible] ಎಂದ [illegible]

—ಟಿ. ಎಲ್. ಶೇಷಾದ್ರಿ

ತಾಯಿಯ ಕಳುಳು

ನನ್ನ ದವಾಖಾನೆಯ ಗೋಡೆಯ [illegible]

ನೋಡಿದ ಕೂಡಲೇ 'ಹೊರಹೊಮ್ಮುವ' ಕೆಲ ಉದ್ಗಾರಗಳ ಸ್ಯಾಂಪಲ್ ಹೀಗಿರುತ್ತವೆ: ಒಬ್ಬಾಕೆ ತನ್ನ ಪಕ್ಕದಲ್ಲಿ ಕುಳಿತ [illegible]-ಬ್ಬಾಕೆಗೆ ಹೇಳಿದ್ದು: "[illegible] ನಗುತ್ತಿದೆ ಆ ಕೂಸು. ನಮ್ಮ ರಾಮಣ್ಣ [illegible]..." [illegible] "ಅಯ್ಯಯ್ಯೋ! ಎಷ್ಟು [illegible] ಹೋಗುತ್ತಿದ್ದಾನೆ ಅಲ್ಲವೇ? ನಮ್ಮ ಕಿಟ್ಟಪ್ಪ ಹೀಗೇ ಓಡುತ್ತಿರುತ್ತಾನೆ!"


ಹೀಗೆ ತೂರಿಬಂದ ಉದ್ಗಾರಗಳು ನನ್ನ ಕಿವಿಗಳ ಮೇಲೆ ಬಿದ್ದಾಗಲೆಲ್ಲಾ ನನಗೆ ಮನಸಾರೆ ನಗಬೇಕೆಂಬ ಹಂಬಲ ಉಂಟಾಗುತ್ತದೆ. ಯಾಕೆ ಎನ್ನುತ್ತೀರಾ? [illegible] ಆ ಮಗುವಿನ [illegible] ಎಂತು? ಆದರೆ [illegible] ಮಹಾನ್ ವಸ್ತು ಅಲ್ಲವೇ?

—ಡಾ. ಪ್ರಭಾಕರ ಹೊಸಪಟ್ಟಣಕರ

"ವಿಜಾಪುರ್... ವಿಜಾಪುರ್..."

ಒಂದೇ ದಿನದ ರಜೆಯಲ್ಲಿ, ಜಮಖಂಡಿ-ಯಿಂದ, ಧಾರವಾಡಕ್ಕೆ ಹೋಗಿದ್ದೆ. ಕರ್ನಾಟಕ ಯುನಿವರ್ಸಿಟಿಯಲ್ಲಿ ಎಂ. ಎ. ಗೆ ರಿಜಿಸ್ಟ್ರೇಶನ್ ಮಾಡಿಸಬೇಕಿತ್ತು. ಅದೇ ದಿನ ಸಂಜೆಯ [illegible] ಧಾರವಾಡದಲ್ಲಿ [illegible] ನಿರಾಶನಾದ ನಾನು [illegible] ಹೇಗೆ ಹೋಗುವುದು? ಎಂದು [illegible]ರವಾಗಲೇ 'ವಿಜಾಪುರ್, ವಿಜಾಪುರ್' ಎಂದು [illegible] ವ್ಯಕ್ತಿ [illegible]. ಆ ವ್ಯಕ್ತಿ ನೇರ ಹೋಗಿ [illegible] ಮಾತಾಡತೊಡಗಿದ. ಬಹುಶಃ ಟ್ಯಾಕ್ಸಿ-[illegible] ವಿಜಾಪುರಕ್ಕೆ [illegible]. ಈ ಟ್ಯಾಕ್ಸಿಯಲ್ಲಿ ಅರ್ಧಾವು ಜಮಖಂಡಿ ಸೇರಬಹುದು ಎಂಬ ಆಶಾದೃಷ್ಟಿಯಿಂದ ಆ ವ್ಯಕ್ತಿಯ ಕಡೆ ಹೋಗಿ, "ವಿಜಾಪುರ[illegible] ಟ್ಯಾಕ್ಸಿ [illegible]" ಎಂದು ಕೇಳಿದೆ. [illegible] "[illegible] ಹೆಸರು 'ವಿಜಾಪುರ್'' ಎಂದು ಹಾಗೇ ಕರೆಯುತ್ತಾರೆ [illegible]" ಎಂದಾಗ [illegible]. ವ್ಯಕ್ತಿಯು [illegible] ತಾಪ [illegible] ನಾನೇ [illegible] ಕೇಳಿದೆ.

—ಗುಣಶೆಟ್ಟಿ



ಅಮೂಲ್ಯ ಸಂಸ್ಕೃತ ಗ್ರಂಥಾಲಯ

ಸೂರಜ ಸರಾಫ್

ಅಪರೂಪದ ದುರ್ಲಭ ಸಂಸ್ಕೃತ ಗ್ರಂಥಗಳ ಅಮೂಲ್ಯ ಗ್ರಂಥಾಲಯವೊಂದು ಭಾರತದಲ್ಲಿ, ಕಾಶ್ಮೀರದ ಜಮ್ಮುವಿನಲ್ಲಿ ಇದೆ ಎಂಬುದು ಬಹು ಜನರಿಗೆ ತಿಳಿದಿರಲಿಕ್ಕಿಲ್ಲ. ಆದರೆ ಈ ಗ್ರಂಥಾಲಯ ಸಂಸ್ಕೃತದ ಅಭ್ಯಾಸಿಗಳಿಗೆ ಪವಿತ್ರ ಕಾಶೀ ಕ್ಷೇತ್ರದಂತಿದೆ ಎಂಬುದನ್ನು ನಂಬಲೇಬೇಕು. ದೇಶವಿದೇಶಗಳ ವಿದ್ವಾಂಸರು ಈ ಅಪೂರ್ವ ಗ್ರಂಥಾಲಯವನ್ನು ಸಂದರ್ಶಿಸಿದ ನಂತರ ಹೊರಡಿಸಿದ ಪ್ರಶಂಸನೀಯ ಉದ್ಗಾರಗಳು ಹೆಮ್ಮೆ ಉಂಟುಮಾಡುವಂಥವು. ಈ ಗ್ರಂಥಾಲಯ ಸ್ಥಾಪಿಸಿದ ಶ್ರೇಯಸ್ಸು ಮುಖ್ಯವಾಗಿ ಕಾಶ್ಮೀರದ ಹಿಂದಿನ ಮಹಾರಾಜರಾದ ಶ್ರೀ ರಣವೀರಸಿಂಹ ಅವರಿಗೆ ಸೇರಬೇಕು. ಅಲ್ಲದೆ ಈ ಗ್ರಂಥಾಲಯಕ್ಕೆ ಭಾರತದ ನಾನಾ ಕಡೆಗಳಿಂದ ಗ್ರಂಥಗಳನ್ನು— ಹಸ್ತಪ್ರತಿ ರೂಪದಲ್ಲಿಯೂ— ಸಂಗ್ರಹಿಸಿದ ಜಮ್ಮು ಕಾಶ್ಮೀರದ ವಿದ್ವಾಂಸರು ಈ ಶ್ರೇಯಸ್ಸಿನಲ್ಲಿ ಭಾಗಿಗಳು.

ಶ್ರೀ ರಣವೀರ ಸಿಂಹರು ಕ್ರಿ. ಶ. ೧೮೫೭ರಲ್ಲಿ ಜಮ್ಮು ಕಾಶ್ಮೀರದ ರಾಜ್ಯಭಾರವನ್ನು ವಹಿಸಿಕೊಂಡರು. ತನ್ನ ಪ್ರಜೆಗಳ ಆಧ್ಯಾತ್ಮಿಕ, ಸಾಹಿತ್ಯಕ, ಸಾಂಸ್ಕೃತಿಕ, ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಬೇಕೆಂಬ ಕಳಕಳಿ ಈ ಮಹಾರಾಜರಿಗೆ ಬಹಳವಿದ್ದಿತು. ಸ್ವತಃ ಅವರು ಧಾರ್ಮಿಕ ಪ್ರವೃತ್ತಿಯವರಾಗಿದ್ದರು. ಅವರು ಸಿಂಹಾಸನವನ್ನೇರಿದ ಅಲ್ಪ ಕಾಲದಲ್ಲಿಯೇ ಜಮ್ಮುವಿನಲ್ಲಿ ಶ್ರೀ ರಘುನಾಥ ಮಂದಿರವನ್ನು ಸ್ಥಾಪಿಸಿದರು. ಶ್ರೀರಾಮನೇ ಈ ರಘುನಾಥ ಮಂದಿರದ ಮುಖ್ಯ ದೇವರಾಗಿದ್ದು ಇತರ ದೇವತೆಗಳನ್ನೂ ಈ ದೇವಾಲಯದ ಪರಿಸರದಲ್ಲಿ ಸ್ಥಾಪಿಸಲಾಗಿದೆ. ಅಲ್ಲದೆ ಧರ್ಮದ ಪ್ರಚಾರವು ವಿದ್ಯಾಭಿವೃದ್ಧಿಯಿಂದಲೇ ಆಗಬಲ್ಲುದು ಎಂದು ನಂಬಿದ್ದ ಶ್ರೀ ರಣವೀರಸಿಂಹರು ಈ ರಘುನಾಥ ಮಂದಿರದ ಜೊತೆಗೇ ಒಂದು ಸಂಸ್ಕೃತ ಮಹಾವಿದ್ಯಾಲಯವನ್ನೂ ಸಂಸ್ಕೃತ ಪುಸ್ತಕಾಲಯವೊಂದನ್ನೂ ಸ್ಥಾಪಿಸಿದರು.

ರಘುನಾಥ ಮಂದಿರವು ಮುಂದೆ ಅಲ್ಪಾವಧಿಯಲ್ಲಿಯೇ ಜಮ್ಮುವಿನಲ್ಲಿ ಮಾತ್ರವಲ್ಲ, ಭಾರತದಲ್ಲಿ ಇತರತ್ರ ಕೂಡ ಪ್ರಖ್ಯಾತವಾಗಿ ಕ್ಷೇತ್ರಸ್ಥಾನವಾಗಿ ಬೆಳೆದು ಬಂದಿತು. ಮಹಾವಿದ್ಯಾಲಯವೂ ಶಿಕ್ಷಾ ಕೇಂದ್ರವಾಗಿ ಅಭಿವೃದ್ಧಿ ಹೊಂದತೊಡಗಿತು. ಸಂಸ್ಕೃತ ಗ್ರಂಥಾಲಯವೂ ಅಪೂರ್ವ ರೀತಿಯಲ್ಲಿ ಬೆಳೆದು ಬಂದಿತು. ಭಾರತದ ನಾನಾ ಕಡೆಗಳಿಂದ ಸಂಸ್ಕೃತ ಗ್ರಂಥಗಳನ್ನು ಹಸ್ತಪ್ರತಿಗಳ ರೂಪದಲ್ಲಿಯೇ ಗ್ರಂಥಾಲಯಕ್ಕಾಗಿ ಕೊಂಡುಕೊಳ್ಳುವುದಕ್ಕಾಗಿ ಲಕ್ಷಗಟ್ಟಲೆ ಹಣ ವ್ಯಯಮಾಡಲಾಯಿತು. ಈ ಗ್ರಂಥ ಸಂಗ್ರಹ ಕಾರ್ಯದಲ್ಲಿ ವಿದ್ವಾಂಸರ ಸಹಾಯವೂ ಹೇರಳವಾಗಿ ದೊರೆಯಿತು.

ಪಾಶ್ಚಾತ್ಯ ಸಂಶೋಧಕರಲ್ಲೊಬ್ಬರಾದ ಡಾ. ಫಿಟ್ಜ್ ಎಡ್ವರ್ಡರು ಇಲ್ಲಿಯ [illegible] ಸಂಗ್ರಹದಲ್ಲಿರುವ ಸಂಸ್ಕೃತ ಗ್ರಂಥಗಳಲ್ಲಿ ೯೯ ಗ್ರಂಥಗಳು [illegible] ವಿಶೇಷವಾಗಿ [illegible] ಹೊರಡಿಸಿದ್ದು ಅವುಗಳಲ್ಲಿ ೬೪ ಗ್ರಂಥಗಳನ್ನು ಈ ಅಪೂರ್ವ ಗ್ರಂಥಾಲಯಕ್ಕಾಗಿ ಖರೀದಿಸಲಾಯಿತು ಎಂದು ಡಾ. ಸ್ಟೈನ್ ಎಂಬ ಬೇರೊಬ್ಬ ಸಂಶೋಧಕರ ಲೇಖ ಇದೆ.

ಕಾಶ್ಮೀರ ಮಹಾರಾಜರ ಆಶ್ರಯದಲ್ಲಿವ್ವ

ಪಟಿಯಾಲಾ ನಿವಾಸಿಯಾದ ಪಂ. ವ್ಯಾಸ ಎಂಬುವರು ಚಿಕಿತ್ಸಾ ಶಾಸ್ತ್ರಜ್ಞರೂ ಕಾವ್ಯ ವಿಮರ್ಶಕರೂ ಆಗಿದ್ದರು. ಅವರಲ್ಲಿ ಸಂಸ್ಕೃತ ಗ್ರಂಥಗಳ ಸಂಗ್ರಹ ಇದ್ದಿತು. ಅವರು ೧೮೬೯ರಲ್ಲಿ ನಿಧನ ಹೊಂದಿದ ನಂತರ ಅವರ ವಿಧವಾ ಪತ್ನಿಗೆ ಹೇರಳವಾಗಿ ಹಣವಿತ್ತು. ಗ್ರಂಥಾಲಯಕ್ಕಾಗಿ ಈ ಗ್ರಂಥಗಳನ್ನೆಲ್ಲ ಖರೀದಿಸಲಾಯಿತು. ಜಮ್ಮುನ ಸಮೀಪದ ಪುರಮಂಡಲವಾಸಿ ಸುಪ್ರಸಿದ್ಧ ಶಾಸ್ತ್ರಿ ಪಂ. ಗೋಪಾಲರಾಯ ಮತ್ತು ಜಮ್ಮು ನಿವಾಸಿ ಪಂ. ರಾಮಕೃಷ್ಣ ಇವರಿಂದಲೂ ಅನೇಕ ಸಂಸ್ಕೃತ ಗ್ರಂಥಗಳನ್ನು ಸಂಪಾದಿಸಲಾಯಿತು. ಎಂದೂ ಸ್ಟಾಯಿನ್ನನ ಪುಸ್ತಕ ಸೂಚಿಯಿಂದ ತಿಳಿಯುತ್ತದೆ.

ಆ ದಿನಗಳಲ್ಲಿ ಈ ಗ್ರಂಥಾಲಯದ ಪ್ರಯೋಜನ ಪಡೆಯಲು ಬರುತ್ತಿದ್ದ ವಿದ್ವಾಂಸರಿಂದಲೂ ಮಹಾರಾಜ ರಣವೀರಸಿಂಹರು ಅಪ್ರಕಟಿತ ಗ್ರಂಥಗಳನ್ನು ಪಡೆಯಲು ಪ್ರಯತ್ನಿಸುತ್ತಿದ್ದರು. ಇಂಥ ಗ್ರಂಥಗಳನ್ನು ತಂದೊಪ್ಪಿಸುವವರಿಗೆ ಮಹಾರಾಜರು ಅವುಗಳ ಮೌಲ್ಯವನ್ನು ಕೊಡುತ್ತಿದ್ದರಲ್ಲದೆ ಅವರಿಗೆ ವಿಶೇಷ ಸಂಭಾವನೆಯನ್ನಿತ್ತು ಕಳಿಸುತ್ತಿದ್ದರು.

ಎಲ್ಲರೂ ಮಹಾರಾಜರಿಗೆ ತಮ್ಮ ಸಂಗ್ರಹದಲ್ಲಿಯ ಅಪೂರ್ವ ಗ್ರಂಥಗಳನ್ನು ಮಾರಿಕೊಳ್ಳುತ್ತಿದ್ದರು ಎಂದೇನಿಲ್ಲ. ಅಂಥ ಸ್ವಾಭಿಮಾನಿ ವಿದ್ವಾಂಸರ ಸಂಗ್ರಹದಲ್ಲಿದ್ದ ಗ್ರಂಥಗಳ ಪ್ರತಿ ಮಾಡಿಕೊಳ್ಳಲು ಮಹಾರಾಜರು ಒಂದು ವಿದ್ವಾಂಸ ಮಂಡಲಿಯನ್ನೇ ನಿಯಮಿಸಿದ್ದರು. ಅಲ್ಲದೆ ಕೆಲ ವಿದ್ವಾಂಸರನ್ನೂ ವಿದ್ಯಾರ್ಥಿಗಳನ್ನೂ ವಾರಾಣಸಿಗೆ ಕಳಿಸಿ ಅಲ್ಲಿಂದ ಅಮೂಲ್ಯ ಗ್ರಂಥಗಳ ಹಸ್ತಪ್ರತಿಗಳನ್ನು ದೊರಕಿಸಲಾಯಿತು.

ಪ್ರಾಚೀನ ಕಾಲದಲ್ಲಿ ಕಾಶ್ಮೀರವು ಸಂಸ್ಕೃತ ಭಾಷೆಯ ಆಗರವಾಗಿದ್ದಿತು. ವಿದೇಶೀಯರು ನುಗ್ಗಿ ಅಲ್ಲಿಯ ಗ್ರಂಥ ಸಂಪತ್ತಿಯನ್ನು ನಷ್ಟಗೊಳಿಸಿದ್ದರೂ ಇನ್ನೂ ಹಲವಷ್ಟು ಸಂಸ್ಕೃತ ಗ್ರಂಥಗಳು ಅವರ ಕಣ್ಣು ತಪ್ಪಿಸಿ ಉಳಿದುಕೊಂಡಿದ್ದವು. ಹೀಗೆ ಉಳಿದುಕೊಂಡ ಗ್ರಂಥಗಳನ್ನು — ಹಸ್ತಪ್ರತಿಗಳನ್ನು — ಸುರಕ್ಷಿತವಾಗಿ ಕಾಪಾಡಿಕೊಂಡು ಬರಬೇಕು ಎಂದು ಮಹಾರಾಜ ಶ್ರೀ ರಣವೀರಸಿಂಹರು ಉದ್ಯುಕ್ತರಾದರು. ಪಂ. ಬೀರಬಲಭದ್ರ ಎಂಬವರ ಪುತ್ರ ಪಂ. ರಾಜಕಾಕನು ಈ ಗ್ರಂಥ ಸಂಗ್ರಹ ಕಾರ್ಯದಲ್ಲಿ ವಿಶೇಷವಾಗಿ ಪರಿಶ್ರಮಿಸಿ ಅನೇಕ ದುರ್ಮಿಳ ಸಂಸ್ಕೃತ ಗ್ರಂಥಗಳನ್ನು ಮಹಾರಾಜರಿಗೆ ದೊರಕಿಸಿ ಕೊಟ್ಟನು. ಅವುಗಳಲ್ಲಿ ಕೆಲವು ಗ್ರಂಥಗಳು ಶಾರದಾ ಲಿಪಿಯಲ್ಲಿದ್ದವುಗಳನ್ನು ದೇವನಾಗರಿ ಲಿಪಿಗೆ ತರಲಾಯಿತು. ಈ ಕಾರ್ಯಕ್ಕಾಗಿ ಪಂ. ರಾಜಕಾಕರ ಅಧ್ಯಕ್ಷತೆಯಲ್ಲಿ ಪಂ. ಬಲಭದ್ರಕಾಕ, ಪಂ. ಸಾಹಿಬರಾಮ, ಪಂ. ಕೃಷ್ಣಭಟ್ಟ ಮುಂತಾದವರ ಸಮಿತಿಯನ್ನೇ ನೇಮಿಸಲಾಗಿತ್ತು. ಕ್ರಿ. ಶ. ೧೮೬೪ ರಲ್ಲಿ ಪಂ. ರಾಜಕಾಕರ ನಿಧನದ ನಂತರ ಜಮ್ಮೂ ನಿವಾಸಿ ಪಂ. ಜಲಧರ ಈ ಕಾರ್ಯ ವಹಿಸಿಕೊಂಡರು. ಅವರಿಗೆ ತಮ್ಮ ಈ ಕಾರ್ಯದಲ್ಲಿ ಪಂ. ಸುಖರಾಮ, ಪಂ. ದಯಾರಾಮ ಇವರ ಸಹಾಯ ಸಹಕಾರ ವಿಶೇಷವಾಗಿ ದೊರೆತವು.

ಈ ಗ್ರಂಥಾಲಯದಲ್ಲಿ ಕಾವ್ಯ, ಅಲಂಕಾರ, ಶೈವದರ್ಶನ ಕುರಿತಾದ ವಿಪುಲ ಗ್ರಂಥಗಳಿರುವವಲ್ಲದೆ ಬೇರೆ ಧರ್ಮಗಳ ಕುರಿತಾದ ಗ್ರಂಥಗಳೂ ಅನೇಕ ಸಂಖ್ಯೆಯಲ್ಲಿವೆ.

ಕ್ರಿ. ಶ. ೧೮೮೩ ರಲ್ಲಿ ಅಳ್ವರದ ಸಂಸ್ಥಾನಿಕ ಶ್ರೀ ಮಂಗಲಸಿಂಹರು ಜಮ್ಮುವಿಗೆ ಭೆಟ್ಟಿ ಕೊಟ್ಟಿದ್ದರು. ಆಗ ಅವರು ಶ್ರೀ ರಣವೀರಸಿಂಹರನ್ನು ಕಂಡಾಗ, "ನೀವು ಗ್ರಂಥ ಸಂಗ್ರಹಕ್ಕಾಗಿ ಇಷ್ಟು ಅಪಾರ ಹಣ ಏಕೆ ವೆಚ್ಚಮಾಡುತ್ತಿದ್ದೀರಿ?" ಎಂದು ಕೇಳಿದರು. ಶ್ರೀ ರಣವೀರಸಿಂಹರ ಮಾರ್ಮಿಕ ಉತ್ತರ ಸಿದ್ಧವಿತ್ತು. "ಜೂಜು, ವೇಶ್ಯೆಯರು, ಇತರ ಐಷಾರಾಮಕ್ಕಾಗಿ ಹಣ ವೆಚ್ಚಮಾಡುವದಕ್ಕಿಂತ ಪ್ರಜೆಗಳ ಧಾರ್ಮಿಕಬುದ್ಧಿ, ವಿದ್ಯಾಭಿವೃದ್ಧಿಗಳಿಗೆ ಹಣ ವೆಚ್ಚಮಾಡುವದು ಶ್ರೇಷ್ಠವೆಂದು ಬಗೆದಿದ್ದೇನೆ," ಎಂದರು. ಕಾಶ್ಮೀರದ ಮಹಾರಾಜ ಶ್ರೀ ರಣವೀರಸಿಂಹರ

ಈ ಉತ್ತರ ಆಳ್ವಾರ ನರೇಶರ ವಶಕ್ಕೆ ತಾಗಿತು. ಅವರು ಆಳ್ವಾರಕ್ಕೆ ಹಿಂತಿರುಗಿದೊಡನೆ ತಮ್ಮ ಸಂಗ್ರಹದಲ್ಲಿದ್ದ ಗ್ರಂಥ ಭಂಡಾರವನ್ನೆಲ್ಲ ಶ್ರೀ ರಣವೀರಸಿಂಹರಿಗೆ ಒಪ್ಪಿಸಿಬಿಟ್ಟರು

ಈ ಗ್ರಂಥಾಲಯದಲ್ಲಿ ಅನೇಕ ಪುಸ್ತಕಗಳ ಸಂಪಾದನಕಾರ್ಯ ನಡೆದುದಲ್ಲದೆ, ಹೊಸ ಗ್ರಂಥ ರಚನೆ ಕೂಡ ನಡೆಯಿತು. ಮಹಾರಾಜ ರಣವೀರಸಿಂಹರ ಆಸ್ಥಾನಕವಿ ನವ್ಯ ಚಂದ್ರದಾಸ ಎಂಬವನು 'ರಘುವೀರ–ಗುಣೋದಯ' ಎಂಬ ಕಾವ್ಯ ಬರೆದಿದ್ದಾನೆ. ಪಂ. ಸಾಹಿಬರಾಮನು 'ಚಿತ್ತಪ್ರತಿಭಾ' ಎಂಬ ವೇದಾಂತ ಗ್ರಂಥವನ್ನೂ ಗಣೇಶಶಾಸ್ತ್ರಿಯು ಶಸ್ತ್ರಾಸ್ತ್ರಗಳ ವಿಷಯಕ 'ವಿಷಹರ ತಂತ್ರ' ಎಂಬ ಗ್ರಂಥವನ್ನೂ ಲಕ್ಷ್ಮೀಪಂಡಿತನು "ಪ್ರಶ್ನರತ್ನಾವಳಿ" ಗ್ರಂಥವನ್ನೂ ಬರೆದು ನೀಡಿದ್ದಾರೆ. ಶ್ರೀನಗರದ ರಾಮಚಂದ್ರನು ಮತ್ಸ್ಯಪುರಾಣಕ್ಕೆ ಟೀಕೆ ಬರೆದಿದ್ದಾನೆ. ಹೀಗೆ ರಾಜನೀತಿ, ವೇದಾಂತ, ಚಿಕಿತ್ಸೆ, ಜ್ಯೋತಿಷ ಮುಂತಾದ ವಿಷಯಗಳ ಕುರಿತು ಹಲವು ಹೊಸ ಗ್ರಂಥಗಳನ್ನು ಸಂಸ್ಕೃತದಲ್ಲಿ ಬರೆಸಲಾಗಿದೆ.

ಮಹಾರಾಜ ರಣವೀರಸಿಂಹ ಅವರು ಮೌಲ್ವಿಗಳ ಸಹಕಾರದಿಂದ, ಇತಿಹಾಸ, ದರ್ಶನ, ಚಿಕಿತ್ಸೆ ಮುಂತಾದ ವಿಷಯಗಳ ಬಗ್ಗೆ ಅರಬ್ಬಿ ಭಾಷೆಯಲ್ಲಿದ್ದ ಗ್ರಂಥಗಳನ್ನು ಸಂಸ್ಕೃತಕ್ಕೆ ತರ್ಜುಮೆ ಮಾಡಿಸಿದರು ಎಂದು ಕಾಶ್ಮೀರದ ಮುಸ್ಲಿಂ ಚರಿತ್ರಕಾರ ಸೂಫಿ ಎಂಬವನು ತನ್ನ 'ಕಶ್ಮೀರ್' ಗ್ರಂಥದಲ್ಲಿ ಉಲ್ಲೇಖಿಸಿದ್ದಾನೆ.

ಮೊಗಲ ಸಮ್ರಾಟ ಅಕಬರನಂತೆ ಕಾಶ್ಮೀರದ ಶ್ರೀ ರಣವೀರಸಿಂಹ ಅವರೂ ವಿದ್ವಾಂಸರ ಸಭೆಗಳನ್ನು ಸೇರಿಸಿ ಅವುಗಳಲ್ಲಿ ಧಾರ್ಮಿಕ ಸಾಮಾಜಿಕ ವಿಷಯಗಳ ಚರ್ಚೆ ನಡೆಸುತ್ತಿದ್ದರು ಎಂದೂ ಸೂಫಿ ಬರೆದಿದ್ದಾನೆ. ಇಂಥ ಸಭೆಗಳಲ್ಲಿ ಸೇರುವ ವಿದ್ವಾಂಸರಲ್ಲಿ ಮುಸ್ಲಿಮರೂ ಸಾಕಷ್ಟು ಸಂಖ್ಯೆಯಲ್ಲಿರುತ್ತಿದ್ದರು. ಅರಬ್ಬಿ, ಲ್ಯಾಟಿನ್ ಭಾಷೆಗಳಲ್ಲಿರುವ ವೈದ್ಯಕ ಗ್ರಂಥಗಳನ್ನು ವಿದ್ವಾಂಸರ ಸಹಾಯ–ಸಹಕಾರಗಳಿಂದ ಸಂಸ್ಕೃತ ಮತ್ತು ಡೋಗ್ರಿ ಭಾಷೆಗಳಿಗೆ ಭಾಷಾಂತರಿಸಲಾಗುತ್ತಿತ್ತು.

ಈ ಗ್ರಂಥಾಲಯವು ಅನೇಕ ವರ್ಷಗಳವರೆಗೆ ರಘುನಾಥ ಮಂದಿರದಲ್ಲಿ ಶ್ರೀ ರಣವೀರಸಿಂಹರ ಸಮಾಧಿಯ ಪಕ್ಕದ ಕೋಣೆಯಲ್ಲಿತ್ತು. ಆದರೆ ಕೇವಲ ಮುದ್ರಿತ ಗ್ರಂಥಗಳನಷ್ಟೇ ಅಲ್ಲಿಡಲಾಗುತ್ತಿದ್ದಿತು. ಹಸ್ತಪ್ರತಿಗಳನ್ನು ಅಧಿಕ ಸುರಕ್ಷಿತತೆಯ ದೃಷ್ಟಿಯಿಂದ ರಘುವೀರಮಂದಿರದ ಗರ್ಭಗುಡಿಯ ಪಕ್ಕದ ಒಂದು ನೆಲಮಾಳಿಗೆಯಲ್ಲಿಡಲಾಗಿತ್ತು. ಕೇವಲ ಹದಿನೈದು ವರ್ಷಗಳ ಹಿಂದೆ, ರಘುನಾಥ ಮಂದಿರದ ಆವರಣದಲ್ಲಿಯೇ ಗ್ರಂಥಾಲಯವೊಂದನ್ನು ಹೊಸದಾಗಿ ನಿರ್ಮಿಸಲಾಗಿದೆ ಮತ್ತು ಎಲ್ಲ ಗ್ರಂಥಗಳನ್ನು ಅಲ್ಲಿ ಸುವ್ಯವಸ್ಥಿತವಾಗಿ ಮಂಡಿಸಲಾಗಿದೆ.

ಈ ಗ್ರಂಥಾಲಯದಲ್ಲಿಯ ಗ್ರಂಥಗಳ ವೈವಿಧ್ಯವನ್ನು ಈ ಕೆಳಗಿನ ಯಾದಿಯಿಂದ ತಿಳಿಯಬಹುದು:

ವೇದಸಂಹಿತೆ–ಬ್ರಾಹ್ಮಣ ೨೦೨, ಉಪನಿಷದ್ ೪೨೧, ವೇದಾಂಗ ೨೬, ವ್ಯಾಕರಣ ೨೭೬, ಕೋಶ ೯೦, ಛಂದಃಶಾಸ್ತ್ರ ೨೭, ಸಂಗೀತ ಶಾಸ್ತ್ರ–೩೫, ಅಲಂಕಾರಶಾಸ್ತ್ರ ೧೦೬, ಕಾವ್ಯ ೨೬೩, ನಾಟಕ ೫೪, ಆಖ್ಯಾಯಿಕಾ ೩೧, ಧರ್ಮಶಾಸ್ತ್ರ ೭೧೮, ಪೂರ್ವಮೀಮಾಂಸಾ ೧೨೮, ವೇದಾಂತ ೪೦೪, ಸಾಂಖ್ಯಶಾಸ್ತ್ರ ೧೫, ಯೋಗಶಾಸ್ತ್ರ ೨೭, ನ್ಯಾಯ [illegible] ಜ್ಯೋತಿಷ ೫೧೦, ಚಿಕಿತ್ಸಾಶಾಸ್ತ್ರ ೨೪೨, ರಾಮಾಯಣ–ಮಹಾಭಾರತಾದಿ ೭೧, ಪುರಾಣ [illegible] ಶಾಸ್ತ್ರ ೩೧೩. ತಂತ್ರಶಾಸ್ತ್ರ ೧೦೩೧, ಜೈನಶಾಸ್ತ್ರ ೩೫. ಇವಿಷ್ಟಲ್ಲದೆ ತಮಿಳು ಲಿಪಿಯಲ್ಲಿ ೭೮ ಹಾಗೂ ಶಾರದಾ ಲಿಪಿಯಲ್ಲಿ ೨೯ ಗ್ರಂಥಗಳೂ ಇವೆ.

ಪ್ರಾಚ್ಯವಿದ್ಯಾ ಸಂಶೋಧಕರಿಗೆ ಅಮೂಲ್ಯವಾದ ಈ ರಘುನಾಥ ಮಹಾಗ್ರಂಥಾಲಯವು [illegible] ಇಲ್ಲ.

ಕೃಪೆ: 'ನವನೀತ' ಹಿಂದೀ ಡೈಜೆಸ್ಟ್

ಹರ್ಷ

ಮುಳಲಿ ವಸಂತಕುಮಾರ


ಬೆಳಿಗ್ಗೆ ಎದ್ದು ಹರ್ಷನ ಜೊತೆ ಗದ್ದೆ ತೋಟ ಸುತ್ತಿಕೊಂಡು ಮನೆಗೆ ಬರುವಾಗ ಆಗಲೆ ತಿಂಡಿ ತಿನ್ನುವ ಹೊತ್ತಾಗಿತ್ತು. ಬಾಗಿಲಲ್ಲೆ ನಿಂತಿದ್ದ ನನ್ನ ತಂದೆ, "ಚೆನ್ನಗೆರೆಗೆ ಹೋಗಿಬೋಗೊ. ಒಂದು ವಾರ ಆದ್ರೂ ನೀನು ಈ ಕಡೆ ಬರ್ಲಿಲ್ಲ ಅಂತ ಅಕ್ಕ ಅಳ್ತಾ ಇದ್ಲಂತೆ," ಅಂದಾಗ, "ಯಾರು ಹೇಳಿದ್ರು?" ಎಂದು ಕೇಳಿದೆ. "ಆಳ್ ಬಂದವನೆ ಕರ್ಕೊಂಡು ಹೋಗಾಕೆ ಅವಳ ಜೀವ ಎಲ್ಲಿ ನಿಲ್ತಯ್ತೆ!" ಎಂದು ಕೈಯಲ್ಲಿದ್ದ ಒಲ್ಲಿಯನ್ನು ಹೆಗಲ ಮೇಲೆ ಹಾಕಿ ಹೊರಗೆ ಹೊರಟರು. ತೋಟದಿಂದ ಬಂದ ತಕ್ಷಣ ಬಾಲ ಅಲ್ಲಾಡಿಸುತ್ತ ಅವರ ಸುತ್ತ ನಾಲ್ಕು ಸುತ್ತು ಬಂದ ಹರ್ಷ ಈಗ ಅಷ್ಟು ದೂರ ಜೊತೆಯಲ್ಲಿ ಹೋಗಿ ತನ್ನ ಪ್ರೀತಿಯನ್ನು ವ್ಯಕ್ತಪಡಿಸಿ ಇದ್ದಕ್ಕಿದ್ದ ಹಾಗೆಯೆ ಚಂಗನೆ ನೆಗೆದು ವಾಪಸು ಬಂದು ನನ್ನನ್ನು ಸೇರಿತು.

ಒಳಗೆ ಚೆನ್ನಗೆರೆಯಿಂದ ಬಂದಿದ್ದ ಆಳು ರೊಟ್ಟಿ ತಿನ್ನುತ್ತಿದ್ದ. "ನೀನು ತಿಂಡಿ ತಿಂದು ಆದ ಮೇಲೆ ಅತ್ತೆಗೆ ಹೋಗಿ ಹೇಳು, ನಾನು ಮಧ್ಯಾಹ್ನದ ಹೊತ್ತಿಗೆ ಬರ್ತೀನಿ ಅಂತಾವ," ಎಂದು ಅವನಿಗೆ ಹೇಳಿದೆ. ಅವನು, "ಜೊತೆಯಲ್ಲೆ ಕರ್ಕೊಂಡು ಬಾ ಅಂದ್ರು ಕಣ್ರಪ್ಪ. ನಿನ್ನೆ ಎಲ್ಲಾ ಕಣ್ಣೀರು ಹಾಕಿದ್ರು. ಮಗ ಮೈಸೂರಿನಿಂದ ಬಂದು ಒಂದು ವಾರ ಆತ್ಯಂತೆ. ಈಕಡೆಕೆ ಮೋಕ ಹಾಕ್ಲಿಲ್ಲ ಅಂತಾವ!" ಎಂದ. "ಖಂಡಿತ ಬರ್ತೀನಿ ನಡೆಯೋ." ಎಂದು ಹೇಳಿದೆ. ಅವರಿಗೆ ಮಕ್ಕಳಿರಲಿಲ್ಲ. ಆದರೆ ಮಕ್ಕಳಿಲ್ಲದೆ ಇದ್ರೆ ಇಷ್ಟೊಂದು ಪ್ರೀತಿಸಬೇಕು ಅಂತ ಏನಿದೆ? ಅತ್ತೆ ಅಂದರೆ ನನಗೆ ಹೆಣ್ಣು ಕೊಟ್ಟವರಲ್ಲ; ನಮ್ಮ ತಂದೆಯ ಅಕ್ಕ. ಅವರ ಯಜಮಾನರನ್ನು ಮಾವ ಎಂದೇ ಕರೆಯುತ್ತಿದ್ದೆ. ಅವರು ನನ್ನನ್ನು ಎದುರಿಗೆ ಕೂರಿಸಿಕೊಂಡು ಕಣ್ತುಂಬ ನೋಡಬೇಕು. ಅವರಿಗೆ ತೃಪ್ತಿಯಾಗುವ ವರೆಗೆ ತಿನ್ನಿಸಬೇಕು, ನಾನು ಚೆನ್ನಾಗಿ ಬದುಕಬೇಕು— ಇದಿಷ್ಟೇ ಅವರ ಹಂಬಲ.

ತಾಯಿ ಕೊಟ್ಟ ರೊಟ್ಟಿ ತಿನ್ನುತ್ತ, ಯೋಚಿಸುತ್ತ ಕೂತಿದ್ದೆ. ಇದ್ದಕ್ಕಿದ್ದ ಹಾಗೆಯೇ ಹರ್ಷ ತನ್ನ ಎಡಗಾಲನ್ನು ಎತ್ತಿ ನನ್ನ ತೊಡೆಗೆ ರಪ್ ಎಂದು ಅಪ್ಪಳಿಸಿ, ಕುಂಯ್ ಎನ್ನುತ್ತ ನನ್ನನ್ನೇ ನೋಡತೊಡಗಿತು. ಸ್ವಲ್ಪ ಕಾಲ ತಬ್ಬಿಬ್ಬಾದ ನನಗೆ ಕೂಡಲೆ ನಾನು ಮಾಡಿದ ತಪ್ಪಿನ ಅರಿವಾಯಿತು. ನನ್ನ ಭಾವಕೋಶವನ್ನು ಚೆನ್ನಗೆರೆ ಆವರಿಸಿದ್ದರಿಂದ ಹರ್ಷನ ನೆನಪಾಗಲಿಲ್ಲ. ನನ್ನ ಪಾಡಿಗೆ ರೊಟ್ಟಿ ತಿನ್ನುತ್ತಿದ್ದೆ. ಹರ್ಷ ಕೇವಲ ಗಜದ ಅಳತೆಯ ದೂರದಲ್ಲಿ ತನ್ನೆರಡು

ಮುಂಗಾಲುಗಳನ್ನು ಮುಂದೆ ಚಾಚಿ ಜೊಲ್ಲು ಸುರಿಸುತ್ತ ಕುಳಿತಿತ್ತು. ಸಾಮಾನ್ಯವಾಗಿ ನಾನು ಏನೇ ತಿನ್ನುತ್ತಿದ್ದರೂ ಸಹ— ಆ ಸಮಯದಲ್ಲಿ ಆಗಾಗ್ಗೆ ಅದಕ್ಕೆ ಸ್ವಲ್ಪ ಎಸೆಯುತ್ತಿರಬೇಕು. ಹಾಕದೆ ಹೋದರೆ ಒಂದು ತನ್ನ ಯಾವುದಾದರೊಂದು ಕಾಲನ್ನು ಎತ್ತಿ ರಪ್ ಎಂದು ಮೈಮೇಲೆ ಅಪ್ಪಳಿಸಿ ಬಿಡುತ್ತದೆ. ಇದು ನನ್ನ ಅದರ ಸ್ನೇಹ ರಹಸ್ಯ. ಅದು ಬೇರೆಯಾರೊಂದಿಗೂ ಈ ರೀತಿ ನಡೆದುಕೊಳ್ಳುವುದಿಲ್ಲ. ಆದ್ದರಿಂದ ಅದರ ಈ ಶಿಕ್ಷೆಯಲ್ಲೂ ನನಗೆ ಹಿತವಿದೆ; ಹೆಮ್ಮೆಯಿದೆ.

ಇನ್ನೊಂದು ಘಟನೆಯನ್ನು ಹೇಳಲೇಬೇಕು. ಮೊನ್ನೆ ಗೌರಿಹಬ್ಬದ ದಿನ ಮನೆಗೆ ಯಾರೊ ನೆಂಟರು ಬಂದಿದ್ದರು. ವಯಸ್ಸಾದ ಹಿರಿಯರು. ರಾತ್ರಿ ಬಹಳ ಹೊತ್ತಿನ ತನಕ ಮಾತನಾಡುತ್ತ ಕುಳಿತದ್ದರಿಂದ ಹರ್ಷ ಎಲ್ಲೊ ಆಚೆ ಹೋಗಿತ್ತು. ನಮ್ಮ ಮನೆಯಲ್ಲಿ ಇದ್ದುವು ಎರಡೇ ಮಂಚ. ಒಂದರಲ್ಲಿ ನಮ್ಮ ತಂದೆ ಮಲಗುತ್ತಿದ್ದರು. ಮತ್ತೊಂದರಲ್ಲಿ ನಾನು, ನನ್ನ ಕಾಲಬಳಿಯಲ್ಲಿ ಹರ್ಷ ಮಲಗುತ್ತಿತ್ತು. ಆ ದಿನ ನನ್ನ ಮಂಚವನ್ನು ಹಿರಿಯ ಅತಿಥಿಗಳಿಗೆ ಬಿಟ್ಟು ನಾನು ಒಳಮನೆಯಲ್ಲಿ ಕೆಳಗೆ ಹಾಸಿಕೊಂಡು ಮಲಗಿದೆ. ದೀಪ ಆರಿಸಿ ಸ್ವಲ್ಪ ಹೊತ್ತಾದ ಮೇಲೆ ಹರ್ಷ ಬಂದು ಕುಂಯ್‌ಗುಡುತ್ತ ಬಾಗಿಲು ಕೆರೆಯುತ್ತೊಡಗಿತು. ನಮ್ಮ ತಂದೆ ಬಾಗಿಲು ತೆಗೆದರು. ಇದು ಓಡಿ ಬಂದು ನಾನು ಮಲಗುತ್ತಿದ್ದ ಮಂಚದ ಬಳಿ ಮೇಲೆ ನೆಗೆದು— ಅಲ್ಲಿಂದ ಕೆಳಕ್ಕೆ ಹಾರಿ ಬೊಗಳತೊಡಗಿತು. ನಮ್ಮ ತಂದೆ, "ಛೂ, ಹಚೂ, ಏ ಹರ್ಷ," ಎಂದು ಎಷ್ಟು ಗದ್ದರಿಸಿದರೂ ಕೇಳಲಿಲ್ಲ. ಮಲಗಿದ್ದ ಹಿರಿಯರು ಗಾಬರಿಯಿಂದ ಎದ್ದು ಕುಳಿತರು. ನಾನು ಒಳಗಡೆಯಿಂದ, "ಏ ಹರ್ಷ" ಎಂದ ಕೂಡಲೆ ಒಳಗೆ ಬಂದು ಬಾಲ ಅಲ್ಲಾಡಿಸುತ್ತ ಕಾಲ ಬಳಿ ಮಲಗಿತು. ನಮ್ಮ ತಂದೆಯವರು ಆ ಹಿರಿಯರಿಗೆ ಇದಕ್ಕೆ ಕಾರಣವನ್ನೂ ಅದರ ಇತರ ಸಾಹಸಗಳನ್ನೂ ಹೇಳುತ್ತಿದ್ದರು. ಅದರಲ್ಲಿ ನನಗೆ ಇಷ್ಟವಾಗದೆ ಹೋದದ್ದು ಅವರು ಕೊನೆಯಲ್ಲಿ, ನಾಯಿಯನ್ನು ನನ್ನ ಜೊತೆ ಮೈಸೂರಿಗೆ ಕಳುಹಿಸುವುದಿಲ್ಲವೆಂದೂ, ನಾಯಿ ಮೇಲೆ ಅಷ್ಟೊಂದು ಆಸೆ ಇದ್ದರೆ, ಬೇಕಾದರೆ ಕೆಲಸವನ್ನು ಬಿಟ್ಟು ಮನೆಯಲ್ಲೇ ಇರಬಹುದೆಂದು ಹೇಳಿದ ಮಾತು. ಮನಸ್ಸಿ



ನಲ್ಲೇ ಹುಸಿನಗೆಯನ್ನು ನಕ್ಕೆ. ನಾನು ಇನ್ನೇನು ಕಣ್ಣು ಮುಚ್ಚಬೇಕು ಎನ್ನುವಷ್ಟರಲ್ಲಿ 'ಬೌ' ಎಂದು ಬಗಳುತ್ತ ಎದ್ದು ಹಿರಿಯರು ಮಲಗಿದ್ದ ಮಂಚದ ಬಳಿ ಹೋಯಿತು. ಅಲ್ಲಿ ಒಂದೇ ಸಮನೆ ಗಟ್ಟಿಯಾಗಿ ಬಗುಳತೊಡಗಿತು. ನಾನು, ನಮ್ಮ ತಂದೆ ತಾಯಿ ಎಲ್ಲರೂ, "ಏ ಹರ್ಷ" ಎಂದು ಎಷ್ಟು ಕರೆದರೂ ತನ್ನ ಧ್ವನಿಯನ್ನು ಕಡಮೆ ಮಾಡಲಿಲ್ಲ. ನಾನು ಮೇಲೆದ್ದು ದೀಪ ಹಾಕುವಷ್ಟರಲ್ಲಿ ಅದು ಮಂಚದ ಮೇಲೆ ಹಾರಿ ಅವರು ಹೊದೆದಿದ್ದ ರಗ್ಗನ್ನು ಬಾಯಲ್ಲಿ ಕಚ್ಚಿ ಕೆಳಗೆಳೆಯಿತು. ಅವರು ನಾಯಿ ತನ್ನನ್ನೇ ಕಚ್ಚಿಬಿಟ್ಟಿತೋ ಎಂಬ ಗಾಬರಿಯಿಂದ ಹೋ! ಹಾ! ಅಯ್ಯಪ್ಪಾ ಎಂದು ಹನುಮಂತನ ರೀತಿಯಲ್ಲಿ ಮಂಚದಿಂದ ಕೆಳಗೆ ಹಾರಿ, "ಪಟೇಲ್ರ, ಹಿಡ್ಕಳ್ರಿ, ಹಿಡ್ಕಳ್ರಿ" ಎಂದು ಕಿರುಚುತ್ತಿದ್ದರು; ಪಂಚೆಯನ್ನು ಬಿಚ್ಚಿಟ್ಟು ಬರಿ ಚಡ್ಡಿಯಲ್ಲಿ ಮಲಗಿದ್ದವರು ಪಂಚೆಗಾಗಿ ತಡಕಾಡತೊಡಗಿದರು. ಅಷ್ಟರಲ್ಲಿ ಹರ್ಷನಿಗೆ ಒಂದು ಬಾರಿಸಿ ನನ್ನ ಎರಡೂ ಕೈಗಳಿಂದ ಬಾಚಿ ಮೇಲಕ್ಕೆತ್ತಿಕೊಂಡೆ ಆಮೇಲೆ ನಾವು ಏಶ ಪ್ರಯತ್ನ ಮಾಡಿದರೂ ಹಿರಿಯರು ಮಂಚದ ಮೇಲೆ ಮಲಗಲಿಲ್ಲ. ನಮ್ಮ ತಂದೆಯವರು ತಮ್ಮ ಮಂಚದ ಮೇಲೆ ಮಲಗುವಂತೆ ಮಾಡಿದ ಪ್ರಯತ್ನವೂ ಸಫಲವಾಗಲಿಲ್ಲ. ಈ ಊರಿನಲ್ಲಿ ಅವರಿಗೆ ಪರಿಚಯವಿದ್ದ ಬೇರೊಬ್ಬರ ಮನೆಯಲ್ಲಿ ಮಲಗಿ ನಾಳೆ ಬರುವುದಾಗಿ ಹೇಳಿದರು. ಕೊನೆಗೆ ನಾನು ಮಲಗಿದ್ದ ಜಾಗವಲ್ಲ, ಒಳಮನೆಯಲ್ಲಿ ಅವರನ್ನು ಮಲಗಿಸಿದೆವು. ಅವರು ಅದರ ಬಾಗಿಲನ್ನು ಹಾಕಿಕೊಂಡು ಒಳಗಡೆಯಿಂದ ಚಿಲಕ ಹಾಕಿ "ಈಗ ನೆಮ್ಮದಿ" ಎಂದಾಗ ನನಗೆ ನಗು ಬಾರದೆ ಇರಲಿಲ್ಲ. ನಾನು ಮಂಚದ ಮೇಲೆ ಮಲಗಿದಾಗ ಹರ್ಷ ನನ್ನ ಕಾಲ ಬಳಿ ಮಲಗಿತು.

ಚನ್ನಗಿರಿಗೆ ಹೊರಟು ತುಂಬು ತೋಳಿನ ಬಿಳಿಯ ಕೈಕಫ್ ಶರ್ಟ್ ಹಾಕಿಕೊಂಡು, ಮಡಿಯಾದ ಒಳ್ಳೆಯ ಪಂಚೆಯನ್ನು ಉಟ್ಟುಕೊಂಡೇ, ಚಿಕ್ಕದೊಂದು ಕಿಟ್ಟಿಗೆ ಟವೆಲ್ ಸೋಪು ತುರುಕುತ್ತಿದ್ದನ್ನು ಗಮನಿಸಿದ ನನ್ನ ತಾಯಿ, "ಹೋಗುವಾಗ ಹೆಬ್ಬಳ್ಳದಲ್ಲಿ ಈಚಾಡಕ ಬ್ಯಾಡ ಗಣ್ಣಪ್ಪ. ಮೊನ್ನೆ ಮಾದಿಗರ ಸಣ್ಣನ ಹೆಂಡತಿ ಹೆಣ ಅಲ್ಲೆ ಹಳ್ಳದ ಹತ್ರ ಎಸದವರಂತೆ. ಕೆಟ್ಟ ಜಾಗ" ಎಂದು ಕಿಟ್ಟನ್ನು ಕಿತ್ತು ಒಳಗಿಟ್ಟರು. ಛತ್ರಿಯನ್ನು ಕೈಯಲ್ಲಿ ಹಿಡಿದು ಹೊಸಲು ದಾಟುತ್ತಿದ್ದಂತೆಯೇ ಹರ್ಷ ಉತ್ಸಾಹದಿಂದ ಮುಂದೆ ಓಡಿದ. ನನ್ನ ತಾಯಿ ಈಚೆಗೆ ಬಂದು, "ನೀನ್ ಹೊಂಟ್ಮೇಲೆ. ಹರ್ಷನೂ ಜೊತೇಲೆ ಬತ್ತೈತೆ ಜ್ವಾಪನ", ಎಂದಾಗ "ಹ್ಞೂಂ" ಅಂದೆ. ಹರ್ಷ ಜೊತೆಯಲ್ಲಿದ್ದುದರಿಂದ ದಾರಿ ಬೇಸರವಿಲ್ಲದೆ ಕಳೆಯುತ್ತಿತ್ತು. ಆತ್ಮೀಯನಾದ ಗೆಳೆಯನ ಸ್ಥಾನವನ್ನು ಅದು ತುಂಬುತ್ತಿತ್ತು. ಮೂರು ದೊಡ್ಡ ಬೋರೆಗಳನ್ನು ಹತ್ತಿ ಇಳಿದರೆ ಚನ್ನಗಿರಿ. ಸುಮಾರು ಮೂರು ಮೈಲಿಗಳ ಅಂತರ. ಬಾಲ್ಯದಿಂದ ಅದೆಷ್ಟೋ ಸಾರಿ ಹೋಗಿ ಬಂದಿದ್ದ ಈ ದಾರಿ ನನಗೆ ಯಾವಾಗಲೂ ಅಂತರದ ಅರಿವನ್ನು ತಂದು ಕೊಟ್ಟಿರಲಿಲ್ಲ. ಕಳೆದ ಸಾರಿ ಹೋದಾಗ ನನ್ನ ಹೆಂಡತಿ ಜೊತೆಯಲ್ಲಿದ್ದಳು. ಆದರೆ ಅದು ಗಾಡಿ ಪ್ರಯಾಣ. ನನ್ನ ಹೆಂಡತಿ ನಡೆಯಲಾರದಷ್ಟು ಕೋಮಲೆ ಎಂದು ಭಾವಿಸಿ ನಮ್ಮ ಮಾವ ಗಾಡಿ ಕಟ್ಟಿ ಕಳುಹಿಸಿದ್ದ. ಆಗ ಹರ್ಷನ ಸಡಗರವೆಲ್ಲ ಗಾಡಿಯ ಮೇಲೆಯೇ. ನಮ್ಮಿಬ್ಬರ ಮಧ್ಯೆ ಕುಳಿತು ಆಕಾಶದಲ್ಲಿ ಹಾರುತ್ತಿದ್ದ ಹಕ್ಕಿಗಳನ್ನು ನೋಡಿ ಬೊಗಳುತ್ತಿದ್ದ ಅದರ ಸಾಹಸ ಅರ್ಥವಾಗದಿದ್ದರೂ— ಆ ದೃಶ್ಯ ಮಾತ್ರ ತುಂಬಾ ಮೋಜೆನಿಸುತ್ತಿತ್ತು. ಈಗ ಕಂಬಳಿ ಹುಳುವಿನ ಕೋಶವನ್ನು ಕಳಚಿ ಆಗತಾನೆ ಹೊರಕ್ಕೆ ಬಂದ ಹೊಸ ಚಿಟ್ಟೆಯಂತೆ ಹರ್ಷ ಅತ್ತಿಂದಿತ್ತ ಓಡಾಡುತ್ತಿದೆ. ಇದ್ದಕ್ಕಿದ್ದಂತೆ ಮುಂದೆ ಓಡುವುದು, ಗಕ್ಕನೆ ನೆಲದ ಮೇಲೆ ಮಲಗಿ ಮುಂಗಾಲುಗಳೆರಡನ್ನೂ ಮುಂದಕ್ಕೆ ಹಾಕಿ ಅದೇ ಒಂದು ಬಗೆಯ ಮುದ್ದಾದ ರೀತಿಯಿಂದ ನಿರೀಕ್ಷಿಸುವುದು— ನಾನು ಅದನ್ನು ಸಮೀಪಿಸಿದಂತೆ ತನ್ನೆರಡೂ ಕಾಲುಗಳಲ್ಲಿ ನೆಲವನ್ನು ಕೆರೆದು ಹೊಟ್ಟೆಯಲ್ಲೇ

ತೆವಳಿಕೊಂಡು ಬರುವುದು; ನಾನು ತೀರ ಹತ್ತಿರಕ್ಕೆ ಬಂದಾಗ ಮತ್ತೆ ಮುಂದಕ್ಕೆ ವೇಗವಾಗಿ ಓಡುವುದು— ಹೀಗೆ ಅದೇ ನನ್ನನ್ನು ಆಟವಾಡಿಸುತ್ತಾ ಇದ್ದೇನೆ ಎಂದು ಭಾವಿಸಿ ಸಂತೋಷ ಪಡುವುದು. ಮೈತುಂಬ ನವಿರು ಗೂದಲು, ಅಗಲವಾಗಿ ಬಾಗಿದ ಕಿವಿಗಳು ಜೋಡುದ್ದ ಕಾಲುಗಳು, ಒಳ್ಳೆಯ ಆಕರ್ಷಕ ಮುಖ, ಮುಖದ ಮಧ್ಯೆ ಉದ್ದಕ್ಕೆ ಅಳಿಲಿನ ಹಾಗೆ ಒಂದು ಬಿಳಿಯ ನಾಮದಂತಹ ಗೆರೆ, ಧಷ್ಟಪುಷ್ಟವಾದ ಮೈಕಟ್ಟು, ಜೋರೆ ಹಕ್ಕಿಯ ಬಣ್ಣ ಮತ್ತು ಮಿಳಮಿಳನೆ ಹೊಳೆಯುವ ಕಣ್ಣುಗಳಿಂದ ಕೂಡಿದ ಹರ್ಷನನ್ನು ನೋಡಿದ ಯಾರಾದರೂ ಅದರ ಹೆಸರು ಅನ್ವರ್ಥ ಎನ್ನದಿರರು. ನನ್ನ ಹರ್ಷನ ಸ್ನೇಹ ಗಾಢವಾದಂತೆಲ್ಲ ನಾನು ಈ ಸಂಬಂಧಕ್ಕೆ ಕಾರಣ ಹುಡುಕುತ್ತಿದ್ದೇನೆ. ಬಹಳಮಟ್ಟಿಗೆ ನಮ್ಮ ಕ್ರಿಯೆಗಳೆಲ್ಲ ಸ್ವಾರ್ಥಮೂಲವಾಗಿರುತ್ತವೆ. ಪ್ರಯೋಜನವಿಲ್ಲದ ಯಾವೊಂದು ಕೆಲಸಕ್ಕೂ ನಮ್ಮ ಮನಸ್ಸು ಅಷ್ಟಾಗಿ ಸಿದ್ಧವಿರುವುದಿಲ್ಲ. ಸ್ವಲ್ಪಮಟ್ಟಿಗೆ ಪರಿಚಯವಿರುವ ವ್ಯಕ್ತಿಯೊಬ್ಬ ನಮ್ಮ ಮನೆಗೆ ಬಂದರೆ ಅವನಿಗೆ ಇಷ್ಟು ಕಾಫಿ ಕೊಡಬೇಕಾದರೂ ನಮ್ಮ ಮನಸ್ಸು ಅಷ್ಟೇನು ಉದಾರವಾಗಿ ವರ್ತಿಸುವುದಿಲ್ಲ. ಹತ್ತು ಹೊತ್ತು ಸಾಕಿ ಸಲಹಿ-ದೊಡ್ಡವರನ್ನಾಗಿ ಮಾಡಿ ವಿದ್ಯೆಯನ್ನು ಕೊಡಿಸಿದ ತಂದೆ ತಾಯಿಗಳನ್ನು ಬಹಳವಾದ ಪ್ರತ್ಯಾದರಗಳಿಂದ ಸದಾಕಾಲವೂ ಕಾಣುತ್ತೇವೆ ಎಂಬ ಆತ್ಮವಿಶ್ವಾಸ ನನಗಿಲ್ಲ. ಹೀಗಿರುವಾಗ ಈ ನಾಯಿಯನ್ನು ಅಂದಿನಿಂದ ಈ ವರೆಗೆ ಏಕಪ್ರಕಾರವಾಗಿ ಪ್ರೀತಿಸುವುದರ ನಿಜವಾದ ಕಾರಣ ನನಗೆ ತೋರುತ್ತಿಲ್ಲ. ತಿಂಗಳಿಗೆ ಸುಮಾರು ಇಪ್ಪತ್ತು-ಮೂವತ್ತು ರೂಪಾಯಿಗಳನ್ನು ಇದಕ್ಕೆ ಖರ್ಚುಮಾಡುವಾಗ ಮನಸ್ಸು ಹಿಂದು ಮುಂದು ನೋಡಿಲ್ಲ.

ಹರ್ಷನನ್ನು ಅದು ಮರಿಯಾಗಿದ್ದಾಗ ಒಬ್ಬರು ಪಾದ್ರಿ ನನಗೆ ಬಳುವಳಿಯಾಗಿ ಕೊಟ್ಟರು. ನನ್ನ ಅವರ ಸಾಹಿತ್ಯಿಕ ಸಂಬಂಧ ವಿಶ್ವಾಸಕ್ಕೆ ತಿರುಗಿ ಸ್ನೇಹದ ಕಡೆಗೆ ಹರಿಯಿತು. ಹೀಗಾಗಿ ಅವರಲ್ಲಿದ್ದ ಡ್ಯಾಶ್ ಹೂಂಡ್ ಜಾತಿಯ ಒಳ್ಳೆಯ ನಾಯಿಮರಿ ನನಗೆ ದೊರಕಿತು. ಅದನ್ನು ಸಾಕುವುದರ ಬಗ್ಗೆ ವಿಶೇಷ ಬೋಧನೆಯೂ ಆಯಿತು. ಚೈನ್, ಬಿಸ್ಕತ್ತು, ಬೆಲ್ಟು, ಹಾಸಿಗೆ ಎಲ್ಲವೂ ಆಯಿತು. ದಿನಬಿಟ್ಟು ದಿನ ತಪ್ಪದೆ ಇದಕ್ಕೆ ನಾವು ಸ್ನಾನ ಮಾಡಿಸಬೇಕಾಗಿ ಬಂದಾಗ ಒಮ್ಮೊಮ್ಮೆ ನನ್ನ ಹೆಂಡತಿ ಗೊಣಗುತ್ತಿದ್ದಳು. ಆದರೆ ಕೆಲವೇ ದಿನದಲ್ಲಿ ಹರ್ಷ ನಮ್ಮೆಲ್ಲರನ್ನು ಗೆದ್ದುಕೊಂಡಿತು. ಮರಿಗೆ ಹರ್ಷ ಎಂದು ಹೆಸರಿಟ್ಟಾಗ ಕೆಲವರು, "ಇದೇನು ಚಕ್ರವರ್ತಿಯ ಹೆಸರನ್ನು ತೆಗೆದುಕೊಂಡು ಹೋಗಿ ನಾಯಿಗಿಡೋದೆ, ಹೋಗಲಿ ಹೀಗೆ ಇಟ್ಟ ಕ್ಷಣಕ್ಕೆ ಇದು ಚಕ್ರವರ್ತಿಯಾಗುತ್ತೆಯೆ? ನಾಯಿ ನಾಯಿನೇ," ಎಂದರು. ಇನ್ನು ಕೆಲವರು, "ಹರ್ಷನಂತೆ, ಹರ್ಷ, ಇದೆಂತದು, ಟೈಗರ್, ರೋಸಿ, ಟಾಮಿ—ಎಷ್ಟು ಚೆನ್ನಾಗಿವೆ- ಎಷ್ಟೇ ಆಗಲಿ ಹೆಸರಿಡೋದ್ರಲ್ಲಿ ಇಂಗ್ಲಿಷ್ನೋರು ಕಣ್ರಿ", ಎಂದರು. ಆದರೆ ಇವರಾರ ಟೀಕೆಯೂ ಹರ್ಷನಿಂದ ನಮಗಾಗುತ್ತಿದ್ದ ಹರ್ಷವನ್ನು ತಪ್ಪಿಸಲು ಸಮರ್ಥವಾಗಲಿಲ್ಲ. ಹರ್ಷ ಎಂದರೆ "ಸಂತೋಷ" ಎಂದೂ ಅರ್ಥ ಇದೆ ಎಂದು ಹೇಳಬೇಕೆನಿಸಿದರೂ ಹೇಳಲಿಲ್ಲ. ಆದರೆ ನಾಯಿಗೆ ಹರ್ಷ ಎಂದು ಹೆಸರಿಟ್ಟುದಾಗಿ ಪಾದ್ರಿಗೆ ಹೇಳಿದಾಗ ಅವರು, "Really beautiful" ಎಂದು ಅಪಾರವಾಗಿ ಸಂತೋಷಪಟ್ಟು ಮೆಚ್ಚಿಗೆ ವ್ಯಕ್ತಪಡಿಸಿದಾಗ ನನಗಾದ ಆನಂದ ಅಷ್ಟಿಷ್ಟಲ್ಲ.

ಒಂದು ದಿನ ಹರ್ಷನನ್ನು ಮನೆಯಲ್ಲಿ ಕಟ್ಟಿಹಾಕಿ ಶಾಲೆಗೆ ಹೋಗಿದ್ದೆ. ಇದರ ಕಿರುಚಾಟವನ್ನು ಸಹಿಸಲಾರದೆ ನನ್ನ ಹೆಂಡತಿ ಇದನ್ನು ಬಿಚ್ಚಿಬಿಟ್ಟಿದ್ದಳು. ಅಲ್ಲಿಂದ ನೇರವಾಗಿ ಸ್ಟಾಫ್ ರೂಮಿಗೆ ಓಡಿ ಬಂದು ನಾನು ಕುಳಿತಿದ್ದ ಕುರ್ಚಿಯನ್ನು ಹಾರಿ ತೊಡೆಯನ್ನೇರಿತು. ಕೆಲವರು ಇದನ್ನು ಕಂಡು ಬಾಳೆಕಾಯಿ ಬೆಂಕಿಗೆ ಬಿದ್ದಾಗ ಮುಖವನ್ನು ಒಂದು ತರಹ ಮಾಡಿದರು. ಕೆಲವರಿಗೆ ಬೋಂಡಾ ಬಿಟ್ಟು ಎಣ್ಣೆಗೆ ಬಿದ್ದ ಹಾಗೆ [illegible]

ಯಾಯಿತು. ನಾನು ಮಧ್ಯಾಹ್ನ ಒಂದೂವರೆ ಗಂಟೆಯಲ್ಲಿ ಮುಖ್ಯೋಪಾಧ್ಯಾಯರು ಬಿಡುವಿನಲ್ಲಿದ್ದುದನ್ನು ತಿಳಿದು ಅವರ ಕೊಠಡಿಗೆ ಹೋದೆ. ಅವರು ಹರ್ಷನನ್ನು ನೋಡಿ, "Is it your dog? Really wonderful. ಬಹಳ ಚೆನ್ನಾಗಿ ಸಾಕಿದ್ದೀರಿ. ನಾನು ಅರ್ಹರಾದವರಿಗೆ ಕೊಟ್ಟ ಹಾಗಾಯಿತು," ಎಂದು ಹೇಳಿ ಅದನ್ನು ಎತ್ತಿಕೊಂಡು ಮುದ್ದಾಡಿದರು. ಜವಾನನನ್ನು ಕರೆದು ಬಿಸ್ಕತ್ತು ತರಿಸಿ ತಿನ್ನಿಸಿದರು.

ಒಮ್ಮೆ ಮೈಸೂರಿಗೆ ನನ್ನೊಂದಿಗೆ ಬರಬೇಕೆಂದು ಸಂಭ್ರಮದಿಂದ ಹೊರಟಿದ್ದ ನನ್ನ ಹೆಂಡತಿ ಕೊನೆಯಲ್ಲಿ ಹರ್ಷನನ್ನು ನೋಡಿಕೊಳ್ಳುವವರು ಯಾರೂ ಇಲ್ಲ ಎಂಬ ಏಕೈಕ ಕಾರಣಕ್ಕಾಗಿ ಬಾರದೆ ಉಳಿದಳು. ಮುಂದೆ ನಾನು ಮದ್ರಾಸಿಗೆ ಹೋಗಲು ನಿರ್ಧಾರ ಮಾಡಿದಾಗ ನಮ್ಮ ಎದುರು ಬಂದ ದೊಡ್ಡ ಸಮಸ್ಯೆ ಹರ್ಷ. ನನ್ನ ಹೆಂಡತಿಯನ್ನು ತೌರಿಗೆ ಕಳುಹಿಸುವುದೆಂದು ನಿರ್ಧಾರವಾಯಿತು. ಹರ್ಷನನ್ನು ಸಾಕಲು ನಮ್ಮ ತಂದೆಯವರು ಒಂದೇಟು ಹಾಕಲಿಲ್ಲವಾದರೂ ಅದರ ಬಗ್ಗೆ ನಾವು ವಹಿಸುತ್ತಿದ್ದ ಅತಿಯಾದ ಮುತವರ್ಜಿಯನ್ನು ನೋಡಿ ಅದನ್ನು ಜೋಪಾನ ಮಾಡುವುದರ ಬಗ್ಗೆ ಹಿಂದೆ ಮುಂದೆ ನೋಡಿದರು. ಈಗ ಎರಡು ವರ್ಷಗಳ ತರುವಾಯ ಆಗಿರುವ ಪರಿವರ್ತನೆ ಎಂದರೆ ನಾನು ಮೈಸೂರಿನಲ್ಲಿ ಅಧ್ಯಾಪಕನಾದೆ. ಹರ್ಷನನ್ನು ಮಾತ್ರ ನಮಗೆ ಕೊಡುವುದಿಲ್ಲ ಎಂದು ತಂದೆಯ ತೀರ್ಮಾನ. ನಮ್ಮ ಮನೆಯವರೆಲ್ಲರ ಅಕ್ಕರೆಯ ಈ ಕಂದ ನಮಗೆಂದೂ ನಾಯಿಯಾಗಿ ಕಂಡಿಲ್ಲ.

ಆಗಲೆ ಅರ್ಧ ದಾರಿಯನ್ನು ಸಾಗಿದ್ದೆವು. ನಾನು ಎದುರಿಗೆ ಸಿಕ್ಕಿದ ಕಲ್ಲುಗಳನ್ನು ಕೈಗೆ ತೆಗೆದುಕೊಂಡು ದೂರ ಎಸೆಯುತ್ತಿದ್ದೆ. ಹರ್ಷ ಓಡಿಹೋಗಿ ಅದನ್ನು ಬಾಯಲ್ಲಿ ಕಚ್ಚಿ ತರುತ್ತಿತ್ತು. ಕಲ್ಲು ಕಣ್ಣಿಗೆ ಕಾಣಿಸದೆ ಹೋದರೆ ಅಸಮಾಧಾನದಿಂದ ಬೊಗಳುತ್ತಿತ್ತು. ಹೀಗೆ ಹೋಗುತ್ತಿರುವಾಗ ಅಡ್ಡಲಾಗಿ ಒಂದು ಹಳ್ಳ ಹರಿಯುತ್ತಿತ್ತು; ಹೆಸರಿಗೆ ಹಳ್ಳ, ವಾಸ್ತವವಾಗಿ ಒಂದು ಚಿಕ್ಕ ಹೊಳೆ ಎಂದರೂ ಸರಿಯೆ. ನಾನು ಚನ್ನಗಿರಿಗೆ ಹೋಗುವಾಗ ಇಲ್ಲಿ ಈಜದೆ ಯಾವತ್ತೂ ಹೋಗುತ್ತಿರಲಿಲ್ಲ. ಇದನ್ನು ತಿಳಿದೇ ನನ್ನ ತಾಯಿ ಬಟ್ಟೆ ಕಟ್ಟಿಕೊಟ್ಟಿದ್ದು. ಸ್ವಲ್ಪ ದೂರದಲ್ಲಿ ಹದ್ದು ಕಾಗೆಗಳು ಹಾರಾಡುತ್ತಿದ್ದವು. ಬಹುಶಃ ಅಲ್ಲಿಯೇ ಸಣ್ಣನ ಹೆಂಡತಿಯ ಶವವನ್ನು ಎಸೆದಿರಬೇಕು. ಬಿಸಿಲು ಪ್ರಖರವಾಗಿತ್ತು. ಈಜಾಡಿ ಸ್ವಲ್ಪ ಕುಳಿತರೆ ಚಡ್ಡಿ ಆರುತ್ತದೆ, ತೊಂದರೆ ಏನು ಇಲ್ಲ, ಆದಕ್ಕೆ ಮೊದಲು ಹರ್ಷನನ್ನು ತೊಳೆದು ಬಿಡೋಣವೆಂದು ಅದನ್ನು ಹಿಡಿದು ನೀರಿಗೆ ಎಳೆದೆ. ಮಾತು ಕೇಳಲಿಲ್ಲ. ಕೊಸರಿಕೊಂಡು ನನ್ನಿಂದ ಬಿಡಿಸಿಕೊಂಡು ಓಡಿತು. ನಾನು ನೀರಿಗೆ ಹಾರಿ ಈಜತೊಡಗಿದೆ. ನನ್ನ ಹಿಂದಿಯೆ ನೀರಿಗೆ ಏನೋ ದಪ್ಪೆಂದು ಬಿದ್ದ ಹಾಗಾಯಿತು. ನೋಡಿದರೆ ಹರ್ಷ ಈಜುತ್ತಿತ್ತು. ಯಾವಾಗಲೂ ಇದರ ಬುದ್ಧಿಯೆ ಹೀಗೆ. ಮನದಣಿಯುವವರೆಗೆ ಈಜಿದ ಮೇಲೆ ದಡದ ಬಂಡೆಯ ಮೇಲೆ ಬಿಸಿಲಿಗೆ ಮೈ ಒಡ್ಡಿ ಕೂತೆ. ಹರ್ಷ ಒಮ್ಮೆ ಮೈ ಒದರಿ– ಅನಂತರ ತನ್ನ ಇಡೀ ಶರೀರವನ್ನು ಮಣ್ಣಿನಲ್ಲಿ ಉಜ್ಜಿತು. ಒದ್ದೆಯಾಗಿದ್ದ ಮೈಗೆ ಮಣ್ಣು ಅಂಟಿಕೊಂಡಿತು. "ಪ" ಎಂದು ಗದರಿಸಿ ಒಂದು ಸಣ್ಣ ಕಲ್ಲಿನಿಂದ ಹೊಡೆದೆ. ಅಲ್ಲಿಂದ ನೆಗೆದು ಬಳಿಯಲ್ಲೇ ಇದ್ದ ಒಂದು ಗುತ್ತಿಯನ್ನು ಸೇರಿತು. ಅನ್ಯಮನಸ್ಕನಾಗಿ ಎತ್ತಲೋ ನೋಡುತ್ತ, ಬಿಸಿಲಿನ ಹಿತವನ್ನು ಅನುಭವಿಸುತ್ತಿದ್ದ ನನ್ನ ಮುಂದೆ ಹರ್ಷ ಪ್ರತ್ಯಕ್ಷವಾಯಿತು. ಬಾಯಲ್ಲಿ ಒಂದು ದಪ್ಪ ಬೆಳ್ಳಿಲಿಯನ್ನು ಕಚ್ಚಿಕೊಂಡು ಅದನ್ನು ಅತ್ತ ಇತ್ತ ಒದರಿ ಕೆಳಗೆ ಹಾಕಿತು. ಬೆಳ್ಳಿಲಿ ಓಡತೊಡಗಿದಾಗ ತನ್ನ ಕಾಲಿನಿಂದ ಎಷ್ಟು ಬೇಕೊ ಅಷ್ಟು ಏಟು ಕೊಟ್ಟು, ಅರೆಜೀವ ಮಾಡಿ ಆಡಿಸತೊಡಗಿತು. ಇಲಿ ಮುಂದಕ್ಕೆ ಸಾಗಲು ಹೋದಾಗ ಕಾಲಿನಲ್ಲಿ ಅಡ್ಡ ಹಾಕುವುದು. ಸುಮ್ಮನಾದಾಗ ಕಾಲಿನಿಂದ ಮುಂದೆ ತಳ್ಳುವುದು ಹೀಗೆಯೇ ಸಾಗಿತ್ತು ಅದರ

ವಿನೋದ. ಬಟ್ಟೆ ಆರಿದ ಮೇಲೆ ನಾನು ಷರ್ಟ್ ಪಂಚೆ ಹಾಕಿಕೊಂಡು ಹೊರಟೆ. ನಾನು ಸಾಕಷ್ಟು ದೂರ ಹೋದರೂ ಹರ್ಷ ಬರದೆ ಇದ್ದುದರಿಂದ ಅಲ್ಲಿನ ಒಂದು ಬಾಂದುಗದ ಕಲ್ಲಿನ ಮೇಲೆ ಕುಳಿತು, "ಏ ಹರ್ಷ, ಬಾ ಬಾ," ಎಂದು ಗಟ್ಟಿಯಾಗಿ ಕರೆದೆ; ಒಮ್ಮೆ ನನ್ನತ್ತ ನೋಡಿ, ಬಾಲವನ್ನು ಅಳ್ಳಾಡಿಸಿ ರನ್ನಿಂಗ್‌ರೇಸ್ ಸ್ಪರ್ಧೆಯಲ್ಲಿ ಭಾಗವಹಿಸಿದ ಹಾಗೆ ಹುಚ್ಚಾಬಟ್ಟೆ ಓಡಿಬಂದು ನನ್ನ ಶರೀರದ ಮೇಲೆ ಬಿತ್ತು. ನಾನು "ಏ—ಏ ಹರ್ಷ, ಬಟ್ಟೆ-ಬಟ್ಟೆ" ಎಂದು ಕಿರುಚುತ್ತಿದ್ದರೂ ಕೇಳದೆ- ಮೈಮೇಲೆ ಹತ್ತಿ ನನ್ನ ಮುಖವನ್ನು ನೆಕ್ಕತೊಡಗಿತು. ಅದಕ್ಕೆ ನನ್ನ ಮೇಲೆ ಅತಿ ಹೆಚ್ಚಿನ ಪ್ರೀತಿಯನ್ನು ತೋರಿಸಿಕೊಳ್ಳುವ ವಿಧಾನವೇ ಮೇಲೆ ನೆಗೆದು ಮುಖ ನೆಕ್ಕುವುದು. ಆದರೆ ಈಗ ನನ್ನ ಸ್ಥಿತಿ ಮಾತ್ರ ದುಃಸ್ಥಿತಿಯಾಗಿತ್ತು. ಶುಭ್ರವಾದ ಬಿಳಿಯ ಬಟ್ಟೆಯೆಲ್ಲಾ ನೋಡುವುದು- ಹೇಳಲು ಆಗದಷ್ಟು ಗಲೀಜಾಗಿತ್ತು. ನಾಯಿ ಮಣ್ಣಿನಲ್ಲಿ ಹೊರಳಿದ್ದರಿಂದ ಅದು ಹಾಗೆ ಹಾಗೆಯೇ, ನನ್ನ ಪಂಚೆ ಮತ್ತು ಷರ್ಟಿನ ಮೇಲೆ ಮುದ್ರಿತವಾಗಿತ್ತು. ಅದರ ಪಾದದ ಗುರುತುಗಳು ನನ್ನ ಎದೆಯ ಮೇಲೆಲ್ಲಾ ತನ್ನ ಅಧಿಕಾರವನ್ನು ಚಲಾಯಿಸಿದ್ದವು. ನನಗೆ ಆಗ ಅಳುವುದರ ಹೊರತು ಬೇರೆ ಮಾರ್ಗವಿರಲಿಲ್ಲ. ಸರಿಯಾಗಿ ಅರ್ಧ ದಾರಿಯನ್ನು ಬಂದಿದ್ದ ನಾನು ಮರಳಿ ಊರಿಗೆ ಹೋಗುವುದು ಕಷ್ಟವಾಗಿತ್ತು. ನಮ್ಮ ಸ್ವಚ್ಛತೆಯ ಬಗ್ಗೆ ದೊಡ್ಡ ದೊಡ್ಡ ಕಲ್ಪನೆಯನ್ನು ಹೊಂದಿರುವ ಹಳ್ಳಿಯವರ ಬಳಿಗೆ ಇಷ್ಟೊಂದು ಕೊಳಕಾಗಿ ಹೋಗುವುದಾದರೂ ಹೇಗೆ. ಹರ್ಷನ ಮೇಲೆ ಎಲ್ಲಿಲ್ಲದ ಸಿಟ್ಟು ಬಂದು ಚೆನ್ನಾಗಿ ಬಾರಿಸಿ ಬಿಡಬೇಕೆಂದು ಕಲ್ಲು ಹುಡುಕಿದೆ. ಅನತಿ ದೂರದಲ್ಲಿ ಹರ್ಷ ಒಂದಾದ ಮೇಲೊಂದರಂತೆ ತನ್ನೆರಡು ಕಾಲುಗಳಿಂದ ಮಣ್ಣನ್ನು ಬಗೆದು ಗುಂಡಿ ಮಾಡಿ ಗುಂಡಿನಲ್ಲಿ ಮೂಸಿ ಮೂಸಿ ನೋಡುವ ಅದರ ಸ್ಥಿತಿ ಶ್ರದ್ಧಾವಂತ ವಿಜ್ಞಾನಿಯೊಬ್ಬ ಮಣ್ಣನ್ನು ಯಾವುದೋ ರಹಸ್ಯ ಭೇದಿಸಲು ಗಂಭೀರವಾಗಿ ಪರಿಶೀಲಿಸುತ್ತಿರುವಂತೆ ಕಾಣುತ್ತಿತ್ತು. ಅದನ್ನು ಪದೇ ಪದೇ ಶಪಿಸುತ್ತ, ನನ್ನ ಬಟ್ಟೆಯ ಸ್ಥಿತಿಗೆ ಸಂಕೋಚಪಡುತ್ತ ಚೆನ್ನಗಿರಿ ಸೇರಿದಾಗ ನಮ್ಮತ್ತೆ ಮಾವಂದಿರಿಗೆ ಸಿರಿ ಬಂದಂತಾಗಿತ್ತು. ಆದರೆ ನನ್ನ ಮಾವ ಇದ್ದಕ್ಕಿದ್ದಂತೆ "ಎಲ್ಲಿ ಬಿದ್ದು ಬಂದೆ ಮಗಾ," ಅಂದಾಗ ಮೊದಲು ನನಗೆ ಗಾಬರಿಯೇ ಆಯಿತು. ವಿಷಯ ಅರ್ಥವಾದ ಮೇಲೆ ಸಮಾಧಾನವಾದರೂ ನನ್ನ ಬಟ್ಟೆಯ ವಿಚಿತ್ರ ಅವತಾರವನ್ನು ಕಂಡು ಅವರು ಮುಸಿ ಮುಸಿ ನಕ್ಕಾಗ ನನ್ನ ಮನಸ್ಸಿನಲ್ಲಿ ಆ ಬಟ್ಟೆಯಷ್ಟೆ ವಿಚಿತ್ರವಾಗಿ ಕಸಿವಿಸಿಯಾಯಿತು. ಇದೆಲ್ಲಾ ಹರ್ಷನ ಕೆಲಸ ಎಂದು ಹೇಳಿದ ಮೇಲೆ, "ಅದನ್ನ್ಯಾಕೆ ಅಷ್ಟೊಂದು ಹಚ್ಕೋತೀಯ—ಒಸಿ ದೂರ ಇಡು-" ನಮ್ಮ ಮಾವ ಸಲಹೆ ಮಾಡಿದ. "ಅವನಿಗೆ ಸಣ್ಣದ್ರಿಂದ್ಲೂ ನಾಯಿ ಅಂದ್ರೆ ಆಸೆ-" ನಮ್ಮತ್ತೆಯ ಮಾತಿನಲ್ಲಿ ನನ್ನ ಬಗ್ಗೆ ಅನುಕಂಪ ಇತ್ತು. ಮೈಸೂರಿನಿಂದ ನಾಯಿಯನ್ನು ಹಿಡಿದುಕೊಂಡು ಹೋಗುವುದಕ್ಕಾಗಿಯೇ ಬಂದೆ ಎಂದು ಹೇಳಿದಾಗ ಇಬ್ಬರಿಗೂ ಆಶ್ಚರ್ಯವಾಯಿತು.

ಮಧ್ಯಾಹ್ನದಿಂದ ಸಂಜೆಯತನಕ ನನ್ನ ಅತ್ತೆ ಮಾವಂದಿರ ಜೊತೆ ಕಳೆದ ಅವಧಿ ನನ್ನ ಪಾಲಿಗೆ ತುಂಬಾ ಹಿತವಾಗಿತ್ತು. ಅವರ ಮುಗ್ಧ ಮನಸ್ಸಿನಿಂದ ಬರುತ್ತಿದ್ದ ಹಲವಾರು ಪ್ರಶ್ನೆಗಳಲ್ಲಿ ಕೆಲವು ನನ್ನ ಅಪೂರ್ಣ ತಿಳುವಳಿಕೆಯತ್ತ ಬೆರಳು ಮಾಡಿಸಿದರೆ ಮತ್ತೆ ಕೆಲವು ನಗೆಕಡಲಿಗೆ ತಳ್ಳುತ್ತಿದ್ದವು.

ನಮ್ಮತ್ತೆ ಕೋಳಿ ಮೊಟ್ಟೆಯ ಬಿಸಿ ಬಿಸಿ ಸಾರಿಗೆ ಸುಮಾರು ಕಾಲು ಕೇಜಿಯಷ್ಟು ಬೆಣ್ಣೆಯನ್ನು ಹಾಕಿ ಕಲಸಿದಳು. ಮೊಟ್ಟೆಯ ಗುಂಡಿಯನ್ನೂ ಈರುಳ್ಳಿಯನ್ನೂ ಸೇರಿಸಿ ಕರಿದಿದ್ದ ನೆಲ್ಲಕಾಯಿಯನ್ನು ತಿನ್ನಿಸಿದಳು. ಹದವಾಗಿ ಉಪ್ಪುಕಾರದೊಂದಿಗೆ ಬೇಯಿಸಿ ಬೆಂದಿದ್ದ ಮೃದುವಾದ ಕೋಳಿ ಮಾಂಸವನ್ನು ಸಾಕಷ್ಟು ತಂದದ್ದಾಯಿತು. ನಿನ್ನೆ ರಾತ್ರಿಯೆಲ್ಲ ನನಗಾಗಿ ನಿದ್ದೆಗೆಟ್ಟು ಮಾಡಿದ್ದ ವಡೆ, ಚಕ್ಕುಲಿ.

ಕೋಡುಬಳೆ, ಕಜ್ಜಾಯ ಮೊದಲಾದ ಕೈತಿಂಡಿಗಳನ್ನು ಅವಳ ಸಮಾಧಾನಕ್ಕಾಗಿ ಒಂದೊಂದು ಚೂರು ರುಚಿ ನೋಡಿದ್ದಾಯಿತು.

*

ಮಧ್ಯಾಹ್ನದ ಊಟದಿಂದ ಜಡಗೊಂಡಿದ್ದ ಶರೀರಕ್ಕೆ ವಿಹಾರ ಬೇಕಾಗಿತ್ತು. ಊರಿಗೆ ಸೇರಿಕೊಂಡಂತೆಯೇ ಪಶ್ಚಿಮ ದಿಕ್ಕಿನಲ್ಲಿ ಗುಡ್ಡವೊಂದು ಮೇಲೆದ್ದಿತ್ತು. ಅದರ ವಿಶೇಷವೆಂದರೆ ಸಾಬರಿಗಿಂತ ಅವರ ಗಡ್ಡವೇ ಉದ್ದ ಎಂಬಂತೆ ಗುಡ್ಡಕ್ಕಿಂತ ಅದರ ಮೇಲಿದ್ದ ಬಂಡೆಗಳು ಬೃಹದಾಕಾರವಾಗಿದ್ದವು. 'ಹಾಗೇ ತಿರುಗಾಡಿಕೊಂಡು ಬರುತ್ತೇನೆ.' ಎಂದು ಹೊರ ಹೊರಟೆ. ಮುಂಗನ ಹಿಂದೆ ಬಾಲ ಎನ್ನುವ ಹಾಗೆ ಹರ್ಷ ಹಿಂದೆಯೇ ಬಂತು. ನನ್ನ ಅತ್ತೆ, "ಯಾ ಕಡೆಗೆ ಹೋಗ್ತೀಯಪ, ಕತ್ತಲಾಗ್ತ-ಬಂತು," ಎಂದುದಕ್ಕೆ ನನ್ನ ಮಾವ, "ನಿನ್ನ ಅಳಿಮಯ್ಯನನ್ನೇನು ಕಳ್ರು ಹೊತ್ಕಂಡು ಹೋಗಾಕಿಲ್ಲ ಬಿಡು?" ಎಂದಾಗ ನನ್ನ ಅತ್ತೆ ಸ್ವಲ್ಪ ಸಂಕೋಚಪಟ್ಟುಕೊಂಡಂತೆ ಕಂಡು ಬಂದರು. ನಿಜ, ಸಂಜೆಯ ಮಬ್ಬು ಆಗಲೆ ಜಗತ್ತನ್ನು ನುಂಗುತ್ತಿತ್ತು. ಮೇಲೆ ಮುಗಿಲಿನೊಂದಿಗೆ ಜಗಳಕ್ಕೆ ನಿಂತಂತೆ ಕಾಣುತ್ತಿದ್ದ ಬೃಹತ್ತಾದ ರಾಕ್ಷಸರ ಕರಿಯ ನೆರಳಿನಂತೆ ಕಾಣುತ್ತಿದ್ದವು ಬಂಡೆಗಳು. ದಟ್ಟವಾದ ಕಾಡಲ್ಲದಿದ್ದರೂ ಅಲ್ಲಲ್ಲಿ ಬೆಳೆದಿದ್ದ ಮರಗಳು, ಕುರುಚಲು ಗಿಡಗಳು ಬಯಲಶೂನ್ಯತೆಗೆ ಅಡ್ಡಿಮಾಡಿದ್ದವು. ದಿಣ್ಣೆಯ ಮೇಲೇರಿ ಬಳಸಿ ಬಂದು ಒಂದು ದೊಡ್ಡ ಬಂಡೆಯನ್ನೇರಿ ಕುಳಿತೆ. ಹರ್ಷ ಮುಂಭಾಗದಿಂದ ಹತ್ತಲು ಪ್ರಯತ್ನಿಸಿ ಆಗದೆ ಗುಡ್ಡವನ್ನು ಬಳಸಿ ಬಂದು ಬಾಲವನ್ನು ಅಲುಗಿಸಿ ಒಂದು ಕ್ಷಣ ಶ್ರೀಮದ್ ಗಾಂಭೀರ್ಯದಿಂದ ಕುಳಿತುಕೊಂಡಿತು. ತಂಗಾ-ಳಿಯು ಬಂಡೆಗಳ ಸಂದಿಗೊಂದಿಯಲ್ಲಿ ಏನನ್ನೋ ಹುಡುಕುವಂತೆ ಕಂಡುಬಂತು. ನಾನು ಹರ್ಷನ ತಲೆಯನ್ನು ತುಂಬ ಅಕ್ಕರೆಯಿಂದ ನೇವರಿಸಿದೆ. ಅದು ಒಮ್ಮೊಮ್ಮೆ ಕತ್ತನ್ನು ತಿರುಗಿಸಿ ನನ್ನ ಹಸ್ತವನ್ನು ನೆಕ್ಕುತ್ತಿತ್ತು—ಇಲ್ಲ ಮೃದುವಾಗಿ ಕಚ್ಚುವಂತೆ ಬಾಯನ್ನು ತೆರೆದು ಅದರ ಮಧ್ಯೆ ನನ್ನ ಅಂಗೈಯನ್ನು ಸೇರಿಸಿಕೊಂಡು ಹಲ್ಲನ್ನು ತಾಗಿಯೂ ತಾಗದ ಹಾಗೆ ಮುಟ್ಟುತ್ತಿತ್ತು. ನಾನು ಅಲ್ಲಿನ ಸ್ಮಶಾನಮೌನದಲ್ಲಿ ಕರಗಿಹೋಗಿದ್ದೆ. ಹರ್ಷ ಯಾವಾಗಲೊ ಅಲ್ಲಿಂದ ಇಳಿದು ಬಂದು ಬಂಡೆಯ ಕೆಳಗಡೆ ಬಲಭಾಗದಲ್ಲಿ ಮೂರು ನಾಲ್ಕು ಬಂಡೆಗಳು ಒಟ್ಟಿಗೆ ಸೇರಿರುವ ಒಂದು ಮೂಲೆಯನ್ನು ದಿಟ್ಟಿಸುತ್ತ ಬಗುಳುತ್ತಿತ್ತು. ಅದು ಎಡಬಿಡದೆ ಒಂದೇ ಸಮನೆ ಬಗಳುವುದನ್ನು ನೋಡಿ, "ಏ ಹರ್ಷ ಯಾಕೋ?" ಎಂದೆ. ನನ್ನ ಧ್ವನಿಯನ್ನು ಕೇಳಿ ಉತ್ಸಾಹಗೊಂಡ ಹರ್ಷ ದಟ್ಟಿಯಾಗಿ ಬಗುಳತೊಡಗಿತು. ಹಕ್ಕಿ, ಹಲ್ಲಿ, ಓತಿ, ಜಿರಲೆ ಕೊನೆಗೆ ಇರುವೆಯ ಗೂಡನ್ನು ಕಂಡರೂ ಹೀರಿಯ-ಸ್ಸಾಗಿ ಬಗುಳುವುದು ಇದರ ಸ್ವಭಾವವಾದ್ದರಿಂದ ನಾನು ಇದರ ಬಗುಳುವಿಕೆಗೆ ಯಾವುದೊ ಚಿಲ್ಲರೆ ಕಾರಣ ಇರಬಹುದೆಂದು ಸುಮ್ಮನಾದೆ. ಆದರೆ ಕೆಲವೇ ನಿಮಿಷಗಳಲ್ಲಿ ಹರ್ಷನ ಬಗುಳುವಿಕೆ ಹೆಚ್ಚಾಗಿ ಪಟ್ಟೆಂದು ಮುಂದೆ ಹಾರಿತು. ಮತ್ತು ಆ ಒಡನೆಯೇ 'ಕುಯ್ ಕುಯ್' ಎಂಬ ವೇದನೆಯ ಕಿರುಚಾಟ ಕೇಳಿಸಿತು. ನನಗೆ ಒಂದು ಬಗೆಯ ಅನಿರ್ವಚನೀಯ ವೇದನೆ ಮತ್ತು ಗಾಬರಿಯಾಯಿತು. ಬಂಡೆಯಿಂದ ಕೆಳಗೆ ಹಾರುವಂತಿಲ್ಲ, ಆಳವಾದ ಸ್ಥಳ. ಗುಡ್ಡವನ್ನು ಬಂದ ದಾರಿಯಲ್ಲಿ ಓಡೋಡಿ ಬಳಸಿ ಹರ್ಷ ಹಾರಿದ ಸ್ಥಳಕ್ಕೆ ಬಂದೆ. ಹರ್ಷನ ಶಬ್ದವಿಲ್ಲ. ಬೇರೇನೂ ಕಾಣಿಸಲಿಲ್ಲ. ಮುಂದೆ ಬಾಗಿದೆ. ಮೂರು ನಾಲ್ಕು ಹೆಬ್ಬಂಡೆಗಳು ಕೂಡಿ ಆಗಿರುವ ಒಂದು ಗುಹೆ. ಅದರಲ್ಲಿಯೇ ದಿಟ್ಟಿ-ಅಟ್ಟಿದೆ. ತಕ್ಷಣ ಬೆಚ್ಚಿದೆ. ಒಂದು ಜೊತೆ ಫಳ ಫಳ ಹೊಳೆಯುವ ವಿದ್ಯುತ್ ದೀಪದಂತಹ ಹಳದಿ ಕಣ್ಣುಗಳು ಸಮಾನಾಂತರ ಅಳತೆಯಲ್ಲಿ ಅತ್ತಿಂದಿತ್ತ, ಇತ್ತಿಂದತ್ತ ತಿರುಗಿದವು. ಶರೀರ ತಣಗಾದಂತಾಯಿತು, ಧೈರ್ಯ ಉಡುಗಿತು, ಮನಸ್ಸು ಹಲವಾರು ಬಗೆಯ ಭಯದ, ಗೊಂದಲದ, ಸಂಶಯದ ಹುತ್ತವಾಯಿತು. ಇಲ್ಲದ ಧೈರ್ಯವನ್ನು ಒಟ್ಟು

ಗೂಡಿಸಿ ಗಟ್ಟಿಯಾಗಿ, "ಹರ್ಷ ಹರ್ಷ," ಎಂದೆ. ಗುಹೆಯು ಒಳಗಡೆ ಯಾವುದೋ ಪ್ರಾಣಿ ಭಯಂಕರವಾಗಿ ಕಿರಿಚಿದ್ದು ಮಾತ್ರವಲ್ಲದೆ, ಅತ್ತಿಂದಿತ್ತ ನಡೆದಾಡಿದ ಶಬ್ದ ಕೇಳಿಸಿತು. ನನ್ನ ಕತ್ತನ್ನು ಯಾರೋ ಅದುಮಿ ಹಿಡಿದಂತಾಯಿತು. ಶಬ್ದದಿಂದ ಕಿರುಬ ಇರಬಹುದೆಂದು ಖಚಿತವಾದಷ್ಟೂ ನನ್ನ ಹರ್ಷನ ಸ್ಥಿತಿಯ ಬಗ್ಗೆ ಕಳವಳ, ಸಂಕಟ ಹೆಚ್ಚಾಯಿತು. "ಓ ಮಾವಾ" ಎಂದು ಕಿರುಚುತ್ತ ಬೆಟ್ಟದ ತಪ್ಪಲಿನಿಂದ ಊರ ಕಡೆ ಓಡಿದೆ. ಬೆಟ್ಟದ ತಪ್ಪಲಿಗೂ ಊರಿಗೂ ಕೂಗಳತೆ ಅಂತರ. "ಓ ಮಾವಾ ನಾಯೀನ ಕಿರುಬ ಹಿಡೀತು,"— "ನಾಯೀನ ಕಿರುಬ ಹಿಡೀತು" ಎಂದು ಕಿರುಚುತ್ತಾ ಓಡಿದೆ. ಮನೆಯಿಂದ ಹೊರಬಂದ ಮಾವ ನನ್ನ ಮಾತಿನ ಅರ್ಥವನ್ನು ಗ್ರಹಿಸಿ, "ಲೇ ಸಣ್ಣ, ಬೆಟ್ಟ, ಕರಿಯ ಬನ್ನಿರ್ಲಾ, ನಾಯೀನ ಕಿರುಬ ಹಿಡಿದು ಬಿಡ್ತು, ಬನ್ನಿರ್ಲಾ, ಲೇ ಈರ ನಿನ್ನ ಬಂದೂಕ ತಗಳ್ಳಾ," ಎಂದ. ಬಂದೂಕದ ಶಬ್ದಕ್ಕೆ ಮರದಿಂದ ಹಕ್ಕಿ ಹಾರಿದ ಹಾಗೆ ಎಲ್ಲರೂ ಮನೆಯಿಂದ ಹೊರಟು ಕಲ್ಲಿಮಂಟಿಗೆ ಧಾವಿಸಿದರು. ಮಾವನ ಕೈಲಿ ಕೊಡಲಿ ಇತ್ತು. ಬೆಟ್ಟ ಒಂದು ದೊಡ್ಡ ಗಣೆಗೆ ಕಬ್ಬಿನ ಒಣಗಿದ ಗರಿಯ ತರಗು ಸುತ್ತಿದ್ದ. ಈರ ಬಂದೂಕವನ್ನು ಈಡುಮಾಡಿ ಬಾಗಿಲ ಎಡಕ್ಕೆ ನಿಂತ. ಅವನ ಪಕ್ಕದಲ್ಲೇ ಬೆಟ್ಟ ಗಣೆ ಹಿಡಿದು ನಿಂತ. ಕೆಳಗೆ ನಾಲ್ಕೈದು ತೆಂಗಿನ ಗರಿ ಹಾಕಿ ಬೆಂಕಿ ಹಾಕಿದರು. ಬೆಟ್ಟ ಅದರಲ್ಲಿ ತನ್ನ ರೋಟಿಗೆ ಕಟ್ಟಿದ್ದ ತರಗನ್ನು ಹಚ್ಚಿಕೊಂಡು ಗಣೆಯನ್ನು ಗುಹೆಯ ಒಳಗಡೆ ನೂಕಿದ. ಕಂದು ಹಳದಿ ಮಿಶ್ರಿತವಾದ ದೊಡ್ಡ ತೋಳನ ಗಾತ್ರದ ಕಿರುಬ ಈಚೆಗೆ ಬಡಾರ' ಎಂದು ಹಾರಿತು ಮತ್ತು ಬೆಂಕಿಗೆ ವಿರುದ್ಧ ದಿಕ್ಕಿನಲ್ಲಿ ಓಡಲಾರಂಭಿಸಿತು. ಹತ್ತಾರು ಮಾರು ಹೋಗುವಷ್ಟರಲ್ಲಿ ಈರನ ಈಡು ಅದನ್ನು ಬಲಿ ತೆಗೆದುಕೊಂಡಿತು. ಯಾರೋ ಮನೆಯ ಕಡೆಯಿಂದ ಒಂದು ಲಾಟೀನು ತಂದರು. ನಮ್ಮ ಮಾವ ಅದನ್ನು ತೆಗೆದುಕೊಂಡು, ಉಳಿದವರು ಬೇಡ ಬೇಡ ಎಂದರೂ ಕೇಳದೆ ಗುಹೆಯ ಒಳಗೆ ನುಗ್ಗಿದ.— "ಅಯ್ಯೋ ಹೋಯ್ತಲ್ಲಪ್ಪ, ಇನ್ನೇನಪ್ಪ ಮಾಡೋದು, ಹೋಯ್ತಲ್ಲಪ್ಪ." ಎಂದ. "ಏನಾಯ್ತು, ಏನಾಯ್ತು." ಎಂದು ಬೆಟ್ಟ ಒಳಗೆ ನುಗ್ಗಿದ. ಈಚೆಗೆ ಹರ್ಷನನ್ನು ತೆಗೆದುಕೊಂಡು ಬಂದ. ಅವನ್ನು ನೋಡಿದ ತಕ್ಷಣ ನನ್ನ ಎದೆಯ ಒಳಗೆ ಬೆಂಕಿ ಹಾಕಿದ ಹಾಗಾಯ್ತು. ಉಸಿರು ಸಿಕ್ಕಿತು. ಹರ್ಷನ ಕುತ್ತಿಗೆಯ ಮಾಂಸವೆಲ್ಲಾ ಕಿತ್ತು ರಕ್ತಮಯವಾಗಿತ್ತು. ಓಡಿ ಹರ್ಷನನ್ನು ಕೈಗೆ ತೆಗೆದುಕೊಂಡೆ. ಹರ್ಷ ಅಸು ನೀಗಿತ್ತು. ✡



ಚಂದ್ರಕಾಂತದ ಶಿಲೆಯಲ್ಲಿ ಜಲವು ಅಡಗಿಪ್ಪಂತೆ
ಗೋವುಗಳಲ್ಲಿ ಗೋರಂಜನ ರಂಜಿಸುವಂತೆ
ಶಿಲೆ ಕಾಷ್ಠಂಗಳಲಿ ಅನಲ ಅಡಗಿಪ್ಪಂತೆ
ಸಕ್ಕರ ಹೃದಯದಲ್ಲಿ ಮೌಕ್ತಿಕದ ಉದಕದಂತೆ
ಭಾವವಿಲ್ಲದೆ ಅಡಗಿಹೆಯಲ್ಲಾ ಅಮರೇಶ್ವರಲಿಂಗವೆ !

—ಆಯ್ದಕ್ಕಿ ಮಾರಯ್ಯ

ಪ್ರಾಚೀನ ಕಾವ್ಯ ಸುಧೆ

ಶ್ರೀರಾಮ ಪಟ್ಟಾಭಿಷೇಕ

–ದಲಕೆ

['ಪದ್ಯಂ ವಧ್ಯಂ ಗದ್ಯಂ ಹೃದ್ಯಂ' ಎಂದು ಸಾರಿ ಗದ್ಯದೊಳೆ ರಾಮಾಶ್ವಮೇಧವನ್ನು ರಚಿಸಿದ ಕವಿ ಮುದ್ದಣ ಹೊಸಗನ್ನಡ ಯುಗದ ಆದಿಕವಿ ಎಂದು ಪ್ರಖ್ಯಾತ. ರಾಮಾಶ್ವಮೇಧ ಕಥೆಯನ್ನು ವಾರ್ಧಿಕ ಷಟ್ಪದಿಯಲ್ಲಿ ಬರೆಯಲಾರಂಭಿಸಿ, ಅದರ ಕೆಲ ಪದ್ಯಗಳನ್ನು ಸ್ನೇಹಿತರೆದುರಿಗೆ ಓದಿ ತೋರಿಸಿದಾಗ, ಇದನ್ನು ಗದ್ಯದಲ್ಲೇಕೆ ಬರೆಯಬಾರದು ಎಂದು ಸಲಹೆ ನೀಡಿದರಂತೆ. ಮುಂದಿನ ಕಥಾನಕ ಗದ್ಯದಲ್ಲೇ ಆತ ರಚಿಸಿದ. ಆದರೆ ಅದುವರೆಗೆ ಬರೆದ ಕಥೆಯನ್ನು 'ಶ್ರೀರಾಮಪಟ್ಟಾಭಿಷೇಕ' ಎಂಬ ಹೆಸರಿನಿಂದ 'ಮಹಾಲಕ್ಷ್ಮಿ' ಎಂಬಾಕೆ ಬರೆದ ಕಾವ್ಯ ಎಂದು ಪ್ರಸಿದ್ಧಿಸಿದ. ಶ್ರೀರಾಮಭಕ್ತಿ ಪ್ರತಿಪಾದನವಾದ ಈ ಕಾವ್ಯದಿಂದ ಪಟ್ಟಾಭಿಷೇಕದ ವರ್ಣನೆ ಇಲ್ಲಿ ಎತ್ತಿಕೊಡಲಾಗಿದೆ. ಕವಿ ಪರಿಚಯಕ್ಕೆ ಇದೇ ಸಂಚಿಕೆಯಲ್ಲಿರುವ 'ಮುದ್ದಣ' ನೋಡಿ]

ಬಂದ ರಾಘವನಂ ಹಿತವಚನದಿಂ ನುಡಿಸಿ ಕರೆ| ತಂದು ಬೀಡಾರಮಂ ತೋರ್ದರ್ ಪದಿಯಿಂಕತ್ತು ನಲ
ವಿಂದೆ ಮನ್ನಿಸುತಿರ್ದರತ್ತ ಗುರುವಸಿಷ್ಠನ ಬೆಸದಿಂ ಸಚಿವರು||
ಮುಂದೆ ಸುಮುಹೂರ್ತಮಂ ಕಾದಿರ್ದರ್ ಶುಕ್ರ| ಮಂದ ಗುರುಗಳ್ ಕಮಲಜನ ಬೆಸದಿಂ ಸಖಾ
ಮಂದಿರವನಮರವರ್ಧಕಿಗಳಿಂದ್ರನ ಬೆಸದಿಂ ಪಸರಿಸುತಿರ್ದರು |೧|

ಅಂಗ ಬರ್ಬರ ಮಗಧ ಪಾಂಚಾಲ ಕೇರಳ ಕ| ಲಿಂಗ ನೇಪಾಳ ಕರ್ಣಾಟ ಮಾಳವ ಕುಕುರ
ವಂಗ ಘೂರ್ಜರ ಚೋಳ ಚೀನ ಕೊಲ್ಲಾಳ ಕೊಂಕಣ ಸಿಂಧು ಕೊರಹ ಭೋಟ||
ಬಂಗಾಳ ಗೌಳ ಗಾಂಧಾರ ಕುಂತಳ ಹೃದ| ಕೊಂಗ ಕಾಶ್ಮೀರ ಹಮ್ಮೀರಬಾರ್ಯರ್ ಸಿಂಹಲ
ಕಳಿಂಗ ಕಾಂಭೋಜ ಮುಂತಪ್ಪ ನಾಡೊಡೆಯರೋಲಗದ ಸಾಲೆಯೊಳೆಸೆದರು |೨|

ತುಂಬಿದುದು ಚಾವಡಿಯೊಳಖಿಲ ಜನಜಾಲಮಿ| ನ್ನಿಂಬಿಲ್ಲ ಕೇರಿಯೊಳ್ ನಡೆಕರ್ಪ ಪಯಣಿಗ
ಗೆಂಬುದರಿಯಿಂ ಪೊರಡಲನುಮಾನಮಾಗೆ ತಾವೆಲ್ಲರೊಡಗೂಡಿ ಬಳಿಕ||
ಅಂಬರದೊಳೊಂದೆಡೆಯೊಳೊಗ್ಗಿ ನೋಡುವರೆನಲ್| ಲೊಂಭತ್ತರೆಣಿಕೆಯಿಂ ಗ್ರಹರೇಗ ರಾಶಿಯೊಳ
ಗಂಬುಜಾಸನನ ಕಟ್ಟಳೆಯೊಳೆಸೆದರ್ ಶುಭೋದಯರಾಗಿ ಶುಭ ಕಾರ್ಯಕೆ ||೩||

ಆ ಸಮಯದೊಳ್ ಸಕಲ ಮುನಿಗಳಭಿಮತದಿಂದಿ| ದೇ ಸುಲಗ್ನಂ ಪುರೋತ್ಸವಕೆಂದು ಪೇಳೆ ಕಮ
ಲಾಸನಂ ವರ ಪುರೋಹಿತನಾಜ್ಞೆಯಿಂ ಪೊರಟು ಸಾಮಂತರಾಯರೆಲ್ಲ||
ಸೌಸವದ ಪಣನೀರ ಜಳಕಮಂ ಗಯ್ಸಿ ಪೊಸ| ದೇಸೆಯಿಂ ಪಟ್ಟುದೊಯನುಡಿಸಿ ಭಂಡಾರದಿಂ
ಮೀಸಲೊಂದದರನ್ನದಾರಮಂ ತುಡಿಸಿ ರಘುರಾಮನಂ ಕರೆತಂದರು ||೪||

245–14

ಮುಗಿದು ಗುರುಪದಕೆ ಹಿರಿಯರ್ಗೆರಗಿ ಮನದಿ ದಿನ। ಮಣಿಗೆ ಕೈಮುಗಿದು ಸಭೆಗಿಂಬಾಗಿ ಬಾಗಿ ಬೆಳೆ
ವಣೆಯು ಗದ್ದುಗೆಯನೆಲ್ಲರ್ ಪೊಗಳೆ ಗುರುವಾಜ್ಞೆಯಿಂದೇರೆ ಕಾಕುತ್ಸ್ಥನು॥
ರಣದ ವೈರಿಯೆನಿಸ ಕೈದುವಂ ಭಾಸ್ಕರಕೆ। ರಣದ ಪಡಿಮೆನೆ ಪೊಳೆವ ಮುಗುಟವಂ ಕುಲದನುಸ
ರಣದ ಪದ್ಧತಿಯಂತೆ ರಾಜಮುದ್ರೆಯನೊಪ್ಪಿಸಿದರಾಗ ಮಂತ್ರಿವರರು ॥೫॥
ಪೊಂಗಳಸದೊಳ್ ತುಂಬಿ ಬಳಿಕ ವೇದೋಕ್ತದಿಂ। ಗಂಗೆಯುಂ ಗಂಧಕುಸುಮಾಕ್ಷತೆಗಳಿಂದೆ ಮುನಿ
ಪುಂಗವ ವಸಿಷ್ಠನರ್ಚಿಸಿ ಸಕಲರಭಿಮತದೊಳಾಕ್ಷಣಂ ಶ್ರೀರಾಮಗೆ।
ಮಂಗಳಾನಕದ ರವದೊಡನೆ ಸುಂಗಾಯಕರ। ಸಂಗೀತ ಮಧುರಸ್ವರಂ ಬೆರೆಯೆ ಸಾಮಗಾ।
ನಂಗಳೊಡನಾಶಿಷದ ನಿರ್ಘೋಷಮೊಸೆಯೆ ತಾನಭಿಷೇಕಮಂ ಗೈದನು ॥೬॥
ನೂತನಾಲಂಕಾರದಿಂದೆಸೆಯೆ ಮತ್ತೆ ರಘು। ಜಾತನಾ ಗದ್ದುಗೆಯೊಳಿತ್ತಲಬ್ಜಾಕ್ಷಿಯರ್
ಸೀತೆಯುಂ ಕಮ್ಮಣ್ಣೆಯಿಂ ಪೂಸಿ ಮಿಸಿಸಿ ತುರುಬಿಕ್ಕಿ ಕುಸುಮಂಗಳ ಮುಡಿಸಿ॥
ಪೀತಾಂಬರವನುಡಿಸಿ ಮಡಿವಚ್ಚಮಂ ತೊಡಿಸಿ। ಶೀತಾಂಶು ಮಂಡಲಕೆ ಕರೆಯೆನಲ್ ಕಸ್ತೂರಿಯು
ನೋತು ಪಣೆಯೊಳ್ ತಿಲಕವಿಟ್ಟು ಕೈಗೊಟ್ಟು ಕರೆತಂದರೋಲಗದ ಸಭೆಗೆ ॥೭॥
ಕುಂತಲ ಭ್ರಮರಪಡಿದಾರಿಯ ಮಧುವಂ ನಿ। ತಾಂತ ಮಿಸಿದುಣ್ಬುದೆನೆ ಭೂಜಾತೆ ಬಂದು ನಿಜ
ಕಾಂತನರ್ಧಾರಗೆ ಪಿಡಿದತ್ತಿ ವಾಮಾಂಕದೊಳ್ ಕುಳ್ಳಿರಿಸಿದಂ ರಾಮನು॥
ಸಂತಸದ ಸುಗ್ಗಿಗೆ ಕುಳಿಲ್ಲ ಕೋಗಿಲೆಯಂತೆ। ಡಂತಿಗಮನೆಯರೊಲ್ದು ಪಾಡಿ ಪೊಂದಟ್ಟೆಯೊಳ್
ಕಾಂತ ರತ್ನಪ್ರದೀಪಂ ಬೆಳಗೆ ಬೆಳಗಿದರ್ ಮಂಗಳಾರತಿಯನಾಗ ॥೮॥
ಯುವನ್ ಕುಳ್ಳಿರ್ ಚೈದ್ಯ ಬಂದೆಂಗು ಮುಂತೆ ಸ್ವೇ। ಧನ ಸಂಗೀದಿರ್ ಪೊರದು ಸೌರಾಷ್ಟ್ರ ಕಾಣಿಕೆಯು
ನವನೀತಗಿಡು ಶಿಷದ ಹೂಣನಾರ್ ಸೌವೀರನೆಲ್ಲಿ ಕರೆ ಹೈಹಯುನನು॥
ಪವಣರಿತು ಸಡೆ ಲಾಳ ಕೈಗಟ್ಟು ಚೋಳ ಪಿಂ। ತವನೊಡನೆ ಪೋಗು ಕರ್ನಾಟ ನೀನೆಂದಲ್ಲಿ
ಪವನಜಂ ಮಂಬೆತ್ತು ಮರ್ಕಟಪ್ರವರರೊಲ್ಪೈಸುತಿರ್ದರ್ ಸಭೆಯೊಳು ॥೯॥
ಇದು ಸುರಪನಿತ್ತ ಪೊಸಬಾಸಿಗಂ ಕೈಕೊಳ್ಳಿ। ದಿದು ಶೇಷನಿತ್ತ ಮಾಣಿಕದ ಕುಂಡಲವಿತ್ತ
ಲಿದು ವರುಣನಿತ್ತ ಮುತ್ತಿನಹಾರವಿದು ಹುತಾಶನನಿತ್ತ ರತ್ನಂಗಳು
ಇದು ಕುಬೇರಂ ಸೂಸಿದ ಪೊನ್ನ ಭಂಡಾರವಿಂ। ತಿದು ಸಮೀರಂ ತಂದ ಕಸ್ತೂರಿಯು ಭಾರವಿಂ।
ತ್ತಿದು ಗಿರೀಶಂ ತಂದ ದಿವ್ಯಗ್ಯರಿಕವೆಂದು ಕಾಣಿಕೆಯನೊಪ್ಪಿಸಿದರು ॥೧೦॥
ಭೂರಮೆ ಭುಜಾಗ್ರದೊಳ್ ಭುಜ ಮಧ್ಯದೊಳ್ ಜಯಂ। ಶ್ರೀರಮೆ ನಿಜಾಂತಬಂಧುರ ಪೀತತಟದೋಳ್ ಮ
ನೋರಮೆ ವಿಲಾಸದಿಂ ಮೆರೆದಿರಲ್ ದಿಕ್ಕಾಂತೆಯರ್ಗೆ ದಿಗ್ಗಜನಿಕರಕೆ।
ಸಾರಘನಸಾರದಣ್ಪಂ ಕೀರ್ತಿಮುಖಮಂ ಯ। ಶೋರಶ್ಮಿಯಿಂ ಪುಸಂಗೊಳಿಸಿ ಮ. ರೆಪೊಕ್ಕ ಸುರ
ವಾರಮಂ ಕಾದೊಂದು ತೇಜದಿಂ ರಾಘವಂ ಸಿಂಹಾಸನದೊಳೆಸೆದನು ॥೧೧॥

ಮಾನವನು ನಿರ್ಮಿಸಿದ ಬೆಳೆ- ಟ್ರಿಟಿಕೇಲ್

ಡಾ. ಎಂ ಎಂ. ಹೊಸಮನಿ

ಅನಾದಿಕಾಲದಿಂದ ಮಾನವನು ಬೆಳೆಯನ್ನು ಸಂಧಾರಿಸಲು ಪ್ರಯತ್ನಿಸುತ್ತಿದ್ದು ಬೆಳೆಯ ಉತ್ಪಾದನೆ ಮತ್ತು ಗುಣಮಟ್ಟ ಹೆಚ್ಚಿಸುತ್ತಾ ಬಂದಿರುವನು. ಗೋದಿ, ಬತ್ತ, ಕಬ್ಬು ಇನ್ನಿತರ ಬೆಳೆಗಳು ಮಾನವನಿಗೆ ೫ ಸಾವಿರ ವರ್ಷಗಳ ಹಿಂದೆಯೇ ಗೊತ್ತಿದ್ದವು. ಬೆಳೆಯುತ್ತಿರುವ ಜನಸಂಖ್ಯೆಗೆ ಬಡ ಬಂಜರು ಜಮೀನುಗಳಲ್ಲಿ ಮತ್ತು ಅನಾನುಕೂಲಕರ ವಾತಾವರಣದಲ್ಲಿ ಹೇಗೆ ಹೆಚ್ಚು ಬೆಳೆಯನ್ನು ಉತ್ಪಾದಿಸಬೇಕೆಂಬುದು ಎಲ್ಲರ ಸಮಸ್ಯೆ. ಈ ಸಮಸ್ಯೆಗೆ ಸಸ್ಯರಾಜ್ಯದಲ್ಲಿ ಇಲ್ಲದ ಈಗೀಗ ಮಾನವನು ನಿರ್ಮಿಸಿದ ಬೆಳೆ 'ಟ್ರಿಟಿಕೆಲ್' ಬಗೆಹರಿಸಬಹುದೆಂದು ತಜ್ಞರ ಆಶೆ.

'ಟ್ರಿಟಿಕೆಲ್' ಎಂಬ ಹೊಸ ಬೆಳೆಯನ್ನು ಗೋದಿ (Triticum spp.) ಮತ್ತು ರಾಯ್ (Secale cereale) ಬೆಳೆಗಳ ಹೂಗಳ ಸಂಕರಣದಿಂದ ಉತ್ಪತ್ತಿಯಾದ ಬೆಳೆ. ಟ್ರಿಟಿಕೆಲನ್ನು ಎಂಟು ಜತಿ (Octoploid) ಮತ್ತು ಆರು ಜತಿ (Hexaploid) ಎಂದು ವರ್ಗೀಕರಿಸಬಹುದು. ೧೮೭೫ ರಲ್ಲಿ ಶ್ರೀಮಾನ್ ವಿಲ್ಸನ್ ಗೋದಿ ಮತ್ತು ರಾಯ್ ಸಂಕರಣ ಮಾಡಿದವರಲ್ಲಿ ಮೊದಲಿಗರು. ಆದರೆ ಜರ್ಮನಿಯ ಶ್ರೀಮಾನ್ ರಿಂಪಾವು ೧೮೮೮ ರಲ್ಲಿ ಮೊಳಕೆ ಒಡೆಯುವ ಶಕ್ತಿ ಹೊಂದಿದ ಸಂಕರಣ ಪಡೆದವರಲ್ಲಿ ಮೊದಲಿಗರು. ರಶಿಯಾದ ಶ್ರೀಮಾನ್ ಮೇಸ್ಟರರು ಸಸ್ಯದ ವರ್ಣನೆ ಮತ್ತು ನಾಮಕರಣವನ್ನು ೧೯೩೦ ರಲ್ಲಿ ಮಾಡಿದರು. ಸ್ವೀಡನ್ನಿನ, ಲುಂಡ್ ವಿಶ್ವವಿದ್ಯಾಲಯದ ಶ್ರೀಮಾನ್ ಆರ್ನ್ ಮುಂಟಜಿಂಗರು ಟ್ರಿಟಿಕೆಲ್ ಬೆಳೆಯ ಸಂಧಾರಣೆಯಲ್ಲಿ ೧೯೩೪ ರಿಂದ ಇಲ್ಲಿಯವರೆಗೆ ಕಾರ್ಯ ನಡೆಸಿದ್ದು ತಮ್ಮ ಜೀವನವನ್ನು ಈ ಬೆಳೆಯ ಅಭಿವೃದ್ಧಿಗೆ ಮುಡುಪಿಟ್ಟಿದ್ದಾರೆ. ಇವರ ಕಾರ್ಯದಿಂದ ಅನೇಕರಿಗೆ ಈ ಬೆಳೆಯಲ್ಲಿ ಆಸಕ್ತಿ ಹುಟ್ಟಿ ಅಭಿವೃದ್ಧಿಗೆ ಅನುಕೂಲ ಒದಗಿತು. ೧೯೩೦ ರ ದಶಕದಲ್ಲಿ ವಿಜ್ಞಾನದಲ್ಲಿ ಸಸ್ಯ ಅಭಿವೃದ್ಧಿ ಕುರಿತ ಎರಡು ವಿಶೇಷ ಸಂಶೋಧನೆಗಳಲ್ಲಿ 'ಕೋಲ್‌ಚಿಸಿನ್' ಎಂಬ ರಸಾಯನಿಕವು ವರ್ಣರೇಷೆಗಳನ್ನು (Chromosome) ದ್ವಿಗುಣಿಸಬಲ್ಲದೆಂದೂ ಮತ್ತೊಂದು ಸಣ್ಣ ಕೊಳವೆಯಲ್ಲಿ (Embryo culture) ಸಸ್ಯಗಳನ್ನು ಬೆಳೆಯಬಹುದೆಂದೂ ತಿಳಿದು ಈ ಬೆಳೆಯ ಸಂಧಾರಣೆಯಲ್ಲಿ ಅನುಕೂಲ ಮಾಡಿಕೊಟ್ಟವು.

ಈ ಬೆಳೆಯ ಬಗ್ಗೆ ಹೆಚ್ಚಿನ ಸಂಶೋಧನೆ ಜಗತ್ತಿನ ಎಲ್ಲ ದೇಶಗಳಲ್ಲಿ ನಡೆದಿದೆ. ಆದರೆ ಅಂತಾರಾಷ್ಟ್ರೀಯ ಗೋದಿ ಮತ್ತು ಗೋವಿನ ಜೋಳ ಸಂಶೋಧನಾ ಕೇಂದ್ರವಾದ ಸನೋ-

ರಾದಲ್ಲಿ [ಮೆಕ್ಸಿಕೊ (Cimmyt] ನೋಬೆಲ್ ಪಾರಿತೋಷಕ ಪಡೆದ ಶ್ರೀಮಾನ್ ಎನ್. ಈ. ಬೊರ್ಲಾಗ್ ಅವರ ನೇತೃತ್ವದಲ್ಲಿ ಹೆಚ್ಚಿನ ಸಂಶೋಧನೆ ನಡೆದಿದೆ. ನಮ್ಮ ದೇಶದಲ್ಲಿ ಈ ಬೆಳೆಯ ಬಗ್ಗೆ ಭಾರತೀಯ ಕೃಷಿ ಸಂಶೋಧನಾ ಕೇಂದ್ರ, ಹೊಸದಿಲ್ಲಿಯಲ್ಲಿ ಹೆಚ್ಚಿನ ಚಟುವಟಿಕೆ ನಡೆದಿದೆ.

ಈ ಬೆಳೆಯ ಬಗ್ಗೆ ನಡೆದ ಸಂಶೋಧನೆಯ ಫಲವಾಗಿ ೧೯೭೩ ರಲ್ಲಿ 'ಆರ್ಮಡಿಲ್ಲೊ' ಎಂಬ ಟ್ರಿಟಿಕೆಲ್ ತಳಿಯನ್ನು ಬಿಡುಗಡೆ ಮಾಡಲಾಯಿತು. ಈ ತಳಿಯು ಗಿಡ್ಡವಾಗಿದ್ದು, ರೋಗ ನಿರೋಧಕ ಶಕ್ತಿ ಹೊಂದಿದ್ದು, ಬೇಗ ಬೆಳೆಯುವ ಗುಣಧರ್ಮ ಮತ್ತು ಮೈತುಂಬ ಕಾಳು ತುಂಬುವ ಗುಣಧರ್ಮ ಹೊಂದಿದೆ. ಈ ತಳಿಯನ್ನು ಸುಧಾರಿಸುವ ಕಾರ್ಯ ನಡೆದಿದೆ. ಟ್ರಿಟಿಕೆಲ್ ಬೆಳೆಯನ್ನು ಎಲ್ಲಿ ಗೋದಿ ಬೆಳೆಯಲು ತೊಂದರೆ ಇದೆಯೋ ಆ ಪ್ರದೇಶದಲ್ಲೂ ಬೆಳೆಯಬಹುದು. ಟ್ರಿಟಿಕೇಲ್ ಬೆಳೆಯನ್ನು ಮಸಾರಿ- ಕೆಂಪು ಭೂಮಿಯಲ್ಲಿ, ಬಡ—ಬಂಜರು ಜಮೀನುಗಳಲ್ಲಿ, ಹಿಮಾಚ್ಛಾದಿತವಾದ ಪ್ರದೇಶಗಳಲ್ಲಿಯೂ ಅನಾನುಕೂಲಕರ ಪರಿಸ್ಥಿತಿಯಲ್ಲಿ ಬೆಳೆಯಬಹುದು.

ಈ ಬೆಳೆಯು ಕಾಳಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಸಾರಜನಕವಿದ್ದು ಪುಷ್ಟಿಕರವಾಗಿದೆ. ಈ ಬೆಳೆಯು ಅತಿ ತಂಪಾದ ಉಷ್ಣತಾಮಾನದಲ್ಲಿ ಬೆಳೆಯುವದರಿಂದ ಅತ್ಯುತ್ತಮ ಮೇವಾಗಿ ಉಪಯೋಗಿಸಬಹುದು. ಟ್ರಿಟಿಕೆಲ್ ಬೆಳೆಯ ಕಾಳು ಗೋದಿಯಷ್ಟು ಮೈತುಂಬುವದಿಲ್ಲ. ಕಾಳುಗಳು ಮುದುಡಾಗಿರುವವು (Shrivelled). ಹೊಡೆಯಲ್ಲಿ ಕಾಳುಗಳು ಮೊಳಕೆ ಒಡೆಯುವವು. ಮತ್ತು ಈ ಬೆಳೆಗೆ ಮರಿ ಒಡೆಯುವ ಶಕ್ತಿ (tillers) ಕಡಿಮೆ. ಈ ಅಡೆತಡೆಗಳನ್ನು ದೂರ ಮಾಡುವ ಪ್ರಯತ್ನಗಳು ನಡೆದಿವೆ. ಈ ಬೆಳೆಯನ್ನು ಮೊದಲು ದನಗಳಿಗೆ ಮೇವಾಗಿ, ಕಾಳುಗಳನ್ನು ದನ ಹಂದಿ, ಮತ್ತು ಕೋಳಿಗಳ ಆಹಾರವಾಗಿ ಉಪಯೋಗಿಸಿ ಸುಧಾರಿಸಿ ನಂತರ ಮಾನವನಿಗೆ ಖಾದ್ಯ ಪದಾರ್ಥವಾಗಿ ಗೋದಿಯ ಹಿಟ್ಟಿನಂತೆ ಉಪಯೋಗಿಸಬಹುದು. ಟ್ರಿಟಿಕೆಲ್ ಕಾಳಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಜೀವನಾವಶ್ಯಕ ಅಮೈನೊ ಆಸಿಡ್‌ಗಳಿರುವದರಿಂದ ಬಡ ದೇಶಗಳಲ್ಲಿ ಪೌಷ್ಟಿಕ ಆಹಾರವೆಂದು ಉಪಯೋಗಿಸುವ ಆಶಾಕಿರಣ ಈ ಬೆಳೆಯಲ್ಲಿ ತೋರುತ್ತಿದೆ. ✡



ಹುತ್ತದೊಳಗಣ ಹಾವ, ಮಡುವಿನೊಳಗಣ ಮತ್ಸ್ಯವ
ಮಹಾಕಾನನದ ವಾನರವ ಹಿಡಿವ ಪರಿಯೆಂತಯ್ಯಾ?
ಹುತ್ತವ ತೆಗೆದು, ಮಡುವ ಹೂಳಿ, ಕಾನನ ಕಿರಿದು ಅಂತಿದ ಹಿಡಿವ ಬೇಗ,
ಸಕಲೇಂದ್ರಿಯಂಗಳೊಳಗಿರ್ದ ಮನವನರಿವನೆಂತು ಮುಟ್ಟಿ ಭಕ್ತನೆಂಬೆ
ಏಕಾಂಶಧರ ಸೋಮೇಶ್ವರ ಲಿಂಗ.

— ಜಿಬ. ಮಾಳಯ್ಯ,



ವೈನಿ

['ಎನ್ಕೆ' ಹೆಸರು ಕನ್ನಡಿಗರಿಗೆ ಸುಪರಿಚಿತ. ಆಧುನಿಕ ಪ್ರಹಸನಗಳಿಂದ ತಮ್ಮ ಲೇಖನಕೃಷಿ ಪ್ರಾರಂಭಿಸಿದ ಇವರು ಆಕಾಶವಾಣಿಗಾಗಿ ಶ್ರಾವ್ಯನಾಟಕಗಳನ್ನು ಬರೆದಿದ್ದಾರೆ. ಕವಿಗಳೂ ಹೌದು, ಕವಿ ಭಕ್ತರೂ ಹೌದು. ಅಂತೇ ಇವರ ಲೇಖನಿಯಿಂದ 'ಕುಮಾರವ್ಯಾಸ ಭಾರತ'ದ ಗದ್ಯಾನುವಾದ ಹೊರಬಂದಿದೆ. ಕಾದಂಬರಿಕಾರರಾಗಿ 'ಸಾವಿನ ಮಡಿಲಲ್ಲಿ' 'ವೈನಿ' ಎಂಬೆರಡು ಉತ್ತಮ ಕಾದಂಬರಿಗಳನ್ನು ನೀಡಿದ್ದಾರೆ. ಅವುಗಳಲ್ಲಿ 'ವೈನಿ' ಮಾನಸಿಕ ತುಮುಲವನ್ನು ಚಿತ್ರಿಸುವ ವೈಶಿಷ್ಟ್ಯಪೂರ್ಣ ಕೃತಿ. ನಾಲ್ಕು ದಶಕಗಳ ಹಿಂದೆಯೇ ಪ್ರಕಟವಾದದ್ದು. ಪತಿ-ಪತ್ನಿಗಳಾಗುವ ಕನಸು ಕಾಣುತ್ತಿದ್ದವರು ಅತ್ತಿಗೆ-ಮೈದುನರಾಗಿ ಬಾಳಬೇಕಾಗಿ ಬಂದಾಗ ಅವರ ಆಂತರಿಕ ಜೀವನದ ಉದ್ವೇಗ ಅನುಭವಿಸಿದವರಿಗೇ ಗೊತ್ತು. ತಮ್ಮ ಈ ಸರಸ ಕಾದಂಬರಿಯನ್ನು ತಾವೇ ಸಂಗ್ರಹಿಸಿ ನೀಡಿದ್ದಾರೆ 'ಎನ್ಕೆ' ಅವರು.]

ಅವರು ವಿ. ಟಿ. ಸ್ಟೇಶನ್ನಿಗೆ ಬಂದಾಗ ರೈಲು ಬಿಡುವುದಕ್ಕೆ ಮೂರು ನಿಮಿಷ ಮಾತ್ರ. ಹಮಾಲ ಗಡಿಬಿಡಿಯಿಂದ ಸಾಮಾನು ಒಯ್ದು ಸಿಕ್ಕ ಯಾವುದೋ ಒಂದು ೩ನೆಯ ವರ್ಗದ ಡಬ್ಬಿಯಲ್ಲಿ ತುರುಕಿದ. ಯಾವ ಡಬ್ಬಿಯಲ್ಲಿ ಹತ್ತಿದರೂ ಒಂದೇ. ಈ ಮೇಲ್ ಗಾಡಿಗೆ ಎಲ್ಲಾ ಡಬ್ಬಿಗಳಿಗೂ ಆರಪಾರ ಹಾದಿ. ವತ್ಸಲೆ, ಬಿಂದೂ ಎದುರು ಬದುರು ಎರಡು ಕಿಟಕಿಯ ಮಗ್ಗಲಿಗೆ ಕುಳಿತರು. ಬಿಂದೂನ ಅಣ್ಣ ಶೇಷಣ್ಣ ಸ್ವಲ್ಪ ಆಚೆಗೆ ಸಾಮಾನುಗಳ ಹತ್ತಿರ ಕುಳಿತುಕೊಂಡ.

'ಇತ್ಲಾಗs ಬರ್ರಿ.' ವತ್ಸಲೆ ಯಜಮಾನರನ್ನು ಕರೆದಳು...

'ಇರ್ಲಿ ಇಲ್ಲೇ. ಸಾಮಾನದ ಹತ್ತಿರ ಯಾರು?' ಶೇಷಣ್ಣ ಅಲ್ಲಿಯೇ ಕುಳಿತುಕೊಂಡ.

'ಇಷ್ಟು ದಿವಸದಾಗ ಎಷ್ಟೆಷ್ಟು ಕತೆ, ಕಾದಂಬರಿ ಮುಗಿದಾವ?' ಬಿಂದು ಪ್ರಶ್ನೆ ಮಾಡಿದ.

'ನಾನೂ ಒಂದು ಕಾದಂಬರಿ ಬರೆಯೋವಷ್ಟು ಓದೀನಿ... ಅನುಭೋಗಿಸೀನಿ.'

ಅನುಭೋಗಿಸೀನಿ! ಅಲಗಿನಂತೆ ಚುಚ್ಚಿತು ಆ ಶಬ್ದ, ಬಿಂದೂನ ಹೃದಯದಲ್ಲಿ. ಶೇಷಣ್ಣ ಬಳಲಿದ್ದ. ಕೋಟು ಕಳೆದು ಟೊಪ್ಪಿಗೆ ಅದರ ಹೊಟ್ಟೆಯೊಳಗಿಟ್ಟು ಮಡಿಚಿ ತಲೆದಿಂಬು ಮಾಡಿಕೊಂಡು ಮೇಲೆ ಫಳಿಯ ಮೇಲೆ ಅಡ್ಡಾದ.

ಗಾಡಿ ಸೀಟಿ ಆಯಿತು.

ಬಿಂದೂ, ವತ್ಸಲೆಯರ ಮನಸ್ಸಿನ ಪಟಲಗಳ ಮೇಲೆ ಹತ್ತು ವರ್ಷಗಳ ಸ್ಮೃತಿ ಚಿತ್ರ ಸಿನೇಮಾ ಸುರುಳಿಯಂತೆ ಬಿಚ್ಚತೊಡಗಿತು. ಅದರಲ್ಲಿ ಸಿಹಿ ಇತ್ತು. ಕಹಿ ಇತ್ತು. ಹೇಚಿತ್ತು, ಪಾಡಿತ್ತು.

ಇಬ್ಬರೂ ತಂತಮ್ಮ ದಿನಚರಿಯ ಹೊತ್ತಿಗೆಗಳನ್ನು ಅದಲು ಬದಲು ಮಾಡಿದರು. ಇಬ್ಬರ ಹೊತ್ತಿಗೆಗಳನ್ನು ಒಂದೊಂದಾಗಿ ಓದಿದರೆ ಇಬ್ಬರ ಅನುಭವಗಳೂ ಒಂದು ಜೀವನದ ಎರಡು ಕಣ್ಣಾಗಿ ಪರಿಣಮಿಸುವಂತಿದ್ದುವು. ಎರಡು ಕಣ್ಣು, ಒಂದು ಕಾಣ್ಕೆ. ಎರಡು ಮುಖ, ಒಂದು ಜೀವನ. ಎರಡು

ಲೇಖನಿ, ಒಂದು ಕಾದಂಬರಿ.

ಪುಣೆಗೆ ಬದಲಾಯಿಸಿದ ಗಾಡಿ ಧಾರವಾಡಕ್ಕೆ ಸಮೀಪಿಸಿತ್ತು. ಕ್ಯಾರಕೊಪ್ಪ ಬೀಸಿ ಹೋಯಿತು. ಗಾಡಿ ಅಲ್ಲಿ ನಿಲ್ಲದೆ ವೇಗವಾಗಿ ಸಾಗಿತ್ತು. ಗಾಡಿಯ ವೇಗಕ್ಕೆ ಹಸಿರು ಮರಗಳ ಎದೆಯ ಮೇಲೆ ಎದ್ದು ನಿಂತಿತ್ತು ಕರ್ನಾಟಕ ಕಾಲೇಜಿನ ಶಿಖರ.

ಧಾ-ರ-ವಾ-ಡ!

ಇಬ್ಬರೂ ತಂತಮ್ಮ ಹೊತ್ತಿಗೆಗಳನ್ನು ಶೇಷಣ್ಣನ ಕೈಗೆ ನೀಡಿದರು.

ಶೇಷಣ್ಣ ಮೊದಲನೆಯ ಪುಟ ತೆರೆದ...

'ವತ್ಸಲೆ ಕಂಡ ಜರದ ಟೊಪ್ಪಿಗೆ'

(ವತ್ಸಲೆಯ ದಿನಚರಿಯಿಂದ.)

ವತ್ಸಲೆ-

'ಅಕ್ಕನ ಮದುವೆ ನಿಶ್ಚಯವಾದಾಗ ನಾನಿನ್ನೂ ಪರಕರ ಉಟ್ಟುಕೊಳ್ಳುತ್ತಿದ್ದೆ. ಹೌದು, ನನಗಿನ್ನೂ ನೆನಪಿದೆ. ಚಳಿಗಾಲದ ರಾತ್ರಿಯ ೯ ಗಂಟೆಯ ಹೊತ್ತಾಗಿರಬೇಕು. ದತ್ತಾತ್ರೇಯ ಗುಡಿಗೆ ಬೀಗರನ್ನಿಳಿಸಿ ೩-೪ ಟಾಂಗಾ ಹಿಂತಿರುಗಿದವು. ಅಷ್ಟರಲ್ಲಿ ಅಳಿಯ ದೇವರ ಮೆರವಣಿಗಾಗಿ ಒಂದು ಬೋಳ ಮೋಟಾರು ಬಂದು ನಿಂತಿತು. ನಾನು ಬೇಲೀಫನ ಹೆಗಲ ಮೇಲೆ ತೂಕಡಿಸುತ್ತಿದ್ದೆ. ಯಾರು ಯಾರೊ ಅಲಾಬಲಾ ತೆಗೆದು ಕೊಡರು. ಅಳಿಯದೇವರ ಕಾಲು ತೊಳೆದರು. ಬಿಸ್ಕಿಟ್ಟು, ಊದಿನಕಡ್ಡಿಗಳ ವಾಸನೆ ಹಿಡಿದಿತ್ತು. ಬಜಂತ್ರಿ ಹಾಗೂ ಸನಾದಿಯ ಒಡಕಲ ಧ್ವನಿ ಕಿವಿಯನ್ನು ಗಡಚಿಕ್ಕಿಸಿ ಬಿಟ್ಟಿತ್ತು. ಕೆಂಪು ಜರದ ಹುಡಿಗೆ ರುಮಾಲು ಸುತ್ತಿದ್ದ ಅಳಿಯದೇವರ ಮುಖ ಕಮಲದ ಹೂವಿನಲ್ಲಿ ದೇವರ ಮುಖ ಮುಚ್ಚಿದಂತೆ ಕಾಣುತ್ತಿತ್ತು. ಹಾಂ, ಆ ಒಂದು ಮುಗುಳು ನಗೆಯ ಮುಖ ಮಾತ್ರ ನನ್ನ ಮನೋಮಂಡಲವನ್ನು ಸ್ಪಷ್ಟವಾಗಿ ವ್ಯಾಪಿಸಿ ಬಿಟ್ಟಿತ್ತು. ಅಳಿಯದೇವರ ಮಗ್ಗುಲಿಗೇ ಕುಳಿತಿದ್ದ ಭರ್ಜರಿ ಜರೀ ಟೊಪ್ಪಿಗೆಯ ದೊಡ್ಡ ಮಂತ್ರಿನ ಚೌಕಳಿಯ ಹುಡುಗ, ಹಳ್ಳಿಯ ಹುಡುಗನೊಬ್ಬ ಮೊದಲ ಸಲ ಪ್ಯಾಟಿಯ ಊರಿಗೆ ಬಂದಂತೆ ಅವನ ಮುಖಮುದ್ರೆ. ಗಳಿಗಿಗೊಮ್ಮೆ ತನ್ನ ಜರದ ಟೊಪ್ಪಿಗೆ ತೆರೆಯುತ್ತ ಕೈಯಿಂದಲೆ ಕ್ರಾಪಿನ ಕೂದಲನ್ನು ಓರೆಗೆ ಸರಿಸಿಕೊಳ್ಳುತ್ತಿದ್ದ. ಬಹುಶಃ ಇದೇ ಮೊದಲ ಸಲ ಅವನು ಕ್ರಾಪು ಬಿಟ್ಟಿರಬೇಕು. ಹೌದು, ಅವನೂ ನನ್ನನ್ನು ನೋಡಿದನೆಂದು ಕಾಣುತ್ತದೆ. ಅವನು ನೋಡುವದರೊಳಗಾಗಿಯೆ ನಾನು ಕಣ್ಣು ಮುಚ್ಚಿಬಿಟ್ಟಿದ್ದೆ.

ಮರುದಿನ ಮದುವೆಯ ಸಂಭ್ರಮ. ನಾನು ಕೋಟೀ ಖೋಲಿಯನ್ನೇ ಹಿಡಿದು ಬಿಟ್ಟಿದ್ದೆ. ನಂಬರ ಮನೆಯ ನರಹರಿ ಅಡಿಗೆಗೆಂದು ಬಂದವನು ಚಹಾ ಕಾಸುತ್ತ ಕುಳಿತಿದ್ದ. ಅಕ್ಷತೆ ಮುಗಿದು ಅತಿಥಿಗಳು ಹೋಗುವವರೆಗೂ ಬಂದವರಿಗೆಲ್ಲ ಉಂಡಿ, ಅವಲಕ್ಕಿ. ಜೊತೆಗೆ ಚಹಾ ಕಾಸೋದು, ಸೋಸೋದು. ಗಂಡಿನ ಬೀಗರ ಕಡೆಯ ಸುಂದ್ರಕ್ಕ, ಬೀಗಿತ್ತಿ ಕಮಲಕ್ಕನ ವರ್ಣನೆ ಮಾಡಿದ್ದೇ ಮಾಡಿದ್ದು. ಅಳಿಯ ದೇವರು ಮಾಸ್ತರಿಕೆ ಮಾಡಬೇಕಾದ ಪ್ರಸಂಗವನ್ನು ಕಥೆ ಮಾಡಿ ಹೇಳಿದರು. ಶೇಷಣ್ಣ ಮನೆಯೊಳಗೂ ಮಾಸ್ತರ, ಮನೆಯ ಹೊರಗೂ ಮಾಸ್ತರ. ತಂದೆ ತೀರಿದ ಮೇಲೆ ಶೇಷಣ್ಣನೇ ಮನೆಗೆ ಹೆಡ್‌ಮಾಸ್ತರ್. ಲಾಜಾ ಹೋಮ ಮುಗಿದ ಮೇಲೆ ಅಳಿಯದೇವರು ನಮ್ಮ ಮನೆಯ ಅಟ್ಟದ ಮೇಲೆ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ಅಲ್ಲಿಟ್ಟಿದ್ದ ತಾಕೂರಿಬಾಯಿಯ ಫೋನೋ! ಆ ಜರದ ಟೊಪ್ಪಿಗೆಯು, ಅಕ್ಕನ ಮೈದುನನಿಗೆ ದೊಡ್ಡ ಆಕರ್ಷಣೆ. ನಾನು ಬಾಳೆಯ ಎಲೆಯ ತುಂಡುಗಳಿಂದ ಪೀಪಿ ಮಾಡಿ ಊದುತ್ತಿದ್ದಾಗ ಸುಂದ್ರಕ್ಕ ಕರೆದರು. 'ಎಷ್ಟು ಸಣ್ಣ ಪೀಪಿ ಮಾಡಿಯ? ಇನ್ನಷ್ಟು ದೊಡ್ಡ ಪೀಪಿನರ ಮಾಡಿದ್ರ ಬಜಂತ್ರಿ ಕಾರಣಾನs ಇದ್ದಿದ್ದಿಲ್ಲ' ಎಂದು ಚೇಷ್ಟೆ ಮಾಡಿದರು. ಅವರಿಗೆ ಏನು ಬೇಕೋ ವ್ಯವಸ್ಥೆ ಮಾಡಬೇಕೆಂದು ಅವ್ವ ಹೇಳಿದಳು. 'ನಿಮಗೇನು ಬೇಕು ಹೇಳ್ರಿ. ಇಲ್ಲಾ ಸುಮ್ಮನೆ ಕೈಜೋಡಿಸಿಕೊಂಡು

ನಿಂದಿಲ್ಯೋ?' ಎಂದು ನಾನೂ ಸುಂದ್ರಕ್ಕನಿಗೆ ಚೇಷ್ಟೆ ಮಾಡಿದಾಗ ಸುಂದ್ರಕ್ಕ ನನ್ನ 'ಹಿರೇಮಿ'ತನಕ್ಕೆ ನಕ್ಕರು. ಸುಂದ್ರಕ್ಕನ ಬಾಯಿಂದ ಅಕ್ಕನ ಮೈದುನ ಬಿಂದೂನ ಉಲಕೋಚಿತನದ ಕಥೆಯನ್ನೆಲ್ಲ ಕೇಳಿದಾಗ ಏನೋ ಒಂದು ಬಗೆಯ ಹಿಗ್ಗು. ಎಷ್ಟು ಉಲಕೋಚಿಯೋ ಅಷ್ಟೇ ಹುಷಾರಿ ಬಿಂದಣ್ಣ. ಭಕ್ತ ಪ್ರಹ್ಲಾದನ ನಾಟಕ ನೋಡಿ ಮನೆಯಲ್ಲಿ ತಾನೇ ಹಿರಣ್ಯಕಶ್ಯಪು ತಾನೇ ಪ್ರಹ್ಲಾದನಾಗಿ ಇಡೀ ನಾಟಕ ಆಡಿ ತೋರಿಸುವ. ಒಂದು ದಿನವಂತೂ ಜಿಹದೆ ಮಾಡಿಕೊಳ್ಳಲಿಕ್ಕೆಂದು ಸುಂದ್ರಕ್ಕನ ಹಸ್ತಮಡಿಯ ಕೆಂಪು ಸೀರೆಯನ್ನೇ ಎಳೆದು ಬಿಟ್ಟಿದ್ದನಂತೆ. ಸುಂದ್ರಕ್ಕನ ಈ ಮಾತಿಗೆ ನಾನು 'ಹಿಡಿಸಲಾರದೆ ನಕ್ಕೆ.' ದ್ರೌಪದೀ ಸ್ವಯಂವರದ ಹರಿಕಥೆ ಕೇಳಿ ಬಿಂದಣ್ಣ ಮನೆಯಲ್ಲಿ ಗಂಟೆಕ್ಕೆ ಸವತೆಕಾಯಿ ತೂಗುಹಾಕಿ ಅದನ್ನು ಮೀನ ಮಾಡಿ ತಾನು ಅರ್ಜುನನಾಗಿ ಬಾಣ ಹೊಡೆಯುವನಂತೆ. ಬಿಂದಣ್ಣನಿಗೆ ಹೊಸ ಅತ್ತಿಗೆ ತಮ್ಮ ಮನೆಗೆ ಬರುವಳೆಂಬ ಸಂಭ್ರಮ ಹೇಳತೀರದು. ಪೇಟೆಯಿಂದ ಬೆಲೆಯುಳ್ಳ ಪ್ರೀತಿಯ ಜಿನಸನ್ನು ಮನೆಗೆ ತಂದಷ್ಟು ಸಂತೋಷವಾಗಿತ್ತು ಮೈದುನ ದೇವರಿಗೆ. ಮದುವೆಯಾದ ಮೇಲೆ ಬೀಗರನ್ನು ಕಳಿಸಲಿಕ್ಕೆ ದೊಡ್ಡದೊಂದು ಜಾತ್ರೆಯೇ ನೆರೆದಿತ್ತು ಸ್ಟೇಶನ್ನಿನಲ್ಲಿ. ದೊಡ್ಡ ಬುಟ್ಟಿಯಲ್ಲಿ ಬೀಗರಿಗೆ ಬುತ್ತಿ ಕಟ್ಟಿತ್ತು. ಬೀಗರ ಗಾಡಿ ಸೀಟಿ ಹೊಡೆದು ಮೆಲ್ಲನೆ ಹೊರಟಾಗ ನನಗೆ ಒಳಗೊಳಗೇ ಅಗಲಿಕೆಯ ನೋವು. ಯಾರ ಅಗಲಿಕೆ?... ಸುಂದ್ರಕ್ಕನಿಗೆ 'ಹೋಗಿ ಬರ್ರಿ' ಎಂದು ಕೈ ಮಾಡಿದೆ. 'ಒಂದsಬರ್ತೀರಿಯಲ್ಲ ನಿಮ್ಮಕ್ಕನ ಜೋಡಿ ನೀನೂ.' ಸುಂದ್ರಕ್ಕನ ಈ ಭವಿಷ್ಯವಾಣಿ ಏನೋ ಒಂದು ಆಸೆ ಹುಟ್ಟಿತ್ತು.

ಗಾಡಿ ಕಣ್ಮರೆಯಾಗುವ ವರೆಗೂ ನನ್ನ ಕಣ್ಮುಂದೆ ಕಟ್ಟಿದ ಚಿತ್ರ ಆ ಚಿಕ್ಕ ಮೂರ್ತಿ! ನಮ್ಮ ಪುಟ್ಟ ಬೀಗ. ತುಂಬು ಜರದ ಟೊಪ್ಪಿಗೆಯ ದೊಡ್ಡ ಟಿಕಳಿಯ ಮೈದುನ ದೇವರು! ಅಕ್ಕನ ಮೈದುನ ದೇವರು–

'ಭಾವೂಜಿ?...'

ಬಿಂದನ ದೃಷ್ಟಿಯಲ್ಲಿ–

(ಬಿಂದಣ್ಣನ ದಿನಚರಿಯಿಂದ)

ಬಿಂದಣ್ಣ –

'ಹೌದು. ನನಗಿನ್ನೂ ನೆನಪಿದೆ ಆ ಎದುರುಗೊಳ್ಳುವ ರಾತ್ರಿ! ಬೇಲೀಫನ ಹೆಗಲ ಮೇಲೆ ನಿದ್ರಿಸುತ್ತಿದ್ದ ಆ ಮುಖದ ಮೇಲೆ ಏನೋ ಒಂದು ಕಳೆ. ಅದು ಎಲ್ಲಿತ್ತೋ ಕಂಡುಹಿಡಿಯುವದು ಕಷ್ಟ. ಥಳಕ್ಕನೆ ಹೊಳೆಯುವ ಕಿವಿಗಳ ಆ ಲೋಲಕಿನಲ್ಲೋ, ಮೂಗಿನ ಬುಲಾಕಿನಲ್ಲೋ, ಮುಖಗಿನ ಹೂವಳಿಗಳನ್ನು ಉಬ್ಬಿಸಿ ನಗುವಾಗ ಎದ್ದು ಕಾಣುವ ಮೂಗಿನ ತುಂಬಿಯಲ್ಲೋ, ಹೇಳುವುದು ಕಷ್ಟ.'

ವತ್ಸಲೆಯ ಅಣ್ಣ ಜಯಣ್ಣ ತಂಗಿಗೆ ಸೈಕಲ್ ಕಲಿಸಹೋಗಿ ಹಲ್ಲು ಮುರಿಯುವಂತೆ ಕೆಡವಿದ್ದನಂತೆ. ಆ ಮುರುಕ ಹಲ್ಲು ಒಂದು ಶೋಭೆಯನ್ನೇ ತಂದಿತ್ತು. ಜಯಣ್ಣನ ಜೊತೆಗೆ ಮದುವೆಯ ಮೂರು ದಿನ ಧಾರವಾಡದ ಕೆಂಪು ನೆಲ ತುಳಿದದ್ದೇ ತುಳಿದದ್ದು. ಆತ ವತ್ಸಲೆಯ ಮಾತು ಹೇಳುತ್ತಿದ್ದಾಗಲೆಲ್ಲ ನನ್ನ ಕಿವಿ ನೆಟ್ಟಗಾಗುತ್ತಿದ್ದವು. ಮಾತು ಹೊರಳಿಸಿ ಮತ್ತೆ ಮತ್ತೆ ಅವನ ಬಾಯಿಂದ ವತ್ಸಲೆಯ ಸುದ್ದಿಯನ್ನೇ ತಿಳಿದುಕೊಳ್ಳುತ್ತಿದ್ದೆ.

ಜಯಣ್ಣ ಸೈಕಲ್ ಕಲಿಸಿದಾಗ ಅವರ ಕಾಕಾ ಏನೂ ಬೈಯಲಿಲ್ಲವಂತೆ. ಜಯಣ್ಣನ ಕಾಕಾ ಇಷ್ಟು ಮೃದುವಾಗಿರುವದನ್ನು ನೋಡಿದಾಗ– ಇಂತಹ ಕಾಕಾ ನನಗೂ ಇದ್ದಿದ್ದರೆ! ಎನಿಸುತ್ತಿತ್ತು. ಇದ್ದ ಕಾಕಾನನ್ನು ಇಟ್ಟುಕೊಳ್ಳುವ ದೈವ ನಮ್ಮದಾಗಿರಲಿಲ್ಲ. ಜಯಣ್ಣನಿಗೆ ಕಕ್ಕಂದಿರು, ಅಬಚಿಂದಿರು, ಅಜ್ಜ, ಸೋದರ ಮಾವ; ಬಳಗವೇ ಬಳಗ. ಮನೆಯಲ್ಲಿ ತುಕಾರಿ, ಫೋನೋಗ್ರಾಫ B. S. A. ಸೈಕಲ್ಲು, ಕಚೇರಿಯ ಶಿಪಾಯಿಯರು! ನನಗೆ ಏನೂ ಇರಲಿಲ್ಲ. ಜಯಣ್ಣ ಬೇಡಿದ್ದಕ್ಕೆ ಅವರ ಕಾಕಾ ಒಂದಕ್ಕೂ

ಇಲ್ಲನ್ನುತ್ತಿರಲಿಲ್ಲ. ಜಯಣ್ಣನಿಗೆ ಹನ್ನೆರಡು ವರ್ಷ. ನನಗಿಂತ ಎರಡು ವರ್ಷಕ್ಕೆ ಚಿಕ್ಕವ. ಆದರೂ ಅವನ ಹತ್ತಿರ ಯಾವಾಗಲೂ ರೊಕ್ಕ. ಒಂದು ಮಂಗಳವಾರವೂ ಕಾಯಿಪಲ್ಯೆಗೆಂದು ಪೇಟೆಗೆ ಬಂದಾಗ ಮೂಕ ಮ್ಯಾಟಿನಿ ಸಿನೇಮಾ ತಪ್ಪುತ್ತಿರಲಿಲ್ಲ. ಟಾರ್ಜನ್, ಎಲ್ಮೋ ದಿ ಮೈಟೀ, ಬಗದಾದ್ ಕಾ ಚೋರ್, ಹೆರಾಲ್ಡ್ ಲಾಯ್ಡ್, ಮಾಸ್ಟರ್ ವಿಠ್ಠಲ್ ಎಲ್ಲಾ ಜಯಣ್ಣನಿಗೆ ಪಾರಾಯಣ. ದಿನಾಲೂ ಬೆಳಗ್ಗೆ ಹತ್ತೂವರೆಗೆ ದೇವರ ನೈವೇದ್ಯವಾಗಿ ತಾಟು, ಮಣೆ ಹಾಕುವ ಹೊತ್ತಿಗೆ ಜಯಣ್ಣನಿಗೆ ಶ್ರೀನಿವಾಸಾಚಾರ್ಯ ಅಂಗಡಿಯ ಉಪ್ಪಿಟ್ಟು ಆಗಲೇಬೇಕು. ಒಮ್ಮೆ ಜಯಣ್ಣನ ಅವ್ವ– 'ಮಾಸಲೆ ನೋಡೋಣ ಉಪ್ಪಿಟ್ಟು ತಗೊಂಡು ಬಾ' ಎಂದು ಹೇಳಿದಾಗ ಜಯಣ್ಣ ಬೆಣ್ಣೆಗೋದಿ ಕೊಟ್ಟಿದ್ದ ಎರಡು ರೂಪಾಯಿಯ ಉಪ್ಪಿಟ್ಟು ತಂದು ಬಡಿದಿದ್ದ.

ವತ್ಸಲೆ ನೋಡಿದ ಅಂಚಿನ ಧೋತರದ ಬಿಂದಣ್ಣ–

ವತ್ಸಲೆ–

'ಗಂಡನ ಬೀಗರು ಗದುಗಿಗೆ ಹೋಗಿ ಎಂಟು ಹತ್ತು ದಿನಗಳಾದರೂ ಮನೆಯ ಭಣಭಣ ಮನಸ್ಸಿನ ಹುರುಹುರು ತಪ್ಪಲಿಲ್ಲ. ಮದುವೆಯ ನೆನಪು ತೆಗೆದು ಅಕ್ಕನೊಂದಿಗೆ ನಸುನಕ್ಕು ಸುಖ ಪಡೆಯುತ್ತಿದ್ದೆ. ನಮ್ಮ ನಗೆಯಲ್ಲಿ ಅವ್ವ, ಕಾಕಾ, ಜಯಣ್ಣನೂ ಕೂಡ ಜೋಡಾಗುತ್ತಿದ್ದರು. ಉರುಟಣೆಯ ಕಾಲಕ್ಕೆ ಅಕ್ಕ 'ವಿಡಾ ದೇತೆ' ಎನ್ನುವದರ ಬದಲು 'ವಿಡಾ ಲಾವತೆ,' ಎಂದದ್ದು ನೆನೆಸಿದಾಗೊಮ್ಮೆ ನಗೆ ಹುಟ್ಟಿಸುತ್ತಿತ್ತು.

ಒಂದು ದಿನ ಬೆಳಿಗ್ಗೆ ಇದ್ದಕ್ಕಿದ್ದಂತೆ ಪೋಸ್ಟ್‌ಮನ್ ಒಂದು ಕಾರ್ಡ ಒಗೆದು ಹೋದ. ಮಾಟಾದ ಸುಂದರ ಅಕ್ಷರಗಳು. 'ಪ್ರಿಯ ಜಯಣ್ಣನಿಗೆ' ಎಂದು ಬರೆದಿತ್ತು. ಓಹೋ, ಸಣ್ಣ ಬೀಗರ ಪತ್ರ! ಮೊದಲು ನಾನೇ ಓದಿಕೊಂಡೆ. ಮತ್ತೊಮ್ಮೆ ಓದಿಕೊಂಡೆ. ಮುದ್ದಾದ ಅಕ್ಷರ. 'ಧಾರವಾಡದಲ್ಲಿ ಸ್ಕೌಟ್ ರ್‍ಯಾಲಿ! ಕ್ಯಾಂಪಿನಲ್ಲಿದ್ದರೆ ಖರ್ಚು ಹೆಚ್ಚು. ನಿಮ್ಮಲ್ಲೇ ಇರುತ್ತೇನೆ'–ಎಂದು ಬರೆದಿದ್ದ. ಅಂತೂ ದು. ಭಾ. ಅವ್ವನು ಶೇಷಣ್ಣನಿಗೆ ಹೇಳಿ ಒಪ್ಪಿಸಿದ್ದಳು. ಮತ್ತೆ ಧಾರವಾಡದ ತುಂಬೆಲ್ಲ ತಿರುಗಾಡೋಣ ಎಂದಿದ್ದ. ಎಲ್ಲರಿಗೂ ನಮಸ್ಕಾರ ಹೇಳಿದ್ದ. ಕೊನೆಯ ವಾಕ್ಯದಲ್ಲಿ 'ಚಿ. ವತ್ಸಲಾಗೆ ನನ್ನ ಆಶೀರ್ವಾದಗಳು!' ಈ ಆಶೀರ್ವಾದದಲ್ಲಿ ತನ್ನ ಹದಿನಾಲ್ಕು ವರ್ಷದ ಹೃದಯವನ್ನು ತುಂಬಿ ಕಳಿಸಿದ್ದ.

ಮೈದುನನ ಜಾಣತನದ ಪತ್ರ ಓದಿ ಅಕ್ಕ ಅಟ್ಟಹಾಸದಿಂದ ನಕ್ಕಿದ್ದಳು. 'ನೀನೂ ಇಷ್ಟs ಛಲೋತನಾಗಿ ಒಂದು ಉತ್ತರ ಬರೀ ನೋಡೋಣ' ಎಂದದ್ದಕ್ಕೆ ಜಯಣ್ಣ ಕೆಳಗಿನಂತೆ ಉತ್ತರ ಬರೆದಿದ್ದ.

ಧಾರವಾಡ ಕ್ಷೇಮ.

ಚಿ॥ ಬಿಂದೂಗೆ ಕೃತಾನೇಕಾಶೀರ್ವಾದಗಳು-

ತರುವಾಯ ಈ ಪತ್ರ ಬರೆಯಲಿಕ್ಕೆ ಕಾರಣವೇನೆಂದರೆ ಬಾ ನಮ್ಮಲ್ಲೇ ಇಳಿ. ಯಾಕೆಂದರೆ ಇಲ್ಲಿ ಎಲ್ಲರೂ ಸುರಕ್ಷಿತವಾಗಿದ್ದೇವೆ. ನೀವು ಸುರಕ್ಷಿತವಾಗಿ ಗದಗ ಮುಟ್ಟಿದಿರೇನು ? ಜರೂರ ಜರೂರ ತಿಳಿಸಬೇಕು. ಇನ್ನೇ ತಾರು ಅಂತಾ ತಿಳಕೋಬೇಕು. ಮತ್ತು ತಿ ರಾ. ಶೇಷಣ್ಣ ಅವರಿಗೆ ನನ್ನ ಆರೋಗ್ಯ ಚೆನ್ನಾಗಿದೆ ಅಂತ ತಿಳಿಸು. ಹೆಚ್ಚಿಗೆ ಬರೆಯಲಿಕ್ಕೆ ಈ ಬಡವನು ಸಮರ್ಥನಲ್ಲಾ. ತಿಳಿಯುವದು. ನೀನು ನಮ್ಮಲ್ಲೇ ಇಳಕೋಬೇಕಂತಾ ದು. ಭಾ. ಅವ್ವನೂ ಹೇಳಿದ್ದಾಳೆ.

ನಿನ್ನ ಸಪ್ರೇಮ

ಮ॥ ರಾ॥ ರಾ ಜಯರಾಜ

'ಯೇ ಯುಬ್ಬುಂಕೆ-ಗುಂಡಾ' ಎಂದು ಕೊನೆಯ ವಾಕ್ಯಕ್ಕೆ ಅವ್ವ ಅಬ್ಬರಿಸಿ ಜಯಣ್ಣನ ಸೊಂಟೆ ಹಿಂಡಿದಳು. 'ಸುಡ್ಲಿ ಯಾರಿಗೆ ಏನು ಹಚ್ಚಬೇಕು ಇದರ ಪರ್ಯಾಯಾನs ಗೊತ್ತಿಲ್ಲ. ಹ್ಯಾಂಗ್ ಹುಟ್ಟೇದ ಹಾಂಗ ಬೆಳದsದ ಆತು, ಮುರಾ ಬೆಳದ್ದುಂಡ.' ಪಾಪ ತಾಯಿಗೆ ದು. ಭಾ. ಅನ್ನಬೇಕೇನೋ ಎಂದು ಜಯಣ್ಣನ ಬುದ್ಧಿವಂತಿಕೆ. ಬಿಂದಣ್ಣನಿಗೆ ತಂದೆ ಇರಲಿಲ್ಲ.

ಎಂಬ ಕಲ್ಪನೆಯೂ ಇಲ್ಲ ಜಯಣ್ಣನಿಗೆ; 'ಏನಾತೀಗ ಬೈಲಿಕ್ಕೆ? ಮೊದಲ ಬರೀ ಅಂಜೋದು, ಹಿಂದಾಗಡೆ ಬೈಯೋದು' ಜಯಣ್ಣ ಸಿಟ್ಟಿಗೆದ್ದು ಕಾರ್ಡ ಹರಿಯಲಿಕ್ಕೆ ಹೋಗಿದ್ದ. ಅಕ್ಕ ಸಮಾಧಾನ ಮಾಡಿ ತಿದ್ದಿ ಕೊಟ್ಟಳು.

ಬಿಂದಣ್ಣ ಬಂದ ಮೇಲೆ ಜಯಣ್ಣನಿಗೆ ಉತ್ಸಾಹ ಬಂದಿತ್ತು. ಜಯಣ್ಣ ಅಟ್ಟದ ಮೇಲೆ ಅಲಾರ್ಮ್ ಗಡಿಯಾರ ಇಟ್ಟುಕೊಂಡ. ಜಯಣ್ಣನಿಂದ ವೇಳಾಪತ್ರಿಕೆ ಬರೆಸಿಕೊಂಡು ಮರುದಿನದಿಂದ ಅಭ್ಯಾಸ ಹೇಳಿಸಿಕೊಳ್ಳಲು ಸಂಕಲ್ಪ ಮಾಡಿದ. ಆದರೆ ಈ ಸಂಕಲ್ಪ ಅನುಷ್ಠಾನದಲ್ಲಿ ಮಾತ್ರ ಬರಲಿಲ್ಲ. ಜಯಣ್ಣ ನಸುಕಿನಲ್ಲೇನೊ ಎದ್ದ. ತಾನೇ ಚಹಾ ಮಾಡಿದ. ಬಿಂದಣ್ಣನಿಗೂ ಕೊಟ್ಟು ತಾನೂ ಕುಡಿದು ಆಮೇಲೆ ಶಯನ ಹಾಕಿಬಿಟ್ಟಿದ್ದ. ತಮ್ಮನ ವೇಳಾಪತ್ರಿಕೆ ಮಲಗಿಕೊಂಡುಬಿಟ್ಟಿದ್ದನ್ನು ನೋಡಿ ಅಕ್ಕ ಅವ್ವ ಬಿದ್ದುಬಿದ್ದು ನಕ್ಕರು.

ಸ್ಕೆಟ್ ಪ್ರದರ್ಶನ ನೋಡಲಿಕ್ಕೆ ಬಿಂದಣ್ಣನ ಜೊತೆ ನಾನೂ ಹೋಗಿದ್ದೆ. ಪ್ರದರ್ಶನದಲ್ಲಿ ಬಿಂದಣ್ಣ ತಯಾರಿಸಿದ ಬಣ್ಣದ ಲಾಡಿ ನೋಡಿ ಹೆಮ್ಮೆ ಅನಿಸಿತು. ಪ್ರದರ್ಶನದ ಒಂದು ಕೋಣೆಯಲ್ಲಿ ಎರಡು ದುಂಡನ್ನ ದೊಡ್ಡ ನಿಲುವುಗನ್ನಡಿಗಳಿದ್ದವು. 'ವಚ್ಚಕ್ಕ, ಇಲ್ಲಿ ನೋಡು ಬಾ... ಅವ್ವಯ್ಯಾ!' ಅಷ್ಟು ದೂರದಿಂದ ಬಿಂದಣ್ಣ ಸಲುಗೆಯಿಂದ ಕೂಗಿದ್ದ. ಇಂಥ ಸಾರ್ವಜನಿಕ ಸ್ಥಳದಲ್ಲಿ ಸಂಕೋಚ ತಾನೇ ಬಿಟ್ಟುಹೋಗುತ್ತದೆ. ಕನ್ನಡಿ ಎದುರಿಗೆ ಜಯಣ್ಣ ನಿಂತ. ಕನ್ನಡಿಯು ತುಂಬೆಲ್ಲ ಡುಬರಿಯಂತೆ ಜಯಣ್ಣನ ಹೊಟ್ಟೆಯೊಂದೇ ಕಂಡಾಗ ನನಗೆ ನಗೆ ತಡೆಯಲಾಗಲಿಲ್ಲ. 'ಇಲ್ಲಿ ನೋಡು ಬಾ' ಎಂದು ಜಯಣ್ಣ ಇನ್ನೊಂದು ಕನ್ನಡಿಯ ಮಗ್ಗುಲಿಗೆ ನನ್ನನ್ನು ಕರೆದ. ಆ ಅವಸರದಲ್ಲಿ ಬಿಂದಣ್ಣನ ಮೈ ತಾಗಿತು! ಮೈಯಲ್ಲಿ ಮಿಂಚು ಹೊಡೆದಂತಾಯಿತು. 'ಈ ಕನ್ನಡಿಗೆ Convex ಮತ್ತು Concave ಅಂತಾರ,' ಬಿಂದಣ್ಣ ತಿಳಿಸಿ ಹೇಳಿದ. ನನಗೆ ಅರ್ಥವಾಗಲಿಲ್ಲ. ಪ್ರದರ್ಶನದಿಂದ ಕರ್ನಾಟಕ ಕಾಲೇಜು ನೋಡಲಿಕ್ಕೆ ಹೋದೆವು. ಆ ಭವ್ಯ ಕಟ್ಟಡ ನೋಡಿ ನನಗೆ ಒಂದು ತರಹಾ ಅನಿಸಿತ್ತು. ಕಾಲೇಜ ಗಡಿಯಾರದಲ್ಲಿ ಹನ್ನೆರಡಕ್ಕೆ ೩ ಮಿನಿಟು ಉಳಿದಿತ್ತು. ಹೊತ್ತಾಯಿತೆಂದು ಗಡಿಬಡಿಸಿಕೊಂಡೆದ್ದೆವು. ಕಾಲೇಜ ಗೇಟ ದಾಟಿ ದೊಡ್ಡ ರಸ್ತೆಯ ಗುಂಟ ಹೊರಟೆವು. ಹೀಗೆ ಹತ್ತು ಹೆಜ್ಜೆ ಹೋಗಿದ್ದೆ. ಧಡಲ್ ಎಂದು ಸಪ್ಪಳ ಕೇಳಿ ಬಂತು. ಬಿಂದಣ್ಣ ಗಾಬರಿಗೊಂಡು ಪುಟಿದು ಬಿದ್ದ. ಎಲ್ಲಿ ನೆಲಕ್ಕೆ ಬೀಳುವನೊ ಎಂದು ಅಡಬರಿಸಿ ಅವನ ಕೈ ಹಿಡಿದೆ. 'ಹನ್ನೆರಡು ಗಂಟೆಕ್ಕ ಇಲ್ಲಿ ತೋಪು ಹಾರಿಸ್ತಾರ' ಎಂದು ಹೇಳಿದೆ. ಮರುಮಾತಿನಲ್ಲಿ ಬಿಂದಣ್ಣನ ಕೈ ಹಿಡಿದಿದ್ದಕ್ಕೆ ಆ ಮೇಲೆ ನಾಚುಗೆಯೆನಿಸಿತು.

'ಬಿಂದಣ್ಣನ ನಾಲ್ಕೈದು ದಿನಗಳ ವಾಸ್ತವ್ಯ ಅಕ್ಕನ ಮದುವೆ ಕಾಲದ ಭೆಟ್ಟಿಗಿಂತಲೂ ಹೆಚ್ಚು ಸಮೀಪವೆನಿಸಿತ್ತು. ಮದುವೆಯ ಕಾಲದ ಅಣ್ಣನ ಅಂಚಿನ ಧೋತರ ಉಟ್ಟ ಬಿಂದಣ್ಣ ಫ್ಯಾಶಿನೇಬಲ್ ಕಾಣದಿದ್ದರೂ ಡೌಲಾಗಿ ಕಾಣುತ್ತಿದ್ದ. ನನ್ನ ಕಣ್ಣು ಮುಂದೆ ಧೋತರದ ಅಂಚನ್ನು ಮಾತ್ರ ಮತ್ತೆ ತೀಡುತ್ತಿದ್ದ. ನಮ್ಮ ಮನೆಯಲ್ಲಿ ಎರಡು ಜೋಡು ಅಂಚಿನ ಧೋತರ ಖಾಲಿ ಬಿದ್ದಿದ್ದವು. ಜಯಣ್ಣನಿಗೆ ಧೋತರ ಉಡುವುದೆಂದರೆ ಬೇಸರ. ಯಾವಾಗಲೂ ಪೈಜಾಮಾನೆ ಸಿಕ್ಕಿಹಾಕಿಕೊಳ್ಳುತ್ತಿದ್ದ. ಬಿಂದಣ್ಣ ಊರಿಗೆ ಹೋಗುವ ದಿನ ನನಗೆ ಬಹಳ ಕೆಡುಕೆನಿಸಿತು. ಹೋಗಿಬರುತ್ತೇನೆಂದು ಕೋಟು ಹಾಕಿಕೊಂಡು ಬಿಂದಣ್ಣ ಅವ್ವನಿಗೆ ನಮಸ್ಕಾರ ಮಾಡಿದ. ತಮ್ಮ ವೈನಿಗೂ ನಮಸ್ಕಾರ ಮಾಡ ಹೋದ. ಆದರೆ ನಮಸ್ಕಾರ ಮಾಡುವ ಹಾಗಿರಲಿಲ್ಲ. (ಅಕ್ಕ ೩ ದಿನ ಹೊಲೆಯು ಮೇಲಿದ್ದುದನ್ನು ತಿಂಗಳೊಪ್ಪತ್ತು ರಹಸ್ಯವಾಗಿಡಬೇಕಾಗಿತ್ತು.) 'ಹೋಗಿ ಬರ್ತೇನಿ,' ನನಗೂ ಹೇಳಿದ. ಎರಡೂ ಕೈಯೊಳಗೆ ಎರಡು ಅತ್ತ ಕೈಚೀಲ ಹಿಡಿದುಕೊಂಡು ತ[illegible]

ದಾಟುವಾಗ ನಾನಾದರೂ ಒಂದು ಚೀಲ ಹಿಡಿದುಕೊಳ್ಳಲೇ ಎನಿಸಿತು. ಅಷ್ಟರಲ್ಲಿ ಅಕ್ಕ ಜಯಣ್ಣನಿಗೆ ಒಂದು ಚೀಲ ಇಸಿದುಕೊಳ್ಳಲು ಹೇಳಿದ್ದನ್ನು ಕೇಳಿ ಸಮಾಧಾನವಾಯಿತು.'

ಪರದೇಶಿಯಾದ

ಬಿಂದಣ್ಣ —

'ಧಾರವಾಡದ ನೆನಪಿನ ದಾರಿಯ ಬುತ್ತಿಯನ್ನು ಮೆಲುಕಾಡಿಸುವದು ಇನ್ನೂ ಮುಗಿದಿರಲಿಲ್ಲ. ನನಗೆ ಒಂದು ವಾರ ಧಾರವಾಡದಲ್ಲಿ ಮೈ ಉಂಡಿತು. ಮೂರು ನಾಲ್ಕು ದಿನ ಬೀಗರ ಮನೆಯಲ್ಲಿ ನನಗೆ ವತ್ಸಲಾ ಸ್ನಾನಕ್ಕೆ ನೀರು ತೋಡಿಕೊಟ್ಟು ಧೋತರ ನಿರಿಗೆ ಹಾಕಿ ಇಡುತ್ತಿದ್ದಳು. ಬೀಗರ ಮನೆಯಲ್ಲಿ ಒಂದೊಂದು ಸಾಮಾನೂ ನನಗೆ ಮೋಹಕವೆನಿಸಿತ್ತು. ಆ ವ್ಯಾಸಲಿನ್ ಬಾಟ್ಲಿ, ಆ ಬ್ರಾಹ್ಮಿ ತೈಲ, ಆ ಮಂಕಿ ಛಾಪಿನ ಹಲ್ಲುಪುಡಿ ! ಒಂದೊಂದೂ ಸೊಗಸೆ. ಅವರ ಮನೆಯೊಳಗಿನ ಮಲಾಮು ಡಬ್ಬಿ ಸುದ್ಧ ಸುವಾಸಿತವಾಗಿತ್ತು. ಅದರ ತಲೆಯ ಮೇಲೆ 'ರಘಾಂಬರ್' ಎಂದು ಬರೆದಿತ್ತು. ಜಯಣ್ಣನಿಗೆ ಎಷ್ಟು ಕೋಟು ಎಷ್ಟು ಶರಟು ! ಆದರೆ ಎಲ್ಲದರ ಬಗ್ಗೆಯೂ ತಾತ್ಸಾರ ಭಾವ ಜಯಣ್ಣನಿಗೆ. ಮನೆಯಲ್ಲಿ ರಾತ್ರಿ ಹೊತ್ತು ಸಹ ಬಿಸಿ ಸಾರು, ಬಿಸಿ ಪಲ್ಯ ಆಗುತ್ತಿತ್ತು. ಬೀಗರ ಮನೆಯಲ್ಲಿ ಚಾದರ್, ಟಾವೆಲ್ ಮೊದಲು ಮಾಡಿ ಎಲ್ಲಾ ಗಂಜಿಗೆ ಕೊಡುತ್ತಿದ್ದರು. ನಾನು ನನ್ನ ಶರಟು ಮನೆಯಲ್ಲೇ ಒಗೆದು ತಂಬಿಗೆಯೊಳಗೆ ಕೆಂಡ ಹಾಕಿ ಇಸ್ತ್ರಿ ಮಾಡಿಕೊಳ್ಳುತ್ತಿದ್ದೆ.'

'ಧಾರವಾಡಕ್ಕೆ ಹೋಗುವಾಗಿನ ಹುರುಪು ಗದಿಗ್ಗೆ ಬರುವಾಗ ಇರಲಿಲ್ಲ. ಒಂದೊಂದು ಧಾರವಾಡದ ನೆನಪು ಲೈನ್ ಬಾಜಾರದ ಒಂದೊಂದು ಫೇಡೆ ಇದ್ದಂತೆ.

ಊರು ಮುಟ್ಟಬೇಕಾದರೆ ರಾತ್ರಿಯಾಗಿತ್ತು. ಬಾಗಿಲು ಬಡಿದೆ. ಅವ್ವನನ್ನು ಕೂಗಿದೆ. ಸುಂದ್ರಕ್ಕ ಬಾಗಿಲು ತೆರೆದಳು. 'ಐ ನೀ ಯಾವಾಗ ಬಂದಿ ?' ಎಂದು ಹುರುಪಿನಿಂದ ಕೇಳಿದ್ದಕ್ಕೆ ಸುಂದ್ರಕ್ಕ ಸುಮ್ಮನಿದ್ದಳು. ಶೇಷಣ್ಣ ಸ್ಟೋವ್ ಹೊತ್ತಿಸಿ ನೀರು ಕಾಯಿಸುತ್ತಿದ್ದ. ಅಕ್ಕ ಗೋದಕ್ಕ ಹುಬ್ಬಳ್ಳಿಯಿಂದ ಬಂದಿದ್ದಳು. ಎಲ್ಲರ ಮುಖಗಳು ಗಂಭೀರವಾಗಿದ್ದವು. ಅವ್ವ ಕೋಣೆಯೊಳಗೆ ಮಲಗಿದ್ದಳು 'ಅವ್ವ ಯಾಕ ಮಲಗಿಕೊಂಡಾಳ ?' ಗೋದಕ್ಕನನ್ನು ಕೇಳಿದೆ. 'ಜ್ವರಾ ಬರ್ತಾವ' ಗೋದಕ್ಕ ಹೆಚ್ಚೇನೂ ಹೇಳಲಿಲ್ಲ. 'ಜ್ವರಾ ಭಾಳ ಅವ ಏನು ಸುಂದ್ರಕ್ಕಾ ?' ಇದಕ್ಕೆ ಸುಂದ್ರಕ್ಕ, 'ಹೂನಪಾ, ಜ್ವರಾ, ಕೆಮ್ಮು, ದಮ್ಮು ಎಲ್ಲಾ ಕೂಡ್ಯಾವ.' ಸುಂದ್ರಕ್ಕನ ಈ ದೀರ್ಘ ಉತ್ತರಕಿಂತ ಗೋದಕ್ಕನ ಸಂಕ್ಷಿಪ್ತ ಉತ್ತರವೇ ನೆಟ್ಟಗಿತ್ತೇನೊ. ಧಾರವಾಡದ ಹುರುಪೆಲ್ಲಾ ಕುಸಿಬಿದ್ದುಹೋಯಿತು. 'ಊಟಾ ಮಾಡೇಳು,' ಎಂದಳು ಗೋದಕ್ಕ. ಕೈಕಾಲು ತೊಳೆದುಕೊಂಡೆ. 'ಡಬ್ಬ್ಯಾಗ ಚಪಾತಿ ಅವ' ಎಂದು ಹೇಳಿದೆ. 'ಇರಲಿ, ಈಗಂತೂ ಊಟಾ ಮಾಡು' ಗೋದಕ್ಕ ಊಟಕ್ಕೆ ಬಡಿಸಿ ಅವ್ವನಿಗೆ ಔಷಧ ಕೊಡಲಿಕ್ಕೆಂದು ಗಡಬಡಿಸಿ ಹೋದಳು. 'ಮೊದಲ ಎದಿಗೆ ಬೆನ್ನಿಗೆ ಸ್ವಲ್ಪ ನೀಲಗಿರಿ ಎಣ್ಣೆ ಹಚ್ಚಬಿಡು' ಎಂದು ಶೇಷಣ್ಣ ಹೇಳಿದ. ನೀಲಗಿರಿ ಎಣ್ಣೆಯ ವಾಸನೆ ಧಾರವಾಡದ ಮಂಕಿ ಛಾಪ ಹಲ್ಲು ಪುಡಿಯನ್ನು ನೆನಪಿಗೆ ತಂತು. ಅಲ್ಲಿಟ್ಟಿದ್ದ ಅಮೃತಾಂಜನ ಧಾರವಾಡದ ರಘಾಂಬರ್‌ನನ್ನು ನೆನಪಿಗೆ ತಂದಿತು.

'ದಿನಾಲೂ ಡಾಕ್ಟರರು ಬಂದು ಹೋಗುತ್ತಿದ್ದರು. ಅವ್ವನಿಗೆ ಹವಾ ಬದಲಾಯಿಸಿದರೆ ನೆಟ್ಟಗೆ ಎಂದು ಹೇಳಿದರು. ಊರ ಹೊರಗಿನ ಸಾಹುಕಾರ ತೋಟದ ಬಂಗಲೆಗೆ ಅವ್ವನನ್ನು ಕರೆದೊಯ್ದೆವು. ನಮ್ಮ ಭಾವನಿಗೆ (ಗೋದಕ್ಕನ ಗಂಡ) ಸಾವುಕಾರರ ಪರಿಚಯ ಸಾಕಷ್ಟಿತ್ತು. ರಾತ್ರಿಯೆಲ್ಲ ಸುಂದ್ರಕ್ಕ ಒಬ್ಬಳೆ ಅವ್ವನ ಮಗ್ಗುಲಿಗೆ ಇರುತ್ತಿದ್ದಳು. ನಾನೂ ಅಲ್ಲಿಯೇ ಓದಲಿಕ್ಕೆ ಮಲಗಲಿಕ್ಕೆ ಹೋಗುತ್ತಿದ್ದೆ.'

'ಅಂದು ನಡುರಾತ್ರಿ ದಾಟಿತ್ತು. ಸುಂದ್ರಕ್ಕ, ಅವ್ವ ಇಬ್ಬರೇ ಮಾತಾಡುತ್ತಿ

ದ್ದರು ನನಗೂ ನಿದ್ರೆ ಬರಲಿಲ್ಲ. 'ಸೊಸಾ ಸೊಸಿ ಕಾಲ್ಗುಣ...' ಎಂದು ಅವ್ವ ಏನೋ ಹೇಳುತ್ತಿದ್ದಳು. 'ಏನಾರ ಹೆಸರಿಟ್ಟಾರ ನನ್ನ ಬ್ಯಾಗಿಗೆ...ಗೋದವ್ವ ಕೆಲ ದಿನ ಇಲ್ಲೇ ಇರ್ಲಿ. ಹುಡುಗರು ಇನ್ನೂ ಸಣ್ಣವು. ಶೇಷಣ್ಣದ ಇನ್ನೂ ಯಾವುದೂ ತಲೆಗೆ ಬಡದಿಲ್ಲ...ಬೆಳಗು ಕಾಣ್ತೇನೊ ಇಲ್ಲವಾ...' ನಾನು ಜಡಿದು ಮುಸುಕು ಹಾಕಿಕೊಂಡೆ, ಗಟ್ಟಿಯಾಗಿ ಕಣ್ಣು ಮುಚ್ಚಿಬಿಟ್ಟೆ. 'ಹಾಂಗ ಗಾಬರಿ ಆಗಬಾರದು' ಸುಂದ್ರಕ್ಕನ ಸಮಾಧಾನದ ಮಾತು.'

'ತೋಟದ ಮನೆ ಬಿಟ್ಟು ಮತ್ತೆ ನಮ್ಮ ಮನೆಗೇ ಬಂದೆವು. ಅಂದು ಮುಂಜಾನೆ. ನಮಗೆ morning ಸ್ಕೂಲ್ ಇತ್ತು. ಕೋಟು, ಚೆಣ್ಣ ಹಾಕಿಕೊಳ್ಳುತ್ತಿದ್ದೆ. 'ಅವ್ವಾ ಹೆಂಗೋ ಮಾಡಲಿಕ್ಕೆ ಹತ್ತ್ಯಾಳ,' ಗೋದಕ್ಕ ಚೀರಿಕೊಂಡಳು. 'ಅವ್ವಾss' ಎಂದು ಶೇಷಣ್ಣ ಮನೆ ಹಾರಿ ಬೀಳುವಂತೆ ಒದರಿಕೊಂಡ. ಅವ್ವ 'ಓ' ಎನ್ನುವ ಅವಸ್ಥೆಯಲ್ಲಿ ಇದ್ದಿಲ್ಲ. ಡಾಕ್ಟರರು ಹೇಗೆ ಬಂದಿದ್ದರೋ ಹಾಗೇ ತಿರುಗಿ ಹೋದರು. ತಾಸಿನ ಹಿಂದೆ ಇದ್ದ ಗಡಿಬಿಡಿಯೆಲ್ಲ ಈಗ ಸ್ವಸ್ಥವಾಗಿತ್ತು. ನಾನು ಪಕ್ಕಾ ಪರದೇಶಿಯಾಗಿಹೋಗಿದ್ದೆ.

ಇನ್ನು ವೈನಿಯ ಮನೆಗೆ ಹಿರಿಯರೆ? ಹಿರಿಯ ಅತ್ತಿಗೆ ತಾಯಿಯ ಸಮ! ಯಾರೊ ಅಂದಿದ್ದರು, ಹೌದೇ? ಹೊಸ ವೈನಿ ಹಿರಿಯ ಅತ್ತಿಗೆ ಇನ್ನು ನನಗೆ ತಾಯಿಯಾಗುವಳೇ? ಆದರೆ ಅತ್ತಿಗೆಯ ಕಾಲ್ಗುಣ?...ಅದಕ್ಕೇ ಅವ್ವ ಸೊಸೆಯ ಮುಖ ನೋಡುವ ಆಸೆ ವ್ಯಕ್ತಪಡಿಸಲಿಲ್ಲವೇನೊ?... ಸುಂದ್ರಕ್ಕ ಹೀಗೇ ಅಂತಿದ್ದಳು.

ಮಾತಾಡಿಸಲಿಕ್ಕೆಂದು ಹೋಗಿದ್ದೆವು.

ಮತ್ತಲೆ...

'ತಾರು ಬಂದಿತ್ತು. ಅಕ್ಕ ಶಾಂತಾನ ಅತ್ತೆ ಶೀರಿಕೊಂಡಿದ್ದರು! 'ಸೊಸಿ ಕಾಲ್ಗುಣ ಅಂತ ಆಡಿಕೊಳ್ಳೋ ಹಂಗ ಆತವಾ, ನಾ ಹ್ಯಾಂಗ ಮಾಡಲೆss?' ಅಕ್ಕ ದನಿ ಗದ್ಗದಿ-

ಅಳಹತ್ತಿದ್ದಳು.'

'ತ್ರಿಕೂಟೇಶ್ವರ ಗುಡಿಯ ಹತ್ತಿರ ನಮ್ಮ ಟಾಂಗಾ ನಿಂತವು. ಮುಹಾರಾಯನಾತಪ ಗುಡಿ. ಎಡಬಲದ ಮನೆಗಳಿಂದ ಜನ ನಮ್ಮನ್ನೇ ನೋಡುತ್ತಿದ್ದರು. ಅಕ್ಕನ ಕಡೆಗೆ ಬೊಟ್ಟು ಮಾಡಿ ತೋರಿಸುತ್ತಿದ್ದರು... 'ಸೊಸಿ ಕಾಲ್ಗುಣ ಅಂತ ಆಡಿಕೊಳ್ಳೋ ಹಂಗ ಆತು, ನಾ ಹ್ಯಾಂಗ ಮಾಡಲೇ?'... ಅಕ್ಕ ದನಿ ತೆರೆದು ಅತ್ತದ್ದು ನೆನಪಿಗೆ ಬಂತು. ಅವ್ವ ಸುಂದ್ರಕ್ಕನೊಡನೆ ಮಾತಾಡುತ್ತ ಕುಳಿತರು. ಕಾಕಾ 'ಬಿಂದಣ್ಣನ' ಭಾವ (ಗೋದಕ್ಕನ ಗಂಡ) ಶ್ರೀನಿವಾಸರಾಯರೊಡನೆ ಮಾತಾಡುತ್ತ ಕುಳಿತ. ಕಮಲಕ್ಕನ ಮಾತೇ ಮಾತು. ಕಮಲಕ್ಕ ಯಜಮಾನರು ಹೋದ ಮೇಲೆ ಹೊಟ್ಟೆಬೇನೆಯನ್ನೇ ಹಚ್ಚಿಕೊಂಡಿದ್ದರು. ಹುಡುಗರ ಸಲುವಾಗಿ ಜೀವ ಹಿಡಿದಿದ್ದರು...ಸುಂದ್ರಕ್ಕ ಹೇಳಿದಳು.'

'ಮೊದಲನೇ ದಿನ ಗಂಭೀರವಾಗಿದ್ದ ಎಲ್ಲ ಮುಖಗಳು ಎರಡನೇ ದಿನ ಸ್ವಲ್ಪ ಹಗುರಾಗಿ ಕಂಡುಬಂದವು. ನಾನೇ ಚಹಾ ಮಾಡಿದೆ. 'ಸಕ್ಕರೆ ಡಬ್ಬಿ ಎಲ್ಲಾ ಖಾಲಿ ಮಾಡಿಬಿಟ್ಟೇನು?' ಎಂದು ಕಾಕಾ ಚಹಾ ಸಿಹಿಯಾದದ್ದಕ್ಕೆ ಚಾಷ್ಟಿ ಮಾಡಿದ ಗೋದಕ್ಕ ನಕ್ಕಳು. 'ಆಕೀ ಮಾತು ಹೆಂಗೋ ಚಹಾನೂ ಹಂಗss.' ಎಂದು ಸುಂದ್ರಕ್ಕ ಚೇಷ್ಟೆಗೆ ಒಂದು ಚಮಚಾ ಸಕ್ರೀ ಹಾಕಿದಳು.'

'ಮಧ್ಯಾಹ್ನ ಬಿಂದಣ್ಣ ಅವನ ಪತಾರದ ಗೆಳೆಯ ಆಬಾ ಅವರ ಜೊತೆ ವೀರನಾರಾಯಣ ಗುಡಿ ತ್ರಿಕೂಟೇಶ್ವರ ಗುಡಿ ಸುತ್ತಾಡಿಕೊಂಡು ಬಂದೆ. ಬಿಂದಣ್ಣ ಜಕಣಾಚಾರ್ಯರ ಮತ್ತು ಕುಮಾರವ್ಯಾಸನ ಕಥೆಗಳನ್ನೆಲ್ಲ ಹೇಳಿದ. ಅವನ ಬುದ್ಧಿವಂತಿಕೆಗೆ ನಾನು ಕೌತುಕಪಟ್ಟೆ. 'ನಮ್ಮ ಬಿಂದಣ್ಣ ಪ್ರತಿ ವರ್ಷ ಪ್ಯಾಲಾ ನಂಬರ ನೋಡ್ರಿ ಮಾಸ್ತರನವರ' ಎಂದು ಆಬಾ ಬಿಂದಣ್ಣನ ವರ್ಣನೆ ಮಾಡಿದಾಗ ನಾನು ಮುಗುಳ್ನಗೆ ನಕ್ಕೆ. ನಾನು ನಕ್ಕದ್ದನ್ನು ಬಿಂದಣ್ಣ ಸೂಕ್ಷ್ಮವಾಗಿ ನೋಡಿದ.

ದಿನಕರ್ಮ ಎಲ್ಲ ಮುಗಿಸಿಕೊಂಡು ನಾವು

ಮತ್ತೆ ಧಾರವಾಡ ಗಾಡಿ ಹತ್ತಿದೆವು. ಗಾಡಿ ಬರುತ್ತಲೇ 'ಹೋಗಿ ಬರ್ರಿ ನನ್ನ ಕಡೆ ಪ್ಲಾಟ್ ಫಾರ್ಮ್ ಟಿಕೆಟ್ ಇಲ್ಲಾ' ಎಂದು ಬಿಂದಣ್ಣ ಕಬ್ಬಿಣದ ಸಲಾಕೆಯ ಆಚೆಗೆ ಆತುಗೊಂಡು ನಿಂತ. ಗಾಡಿ ಬಿಡುವವರೆಗೂ ನಮ್ಮನ್ನೇ ನೆಟ್ಟಗಣ್ಣಿನಿಂದ ನೋಡುತ್ತಿದ್ದ. ಅವನ ತಲೆಯಲ್ಲಿ ಏನೋ ಒಂದು ಕೋಲಾಹಲ ನಡೆದಿರಬೇಕು. ನಮ್ಮ ಗಾಡಿ ಮುಂದವಾಗಿ ಚಲಿಸತೊಡಗಿದಾಗ ನಮ್ಮನ್ನೇ ನೆಟ್ಟಗಣ್ಣಿನಿಂದ ನೋಡುತ್ತಿದ್ದ ಆ ಮುಗ್ಧ ಮೂರ್ತಿ ಸೆರೆ ಹಿಡಿದಿಟ್ಟಂತಿತ್ತು...'

ಅತ್ತಿಗೆಯಲ್ಲಿ ಅವ್ವನನ್ನು ಕಂಡ ಬಿಂದಣ್ಣ-

'ಮುತ್ತೈದೆ ಇದ್ದಾಗಿನ ಅವ್ವ (ನಮ್ಮ) ಅಪ್ಪನ ಜೊತೆಗೆ ಎನ್‌ಲಾರ್ಜ್ ಫೋಟೋ ಆಗಿ ಗೋಡೆಗೆ ಕೂತಿದ್ದಳು. ನಿತ್ಯವೂ ಹೊಸ್ತಿಲು ದಾಟುವಾಗೊಮ್ಮೆ ನಾನು ಸಣ್ಣವನಿದ್ದಾಗ ತಲೆಗೆ ಎಣ್ಣೆ ತಟ್ಟುವಾಗ ಹರಸುತ್ತಿದ್ದಂತೆ 'ಉದ್ದಂಡಾಯುಷ್ಯವಂತನಾಗಪ್ಪಾ' ಎಂದು ಆಶೀರ್ವಾದ ಮಾಡುತ್ತಿದ್ದಳು.

'ಓಣಿಯೊಳಗೆ ಬಾವಿಯ ಕಟ್ಟೆಯ ಮೇಲೆ, ತ್ರಿಕುಟೇಶ್ವರ ಗುಡಿಯ ಕಟ್ಟೆಯ ಮೇಲೆ, ಮನೆ ಮನೆಯ ಕಟ್ಟೆಯ ಮೇಲ ಒಂದೇ ಮಾತು: 'ಎಂಥಾ ಸೊಸಿ ಕಾಲ್ಗುಣಾನೋ ಏನೋ.' ವೈನಿ ಜೊತೆಗೆ ಬಂದಿದ್ದ ವತ್ಸಲೆಯೊಂದಿಗೆ ಮಾತನಾಡಬೇಕೆನಿಸುತ್ತಿತ್ತು. ಆದರೆ ಮನೆಯಲ್ಲಿ ಕಾಲುಹಾಕಿ ಅವ್ವನನ್ನು ಕಳಿಸಿದ ವೈನಿಯ ಜೊತೆ ಮುಖ ತಿರುಗಿಸುವ ಹಾಗೆ ಆಗಿ ಬಿಡುತ್ತಿತ್ತು. ಆಗಾಗ ಖರ್ಚಿಗೆಂದು ಚಿಲ್ಲರೆ ಕೊಡುವದು, ತಿಂಡಿ ತಿನಿಸು ಮಾಡಿ ಹಾಕುವದು, ಸಿನೇಮಾಕ್ಕೆ ಹೋಗಿ ಬರ್ರಿ ಎಂದು ಎರಡಾಣೆ ಕೊಡುವದು ಈ ರೀತಿ ವೈನಿ ನನ್ನನ್ನು ಒಲಿಸಿಕೊಳ್ಳಲು ಯತ್ನಿಸುವರು. ನಾನು ಯಾವುದನ್ನೂ ನಿರಾಕರಿಸಿದಾಗ ಸುಮ್ಮನಾಗಿ ಬಿಡುತ್ತಿದ್ದರು. ವೈನಿಯವರ ಮುಖದ ಮೇಲೆ ಯಾವಾಗಲೂ ಒಂದು ಬಗೆಯ ಅಪರಾಧ ಮುಂದೆ, ಕಂಡುಬರುತ್ತಿತ್ತು. ವೈನಿಯವರದೇನು ತಪ್ಪು? ಹೌದು, ಕಾಲ್ಗುಣ ಕೆಟ್ಟದ್ದು ಅಂದ ಮೇಲೆ ತಪ್ಪಲ್ಲದೆ ಇನ್ನೇನು?

'ಅಂದು ಸಂಜೆ ಮನೆಗೆ ಬಂದಾಗ ಮೈ ಕಣಿ ಕಣಿಯಂದು ಮಲಗಿಬಿಟ್ಟೆ. ಅಂದು ಸಂಜೆ ಫುಟ್‌ಬಾಲ್ ಆಟಕ್ಕೆ ಹೋಗಿರಲಿಲ್ಲ. ರೇಲ್ವೆ ಹಳಿಯಗುಂಟ ಹೊಂಬಳದ ಹಾದಿಯ ಹೊಲದಲ್ಲಿ ಬೆಳೆದ ಕಡ್ಲೇಗಿಡ ತಿನ್ನುವದಕ್ಕೆ ಹೋಗಿದ್ದೆವು. ಹಾದಿಯಲ್ಲಿ ಸ್ಮಶಾನ. ಧಗ ಧಗ ಉರಿ! 'ಯಾರದೋ ಹೆಣ ಉರೀತದ ನೋಡು' ನನ್ನ ಗೆಳೆಯ ನಿರ್ವಿಕಾರವಾಗಿ ನುಡಿದ ಮಾತು ನನಗೆ ಗಾಬರಿ ಹುಟ್ಟಿಸಿತು. ಅಂಥದರಲ್ಲಿಯೇ ಜಡಿದು ಕಡ್ಲೇಗಿಡ ತಿಂದೆವು; ಚಾದಂಗಡಿಯಲ್ಲಿ ನೀರು ಕುಡಿದೆವು. ಮನಸ್ಸು ಏನೇನೋ ವಿಚಾರದ, ಸುಂಟರಗಾಳಿಗೆ ಸಿಕ್ಕ ತರಗೆಲೆಯಂತೆ ಒದ್ದಾಡಿತು. ಅವ್ವ ಸತ್ತಾಗ ನಾನು ಸ್ಮಶಾನಕ್ಕೆ ಹೋಗಿರಲಿಲ್ಲ. 'ಹುಡುಗ ಹೆದರಿಕೊಂಡಾನು' ಎಂದು ಬಿಟ್ಟು ಹೋಗಿದ್ದರು. ನನಗೆ ಒಂದೇ ವಿಚಾರ. ಅವ್ವ ಇಂಥ ಉರಿ ಹೇಗೆ ತಡಕೊಂಡಿದ್ದಾಳು?...ಅವ್ವ ಸತ್ತಾಗ ನಾನು ಅವಳ ಕಾಲಿನ ಬೆರಳು ಚಿವುಟಿ ನೋಡಿದ್ದೆ. ಅವ್ವ ಮಿಸುಗಾಡಲಿಲ್ಲ...ನಾನು ನಿದ್ದೆಯಲ್ಲಿ ಚಿಟ್ಟನೆ ಚೀರಿರಬೇಕು; ವೈನಿ ಸಮಾಧಾನ ಮಾಡಿ ಮಲಗಿಸಿದಳು, ಹಣೆ ಹಿಡಿದು ನೋಡಿದಳು. 'ಜ್ವರಾ ಭಾಳ ಅದ' ಎಂದು ಶೇಷಣ್ಣನಿಗೆ ಹೇಳಿದಳು. ಮೂರು ದಿನವಾದರೂ ಜ್ವರ ಇಳಿದಿರಲಿಲ್ಲವಂತೆ. ಶೇಷಣ್ಣ ಬಹಳ ಗಾಬರಿಯಾಗಿದ್ದನಂತೆ. ವೈನಿ ನನ್ನ ತಲೆಯ ದೆಸೆಯಲ್ಲಿ ತಣ್ಣೀರಿನ ಪಟ್ಟಿ ಹಾಕುತ್ತ ಕುಳಿತವರು ಕದಲಿರಲಿಲ್ಲವಂತೆ ಡಾಕ್ಟರರೂ ಗಾಬರಿಯಾಗಿದ್ದರಂತೆ.'

'ನನಗೆ ಎಚ್ಚರ ಬಂದಾಗ ಎಲ್ಲವೂ ಅಸ್ಪಷ್ಟ. ದೊಡ್ಡ ಪಲ್ಲಂಗ, ಗುಂಜೀ ಮುಗ್ಗುಲಾಸಿಗೆ ಎಲ್ಲಿಂದ ಬಂದವು? ನನ್ನ ಜೊತೆಗೆ ಇನ್ನೂ ಎಷ್ಟೋ ಪಲ್ಲಂಗಗಳು; ಎಷ್ಟೋ ರೋಗಿಗಳು. ನಾನು ದವಾಖಾನೆಯಲ್ಲಿದ್ದೆ. ಕ್ರಮೇಣ ಪ್ರಜ್ಞೆ ಬರತೊಡಗಿತು. ಮಂಜು ಮಂಜಿನಂತೆ ಕಾಣುತ್ತಿದ್ದ ಸುತ್ತುಮುತ್ತಲಿನ ಚಿತ್ರ

ಬರಬರುತ್ತ ಸ್ಪಷ್ಟವಾಗತೊಡಗಿತು. ನಾನು ಮಲಗಿದ್ದುದು ಮುನಿಸಿಪಾಲಿಟಿಯ ದವಾಖಾನೆಯಲ್ಲಿ! ಎಚ್ಚರ ಬಂದ ಮೇಲೆ ನನಗೆ ಗಾಬರಿಯಾಯಿತು. ನನ್ನ ಮಗ್ಗುಲಿಗೆ ಅವ್ವ ಇದ್ದಿರಲಿಲ್ಲ. ಕಣ್ಣಿಗೆ ಕಣ್ಣು ಹಚ್ಚದೆ ಕಣ್ಣೀರು ಒರೆಸಿಕೊಳ್ಳಲಿಕ್ಕೂ ಅವಕಾಶ ಸಿಗದೆ ನನಗೆ ತಣ್ಣೀರು ಪಟ್ಟಿ ಹಾಕುತ್ತಿದ್ದವರು– ವೈನಿ! ನಾನು, ಆಕೆ ಅವ್ವನೆಂದೇ ಭ್ರಮಿಸಿದ್ದೆ. ನನಗೆ ಎಚ್ಚರ ಬಂದ ಮೇಲೆ ಡಾಕ್ಟರರು ನಾಡೀ ನೋಡಿದರು. ಮುಗುಳ್ನಗೆ ನಕ್ಕರು. 'ಇನ್ನೇನು ಹೆದರಿಕೆ ಇಲ್ಲ' ಎಂದು ಹೇಳಿದರು.'

'ನನಗೆ ಗುಣವಾಗಲಿಕ್ಕೆ ಎಂಟು ಹತ್ತು ದಿನ ಹಿಡಿದವು. ನಾನು ಕಡ್ಲೀ ಗಿಡ ತಿನ್ನಲಿಕ್ಕೆ ಹೋದ ಸಂಗ್ತಿ ಹೇಳಿದೆ. 'ಮಾರಾಯರ, ಕಡ್ಲೀಗಿಡದ ರಾಶೀನ ತರಿಸಿ ಹಾಕಸ್ತೀನಿ. ಸಿಕ್ಕ ಸಿಕ್ಕಲ್ಲೆ ತಿರುಗಾಡಲಿಕ್ಕೆ ಹೋಗಬ್ಯಾಡ್ರಿ' ಅಂತ ಎಂದು ಹೇಳಿದರು ವೈನಿ.'

'ವೈನಿಯ ಕಾಲ್ಗುಣ ಕೆಟ್ಟೀ? ವೈನಿಯ ಸ್ವಭಾವ ಗುಣ ನಮ್ಮ ಅವ್ವನಿಗಿಂತ ಎಳ್ಳಷ್ಟೂ ಕಡಿಮೆ ಇರಲಿಲ್ಲ. ಒಮ್ಮೆ ಗಟ್ಟಿಮನಸ್ಸು ಮಾಡಿ ವೈನಿಯವರನ್ನು ಕೇಳಿಯೇ ಬಿಟ್ಟೆ! ವೈನಿ ಕಣ್ಣೀರು ತಂದರು. 'ನನ್ನ ಜಾತಕದಾಗ ಅತ್ತಿ ಇಲ್ಲದ ಮನಿ ಇದ್ದರ ನಮ್ಮ ಅಪ್ಪ ಸುಮ್ಮನ ಇರತಿದ್ದನ? ಭಾವೂಜಿ, ನಿಮ್ಮ ಅವ್ವನ್ನ ಕೊಲ್ಲಬೇಕಂತ ನಾ ಬಂದೀವೇ ಇಲ್ಲ?' ವೈನಿ ಬಿಕ್ಕಿ ಬಿಕ್ಕಿ ಅಳಹತ್ತಿದರು. ನಾನು ವೈನಿಯವರನ್ನು ಗಟ್ಟಿಯಾಗಿ ಅಪ್ಪಿಕೊಂಡೆ. 'ವೈನೀ, ಇನ್ನು ಮ್ಯಾಲಿಂದ ಹಂಗ ಅನ್ನಬ್ಯಾಡ್ರಿ' ಎಂದು ಚೀರಿಕೊಂಡೆ.'

ನಾಲ್ಕನೆಯ ಇಯತ್ತೆಯ ಕವಿತೆ ನೆನಪಾಯಿತು.

ತಂದೆ ತೀರಿದ ಬಳಿಕ ಹೀನೆ
ತಂದೆ ತಾಯೆನಗಗ್ರಜಾತೆಯು!...

ತಂದೆ ತಾಯಿ ಇಬ್ಬರೂ ತೀರಿದ ಮೇಲೆ? ಹೃದಯದಲ್ಲಿ ತೆರವಾದ ಅವ್ವನ ಸ್ಥಾನವನ್ನು ಅತ್ತಿಗೆಗೆ ಸಂಪೂರ್ಣವಾಗಿ ಕೊಟ್ಟುಬಿಟ್ಟೆ.

'ವತ್ಸಲೆಯದೊಂದು ಸ್ವಭಾವ. ನಾಲ್ಕು ದಿನ ಸಲುಗೆಯಿಂದಿದ್ದವಳು ಒಮ್ಮೆ ಊರಿಗೆ ಹೋಗಿ ಬಂದಳೆಂದರೆ ಸಲುಗೆಯ ಸಂಬಂಧಕ್ಕೆ ಅಂಕಪರದೆ ಬಿದ್ದಂತಾಗುತ್ತಿತ್ತು.'

'ನಾನು, ಶಿಕ್ಷಣ ಶಾಲೆಗೆ ಹೋಗುತ್ತಲೇ ವೈನಿ, ವತ್ಸಲಾ ಕೂಡಿ ಮನೆ ಸ್ವಚ್ಛ ಮಾಡಬೇಕು. ಹಿತ್ತಾಳೆಯ ಡಬ್ಬಿಗಳನ್ನೆಲ್ಲ ಝಳಝಳ ತಿಕ್ಕಿ ಸಾಲಾಗಿ ಹಚ್ಚಿರಬೇಕು. ಬಾಣಂತಿಯ ಕತ್ತಲೆ ಕೋಣೆಯನ್ನು ಸಹ ಝಗಝಗಿಸುವಂತೆ ಮಾಡಿದ್ದರು. ಗಾಳಿ, ಬೆಳಕು, ಮನೆ ತುಂಬುವಂತೆ ಮುಚ್ಚಿದ್ದ ಬೆಳಕಿಂಡಿಯನ್ನು ತೆರೆದು ಬಿಟ್ಟಿದ್ದರು. 'ಏನ್ರೀ ವೈನಿ, ನಿಮ್ಮನ್ನ ಮನಿ ತುಂಬಿಸಿಕೊಂಡಮ್ಯಾಕ ನಮ್ಮ ಕತ್ತಲಿ ಖೋಲಿ ಸುದ್ಧಾ ಬೆಳಕು ಆತು' ಎಂದು ಹೃತ್ಪೂರ್ವಕವಾಗಿ ಹೊಗಳಿದೆ. ವೈನೀ ಬಂದು ನಿಜವಾಗಿಯೂ ಮನೆ ತುಂಬಿದ್ದರು. ವೈನಿಯ ಜೊತೆಗೆಂದು ವತ್ಸಲೆ ಬಂದು ನಿಜವಾಗಿಯೂ ಮನದುಂಬಿದ್ದಳು.'

'ವತ್ಸಲೆ ಜೊತೆ ನಾಲ್ಕಾರು ದಿನಗಳಲ್ಲಿ ಮತ್ತೆ ಸಲುಗೆ. ಒಮ್ಮೆ ಮಾವಿನ ಹಳ್ಳಕ್ಕೆ ಬುತ್ತೀ ಕಟ್ಟಿಕೊಂಡು ಹೋಗಿದ್ದೆವು. ವತ್ಸಲೆಯ ಮುಂದೆ ಅವ್ವನ ಸಂಗ್ತಿ ಹೇಳುತ್ತ 'ಇನ್ನ ನಮ್ಮ ವೈನೀನೆ ನನಗ ಅವ್ವಾ' ಎಂದು ಹೇಳಿದೆ. 'ನಾ ಹಂಗಾರೆ ಮಾಸಿ ಆದೆನಲ್ಲಾ' ಎಂದು ವತ್ಸಲೆ ನಗಿಸಲೆತ್ನಿಸಿದರೂ ಆಕೆಯ ಕಣ್ಣು ತುದಿಗೆ ಒಂದು ಹನಿ ತೂಗಿದಿತ್ತು. ದಾರಿಯುದ್ದಕ್ಕೂ ನಾನು, ಅಬಾ, ವತ್ಸಲೆ ಹರಟಿದ್ದೇ ಹರಟಿದ್ದು. ಶೀನ್ಯಾನ ಸಿಟ್ಟಿನ ಸ್ವಭಾವವನ್ನು ಕುರಿತು ಹೇಳುತ್ತಿದ್ದಾಗ ವತ್ಸಲೆಗೆ ಏನೊ ಒಂದು ಗಾಬರಿ. ಮತ್ತೊಂದು ಸಲ ಊರಿಗೆ ಗುರುತಿನ ನಾಟಕ ಕಂಪನಿಯೊಂದು ಬಂದಾಗ ನಾನು, ವತ್ಸಲೆ, ಅಬಾ ಮೂವರೇ ಹೋಗಿದ್ದೆವು. ಆದರೆ ಗುರುತಿನವರು ಅಬಾನನ್ನು ಒಳಗೆ ಬಿಡದೆ ನಮ್ಮಿಬ್ಬರನ್ನೇ ಬಿಟ್ಟಿದ್ದರು. ನಾಟಕ ಮುಗಿಸಿ ಬರುವವರೆಗೂ ಇಲೆಕ್ಟ್ರಿಕ್ ದೈವವೋದ ಮನೆಯ ಕಟ್ಟೆಯ ಮೇಲೆ ಅಬಾ ಬೆಚ್ಚಗೆ ಮಲಗಿ

ಬಿಟ್ಟಿದ್ದ.'

'ವತ್ಸಲೆ ಊರಿಗೆ ಹೊರಡುವ ದಿನ ಬಂದಾಗ ನನಗೆ ಷುವೆ ಎದ್ದೋಡಿಸತೊಡಗಿತು. ವತ್ಸಲೆಯನ್ನು ಕಳಿಸಲಿಕ್ಕೆ ಸ್ಟೇಶನ್ ವರೆಗೂ ಹೋಗಿದ್ದೆ. ಪ್ಲಾಟ್ ಫಾರ್ಮ್ ಟಿಕೆಟ್ ತೆಗೆದುಕೊಂಡಿದ್ದೆ. ವತ್ಸಲೆ ಒಬ್ಬಳೇ ಹೋಗುವವಳು. ಆಕೆಯ ಕೈಗೆ ತಿಕೀಟು ಕೊಟ್ಟೆ; ಧೈರ್ಯ ಕೊಟ್ಟೆ. ಕಿಟಕಿಯ ಬಳಿ ಜಾಗ ಮಾಡಿಕೊಟ್ಟೆ. ಗಾಡಿ ಸೀಟಿ ಆಯಿತು. ಪುರುಸೊತ್ತಿಲ್ಲದಂತೆ ಗಾಡಿಯ ಗಾಲಿ ಕಾಲಚಕ್ರದಂತೆ ಉರುಳಿತು. 'ಹೋಗಿ ಬರ್ತೀನಿ ಬಿಂದಣ್ಣ' ಎಂದಳು ವತ್ಸಲಾ. 'ವತ್ಸಲಾ, ಹೋಗಿ ಬಾ. ಏನಾದರೂ ಅಂದಿದ್ರ, ಆಡಿದ್ರ ಕ್ಷಮಿಸು. ಏನು?' ಇಷ್ಟು ಮಾತು ನನ್ನ ಹೃದಯದ ಗವಿಯೊಳಗಿಂದ ಹೊರಗೆ ಬಂದು ಬೀಳಬೇಕಾದರೆ ಬಹಳ ಪ್ರಯತ್ನ ಮಾಡಬೇಕಾಯಿತು. ನನ್ನ ಈ ಮಾತಿಗೆ ವತ್ಸಲೆ ಗದ್ಗದಿತಳಾದಳು. ಏನೂ ಮಾತಾಡದೆ ನನ್ನ ಕೈ ಗಟ್ಟಿಯಾಗಿ ಹಿಡಿದಳು.'

'ಆಗಾಗ ಶೇಷಣ್ಣನ ಸಿಟ್ಟು, ಸೆಡವು ನಡೆದೇ ಇತ್ತು. ನಾನು ಯಾವಾಗಲೂ ವೈನಿಯವರ ಪಕ್ಷ ವಹಿಸಿಕೊಳ್ಳುತ್ತಿದ್ದೆ. ವೈನಿಯವರು ನನ್ನ ಪಕ್ಷ ವಹಿಸಹೋಗಿ ಒಮ್ಮೊಮ್ಮೆ ಶೇಷಣ್ಣನ ಅಪ್ರೀತಿಗೆ ಪಾತ್ರರಾಗುತ್ತಿದ್ದರು. ಶೇಷಣ್ಣ ಒಂದು ಜೋಡು ಚಪ್ಪಲಿ ಖರೀದಿ ಮಾಡಿದರೆ 'ಭಾವೂಜಿಗೆ ಒಂದು ಜೋಡು ತರ್ರಿ' ಎನ್ನಬೇಕು. ಒಂದು ಗಂಜೀಫ್ರಾಕ್ ಖರೀದಿ ಮಾಡಿದರೆ ಭಾವೂಜಿಗೂ ಒಂದು ಬೇಕು. ಮೈದುನನ ಮೇಲಿನ ಈ 'ತಿರಕ ಅಚ್ಛಾ' ಶೇಷಣ್ಣನಿಗೆ ಮನಸ್ಸಿಗೆ ಬರುತ್ತಿರಲಿಲ್ಲ. ಶೇಷಣ್ಣ ಸುಂದ್ರಕ್ಕನ ಮುಂದೆ ಒಮ್ಮೊಮ್ಮೆ ಮೈದುನನ ಮೇಲಿನ ಈ 'ತಿರಕ ಅಚ್ಛಾ'ದ ಬಗ್ಗೆ ಟೀಕೆ ನಡೆಸಿದ್ದ. ಇದರ ಜೊತೆಗೆ ವೈನಿಯವರನ್ನು ತನಗೆ ಬಲವಂತದಿಂದ ಗಂಟು ಹಾಕಿದರು ಎಂದು ಧುಸುಮುಸಿ ಮಾಡಿದ. ನನಗೆ ಇದನ್ನೆಲ್ಲ ಕೇಳಿ ಅವ್ವ ಸತ್ತಾಗ ಬರದಿದ್ದ ಕಣ್ಣೀರು ಈಗ ಚಿಮ್ಮಿ ಬಂದವು. ಹಿತ್ತಲಡಗೆ ಹೋಗಿ ಕಣ್ಣೊರಸಿಕೊಳ್ಳುತ್ತ ನಿಂತಿದ್ದೆ.

'ಯಾಕ್ರೀ ಭಾವೂಜಿ, ಏನಾತು?' ನನ್ನನ್ನು ಮೈದಡವಿ ಕೇಳಿದರು ವೈನಿ. ನಮ್ಮವ್ವನೇ ನನ್ನ ಮೇಲೆ ಕೈಯಾಡಿಸಿದಂತನಿಸಿತು ನನಗೆ. 'ಹೇಳ್ರಿ ಏನಾತು' ಎಂದು ಗದ್ಗದಿತರಾಗಿ ಕೇಳಿದರು ವೈನಿ.'

'ಶೇಷಣ್ಣಗ ಏನೂ ನೀವು ಖರೇ ಇಲ್ಲಂತ, ಛಂದ ಇಲ್ಲಂತ. ಅವರ ನಿಮ್ಮ ಮ್ಯಾಲೆ ಪ್ರೀತಿ ಇಲ್ಲಂತ' ಇಷ್ಟು ಹೇಳುವಷ್ಟರಲ್ಲಿ ನನ್ನ ದುಃಖ ಇಮ್ಮಡಿಸಿ, ಮುಮ್ಮಡಿಸಿ, ಉಕ್ಕಿ ಹೊರಚೆಲ್ಲಿ ಹೋಯಿತು. 'ಅದಕ್ಕ ನೀವು ಅಳಬೇಕೇನು? ಹೋತು ಬಿಡ್ರಿ' ಎಂದು ನನ್ನನ್ನು ಸಮಾಧಾನ ಮಾಡುತ್ತಿರುವಾಗ ತಮಗಾದ ದುಃಖವನ್ನು ಬಹಳ ಪ್ರಯತ್ನಪಟ್ಟು ಬಿಗಿ ಹಿಡಿದುಕೊಂಡರೆಂಬುದು ನನಗೆ ಗೊತ್ತಾಯಿತು.

ಸುಂದ್ರಕ್ಕನ ಜೊತೆಗೇ ಅಂದು ವೈನಿ ತಮ್ಮ ಹಾಸಿಗೆ ಹಾಸಿಕೊಂಡರು.

'ಯಾಕ ಇಲ್ಲ್ಯಾಕ ಹಾಸಿಗೆಂಹ್ಯಾs ಶಾಂತಾಬಾಯಿ?'

'ಮನಸ್ಸು ಇಲ್ಲದಲ್ಲಿ ಹೋಗಿ ಇನ್ನೊಬ್ಬರ ನಿದ್ದಿಗೆ ಯಾಕ ಆತಂಕ ಆಗಬೇಕು?' ವೈನಿ ದೊಡ್ಡ ದನಿ ತೆಗೆದೇ ಅಳಹತ್ತಿದಳು, ನನಗೆ ಸಂಕಟವಾಯಿತು.

'ಮನಸ್ಸಿಲ್ಲದಲ್ಲಿ ಅಂದ್ರ, ಯಾರ ಮನಸ್ಸಿಲ್ಲದಲ್ಲೆ, ನಿನ್ನದೊ, ನನ್ನದೊ?' ಹೊರಗಿನಿಂದ ಗುಡುಗುತ್ತ ಬಂದ ಶೇಷಣ್ಣ. ನಾನು ಗಟ್ಟಿಯಾಗಿ ಮುಸುಕು ಎಳೆದುಕೊಂಡೆ. ವೈನಿಯವರಿಗೆ ಹೇಳಿ ಇದೇನು ಮಾಡಿದೆ ಎಂದು ಪಶ್ಚಾತ್ತಾಪದಿಂದ ಒದ್ದಾಡಿದೆ...

ಅಕ್ಕ ಚೊಚ್ಚಲು ಮಗನ ತಾಯಿಯಾದಳು

ವತ್ಸಲೆ!–

'ಸುಂದ್ರಕ್ಕ ಆಗಾಗ ಧಾರವಾಡಕ್ಕೆ ಬಂದು ಹೋಗುತ್ತಿದ್ದರು. ಬಂದಾಗೊಮ್ಮೆ ನಮ್ಮಲ್ಲೂ ನಾಲ್ಕು ದಿನ ಇರುತ್ತಿದ್ದರು. ಬಂದಾಗೊಮ್ಮೆ ಹಪ್ಪಳ, ಸಂಡಿಗೆ, ಶಾವಿಗೆ ಮಾಡಿಕೊಡು

ತ್ತಿದ್ದರು. ಏನೂ ಇಲ್ಲದಿದ್ದರೆ ಲಕ್ಷ್ಮೀಸಿಂಗನ ಕೆರೆಯ ಮಟ್ಟೀ ಮಣ್ಣು ತಂದು ಒಲೆ ಹಾಕಿಕೊಡುತ್ತಿದ್ದರು. ಇವರೊಬ್ಬರಿಗಾಗಿ ನಿಃಸ್ಪೃಹತೆಯಿಂದ ದುಡಿಯುವುದು ಸುಂದ್ರಕ್ಕನ ಏಕಾಂತ ಬಾಳಿನ ರಹಸ್ಯವಾಗಿತ್ತು.

‘ಅಕ್ಕ ಚೊಚ್ಚಲು ಬಸುರಿ. ಕುಪ್ಪಸಕ್ಕೆಂದು ಅಕ್ಕ ತೌರಿಗೆ ಬಂದಿದ್ದಳು. ಸುಂದ್ರಕ್ಕನೂ ಮಾಡುಮುಟ್ಟಲಿಕ್ಕೆಂದು ನಿಂತುಕೊಂಡರು.’

‘...ಅಕ್ಕ ಗಂಡು ಮಗುವನ್ನು ಹೆತ್ತಿದ್ದಳು. ಕಣ್ಣು, ಮೂಗು ಥೇಟ ಬಿಂದಣ್ಣನ ಹಾಗೆಯೇ. ಅದೇ ಚೂಪಾದ ಮೂಗಿನ ತುದಿ, ಅವೇ ಅಗಲವಾದ ಕಣ್ಣು. ಬಿಂದಣ್ಣ ಕೂಸು ಇದ್ದಾಗ ಹೀಗೆಯೇ ಇದ್ದಿರಬೇಕು. ಮಗು ಬಿಂದಣ್ಣನ ವ್ಯವಾಟವನ್ನೇ ಅನುಕರಿಸಿ ಬೆಳೆಯತೊಡಗಿತ್ತು. ಹಳಿದು, ಪುಟ್ಟ ಬಿಂದಣ್ಣನೇ ಆತ. ‘ಇನ್ನು ನನ್ನ ವೈನೀನ ನನರ ಅವ್ವ...’ ‘ನಾ ಹುಂಗಾರ ಮಾಂಸಿ ಅದೆನಲ್ಲ?’... ನನ್ನನ್ನು ಮಾಂಸಿ ಎಂದೇ ಕರೆಯತೊಡಗಿದ ಆತ. ನಾನು ಅವನ ಸಣ್ಣ ತಾಯಿ. ಆತ ನನ್ನ ದೊಡ್ಡ ಮಗ!... ನಾನು ಯಾರನ್ನು ಎತ್ತಿಕೊಳ್ಳುತ್ತಿದ್ದೇನೆ? ಅಕ್ಕನ ಮಗುವನ್ನೋ? ಬಿಂದನನ್ನೋ?...’

ಎಂತಹ ಹಳವಂಡ!

ಅಂದು ಅಕ್ಕನಿಗೆ ಕುಪ್ಪಸ ಮಾಡಿ ಆರತಿ ಮಾಡಿದಳು ಅವ್ವ. ಹಸಿರು ಸೀರೆ, ಹಸಿರು ಪೋಲಕ, ಹಸಿರು ಬಳೆ, ಅರಿಷಿಣ ಬಣ್ಣದ ಮುಖ, ತುಂಬಿಕೊಂಡ ಮೈ! ಕಾಕಾ ಅಕ್ಕನಿಗೆಂದು ಒಂದು ಜರಿಯ ಸೀರೆ ತಂದಿದ್ದ. ಆ ಸೀರೆಯಲ್ಲಿ ಅಕ್ಕ ಬಹಳ ಒಪ್ಪಿದಳು. ಅಂದಿನ ಊಟ ಅಕ್ಕನ ಇಚ್ಛಾಭೋಜನವಾಗಿತ್ತು. ಅದು ಅಕ್ಕನ ಬಾಲಾಗಸಿಯಾಗಿ ಬಂದಿದ್ದ ಬಿಂದಣ್ಣನಿಗೂ ಇಚ್ಛಾಭೋಜನವೇ ಆಗಿತ್ತು. ಓಣಿಯ ಜನರೆಲ್ಲರೂ ಸಂಜೆ ಆರತಿ, ಅಕ್ಷತೆಗೆ ಬಂದಿದ್ದರು.

‘ನಿನ್ನ ಮೈದುನನಂಥಾ ಶಾಣ್ಯಾ ಮಗನ್ನ ಹಡಿಯವಾ.’ ಅವ್ವನ ಈ ಆಶೀರ್ವಾದ ನನ್ನ ಮನಸ್ಸಿನಲ್ಲಿ ಉಳಿದಿರಬೇಕು. ಅಂದು ರಾತ್ರಿಯೂ ಅದೇ ಕನಸು.

ಬಿಂದಣ್ಣ ತನ್ನ ಕ್ಲಾಸಿನಲ್ಲಿ ಪಹಿಲಾ ನಂಬರ್ ಬಂದಿದ್ದನಂತೆ. ಇಂಗ್ಲಿಷ್‌ನಲ್ಲಿ ತಮ್ಮ ಕ್ಲಾಸಿನ ಒಂದು ಹುಡುಗಿಯನ್ನು ಹಿಂದೆ ಹಾಕಿದ್ದನಂತೆ... ಸಾಕು, ಹುಡಗೆಯರ ಜೊತೆಗೇನು ಪೌರುಷ!...

ಅಕ್ಕ ದೀಪಾವಳಿಗೆಂದು ಬಂದವಳು ಚೊಚ್ಚಲು ಬಾಣಂತಿತನ ಮುಗಿಸಿಕೊಂಡೇ ಹೋಗುವವಳಿದ್ದಳು. ಅಳಿಯತನ ಈ ಸಲ ಗರ್ದೀ. ಅಕ್ಕ, ಅಕ್ಕನ ಬಾಲಾಗಸಿ ಬಿಂದಣ್ಣ, ಶೇಷಣ್ಣ, ಗೋದಕ್ಕ ಎಲ್ಲರೂ ಬಂದಿದ್ದರು. ಚತುರ್ದಶಿಯ ದಿನ ನಸುಕಿನಲ್ಲಿ ನಡುಗುತ್ತ ಎದ್ದೆವು. ಆರತಿಯ ಸಿದ್ಧತೆ ಮಾಡಿದೆ ಬೆಳ್ಳಿಯ ಬಟ್ಟಲಲ್ಲಿ ಕಾಮಿನೀ ಆಯಿಲ್ ಹಾಕಿಟ್ಟುಕೊಂಡೆ. ಬೆಳ್ಳಿಯ ತಾಟಿನಲ್ಲಿ ಆರತಿಯು ತಯಾರಿಯಾಯಿತು. ನಾನು, ಅಕ್ಕ ಶೃಂಗಾರವಾಗಿ ಆರತಿ ಮಾಡಿದೆವು. ಹಾಡು ಹಾಡಿದೆವು. ಆರತಿ ಆದ ಮೇಲೆ ಎಲ್ಲರ ತಲೆಗೂ ಎಣ್ಣೆಯ ಬೊಟ್ಟು ಇಡುವಾಗ ಬಿಂದಣ್ಣ ಟೊಪ್ಪಿಗೆ ಹಿಂದೆ ಸರಿಸಿಕೊಳ್ಳಲೇ ಇಲ್ಲ. ನಾನು ಹಣೆಗೇ ಹಚ್ಚಿಬಿಟ್ಟೆ! ಮಾತ ಬೇಕೇನು? ಆರತಿಯ ರೂಪಾಯಿ ನಾನು, ಅಕ್ಕ ಇಬ್ಬರೇ ಹಂಚಿಕೊಂಡೆವು. ದಿನಕ್ಕೊಂದು ಥರ ಮೋಜವಾನಿ. ‘ಎರಡs ದಿನದಾಗ ಎಷ್ಟು ಲಠ್ಠ ಆಗೀನಿ ನೋಡ್ರಿ ವೈನಿ’ ಎಂದು ಬಿಂದಣ್ಣ ಸಂಭ್ರಮದಿಂದ ಹೇಳಿದ. ನಿಜವಾಗಿಯೂ ಈ ಸಲ ಬಿಂದಣ್ಣ ಸುಧಾರಿಸಿದ್ದ. ಆಗ ದವಾಖಾನೆಯಿಂದ ಹೊರಬಿದ್ದಾಗ ಕಡ್ಡಿಯಾಗಿದ್ದ. ಅಚಾನಕವಾಗಿ ಸುಂದ್ರಕ್ಕ ಬಂದಿದ್ದರು. ‘ಎರಡನೆಯ ಮಗಳೂ ಲಗ್ನಕ್ಕ ತಯಾರಾದಳು. ಈಗಿಂದನs ವರಾ ಹುಡುಕಲಿಕ್ಕೆ ಸುರುವು ಮಾಡಿರಿ’ ಎಂದು ಅವ್ವನಿಗೆ ಹೇಳುತ್ತ ನನ್ನ ಮುಖ ನೋಡಿದರು. ‘ಹೋಗ್ರಿ, ಹೋಗ್ರಿ. ನಾ ಕಲೀತೀನಿ ಮದುವೆ ಆಗೂದಿಲ್ಲ’ ಎಂದು ತಲೆ ಝಾಡಿಸಿದೆ. ಅದೇ ಹೊತ್ತಿಗೆ ಜಯಣ್ಣ. ಬಿಂದಣ್ಣ ಬಂದುಬಿಡಬೇಕೆ? ಬಿಂದಣ್ಣನನ್ನು ನೋಡಿದ ಕೂಡಲೆ ಒಳಗಿನ ಕೋಣೆಗೆ ಓಡಿ ಹೋದೆ. ಸುಂದ್ರಕ್ಕ ಅವ್ವನ ಕಡೆಗೆ ಹುಬ್ಬು ಹಾರಿಸಿ ನಸು ನಕ್ಕರು

ಕುಡಿತವು.

ಅಂದು ರಾತ್ರಿ ಅಕ್ಕ ಹೊಟ್ಟೆನೋವೆಂದು ನರಳುತ್ತಿದ್ದಳು. ಬಿಂದಣ್ಣ ಗಾಬರಿಯಾಗಿದ್ದ. ಮಧ್ಯ ರಾತ್ರಿ ಡಾಕ್ಟರರನ್ನು ಕರೆತರಲಿಕ್ಕೆಂದು ಹೊರಟುನಿಂತ ಅವನಿಗೆ ಮನೆ ಗೊತ್ತಿರಲಿಲ್ಲ. ಎಷ್ಟು ಎಬ್ಬಿಸಿದ್ದರೂ ಜಯಣ್ಣನಿಗೆ ಗೊರಗೊರ ನಿದ್ದೆ. ಡಾಕ್ಟರ್ ಮನೆ ತೋರಿಸುವುದು ನನ್ನ ಪಾಳಿಯೇ ಬಂತು ಎಂದುಕೊಂಡಿದ್ದೆ. ಕೊನೆಗೆ ತಾನಾಗೇ ಹೋಗಿ ಬಂದ. ಮರುದಿನ ಅಕ್ಕನಿಗೆ ಸ್ವಲ್ಪ ಹಗುರೆನಿಸಿತ್ತು. ಇಡೀ ರಾತ್ರಿ ಬಿಂದಣ್ಣನಿಗೆ ನಿದ್ರೆಯಿಲ್ಲ. ವೈನಿಯ ಉಪಚಾರದಲ್ಲಿಯೇ ನಿರತನಾಗಿದ್ದ. 'ವೈನಿ, ನಿನ್ನೆ ರಾತ್ರಿ ಮಠದ ಹತ್ತಿರ ಹೋಗಿ ರಾಯರಿಗೆ ಬೇಡಿಕೊಂಡು ಬಂದೆ ನೋಡ್ರಿ.' ಅಕ್ಕ ಬಿಂದಣ್ಣನಿಗಾಗಿ ಎಂಟು ದಿನ ನಿದ್ರೆ ಕಟ್ಟಿ, ತಾನು ಅಷ್ಟು ಒಂದು ಖಾತ್ರಿ ಮಾಡಿಕೊಟ್ಟಿದ್ದಳು. ಒಂದು ದಿನ ನಿದ್ರೆ ಕಟ್ಟಿ, ಬಿಂದಣ್ಣ ಮಗ ಅನ್ನುವದನ್ನು ಖಾತ್ರಿ ಮಾಡಿಕೊಟ್ಟಿದ್ದ.

ಹುಣ್ಣಿಮೆಯ ದಿನ ಅಕ್ಕ ಗಂಡು ಮಗುವಿನ ತಾಯಿಯಾದಳು.

ಬಲ್ಲವನಾದ

ಬಿಂದಣ್ಣ –

'ನಾನು ಆರನೆಯ ಇಯತ್ತೆಗೆ ಬಂದಿದ್ದೆ. ಪುಟ್ಟ ರಾಗಿಗೆ (ರಘುನಾಥನಿಗೆ) ನಾನು ಕಾಕಾ ಆಗಿದ್ದೆ. ನಾನು ಪೇಟೆಗೆ ಹೋದರೆ ರಾಗಿ ನನ್ನ ಬೆನ್ನೇ ಬಿಡುತ್ತಿರಲಿಲ್ಲ. ನನಗೆ ಅಭ್ಯಾಸ ಬಹಳ ಇತ್ತು. ರಾಗಿಯನ್ನು ಆಡ್ಡಾಡಿಸಿಕೊಂಡು ಬರಲಿಕ್ಕೆ ರುಣುಗುಣು ಮಾಡುತ್ತಿದ್ದೆ. ಆದರೆ ನನಗೇ ಚಡಪಡಿಕೆಯಾಗಿ ಪುಸ್ತಕ ಸರಿಸಿ ರಾಗಿಯ ಬಳಿ ಬಂದಾಗ, 'ನೋಡ್ರಿ, ಈಗ ಯಾರು ಕೆಡಿಸಿದರು ನಿಮ್ಮ ಅಭ್ಯಾಸ? ನೀವಾಗೆ ಆಡೋ ಕೂಸಿನ್ನ ಎತ್ತಿಕೋತೀರಿ' ಎಂದು ವೈನಿ ಚೇಷ್ಟೆ ಮಾಡುತ್ತಿದ್ದರು.'

ಪರೀಕ್ಷೆಯ ಹೊತ್ತಿಗೇನೆ ವೈನಿ ಮೂರು ಸಲ ಹರಿಗೆಗೆ ತೌರುಮನೆಗೆ ಹೋದರು. ನಾವೇ ಕಳಿಸಿ ಬಂದೆ. ಈ ಸಲ ವತ್ಸಲೆ ಸೀರೆಯುಡುತ್ತಿದ್ದಳು. ಬಹಳ ದೊಡ್ಡವಳಾಗಿ ಕಂಡಳು. ನಾನು, ಜಯಣ್ಣ ಮಲಗಿದ್ದ ಕೋಣೆಗೆ ಬಂದು ವತ್ಸಲೆ ತಾಟಿನ ತುಂಬ ಹೆಚ್ಚಿದ ಸೇಬು ಹಣ್ಣು, ಮೋಸಂಬಿ ಹಣ್ಣು ತಂದಿಟ್ಟು ಹೋದಳು. ವತ್ಸಲೆಯ ಈ ಆತಿಥ್ಯದಲ್ಲಿ ಏನೊ ಒಂದು ಅನಿರ್ವಚನೀಯ ಆಂತರಿಕ ಸುಖ ಎನಿಸಿತ್ತು... ಯಾವುದೋ ಒಂದು ನಾಳಿನ ಮಂಜಿನ ತೆರೆಯ ಆಚೆಗೆ ಮಸುಕು ಮಸುಕಾದರೂ ಸುಂದರವಾದ ಕನಸು ಹೊಳೆದುಹೋಯಿತು. ಮತ್ತೊಂದು ಕ್ಷಣಕ್ಕೆ ನಾನಿನ್ನೂ ಪ್ರೀ ಮ್ಯಾಟ್ರಿಕ್ ವಿದ್ಯಾರ್ಥಿ ಎಂಬ ಚಿಕ್ಕತನದ ಅರಿವು. ಗಾಂಧೀಜಿ ಹುಡುಗನಾಗಿದ್ದಾಗಲೇ ಮದುವೆಯಾಗಿದ್ದರಂತೆ– ನಾನು ಒಂದೆಡೆ ಓದಿದ್ದೆ.

ಅಂದು ವೈನಿ ಮತ್ತೆ ಹೊಟ್ಟೆನೋವೆಂದು ನರಳಿದರು. ಈ ಸಲ ನಾನು, ವತ್ಸಲೆ ಕೂಡಿಯೇ ಸೂಲಗಿತ್ತಿಯ ಮನೆ ಹುಡುಕಿಕೊಂಡು ಹೋದೆವು. ನನ್ನ ಕೈಯಲ್ಲಿ ಕಂದೀಲು. ನಾನು ಮುಂದೆ ಮುಂದೆ ಇದ್ದೆ. 'ಅತ್ಲಾಗಲ್ಲ ಇತ್ತಲಾಗ' ಎಂದು ದಾರಿಯ ಮಾತು ಆಡುತ್ತ ವತ್ಸಲೆ ಹಿಂದಿನಿಂದ ಬರುತ್ತಿದ್ದಳು.

ನಾನು ಧಾರವಾಡದಲ್ಲಿ ಹೆಚ್ಚು ನಿಲ್ಲುವ ಹಾಗಿರಲಿಲ್ಲ. ಪರೀಕ್ಷೆ ತೀರ ಸಮೀಪಿಸಿತ್ತು. ಎರಡೂ ಹೊತ್ತು ಅಡಿಗೆ ನನ್ನದೇ. ಚಪಾತಿ ಲಟ್ಟಿಸಲು ಕಲಿತೆ. ಮೊದಲನೆಯ ಚಪಾತಿ ಹಿಂದುಸ್ತಾನ ನಕಾಶದಂತಾಗಿತ್ತು. ಎರಡನೆಯದು ಆಸ್ಟ್ರೇಲಿಯಾ. ಮೂರನೆಯದು ಗ್ರೇಟ್ ಬ್ರಿಟನ್. ಶೇಷಣ್ಣ ನನ್ನ ಚಪಾತಿ ನೋಡಿ ನಕ್ಕ. 'ಪರೀಕ್ಷಾದಾಗ ನಕಾಶಾ ತಗಿಯೋ ಸ್ಟೆನ್ಸಿಲ್ ಆಗ್ತ್ಯಾವ ನೋಡು' ಎಂದು ವಿನೋದ ಮಾಡಿದಾಗ ಸಮಾಧಾನಿಯಾಗಿದ್ದ ಶೇಷಣ್ಣನ ಬಗ್ಗೆ ಖುಷಿಯೋ ಖುಷಿ.

ನೋಡಲಿಕ್ಕೆ ಬಂದರು

ವತ್ಸಲೆ–

'ಮುಂಜಿ ಆದ ಮೇಲೆ ಜಯಣ್ಣ ದೇವರ

ಪೂಜೆ ಮಾಡುವುದು ಇದೇ ಮೊದಲು. 'ಮೊದಲ ಏನು ಮಾಡಲಿ?' ಎಂದು ಅವ್ವನನ್ನು ಕೇಳಿದ. 'ಇಲ್ಲಿಂದ್ಲೇನ ಶುರುವ ಮಾರಾಯ ಕೇಳಲಿಕ್ಕೆ? ಮೊದಲ ಗಂಧಾ ತೇಯ್ದ್ಕೋ, ಅಕ್ಷಂತಿ ಮಾಡು' ಎಂದೆಲ್ಲಾ ಅವ್ವ ಪಾಂಜ್ಯಪಾರಾಗಿ ಹೇಳಿದಳು. ಜಯಣ್ಣ ಹಾಗೇ ಮಾಡಿದ. ಮೂರು ಮಿನಿಟಿನಲ್ಲಿ ಧೂಪಾರತಿ ಮುಗಿಸಿ ಮಂಗಳಾರತಿಗೇ ಬಂದಿದ್ದ. 'ಅಭಿಗಾರ ಮಾಡಿದ್ಯೋ ಇಲ್ಲೋ?' ಎಂದು ಅವ್ವ ಕೇಳಿದ್ದಕ್ಕೆ 'ತುಪ್ಪ ಹೌದಲ್ಲೋ?' ಎಂದು ಸ್ಪಷ್ಟೀಕರಣ ಕೇಳಿದ. 'ಹೌದೋ ನಿನ್ನ ಸುಡ್ಲಿ, ಅಭಿಗಾರಾ ಅನ್ನು.' ಅವ್ವ ಸಿಟ್ಟಿಗೆದ್ದಳು. 'ಮಾಡೀನಂತ ಹೇಳೂದಿಲ್ಲೇನು ಮತ್ತ ಅಭಿಗಾರಾ?' ಜಯಣ್ಣನೂ ಸಿಟ್ಟಿಗೆ ಬಂದ. 'ಎಲ್ಲ್ಯೋ, ಅನ್ನದ ತಪ್ಪೇಲಿ ಮ್ಯಾಲಿನ ರಷ್ಯಾಕಣೆ ಸುದ್ದಾ ತೆಗದಿಲ್ಲ?' ಜಯಣ್ಣ ಸಿಗೇನೋ ಸ್ವಲ್ಪ ಗೊಂದಲ ಬಿತ್ತು. 'ಇಲ್ಲಿ ಮಾಡೇನಲ್ಲಾ ಮತ್ತ ದೇವರ ತಲೀಮ್ಯಾಲೆ.' ಜಯಣ್ಣ ಸಂಪುಷ್ಟದೊಳಗಿನ ಶಾಲಿಗ್ರಾಮಕ್ಕೂ ಎಲ್ಲಾ ದೇವರ ಮೂರ್ತಿಗಳಿಗೂ ತಲೆಯ ಮೇಲೆ ಒಂದೊಂದು ಮುದ್ದಿ ತುಪ್ಪ ಇಟ್ಟಿದ್ದ. 'ನನ್ನ ಹಣೇಬಾರ,!' ಅವ್ವ ಒಮ್ಮೆ ನಗಬೇಕು ಒಮ್ಮೆ ಬಯ್ಯಬೇಕು.

ಅಂದು ದಸರೆಯ ಮುಂಜಾನೆ ನೋಡಲಿಕ್ಕೆ ಬರುವದಾಗಿ ಹೇಳಿಕಳಿಸಿದ್ದರು. ಅಕ್ಕ ಚೇಷ್ಟೆ ನಡೆಸಿಯೇ ಇದ್ದಳು... 'ನೋಡು ವಚ್ಚಿ, ದೇವರ ಸಂಕಲ್ಪ ಎಲ್ಲಿ ಇರತದೋ ಏನೋ. ಸುಳ್ಳುಸುಳ್ಳ ನಮ್ಮ ಭಾವೂಜಿಗೆ ತಗೋಬೇಕು ಅಂತ ಮನಸ್ಸಿನಾಗ ಮುಂಡಿಗೀ ಮಾಡತಿದ್ದೆ...' ಅಕ್ಕನ ಒಂದೊಂದು ಮಾತೂ ಅಂಕುಶದಂತೆ ನನ್ನ ಮನಕ್ಕೆ ನಟ್ಟವು. ನಾನಾದರೂ ಏನು ಮಾಡಲಿ? ನನ್ನ ಮನಸ್ಸಿನೊಳಗಿನದನ್ನು ಹೇಳಿ ಬಿಡಬೇಕೆ? ಹೇಳಲಿಕ್ಕಾದರೂ ಇದೆ ಏನು? ಅಪ್ಪ, ಕಾಕಾ ಅವರ ತಲೆಯಲ್ಲಿ ಈ ವಿಚಾರ ಹೊಳೆದಿದ್ದೇ ಇಲ್ಲ.

ದಸರೆಗೆಂದು ಬಿಂದಣ್ಣನೂ ಬಂದಿದ್ದ. ನಾನು, ಜಯಣ್ಣ ನೋಡಲಿಕ್ಕೆ ಬಂದವರಿಗೆ ಚಹಾ, ಅವಲಕ್ಕಿ ಒಯ್ದು ಇಟ್ಟೆವು. ಬಿಂದಣ್ಣ ನನ್ನ ಕೈಯೊಳಗಿನ ಎರಡೂ ಕಪ್ಪು ಇಸಿದುಕೊಂಡು ಅತಿಥಿಗಳ ಕೈಗೆ ಕೊಟ್ಟ. ಎಷ್ಟು ಕೋಮಲ ಸ್ವಭಾವ ಬಿಂದಣ್ಣನದು!

ಬಿಂದಣ್ಣನ ಎದುರಿಗೇ ಇದು ನಡೆದುದು ನನಗೇಕೋ ಬೇಡವೆನಿಸಿತು. ಅಂತೂ ಕನ್ಯಾ ಪ್ರದರ್ಶನದ ಪ್ರಸಂಗ ಮುಗಿದಿತ್ತು. ಫಲಿತಾಂಶ? ಅದರಲ್ಲಿ ನನಗೆ ಆಸಕ್ತಿಯೇ ಇರಲಿಲ್ಲ.

ಆ ಸಂಜೆ ಜಯಣ್ಣ, ಬಿಂದಣ್ಣನ ಹಾಸಿಗೆ ಹಾಸಲೂ ಮುಂದೆ ಬಿಂದಣ್ಣನ ಹಾಸಿಗೆ ಬಂಡದಲ್ಲಿ ಒಂದು ಕಾಗದ ಮುಡಚಿ ಬಿದ್ದಿತ್ತು. ಕುತೂಹಲದಿಂದ ತೆಗೆದು ನೋಡಿದೆ. 'ನನ್ನ ಸವಿಗನಸು!' ಬಿಂದಣ್ಣ ಕಥೆ ಬರೆದಿರಬಹುದೇ? ಅದರ ಎರಡು ವಾಕ್ಯಗಳು ಒಮ್ಮೆಲೇ ಕಣ್ಣಿಗೆ ಬಿದ್ದವು... "ನಾನು ಯಾವಾಗಲೂ ನಿನ್ನವಳೇ. ಇಂದೇ ನನ್ನ ಮನಃಸಂಕಲ್ಪವನ್ನು ಸಾರಿ ಹೇಳುತ್ತೇನೆ", ಕಥೆ ಇನ್ನೂ ಮುಂದುವರಿದಿತ್ತು... "ಆ ತರುಣ ತರುಣಿಯರ ಪ್ರಣಯ ನಾಟಕವನ್ನು ತಿಕೀಟು ಇಲ್ಲದ ಪ್ರೇಕ್ಷಕನಂತೆ ಮೇಲೆ ಚಂದ್ರನು ಮೋಡದಿಂದ ಹಣಿಕಿ ಹಾಕಿ ನೋಡುತ್ತಿದ್ದ..." ಕಥೆ ಓದಿ ಹರ್ಷಿತಳಾಗಿ ಹತ್ತಕ್ಕೆ ಹತ್ತು ಮಾರ್ಕ್ಸ್ ಹಾಕಿ ಮತ್ತೆ ಹಾಗೇ ಹಾಸಿಗೆಯ ಬುಡಕ್ಕೆ ಇಟ್ಟುಬಿಟ್ಟೆ. ರಾತ್ರಿ ಬಿಂದಣ್ಣ, ಜಯಣ್ಣನ ಮುಂದೆ ಕಥೆಯ ವಿಚಾರವಾಗಿ ಏನೋ ಮಾತಾಡುತ್ತಿದ್ದ.

ಬಾಣಂತಿತನ ಮುಗಿಸಿಕೊಂಡು ಬಿಂದಣ್ಣನ ಜೊತೆಗೆ ಅಕ್ಕ ಟಾಂಗಾ ಹತ್ತಿದಳು.

ಕಾಲೇಜ ಕಟ್ಟೆ ಹತ್ತಿದ ಬಿಂದಣ್ಣ –

ಬಿಂದಣ್ಣ –

'ಭಾವುಜೀ ಮ್ಯಾಟ್ರಿಕ್ ಪಾಸಾದದ್ದೊಂದು ಮುಳುವs ಆಗೇದ್ರಾ, ಕಾಲೇಜಿಗೆ ಹ್ಯಾಂಗ ಕಳಿಸಬೇಕು ಎಲ್ಲಿ ಇಡಬೇಕು ಅಂತೋ ಯೋಚನೇನ ಬಗೀಹರೀದಂಗ ಆಗೇದ.' ವೈನಿ ಸುಂದ್ರಕ್ಕನ ಮುಂದೆ ನನ್ನದೇ ಪ್ರಸ್ತಾಪ ತೆಗೆದಿದ್ದರು. ನಾನು ಬೀಗರ ಮನೆಯಲ್ಲಿ ಯಾಕೆ ಇರಬಾರದು ಎಂಬುದು

ಸುಂದ್ರಕ್ಕನ ಪ್ರಶ್ನೆ. 'ಆದರೆ ಕಾಲೇಜ ಫೀ, ಪುಸ್ತಕದ ಖರ್ಚ, ಹೋಟಲಿನ ಕೈ ಖರ್ಚ ಯಾವುದೂ ಥಾಕ್ ಪತ್ತಗೊಲ್ಲದು' ಎಂದು ವೈನಿಯವರ ಗೋಳಾಟ. ಮೆಲ್ಲನೇ ಸುಂದ್ರಕ್ಕ ವತ್ಸಲೆಯನ್ನು ನನಗೆ ಯಾಕೆ ತುದುಕೊಳ್ಳ-ಬಾರದು ಎಂದು ಸೂಚಿಸಿದಳು. ಶೇಷಣ್ಣನ ಮುಂದೆಯೂ ಈ ಮಾತು ಎತ್ತಬೇಕೆಂದು ಸುಂದ್ರಕ್ಕನ ಅಪೇಕ್ಷೆ. ಆದರೆ ವೈನಿ ಅದನ್ನು ಅಷ್ಟಕ್ಕೇ ತಡೆದರು. ಆದರೆ ಸುಂದ್ರಕ್ಕನ ಮಧ್ಯಸ್ಥಿಕೆಯಿಂದಾಗಿ ನಾನು ವೈನಿಯವರ ತವರುಮನೆಯಲ್ಲಿಯೇ ಇದ್ದು ಕಾಲೇಜ ಅಭ್ಯಾಸ ಮಾಡಲಿಕ್ಕೆ ಶೇಷಣ್ಣ ತನ್ನ 'ದಮುಜು' ಬಿಟ್ಟು ಒಪ್ಪಿಗೆ ನೀಡಿದ. ನಾನು ಹೊರಡುವ ಸಿದ್ಧತೆ ನಡೆಸಿದೆ. 'ಸಿಕ್ಕ ಸಿಕ್ಕದ್ದು ಚಾದ ಅಂಗಡ್ಯಾಗ ತಿನ್ನಲಿಕ್ಕೆ ಹೋಗಬ್ಯಾಡಾ. ಸಿಕ್ಕ ಹಾಂಗ ರೊಕ್ಕಾ ಖರ್ಚ ಮಾಡ-ಬ್ಯಾಡಾ...' ಶೇಷಣ್ಣನ ಎಲ್ಲಾ ಬೋಧಗಳಿಗೂ ಹೂಂಗುಟ್ಟಿದೆ. ಹೋಗುವಾಗ ರಾಗಿ ನನದೆ ಅಟ್ಟಿ ಮಿಂಟ್ಟಿ ಹಾಕಿಬಿಟ್ಟ. ನನ್ನಿಂದ ಅವನನ್ನು ಬಿಡಿಸಿಕೊಳ್ಳಲಿಕ್ಕೆ ವೈನಿಯವರಿಗೆ ಸಾಕು-ಬೇಕಾಯಿತು.

ಧಾರವಾಡ ತಲುಪಿದೆ; ಬೀಗರ ಮನೆಯನ್ನು ಪ್ರವೇಶಿಸಿದೆ. ವತ್ಸಲೆಯ ಕಾಕಾ, ಅವ್ವ ಅವರನ್ನು ಕಂಡು ನಮಸ್ಕಾರ ಮಾಡಿದ್ದೆ, ನನ್ನ ಪರಿಸ್ಥಿತಿ ತಿಳಿಸಿ ಹೇಳಿದೆ. 'ನಮ್ಮ ಜಯಣ್ಣಗೂ ಒಂದು ಜೋಡು ಆದ್ಹಂಗಾತು. ಅವನ್ನ ಒಂದಿಷ್ಟು ಅಭ್ಯಾಸದಾಗ ತಿದ್ದಬೇಕು ನೋಡು' ಎಂದು ಪ್ರಸ್ತಾಪಿಸಿ ತಮ್ಮಲ್ಲಿ ನನಗೆ ಸ್ವಾಗತ ನೀಡಿದರು. ಇನ್ನು ವರ್ಷಾವಧಿ ವತ್ಸಲೆಯನ್ನು ನಿತ್ಯ ಕಾಣಬಹುದು.

ಶೇಷಣ್ಣನಿಗೆ ಒಮ್ಮೆ ಅಳಿಯತನವಾಗಿದ್ದರೆ ನನಗೆ ಜಯಣ್ಣನ ಪಾಠಪ್ರವಚನದಿಂದಾಗಿ ಅನುದಿನವೂ ಅಳಿಯತನ ನಡೆಯಿತು. ನಾನು ಪಾಠ ಹೇಳುತ್ತಿದ್ದಾಗ ವತ್ಸಲೆ ಕಿಟಕಿಯ ಹಿಂದೆ ನಿಂತುಕೊಂಡು ಲಕ್ಷ್ಯಗೊಟ್ಟು ಕೇಳುತ್ತಿದ್ದಳು. ಜಯಣ್ಣನಿಗಿಂತ ವತ್ಸಲೆಯೆ ಜಯಣ್ಣನ ಪಾಠಗಳನ್ನೆಲ್ಲ ಕಲಿತುಬಿಟ್ಟಿರುತ್ತಿದ್ದಳು

ಬಿಂದಣ್ಣನಿಗೆ ಶರ್ಟು ಹೊಲಿಸಿ ಕೊಟ್ಟಳು

ವತ್ಸಲೆ—

'ಬಿಂದಣ್ಣ ಬೇರೆ ಒಂದು ಕೋಣೆ ಹಿಡಿದಿದ್ದ ತನ್ನ ಗೆಳೆಯನ ಜೊತೆ. ಊಟಕ್ಕೆ, ಜಯಣ್ಣನ ಪಾಠಕ್ಕೆ ಮಾತ್ರ ಮನೆಗೆ ಬಂದು ಹೋಗುತ್ತಿದ್ದ. ದಿನಾಲೂ ವ್ಯಾಯಾಮ ಶಾಲೆಗೆ ಹೋಗುತ್ತಿದ್ದನಂತೆ. ಮೊದಲೇ ಸಂಕೋಚದ ಸ್ವಭಾವ. ಅರೆಹೊಟ್ಟೆ ಊಟ, ವ್ಯಾಯಾಮ ಬೇರೆ. ನನಗೆ ನಗೆ ಬಂದಿತು. ಬಿಂದಣ್ಣನ ಗೆಳೆಯ ಸಾಂಬನು ಗದುಗಿನವನೆ. ಇಬ್ಬರೂ ಅದೇ ಕೋಣೆಯಲ್ಲಿ ಇರುತ್ತಿದ್ದರು. ಬಿಂದಣ್ಣ ಮತ್ತು ಸಾಂಬ ಟೀಚಿಂಗ್ ಬೇರೆ ಹಿಡಿದಿದ್ದರಂತೆ. ಈಗ ಗೊತ್ತಾಯಿತು ಬೇರೆ ಕೋಣೆ ಮಾಡಿದ ರಹಸ್ಯ. ಸಾಂಬನ ಅಪ್ಪ ಹುಬ್ಬಳ್ಳಿ ರೇಲ್ವೆದಲ್ಲಿ ಕೆಲಸ ಮಾಡುತ್ತಿದ್ದರು. ಬರೆಯಲಿಕ್ಕೆ ರೇಲ್ವೆ ಹಾಳೆ ತರಲಿಕ್ಕೆಂದು ಇಬ್ಬರೂ ಸೈಕಲ್ ಮೇಲೆ ಹುಬ್ಬಳ್ಳಿಗೆ ಹೋಗಿ ಬಂದಿದ್ದರು. ಕಾಕಾನಿಗೆ ಈ ಸುದ್ದಿ ತಿಳಿದಾಗ ಬಿಂದಣ್ಣನಿಗೆ ಸಿಟ್ಟು ಮಾಡಿದ. 'ಸೈಕಲ್ ಮ್ಯಾಲೆ ಹುಂಗೆಲ್ಲಾ ಹೋದರ ಯಾರು ಜವಾಬ್ದಾರಿ ನೋಡು? ಸೊಟ್ಟ ಹಾಳೆ ಸಲುವಾಗಿ ಹಿಂಗ ಮಾಡೂದ?' ಬಿಂದಣ್ಣ ತಪ್ಪಾಯಿತೆಂದು ಕಾಕಾನ ಕಾಲು ಮುಟ್ಟಿದಾಗ ನನ್ನ ಕಣ್ಣಲ್ಲಿ ಹನಿಗಳು ಪುಟಿದಿದ್ದವು.

'ಗಣೇಶ ಚೌತಿ ಈ ಸಲ ಗಣೇಶನ ಮಾಡದ ಸಿಂಗಾರವೆಲ್ಲ ಬಿಂದಣ್ಣನಿಂದಲೇ ನಡೆಯಿತು. ಗೋಡೆಗೆ ಮೊಳೆ ಹೊಡೆಯುವಾಗ ನಾನೂ ಸಹಾಯಕ್ಕೆ ನಿಂತಿದ್ದೆ. ಒಂದೆರಡು ಸಲ ಬಿಂದಣ್ಣನ ಬೆರಳು ತಾಕಿದಾಗ ಮಿಂಚು ಹುಟ್ಟಿತ್ತು. ಕಾಕಾ ಬಿಂದಣ್ಣನ ಕೌಶಲ್ಯ ನೋಡಿ 'ವಾಹ್‌ವಾ' ಎಂದ. ನನಗೂ ಹಿಡಿಸಲಾರದಷ್ಟು ಸಂತೋಷ.'

'ಕಾಕಾ, ಜಯಣ್ಣನಿಗೆಂದು ಹಬ್ಬದ ಅರಿವೆ ತಂದಿದ್ದ. ನನಗೂ ಜ್ಲಾಜಿನ ಅರಿವೆ ತಂದಿದ್ದ. ನನ್ನ ಬಳಿ ಒಂದು ರೂಪಾಯಿ ಇತ್ತು. ಜಯಣ್ಣನ ಕಡೆಯಿಂದ ಕಳ್ಳತನದಿಂದ ಎರಡು ವಾರ

ಶರ್ಟಿನ ಅರಿವೆ ತರಿಸಿ ಕಾಕಾ ಕೊಡಿಸಿದ್ರು ಎಂದು ಹೇಳಿ ಜಯಣ್ಣನ ಕಡೆಯಿಂದ ಅದನ್ನು ಬಿಂದಣ್ಣನಿಗೆ ಕೊಡಿಸಿದೆ. ಮುಂದೆ ಜಯಣ್ಣ ತಾವೇ ತಂದುಕೊಟ್ಟವರಂತೆ ಅವ್ವನ ಮುಂದೆ ಹೇಳಿದ. ಜಯಣ್ಣನ ದೊಡ್ಡ ಮನಸ್ಸಿಗೆ ಅವ್ವ ಹಿಗ್ಗಿದಳು'...

ಬಿಂದಣ್ಣ ನೋಡಿದ ಭೀಕರ ದೃಶ್ಯ

ಬಿಂದಣ್ಣ–

'ಈ ಸಾರೆ ಬಾಣಂತಿತನದ ಖರ್ಚು ಕೊಟ್ಟರೇನೇ ಧಾರವಾಡಕ್ಕೆ ಹೋಗುವದಾಗಿ ವೈನಿ ಹಟ ಹಿಡಿದುಬಿಟ್ಟರು. 'ನಿಮ್ಮ ಅಪ್ಪರೆ ಹಣ ಕೇಳಿಲ್ಲ, ನಿನ್ನದ್ಯಾಕ ಜೋರು ಆಗೇದಲ್ಲ' ಎಂದು ಶೇಷಣ್ಣ ಗದ್ದರಿಸಿದ. ಆದರೂ ವೈನಿ ಜಗ್ಗಲಿಲ್ಲ 'ನಮ್ಮ ಒಳಗುಂದಿ ನಮಗ' ಎಂದು ಶೇಷಣ್ಣನ ಮುಂದೆ ಬಾಯಿ ಬಿಟ್ಟು ಹೇಳಿದರು. ವರುಷಾ ವರ್ಷಾ ಬಾಣಂತಿತನ ಎಂದುಕೊಂಡು ವೈನಿ ಬಹಳ ಬೇಜಾರು ಪಟ್ಟುಕೊಂಡರು.

'ಒಂದು ದಿನ ಇದ್ದಕ್ಕಿದ್ದಂತೆ ವೈನಿಯವರಿಗೆ ವತ್ಸಲೆಯಿಂದ ಪತ್ರ! ಅದರಲ್ಲಿ ತಮ್ಮ ಅಕ್ಕನ ಪತ್ರ ಮುಟ್ಟಿತೆಂದೂ, ಬಾಣಂತಿತನದ ಖರ್ಚಿನ ಬಗ್ಗೆ ಏನೂ ಕಾಳಜಿ ಮಾಡಬಾರದೆಂದೂ ತಮ್ಮ ಕಾಕಾ ಹೇಳಿರುವದಾಗಿ ಬರೆದಿದ್ದಳು. ವೈನಿಯವರಿಗೆ ಆಶ್ಚರ್ಯ! ಕೊನೆಗೆ ನಾನೇ ವಸ್ತುಸ್ಥಿತಿಯನ್ನು ಒಪ್ಪಿಕೊಂಡೆ. ವೈನಿಯವರ ಹೆಸರಿನಲ್ಲಿ ವೈನಿಯವರ ಹಾಗೆಯೇ ಒಂದಿಷ್ಟು ಸೊಟ್ಟಪಟ್ಟ ಅಕ್ಷರ ಬರೆದು ಒಂದು ಕಾರ್ಡ್ ಸೂಟಿಯಲ್ಲಿ ಗದಗಿಗೆ ಬಂದಾಗ ಪೋಸ್ಟ್ ಮಾಡಿದ್ದೆ. ನನ್ನ ಈ ಕುತ್ರಾಟವನ್ನು ನೋಡಿ ವೈನಿಯವರಿಗೆ ಸಿಟ್ಟೆನಿಸಲಿಲ್ಲ; ಕೆಟ್ಟೆನಿಸಿತು. ಆದರೂ ಸದ್ಯದ ಪ್ರಶ್ನೆ ಪರಿಹಾರವಾದುದ್ದಕ್ಕೆ ವೈನಿಯವರ ಮುಖದ ಮೇಲೆ ಪ್ರಸನ್ನತೆ ಮೂಡಿತ್ತು. ಇನ್ನು ಎರಡನೆಯ ಪ್ರಶ್ನೆ. ನನ್ನ ಎರಡನೆಯ ಟರ್ಮಿನ ಫೀ. ಅದಕ್ಕೆ ವೈನಿಯವರಿಂದ ಸಮ್ಮತಿ ಪಡೆದೇ ಸೂಟಿಯಲ್ಲಿ ಇನ್ನೊಂದು ಪತ್ರ ವೈನಿಯವರ ಹೆಸರಿನಲ್ಲಿ ಬರೆದಿದ್ದೆ. ಆ ಹಣವನ್ನು ನಾನು ನೌಕರಿ ಹತ್ತಿದ ಮೇಲಾದರೂ ಹೇಗಾದರೂ ಮಾಡಿ ಮುಟ್ಟಿಸುವದಾಗಿ ಬರೆದಿದ್ದೆ. ವತ್ಸಲೆಯು ಪತ್ರದಲ್ಲಿ ನನಗೆ ಕೊಟ್ಟ ಹಣವನ್ನು ಹೇಗಾದರೂ ಮಾಡಿ ಮುಟ್ಟಿಸಿಕೊಳ್ಳಲಿಕ್ಕೆ ಬಂದೀತು ಎಂದೂ ಬರೆದಿದ್ದಳು.'

'ಅಂದ್ರ? ನಾನು ನೌಕರಿ ಮಾಡಿದ ಮ್ಯಾಲೆ ಮುಟ್ಟಿಸಿದರೂ ನಡೀತದಾತ?' ಎಂದು ವೈನಿಯವರನ್ನು ಪ್ರಶ್ನೆ ಮಾಡಿದಾಗ ಅವರು ರೋಮಾಂಚಕಾರಿಯಾದ ಉತ್ತರ ಕೊಟ್ಟರು. 'ನೂರು ರೂಪಾಯಿ ಆಗುವ ವರದಕ್ಷಿಣೆ ಅಂತ ತಿಳಕೊಂಡು ನಿಮ್ಮನ್ನ ಅಳಿಯನ್ನ ಮಾಡಿಕೋಬಹುದು' ಎಂದು ಬಿಡಬೇಕೆ? ವೈನಿಯವರಿಗೆ ಏನೆಂದು ನನ್ನ ಪ್ರತಿಕ್ರಿಯೆ ಸೂಚಿಸಬೇಕು ನನಗೆ ತಿಳಿಯಲಿಲ್ಲ.

'ಆಕಸ್ಮಿಕವಾಗಿ ಧಾರವಾಡದ ಯಾತ್ರೆ ಮಾಡಿ ಬಂದಿದ್ದ ಸುಂದ್ರಕ್ಕ ಒಂದು ಹೊಸ ಸುದ್ದಿ ತಂದಿದ್ದಳು. 'ಅಲ್ಲ, ಕಾಂತಾಬಾಯಿ, ನಿಮ್ಮ ಅಪ್ಪ, ಅವ್ವ ಮನಸ್ಸಿನಾಗ ಮತ್ತೇನೋ ಧ್ಯೇನಸ್ತ್ಯಾರಲ್ಲ.' ಆ ಮತ್ತೊಂದು ಧ್ಯಾನ ವತ್ಸಲೆಯನ್ನು ಶಾಂತಾನ ಮೈದುನಗೆ ಕನ್ಯಾದಾನ ಮಾಡಿಕೊಡುವುದು ಆಗಿತ್ತು. ಮನೆಯ ಅಳಿಯನನ್ನಾಗಿ ಮಾಡಿಕೊಂಡು ಅಳಿಯನಿಗೆ ಹೊಟ್ಟೆ ತುಂಬ ಕಾಲೇಜ ಕಲಿಸುವದು ಆಗಿತ್ತು. ಆದರೆ ಈ ಶೇಖಮಹಮ್ಮದನ ಸಂಕಲ್ಪ ಸಿದ್ಧಿಯಾಗುವ ಬಗೆ ಹೇಗೆ ?'

'ನನ್ನ ಕಾಲೇಜ ಮತ್ತೆ ಶುರುವಾಗುವ ದಿನಗಳು ಸಮೀಪಿಸಿದವು. ಇತ್ತ ನಮ್ಮ ಭಾವನಿಗೆ ಶೇಷಣ್ಣ ಪತ್ರ ಬರೆದು ನೂರು ರೂಪಾಯಿ ತರಿಸಿಕೊಂಡಿದ್ದ. ಈ ಹಣವನ್ನು ಬಾಣಂತಿತನಕ್ಕೆಂದು ಉಪಯೋಗಿಸಿ ವೈನಿಯವರಿಗೆ ತವರುಮನೆಗೆ ಹೋಗಲು ಪರವಾನಿಗೆ ಕೊಟ್ಟರೆ ಅವರು ಅದಕ್ಕೆ ಸಿದ್ಧರಿರಲಿಲ್ಲ. ಮೊದಲು ಆ ಹಣದಿಂದ ನನ್ನ ಕಾಲೇಜ ಫೀ ವ್ಯವಸ್ಥೆ ಮಾಡಬೇಕೆಂದು ಹಟ ಹಿಡಿದರು.

ಧಾರವಾಡಕ್ಕೆ ಹೊರಡುವ ಹೊತ್ತು

ಬಂದಂತೆಲ್ಲ ನನ್ನ ಸಂಪೂರ್ಣ ಲಕ್ಷ್ಯ ವೈನಿಯವರ ಪ್ರಕೃತಿಯ ಕಡೆಗೆ. ಈ ಸಲದ ಬಾಣಂತಿ ಬಹಳ ಜರ್ಜರಿತರಾಗಿದ್ದರು. ನೂರಾ ಎಂಟು ಮಾನಸಿಕ ವೇದನೆಗಳು. 'ನನಗ ಜೀವನ ಬ್ಯಾಡಾಗೇದ' ಎಂದು ವೈನಿ ಯಾವಾಗಲೂ ಸುಂದ್ರಕ್ಕನ ಮುಂದೆ ಹೇಳುತ್ತಿದ್ದರು. ಆ ಮಾತು ಕೇಳಿದಾಗಲೆಲ್ಲ ನಾನು ಗಸರ್ರನೆ ಇಳಿದು ಹೋಗುತ್ತಿದ್ದೆ. ಶೇಷಣ್ಣನ ನಿಷ್ಠುರದ ವರ್ತನೆ ವೈನಿಯವರ ನಿರಾಶೆಗೆ ಕಾರಣವಾಗಿತ್ತು.

'ಈ ಸಲ ನಾನು ಧಾರವಾಡಕ್ಕೆ ಬಂದಾಗ ವೈನಿಯವರ ತಂದೆ ಗೋಪಾಲರಾಯರು ನನ್ನನ್ನು ನೋಡುವ ದೃಷ್ಟಿಯೇ ಸ್ವಲ್ಪ ಬೇರೆಯೆನಿಸಿತ್ತು. ಒಮ್ಮೆ ಒಂದು ಸಂಜೆ ವತ್ಸಲೆ ನನಗೆ ಚಹಾ ಕೊಡುವದಕ್ಕೆ ಬಂದಳು. ಆಗ ನಾನು ಈಜಿ ಚೇರ್ ಮೇಲೆ ತೂಕಡಿಸುತ್ತಿದ್ದೆ. ಕಪ್ಪು ಬಸಿ ಸಪ್ಪಳವಾಗುವಂತೆ ಟೇಬಲ್ ಮೇಲೆ ಇಟ್ಟದ್ದು ಕೂಡ ನನಗೆ ಕೇಳಿಸಲಿಲ್ಲ. ವತ್ಸಲೆ, 'ಚಹಾ' ಎಂದಾಗಲೇ ನನಗೆ ಎಚ್ಚರ. ಏನೊ ಎಂತೊ, ಈ ಸಲ ವತ್ಸಲೆಯನ್ನು ಸ್ವಲ್ಪ ಸಮೀಪದಿಂದ ನೋಡಿದಾಗ ನನಗೆ ವೈನಿಯವರ ನೆನಪಾಯಿತು. ಬಾಣಂತಿತನ ಅವರಿಗೊಂದು ಕಂತಾಗಿತ್ತು. ನನ್ನ ಮನಸ್ಸಿಗೆ ಏನೆನಿಸಿತೊ ಏನೊ, ಮೋಡಗವಿದಾಗ ಗಾಳಿ ತಟ್ಟಿದಂತಾಗಿ ಕಣ್ಣೊಳಗಿಂದ ನಾಲ್ಕು ಹನಿ ದಳದಳ ಉದುರಿಬಿಟ್ಟಿದ್ದವು. ಕರವಸ್ತ್ರದಿಂದ ಮುಖ ಮುಚ್ಚಿಕೊಂಡೆ. ವತ್ಸಲೆಗೆ ಗಾಬರಿಯೆನಿಸಿರಬೇಕು. ವತ್ಸಲೆ ಸ್ವಲ್ಪ ಸಮೀಪಕ್ಕೆ ಬಂದಳು. 'ನಮ್ಮಿಂದ ಎಲ್ಲಾರಿಗೂ ಎಷ್ಟು ತ್ರಾಸು.' 'ಇರಲಿ, ಏನೂ ತ್ರಾಸು ಇಲ್ಲ.' ವತ್ಸಲೆ ತಾನೂ ಸೆರಗಿನಿಂದ ಕಣ್ಣೊರಸಿಕೊಂಡಳು. 'ನಾ ಗಳಸಲಿಕ್ಕೆ ಹತ್ತಿದ ಮ್ಯಾಲಾದರೂ ನಿಮ್ಮ ಋಣದ ಉಪಕಾರ ತೀರಿಸ್ತೀನ.' 'ಇದ್ಪೊಲ್ಲದ್ಯಾಕ ಈಗ ಯಾಕ ಆ ಮಾತು?' ವತ್ಸಲೆ ಚಹದ ಕಪ್ಪು ಬಸಿ ಕೈಗೆ ಕೊಟ್ಟಳು. ಚಹ ಕುಡಿದಾಗ ಮನಸ್ಸಿದೆ ಸ್ವಲ್ಪ ಹಗುರೆನಿಸಿತು. 'ಕಾಶಾ ಹಂಗ', ಆದರೂ ಹಣ ಹುಟ್ಟಿಸಿ ಗೋತಾರ ಅಂತ ಬರೆದಿದ್ದಿಲ್ಲ?' ನನ್ನ ಪ್ರಶ್ನೆಗೆ ವತ್ಸಲೆ ನಾಚಿದಳು. ಅವಳ ಮುಖ ಬಿಳಿಚಿದಂತಾಗಿತ್ತು. 'ಸುಂದ್ರಕ್ಕನೂ ಏನೇನೊ ಹೇಳಿದಳು, ಚಾಷ್ಟೀನೂ ಮಾಡಿದಳು.' ವತ್ಸಲೆ ನೆಲದ ಕಡೆ ನೋಡುತ್ತ ನಿಂತಳು. ತಡೆ ಹಿಡಿದಿದ್ದ ಒಂದು ಮಾತನ್ನು ವತ್ಸಲೆಯ ಮುಂದೆ ಆಡಿಬಿಡಬೇಕು ಎನಿಸಿತು. ವತ್ಸಲೆಯ ಕೈ ಹಿಡಿದೆ. ವತ್ಸಲೆ ಕೈ ಕೊಸರಿಕೊಂಡಳು. ಕೈಯೊಳಗಿ ಕಪ್ಪು ಬಸಿ ತೆಗೆದುಕೊಂಡು ಹೊರಡತೊಡಗಿದಳು. 'ಒಂದು ಮಿನಿಟು,' ನಾನು ಆತುರದಿಂದ ನುಡಿದೆ. ವತ್ಸಲೆ ನಿರ್ವಾಹವಿಲ್ಲದೆ ಗೋಡೆಗೆ ಒರಗಿ ನಿಂತಳು. ನೋಡಲಾರದೆ ನನ್ನ ಕಡೆ ನೋಡಿದಳು.

'ಒಂದು ಮಾತು ಬಹಳ ದಿನದಿಂದ ಹೊಟ್ಟ್ಯಾಗ ಕೂತದ, ಹೇಳಿ ಬಿಡ್ತೇನಿ.' ವತ್ಸಲೆ ಮತ್ತಷ್ಟು ನಾಚಿದಳು, ಗಾಬರಿಯಾೂ ಆದಳು.

'ವತ್ಸಲಾ, ನಾ ಮಾಡಿಕೊಂಡ್ರ ನಿನ್ನs ಮಾಡಿಕೋತೀನಿ. ಇಲ್ಲದಿದ್ದರ ಹಾಂಗs ಇರ್ತೀನಿ... ನೀನು?' ವತ್ಸಲೆ ಉತ್ತರ ಕೊಡಲಿಲ್ಲ. ವತ್ಸಲೆಯ ಕಣ್ಣೊಳಗೆ ನೀರು! 'ನಾ ಹೋಗಿ ಬಿಡಲಾ ಹಂಗಾರ?' ಮತ್ತೆ ವತ್ಸಲೆಯ ಕಣ್ಣೊಳಗೆ ನೀರು. 'ಬ್ಯಾಡಾ.' ದುಃಖಿಸುತ್ತಲೇ ನುಡಿದಳು ವತ್ಸಲೆ. 'ಮತ್ತೆ?' ನನ್ನ ಪ್ರಶ್ನೆಗೆ ನೇರ ಉತ್ತರ ಕೊಡದೆ, 'ಯಾರೋ ಬಂದರು' ಎಂದು ಗಾಬರಿಯಿಂದ ಒಳಗೆ ಹೋಗತೊಡಗಿದರೆ ಎದುರಿಗೆ ಜಯಣ್ಣ. ವತ್ಸಲೆ ಜಯಣ್ಣನಿಗೂ ಚಹ ಕೊಟ್ಟಳು. 'ಬಂದ್ಯಾಗ?' 'ನನ್ನದು ಆಗೇದ.' 'ನನ್ನ ಜೋಡಿ ಸ್ವಲ್ಪ ಕುಡಿ.' ಇನ್ನಷ್ಟು ಚಹಾ ತರಲು ವತ್ಸಲೆಗೆ ಹೇಳಿದ. ವತ್ಸಲೆ ಮುಗುಳ್ನಕ್ಕು ನನ್ನ ಕಪ್ಪಿನಲ್ಲಿ ಮತ್ತಷ್ಟು ಚಹಾ ಹಾಕಿದಳು. ಹುಬ್ಬಳ್ಳಿಯ ಸಂಗೂ ಹೋಗಿ ಮೊದಲನೆಯ ಟಾಕಿ 'ಆಲಮ್ ಆರಾ' ನೋಡಿ ಬಂದ ಖುಷಿ ಜಯಣ್ಣನವಾಗಿದ್ದರೆ ನನ್ನ ಮಾತ್ರ ವತ್ಸಲೆಯ ಖುಷಿ ನಮ್ಮ ಮೊದಲನೆಯ ಟಾಕಿಯಾಗಿತ್ತು.



ಹಾರ್ಲಿಕ್ಸ್ ಆರೋಗ್ಯದಾಯಕ
ಅಂದು, ಇಂದು, ಎಂದೆಂದೂ.
ಅನ್ನುತ್ತಾಳೆ ಸುಚಿತ್ರ.
ನಿಮ್ಮ ಕುಟುಂಬಕ್ಕೆ ಅತ್ಯುತ್ತಮ ಭವಿಷ್ಯ ನಿರ್ಮಿಸಲು ಆರೋಗ್ಯದಾಯಕ ಹಾರ್ಲಿಕ್ಸ್ ಅನ್ನು ಬಳಸಿರಿ.
ಆರೋಗ್ಯವೆಂದರೆ ಯಶಸ್ಸು ಮತ್ತು ಸಂತೋಷದ ಗುಟ್ಟು. ರೋಗವನ್ನು ಹೊರದೂಡಿ, ಭದ್ರತೆಯನ್ನು ನಿರ್ಮಿಸುವುದೇ ಆರೋಗ್ಯ.
ಸುಚಿತ್ರ ಹಾರ್ಲಿಕ್ಸ್ ಅನ್ನು ತನ್ನ ಕುಟುಂಬ ಜೀವನದ ಒಂದು ಸಾಧನವನ್ನಾಗಿ ಮಾಡಿಕೊಂಡಿರುವುದಕ್ಕೆ ಇದೇ ಕಾರಣ. ಹಾರ್ಲಿಕ್ಸ್ ಕಾಲದ ಸತ್ವಪರೀಕ್ಷೆಯನ್ನು ಯಶಸ್ವಿಯಾಗಿ ಎದುರಿಸುತ್ತದೆ ಎಂಬುದು ಅವಳ ದೃಢ ನಂಬಿಕೆ.
ಹಾರ್ಲಿಕ್ಸ್... ವಿಶ್ವಾದ್ಯಂತ ಡಾಕ್ಟರುಗಳು ಶಿಫಾರಸು ಮಾಡುವುದು ಇದೊಂದನ್ನೇ. ಇದು ಅತ್ಯಧಿಕ ಪುಷ್ಟಿ ಕೊಡುವ ಏಕೈಕ ಸಾಧನ. ಶುದ್ಧ ಮತ್ತು ಸಮೃದ್ಧ ಪೋಷಕಾಂಶಗಳಿಂದ ಮಿಶ್ರಗೊಂಡಿರುವ ಹಾರ್ಲಿಕ್ಸ್ ವಿಶಿಷ್ಟ ವಿಧಾನದಲ್ಲಿ ತಯಾರಾಗಿದೆ.
ಸುಚಿತ್ರಳಂತೆ ನೀವೂ ನಿಮ್ಮ ಕುಟುಂಬದ ಎಲ್ಲ ಸದಸ್ಯರಿಗೆ ಪ್ರತಿದಿನ ಹಾರ್ಲಿಕ್ಸ್ ಅನ್ನು ತಪ್ಪದೇ ಕೊಡಿರಿ. ದಿನೇ ದಿನೇ ಅವರು ಅತ್ಯಂತ ಆರೋಗ್ಯವಂತರಾಗಿ ಮತ್ತು ಶಕ್ತಿವಂತರಾಗಿ ಬೆಳೆಯುತ್ತಾ ಹೋಗುವುದನ್ನು ನೀವೇ ನೋಡುವಿರಿ.
"ನೀವು ಹಾರ್ಲಿಕ್ಸ್‌ನಲ್ಲಿ ಸಂಪೂರ್ಣ ನಂಬಿಕೆ ಇಡಬಹುದು.
ನಾನು ಯಾವಾಗಲೂ ಹಾರ್ಲಿಕ್ಸ್ ಅನ್ನೆ ಶಿಫಾರಸು ಮಾಡುವುದು. ಅಸ್ವಸ್ಥರಾದವರಿಗೆ ಒಳ್ಳೆಯ ಪುಷ್ಟಿ ಕೊಡುವುದರಿಂದ ನಾನು ಯಾವಾಗಲೂ ಹಾರ್ಲಿಕ್ಸ್ ಅನ್ನೇ ಬರೆದುಕೊಡುತ್ತೇನೆ. ಕಾರಣ ಬಹಳ ಸರಳ. ಹಾರ್ಲಿಕ್ಸ್ ಪರಿಶುದ್ಧ. ಅದರಲ್ಲಿ ಕಲಬೆರಕೆ ಇಲ್ಲ. ನಿಮ್ಮನ್ನು ಸದಾ ಆರೋಗ್ಯವಂತರನ್ನಾಗಿಡಲು ಅಗತ್ಯವಾದ ಪ್ರೋಟೀನುಗಳು, ಕಾರ್ಬೋಹೈಡ್ರೇಟುಗಳು ಮತ್ತು ಖನಿಜಾಂಶಗಳ ವಿಶಿಷ್ಟ ಮಿಶ್ರಣ ಹಾರ್ಲಿಕ್ಸ್."
ಒಂದು ರೂಪಾಯಿ ಉಳಿಸಿರಿ. 800 ಗ್ರಾಂ ಎಕಾನಮಿ ಬಾಟಲ್ ಕೊಂಡುಕೊಳ್ಳಿರಿ.
Horlicks
ಸಂಪೂರ್ಣ ಪೋಷಣೆಯನ್ನು ಪಡೆಯಲು
ಇವರೆಲ್ಲರಲ್ಲಿ ಆರೋಗ್ಯ ತುಂಬಿದೆ ಹಾರ್ಲಿಕ್ಸ್
ಹಾರ್ಲಿಕ್ಸ್ ಒಂದು ರಿಜಿಸ್ಟರ್ಡ್ ಟ್ರೇಡ್ ಮಾರ್ಕ್.

ಮರುದಿನ ಕಾಲೇಜಿಗೆ ಹೋ[illegible] ಪಿಸೀಸ ಹೋಗಿದ್ದೆ. ನನ್ನ ಕಿಸೆಯೊಳಗೆ ಎರಡು ವೀಡಾ ಇದ್ದವು. ನನಗೆ ಹೇಳಲಾರದ [illegible]ತ ಎನಿಸಿತು. ಮೊದಲನೆಯ ಪೀರಿಯಡ್ ಮುಗಿದಿತ್ತು. ಆಫೀಸ್ ಸಿಪಾಯಿ ನನ್ನನ್ನು ಹುಡುಕಿಕೊಂಡು ಬಂದಿದ್ದ. 'ನಿಮಗೊಂದು ತಾರು ಐತಿ ನೋಡ್ರಿ' ಎಂದು ಹೇಳಿದ. ಹಿಂದಿನ ದಿನದ ಹುರುಪೆಲ್ಲ ರಭುರ್ರನೆ ಇಳಿದು ಹೋಗಿತ್ತು. ಹೆಡ್ ಕ್ಲಾರ್ಕ್, 'ತಾರು ಅದ ನೋಡ್ರಿ ನಿಮ್ಮದು' ಎಂದು ಕೈಯಲ್ಲಿ ಕೊಟ್ಟರು. ನನ್ನ ಎದೆ ಧಸಲ್ ಎಂದಿತು. ಗುಲಾಬಿಯ ಮಡಚಿದ ಹಾಳೆಯನ್ನು ಬಿಚ್ಚಿದೆ. ಸೊಟ್ಟಾಪಟ್ಟಾ ಕಾರ್ಬನ್ ಕಾಪೀ ಅಕ್ಷರಗಳು ಗುಂಡು ಹೊಡೆದಂತೆ ನನ್ನ ಎದೆಯೊಳಗೆ ನಟ್ಟವು. "ವೈಫ್ ಸೀರಿಯಸ್, ಸ್ಟಾರ್ಟ್ ಇಮೀಡಿಯೇಟ್ಲಿ–ಶೇಷಣ್ಣ." ನನಗೆ ಏನೂ ತಿಳಿಯದೆ ಹುಚ್ಚಿದ್ದು ಹರಿದಾಡಿದೆ. ಮತ್ತೇನು ಜಡ್ಡಾಗಿರಬಹುದು ವೈನಿಯವರಿಗೆ? ಮನಸ್ಸು ದಿಗಿಲುಗೊಂಡಿತ್ತು.

ಗದುಗಿಗೆ ಮುಂದಿನ ಗಾಡಿಯನ್ನೇ ಹತ್ತಿದೆ. ಗದುಗು ಸಮೀಪಿಸಿದಂತೆಲ್ಲ ಎದೆಯೊಳಗೆ ಜ್ವಾಲೆ ಹೊತ್ತಿಸಿದಂತಾಯಿತು. ಗದುಗಿನ ಸ್ಟೇಶನ್ ಮಗ್ಗುಲಿಗೇ ಸ್ಮಶಾನ! ಭಯಂಕರ ಸ್ಮಶಾನ ಸತ್ಯವನ್ನು ಎದುರಿಸಲು ಧೈರ್ಯ ಸಾಲಲಿಲ್ಲ. ಹೇಗೋ ಮತ್ತೆ ಹೊರಗೆ ಬಂದೆ. ಕಣ್ಣು ಮುಚ್ಚಿಕೊಂಡೆ, ಆದರೂ ಕಣ್ಣಿಗೆ ಏನೋ ಚಪಲ. ಕಣ್ಣು ತಂತಾನೇ ತೆರೆದಿದ್ದವು...ಚಿತೆ!... ದಹನ ಕ್ರಿಯೆ ನಡೆಯುತ್ತಿದೆ—ಧಸ್ ಧಸ್ ಉರಿ! 'ಯಾರೋ ಸತ್ತಾರ ನೋಡ್ರಿ. ಹಾರೋವರ ಹೆಣ ಉರೀತೈತಿ' ಯಾರೋ ಎಂದರು. ಯಾರೋ ಮರುಗುತ್ತ ಲೊಚಗುಡಹತ್ತಿದರು. ಹೌದು ಯಾರದೂ ಅಲ್ಲ ಆ ಹೆಣ. ನಮ್ಮ ವೈನಿಯದೇ ಇದ್ದಿರಬೇಕು. 'ವೈನೀ'ss ಎಂದು ಚೀರಿ ಧೊಪ್ಪನೆ ಬಿದ್ದುಬಿಟ್ಟಿದ್ದೆ.

'ಸ್ಟೇಶನ್' ಬಂದಾಗ ಯಾರೋ ಹಿಡಿದಿದ್ದರು. ಯಾರೋ ಎತ್ತಿದ್ದರು; ಯಾರೋ ಟಾಂಗಾದಲ್ಲಿ ಹಾಕಿದ್ದರು; ಟಾಂಗಾದವ 'ಎಲ್ಲಿಗರೀ' ಎಂದ; 'ಕಿಲ್ಲೆ' ಎಂದೆ; ಮನೆ ಬಂತು. ಒಳಗೆ ಕಾಲಿಡಲು ಧೈರ್ಯವಿಲ್ಲ. ವಠಾರವೆಲ್ಲ ಸ್ಮಶಾನದಂತೆ ಭಣಗುಡುತ್ತಿತ್ತು. ಒಳಗೆ ಕಾಲಿಟ್ಟೆ; ಹೆದರಿ ಗಕ್ಕನೆ ಮನೆಯನ್ನು ಹೊಕ್ಕೆ; 'ಬಿಂದಾ, ಹೋದಳು ನಿಮ್ಮ ವೈನಿ...ಬಿಂದಾ, ನಿಮ್ಮ ವೈನಿ ಹೋದಳಪಾ' ಎಂದು ಶೇಷಣ್ಣ ನನ್ನ ತೆಕ್ಕೆ ಬಿದ್ದ. ನನ್ನ ದುಃಖ ಎಲ್ಲಿ ಅಡಗಿತ್ತೋ, ಕಣ್ಣೀರಧಾರೆಯಾಗಿ ಕಟ್ಟಿಕೊಂಡು ಬಂತು. ಶೇಷಣ್ಣನನ್ನು ಅಪ್ಪಿ ಮುಟ್ಟಿ ಹಾಕಿದೆ. ಎರಡು ಹೃದಯದ ತುಂಡುಗಳು ಒಂದು ಶೋಕಸಾಗರದಲ್ಲಿ ತೇಲಾಡಹತ್ತಿದವು.

'ರಾಗಿ'ಯನ್ನು ಎತ್ತಿ ರಮಿಸಿದ_

ವತ್ಸಲೆ–

'ನನ್ನ ಕೈ ಯಾವ ಬಾಣಂತಿತನಕ್ಕೂ ಅವಲಕ್ಷಣ ಅನಿಸಿಕೊಂಡಿದ್ದಿಲ್ರವ್ವಾ' ಎಂದು ಸುಂದ್ರಕ್ಕ ಅವ್ವನ ಮುಂದೆ ಕಣ್ಣೀರು ತೆಗೆದರು. ನಾವೆಲ್ಲರೂ ಗದುಗಿಗೆ ಹೋಗಿದ್ದೆವು. 'ನಾನS ಕೊಂದೆ ನಿಮ್ಮ ಮಗಳ್ನ ಗೋಪಾಲರಾವ್, ನಾನS ಕೊಂದೆ' ಎಂದು ಶೇಷಣ್ಣ ಕಾಕಾನನ್ನು ತಬ್ಬಿಕೊಂಡು ಕಣ್ಣೀರು ಹಾಕಿದರು. ಕಾಕಾ ಶೇಷಣ್ಣನ ಬೆನ್ನ ಮೇಲೆ ಕೈಯಾಡಿಸುತ್ತ ಸಮಾಧಾನ ಮಾಡಿದ.

ಅಕ್ಕ ಬಿಟ್ಟು ಹೋಗಿದ ಹತ್ತು ದಿನದ ಬತ್ತಿಯನ್ನು ಅವ್ವ [illegible]ದೆಯ ಮೇಲೆ ಹಾಕಿಕೊಂಡು ಅತ್ತು ಅತ್ತು ಸೋತು ಹೋದಳು, ರಾಗಿ ಗಾಬರಿಯಾದಾಗೆಲ್ಲ ನಾನು ಅವನನ್ನು ಎತ್ತಿಕೊಂಡು [illegible] ತುಂಬೆಲ್ಲ ಓಡಾಡಿದೆ. 'ಅದೆಂಥಾ ಸಂ[illegible] ಏನ್ರಿ. ಹೊಟ್ಟ್ಯಾಗಿನ ಮಾಸ ಪೂರಾ ಹೊರಗS ಹೋಗಲಿಲ್ಲಂತ.' [illegible] ಅವರ ಮನೆಯಲ್ಲಿ ಅಕ್ಕನ ಕಾಯಿಲೆಯ ಸುದ್ದಿಯನ್ನೆಲ್ಲ ಕಥೆ ಮಾಡಿ ಹೇಳಿದರು.

'ಪರದೇಶಿ ಮಕ್ಕಳನ್ನ ಯಾರ ಕಡೆ ಜೋಪಾನ ಮಾಡಲಿಕ್ಕೆ ಕೊಡಲಿ ಗೋದಕ್ಕ?

ಮಹಾರೋಗದ ನಿವಾರಣೆ ೩

ಪುಪ್ಪುಸದ ಕ್ಯಾನ್ಸರ್

ಬೀಡಿ ಸಿಗರೇಟು ಸೇದುವವರೇ, ಇಲ್ಲಿ ಗಮನಿಸಿರಿ !

ನಿಮಗೆ ಐದು ವರುಷಗಳಿಗೆ ಮೇಲ್ಪಟ್ಟು ಈ ಚಟವಿದ್ದರೆ
ದಿನಕ್ಕೆ ಐದಕ್ಕಿಂತಲೂ ಹೆಚ್ಚು ಬೀಡಿ ಸಿಗರೇಟುಗಳನ್ನು ಸೇದುತ್ತಿದ್ದರೆ—
ನಿಮ್ಮ ಕೆಮ್ಮಿನೊಡನೆ ರಕ್ತ ಬೀಳುತ್ತಿದ್ದರೆ—
ನಿಮ್ಮ ಧ್ವನಿಯು ಒಮ್ಮೆಲೇ ಕುಗ್ಗಿ ಹಾಗೆಯೇ ಮುಂದುವರಿದರೆ—
ನಿಮಗೆ ಮೇಲಿಂದ ಮೇಲೆ ಕೆಮ್ಮು ಬಂದು ಗುಣವಾಗದೆ ಇದ್ದರೆ—
ನಿಮ್ಮ ಎದೆಯಲ್ಲಿ ನೋವು ಯಾವಾಗಲೂ ಕಾಣಿಸಿಕೊಂಡರೆ—
ನೀವು ಬಹಳ ಕಾಳಜಿ ತೆಗೆದುಕೊಳ್ಳಬೇಕು.

ಮುಖ್ಯವಾಗಿ ನಿಮ್ಮ ವಯಸ್ಸು ೪೦ ವರ್ಷಕ್ಕಿಂತಲೂ ಹೆಚ್ಚಿದ್ದರೆ ನೀವು ಪ್ರಾರಂಭಿಕ ಅವಸ್ಥೆಯಲ್ಲಿರುವ ಪುಪ್ಪುಸ ಕ್ಯಾನ್ಸರ್ ರೋಗದಿಂದ ಬಳಲುತ್ತಿರಬೇಕೆಂದು ತಿಳಿದುಕೊಳ್ಳಬೇಕು. ನೀವು ಕೂಡಲೇ ಯೋಗ್ಯ ಡಾಕ್ಟರರನ್ನು ಕಂಡು ಒಂದನೇ ಹಂತದಲ್ಲಿಯೇ ಕ್ಯಾನ್ಸರ್ ರೋಗವನ್ನು ಗುರುತಿಸಿ ತಕ್ಕ ಉಪಾಯಗಳನ್ನು ತೆಗೆದುಕೊಳ್ಳಬೇಕು. ಕ್ಯಾನ್ಸರ್ ರೋಗ ಸರ್ವ ವ್ಯಾಪಿ ಇರುತ್ತದೆ. ಅದು ಇಂಥವರಿಗೆ ಮಾತ್ರ ಬರುತ್ತದೆಂದು ಖಾತ್ರಿ ಹೇಳಲು ಬರುವದಿಲ್ಲ. ಬೇರೆ ಬೇರೆ ಜನರಿಗೆ ದೇಶದ ಬೇರೆ ಬೇರೆ ಭಾಗಗಳಲ್ಲಿ ಅದು ಕಾಣಿಸಿಕೊಳ್ಳುವ ಸಂಭವವಿದೆ.

ಆದರೂ ನೀವು ಅಧೀರರಾಗುವ ಕಾರಣವಿಲ್ಲ. ಪ್ರಾರಂಭಿಕ ಅವಸ್ಥೆಯಲ್ಲಿರುವ ಕ್ಯಾನ್ಸರ್ ರೋಗ ನೂರಕ್ಕೆ ನೂರರಷ್ಟು ಗುಣವಾಗುವದು. ಇಂಥ ಮಹಾ ರೋಗದಿಂದ ಬಳಲುತ್ತಿರುವ ಅಸಂಖ್ಯ ಬಡ ಹಾಗೂ ಮಧ್ಯಮ ವರ್ಗದ ಜನರ ಸಲುವಾಗಿ ಹುಬ್ಬಳ್ಳಿಯ ಅಮರಗೋಳದ ಬಳಿ ಒಂದು ಸುಸಜ್ಜಿತ ಕ್ಯಾನ್ಸರ್ ಆಸ್ಪತ್ರೆಯನ್ನು ಸ್ಥಾಪಿಸಲು ಯೋಜಿಸಲಾಗಿದೆ.

ಮುಕ್ತಹಸ್ತದಿಂದ ಈ ಸತ್ಕಾರ್ಯಕ್ಕಾಗಿ ದಾನ ಮಾಡಿರಿ.
ನಿಮ್ಮ ಕಾಣಿಕೆಯನ್ನು ಇಂದೇ ಸಲ್ಲಿಸಿರಿ.

ಡಾ. ಆರ್. ಬಿ. ಪಾಟೀಲ
ಚೇರಮನ್

ಕ್ಯಾನ್ಸರ್ ಶುಶ್ರೂಷಾ ಹಾಗು ಸಂಶೋಧನ ಸಂಸ್ಥೆ

ವಿದ್ಯಾನಗರ ಹುಬ್ಬಳ್ಳಿ

Space Donated By:
THE SANDUR MANGANESE AND IRON ORES Ltd.,
Sandur (Dist : BELLARY)

ನಾ ಎಲ್ಲಿ ಇರಲಿ?' ಎಂದು ಶೇಷಣ್ಣ ಒತ್ತರಿಸಿ ಬರುವ ದುಃಖವನ್ನು ಹತ್ತಿಕ್ಕಲಾರದೇ ಗೋಳಾಡಿ ಬಿಟ್ಟರು. ಶೇಷಣ್ಣ ಕಣ್ಣೀರು ಹಾಕುವಾಗಲೆಲ್ಲ ಬಿಂದಣ್ಣ ಬೆನ್ನಿಗೆ ನಿಂತು 'ಹಾಂಗೆಲ್ಲಾ ಮಾಡಬೇಡ' ಎಂದು ಸಂತೈಸುತ್ತಿದ್ದ.

'ನಾ ಜ್ಞಾಪಾನ ಮಾಡ್ತೇನಿ. ಮಂದಿ ಸಂಬಂಧ ಕಡಿದರೂ ದೊಡ್ಡವರ ಸಂಬಂಧ ಹ್ಯಾಂಗ ಕಡೀತದ' ಎಂದು ಅವ್ವ ಒಳಗೆ ಗೋದಕ್ಕನ ಮುಂದೆ ಆಡಿದ ಮಾತು ಶೇಷಣ್ಣನ ಕಿವಿಯ ಮೇಲೂ ಬಿದ್ದಾಗ ಶೇಷಣ್ಣನಿಗೆ ಸ್ವಲ್ಪ ಧೈರ್ಯ ಬಂದಿರಬೇಕು. ಶೇಷಣ್ಣ, ಬಿಂದಣ್ಣ ಯಾವ ಸಂಕೋಚವೂ ಇಲ್ಲದೆ ಒಬ್ಬರಿಗೊಬ್ಬರು ಕಾಳಜಿ ಮಾಡುವವನ್ನು ನೋಡಿ ನನಗೆ ಸಮಾಧಾನವಾಯಿತು.

ದಿನಕರ್ಮ ಮುಗಿದ ಮೇಲೆ ನಮ್ಮೂರಿಗೆ ಬಂದೆವು. ಬಿಂದಣ್ಣನೂ ಕಾಲೇಜ ಅಭ್ಯಾಸಕ್ಕಾಗಿ ನಮ್ಮ ಜೊತೆಗೇ ಬಂದ(ರು.) ಶೇಷಣ್ಣನಿಗೆ ಮನೆ ಎದ್ದೋಡಿಸಿದಂತಾದಬಾರದೆಂದು ಗೋದಕ್ಕ ಎರಡು ದಿನ ಹೆಚ್ಚಿಗೆ ಇದ್ದರು.

'ರಾಗಿ'ಯನ್ನು ಎತ್ತಿ ರಮಿಸಿದ-

ಬಿಂದಣ್ಣ –

'ಯಾಕೋ ಬೀಗರ ಮನೆ ಪರಕೀಯವೆನಿಸಹತ್ತಿತು. ನನ್ನ ಬಾಡಿಗೆ ಕೋಣೆಯಲ್ಲೇ ಸಾಂಬನ ಜೊತೆ ಅಭ್ಯಾಸ ಮಾಡುತ್ತಿದ್ದೆ. ಒಮ್ಮೊಮ್ಮೆ ರಾಗಿಯನ್ನು ನನ್ನ ಮಗ್ಗುಲಿಗೇ ಮಲಗಿಸಿಕೊಳ್ಳುತ್ತಿದ್ದೆ. ರಾಗಿ ಈಗ ವತ್ಸಲೆಗೇ ಅಭ್ಯಾಸವಾಗಿ ಹೋಗಿದ್ದ. ಸಣ್ಣ ಕೂಸು ಅಜ್ಜಿಯ ತೊಡೆಯ ಮೇಲೆಯೇ ಬೆಳೆಯಹತ್ತಿತು. ಶೇಷಣ್ಣ ತಿಂಗಳಿಗೆ ಒಂದೆರಡು ಸಲ ಧಾರವಾಡಕ್ಕೆ ಬಂದು ಹುಡುಗರನ್ನು ನೋಡಿಕೊಂಡು ಹೋಗುತ್ತಿದ್ದ.'

ವತ್ಸಲೆಯಂತೂ ಅಂತರಂಗದಲ್ಲಿಯೂ ಬಹಿರಂಗದಲ್ಲಿಯೂ ನನ್ನ ಶ್ರೇಯಸ್ಸನ್ನೇ ಕೋರಿ ಸರ್ವ ವಿಧದಲ್ಲೂ ನನಗೆ ಅನುಕೂಲವಾದಳು. ಬಿ. ಎ. ಪರೀಕ್ಷೆ ನಡೆದಿತ್ತು. ಮುಗ್ಗೀದವ ಪೇಪರಿನ ಹಿಂದಿನ ರಾತ್ರಿ ತಲೆಶೂಲೆಯೆಂದು ಖೋಲಿಗೆ ಹೋಗದೆ ಮನೆಯಲ್ಲೇ ನರಳುತ್ತ ಮಲಗಿದ್ದಾಗ ಯಾವ ಮಾಯೆಯಿಂದಲೋ ವತ್ಸಲೆ ನಡುರಾತ್ರಿಯಲ್ಲಿ ಎದ್ದು ಬಂದು ತಲೆಗೆ ಅಮೃತಾಂಜನ ಹಚ್ಚಿ ಹೋಗಿದ್ದಳು. ಆಕೆಯ ಶುಶ್ರೂಷೆ ನನ್ನ ಶ್ರೇಯಸ್ಸಿಗೆ ಹಿಡಿದ ಹಸಿರು ನಿಶಾನಿಯಾಗಿತ್ತು.

ಒಂದು ದಿನ ಗೋಪಾಲರಾಯರನ್ನು ಅವರ ಮನೆಯಲ್ಲಿ ಕಂಡಾಗ ಅವರು ಒಬ್ಬರೆ ಇದ್ದರು. ವತ್ಸಲೆ ಹುಡುಗರನ್ನು ಕರೆದುಕೊಂಡು ದತ್ತಾತ್ರೇಯ ಗುಡಿಗೆ ಹೋಗಿದ್ದಳು. ಇಬ್ಬರೂ ಆ ವಿಷಯ ಈ ವಿಷಯ ಮಾತನಾಡುತ್ತ ಕುಳಿತಾಗ 'ರಾಗಿನೂ ತನ್ನ ಮಾಂಸಿ ಹತ್ತೀಲೆ ಕಾಯಂ ಆಗೇ ಇರೋಹಂಗ ಒಂದು ಉಪಾಯ ಹುಡುಕೀನಿ'. ಈ ಮಾತು ಕೇಳಿ ತುದಿಯಿಂದ ಮುಡಿವರೆಗೆ ಅಂಗಾಂಗಗಳಲ್ಲಿ ಆನಂದ ಉಕ್ಕಿ ಮೈಯೆಲ್ಲ ರೋಮಾಂಚಗೊಂಡಿತು... ಹೌದೆ? ಹೌದು. ಅಲ್ಲದೆ ಏನು ?

'ಕಾಲೇಜ ಸೂಟಿಯಾದ ಮರುದಿನವೇ ಶೇಷಣ್ಣನೂ ಬಂದ. ನಾನು, ಶೇಷಣ್ಣ ರಾಗಿಯನ್ನು ಆಡ್ಯಾಡಿಸಿಕೊಂಡು ಬರಲು ಹೋದೆವು. ಶೇಷಣ್ಣ ಚಹಾದ ಅಂಗಡಿಗೆ ಕರೆದುಕೊಂಡು ಹೋದ. ಶೇಷಣ್ಣನ ಜೊತೆಗೆ ನಾನು ಚಹಾದ ಅಂಗಡಿಗೆ ಹೋದದ್ದು ಇದೇ ಮೊದಲು ಬಾರಿ. 'ಏನ ತಗೋತಿಯಪಾ ಬಿಂದೂ?' ಎಂದು ಉತ್ಸಾಹದಿಂದ ಕೇಳಿದ ಶೇಷಣ್ಣ. 'ನಿನಗೇನಪಾ ರಾಗಿ?' ಎಂದು ರಾಗಿಯನ್ನು ಕೇಳಿದ. ರಾಗಿ 'ಬಿಚ್ಚುಟ್ಟು' ಎಂದ.

ಎತ್ತಿನ ಪಾರ್ಕಿನಲ್ಲಿ ಬಂದು ಕೂತೆವು. ಇಬ್ಬರೂ ಆ ವಿಷಯ ಈ ವಿಷಯ ಮಾತನಾಡುತ್ತ ಕುಳಿತಾಗ ಶೇಷಣ್ಣ 'ಗೋಪಾಲರಾಯರು ಏನೋ ಹೇಳುತ್ತಿದ್ದರಲ್ಲಪಾ. ನಿನ್ನ ಅಭಿಪ್ರಾಯ ಏನು?' ಶೇಷಣ್ಣನ ಸರಳ ಪ್ರಶ್ನೆಗೆ ಸರಳವಾಗಿ ಉತ್ತರ ಕೊಡಲು ನನಗೆ ಪ್ರಶಸ್ತವೆನಿಸಲಿಲ್ಲ. ಸ್ವಲ್ಪ

ಮೂರನೇ ತಿಂಗಳಲ್ಲಿ ಮಗುವಿಗೆ ಕೊಡುವ ಘನ ಆಹಾರ – ಮಗುವಿನ ಪೂರ್ತ ಜೀವಮಾನಕ್ಕೆ ಆಧಾರ

ಡಾಕ್ಟರರು ಹೇಳುತ್ತಾರೆ: ಹಾಲು ಒಂದೇ ಸಾಕಾಗದು.



ಡಾಕ್ಟರರು ಶಿಫಾರಸು ಮಾಡುತ್ತಾರೆ:

ಫೆರೆಕ್ಸ್®

<u>ಸಂತುಲಿತ</u> ಘನ ಆಹಾರ
ಶೀಘ್ರ, ಸರ್ವಾಂಗೀಣ ಬೆಳವಣಿಗೆಗಾಗಿ

ಮಗುವಿನ ಶರೀರ ಮತ್ತು ಮೆದುಳು ತ್ವರಿತ ಗತಿಯಿಂದ ಬೆಳೆಯುತ್ತಿರುವ ಕಾಲಾವಧಿಯಲ್ಲಿ ಹಾಲೊಂದೇ ಸಾಕಾಗುವುದಿಲ್ಲ. ತಾಯಿಯ ಹಾಲು ಕಡಿಮೆ ಮಾಡಿ ಘನಾಹಾರಗಳನ್ನು ಕೊಡಲು ಆರಂಭ ಮಾಡಬೇಕು— 3ನೇ ತಿಂಗಳಿನಲ್ಲಿಯೇ. ಆಗಿದು ತಿನ್ನಲು ಮಗು ಕಲಿಯಬೇಕು. ಅದಕ್ಕಾಗಿ... ಡಾಕ್ಟರರು ಫೆರೆಕ್ಸ್ ಶಿಫಾರಸು ಮಾಡುತ್ತಾರೆ. ಕಾರಣ: ಅದು ಮಗುವಿನ ಬೆಳವಣಿಗೆಯ ಅನೇಕ ಅವಶ್ಯಕತೆಗಳನ್ನು ಪೂರೈಸುವ ಸಂತುಲಿತ ಆಹಾರ. ರಕ್ತದ ಆರೋಗ್ಯಕ್ಕಾಗಿ ಮತ್ತು ಚೈತನ್ಯಕ್ಕಾಗಿ ಸರಿಯಾದ ಪ್ರಮಾಣದಲ್ಲಿ ಕಬ್ಬಿಣ ಸತ್ವ; ಎಲುಬುಗಳ ಮತ್ತು ಹಲ್ಲುಗಳ ಗಟ್ಟಿಮುಟ್ಟುತನಕ್ಕಾಗಿ ಕ್ಯಾಲ್ಸಿಯಂ ಮತ್ತು ವಿಟಮಿನ್ ಡಿ; ಮೆದುಳಿನ ಮತ್ತು ಶರೀರದ ಶೀಘ್ರ ಬೆಳವಣಿಗೆಗಾಗಿ ಸರಿಯಾದ ಪ್ರೋಟೀನ್‌ಗಳು; ಬೆಳೆಯುವ ಶರೀರಕ್ಕೆ ಶಕ್ತಿ— ಇವೆಲ್ಲ ಫೆರೆಕ್ಸ್‌ನಲ್ಲಿವೆ. ತಾಯಂದಿರು ಬೇರೆ ಯಾವುದೇ ಘನ ಆಹಾರಕ್ಕಿಂತ ಅಧಿಕವಾಗಿ ಫೆರೆಕ್ಸ್‌ನ್ನು ಆರಿಸುವುದರಲ್ಲಿ ಆಶ್ಚರ್ಯವೇನೂ ಇಲ್ಲ.
ಹಣ್ಣುಗಳು, ತರಕಾರಿಗಳು, ಬೇಳೆ, ಮಾಂಸ, ರೊಟ್ಟಿಗಳು— ಇವುಗಳಲ್ಲಿ ಯಾವುದರೊಡನೆಯಾದರೂ ಬೆರಸಿ ಕೊಡಲು ಫೆರೆಕ್ಸ್ ರುಚಿಕರವಾಗಿದೆ.
ಫೆರೆಕ್ಸ್ ಆದರ್ಶವಾದ ಪ್ರಥಮ ಘನ ಆಹಾರ.

ನಮ್ಮ ಉಚಿತ ಫೆರೆಕ್ಸ್ ಪುಸ್ತಿಕೆಯನ್ನು ಮತ್ತು ರೂ. 2 ರಿಯಾಯಿತಿಯ ಯೋಜನೆಯ ವಿವರವನ್ನು ಪಡೆಯಲು ಇಂದೇ ಬರೆಯಿರಿ.
ನಿಮ್ಮ ಹೆಸರು ಮತ್ತು ವಿಳಾಸದ ಜೊತೆಗೆ (ಭಾಷೆಯ ಹೆಸರನ್ನು ನಮೂದಿಸಿರಿ) 25 ಪೈಸೆ ಸ್ಟಾಂಪನ್ನು ಇಟ್ಟು ಪೋಸ್ಟ್ ಬ್ಯಾಗ್ ನಂ. 19119, ಬೊಂಬಾಯಿ 400 025 ಈ ವಿಳಾಸಕ್ಕೆ ಕಳಿಸಿರಿ.



ಗ್ಲಾಕ್ಸೊ

ALL-GP 61.935 KN

ಮೈ ಛಳಿ ಹುಟ್ಟಿದಂತಾಯಿತು. ಬರೀ ಒಂದು ಮುಗುಳ್ನಗೆಯಿಂದ ಒಪ್ಪಿಗೆಯನ್ನು ಸೂಚಿಸಿದೆ; ಮಾತನಾಡಲಿಲ್ಲ. 'ಏನಪಾ, ನನಗೂ ಹೂಂ ಅಂಬುತನಕಾ ಜೀವದ ಸಂತ್ಸು ಬಂದ್ಹಂಗ ಆಗಿತ್ತು' ಎಂದ ಶೇಷಣ್ಣ.

ನನ್ನ ಮುಖದ ಮೇಲೆ ಸ್ವಲ್ಪ ಗೊಂದಲ ತೋರಿತು. ನನ್ನ ಅಭಿಪ್ರಾಯ ಕೇಳದೆ ತಾನು ಹೂಂ ಎಂದುಬಿಟ್ಟದ್ದರಿಂದ ನನಗೆಲ್ಲಿ ಅನ್ಯಾಯ ಅಪಮಾನವಾಯಿತೊ ಎಂದು ಆತ ತಿಳಿದಿರಬೇಕು. 'ಹೂಂ ಅಂದದ್ದೇನೂ ಅಡ್ಡಿಯಿಲ್ಲ' ಎಂದು ಮೆಲ್ಲಗೆ ಹೇಳಿದೆ. 'ಏನೋ ನಿನಗೂ ಹುಡುಗಿ ಜೋಡಿ ಮೊದಲಿನಿಂದ ಒಂದು ಥರದ ಸಥಿ ಅದ ಸಲುಗೆ ಅದ.'

'ಹೂಂ'

ಪಾಪ, ಶೇಷಣ್ಣನಿಗೆ ನಾನೆಲ್ಲಿ ತಪ್ಪು ತಿಳಿದುಕೊಳ್ಳುವೆನೊ ಎಂದು ಅನುಮಾನ. ಒಂದು ವೇಳೆ ಒಂದು ದಿನ ತಡವಾಗಿದ್ದರ ನಾನೇ ಪ್ರಸ್ತಾಪ ಎತ್ತುತ್ತಿದ್ದೆ ಎಂಬುದು ಅವನಿಗೇನು ಕಲ್ಪನೆ ಬರಬೇಕು?

'ಬ್ಯಾರೆ ಹೊರಗಿನದು ಯಾವುದರ ಆಗಿದ್ರ ನಾನು ಹೂನs ಅಂತಿದ್ದಿಲ್ಲ.'

'ಹೌದು.'

'ಮುಖ್ಯ ಹುಡುಗರ ಸಲುವಾಗಿ'—

'ಹೌದು, ರಾಗಿಗಂತೂ ಬರೇ ಆಕೀದ ಅಭ್ಯಾಸ.'

'ಮತ್ತ ನಿನ್ನ ದೃಷ್ಟಿಯಿಂದನೂ ವಿಚಾರ ಮಾಡಿದೆ' ಎಂದು ಶೇಷಣ್ಣ ಸ್ಪಷ್ಟವಾಗಿ ಹೇಳಿದ. ಇಂತಹ ಸೂಚನೆ ನನಗೆ ಮಾನ್ಯವಿರಲಿಕ್ಕಿಲ್ಲವೆ?

'ನನ್ನದು ಪೂರಾ ಒಪ್ಪಿಗೆ ಅದ.'

'ಹಾಂಗಾದರ ಆಕಿ ಸ್ಥಾನದಾಗ ಈಕಿ ಒಂದಾಳ ಅಂತ ತಿಳಕೋಬೇಕು ನೋಡು.'

ನನಗೆ ನೆಟ್ಟಗೆ ಅರ್ಥವಾಗಲಿಲ್ಲ. 'ಅಂ' ಎಂದೆ.

Learn ADMISSION OPEN

RADIO

AT HOME (ENGLISH, KANNADA & TAMIL MEDIUM)


Short term Course in Radio Engg. Duration 8 months

Transistor Course duration 3 months

American Method of Postal Tuition

Every one has to assemble a radio and IREE supplies Radio Kit. Transistor Kit. Text books, Tools, Printed notes etc. with clear instuction charts. For further details, prospectus, application forms write to Principal, IREE, Southend Road, Bangalore—4 with Re. 1/-M. O. or postal stamps.

Principa : K. L. V. Iyer.



ಮಧುರಾ ಸೌಥ್ ಇಂಡಿಯಾ ಕಾರ್ಪೋರೇಷನ್ (ಪ್ರಿ) ಲಿ.,
ನಂ. ೩ ಪೋದಾಲಿಷೇ ಮೇನ್ ರಸ್ತೆ, ಗಾಂಧಿನಗರ ಬೆಂಗಳೂರು ೫೬೦೦೦೯

'ಆಕೆ ಹಿರೇ ಅತ್ತಿಗೆ ಸಮಾ ಅಂತ ತಿಳಕೊಂಡಿ. ಈಕೆ ಸಣ್ಣ ಅತ್ತಿಗೆ ಸಣ್ಣ ತಾಯೀ ಸಮಾ— ಸಣ್ಣ ಮಾಂಸಿ ಅಂತ ತಿಳಕೋ.'

ಮುಂದೇನಾಯಿತು ನನಗೆ ಎಚ್ಚರವೇ ಇಲ್ಲ. ಮೆಲ್ಲನೆ ಕತ್ತೆರೆದಾಗ ನನ್ನ ಮೈಯೆಲ್ಲ ಬೆವೆತುಹೋಗಿತ್ತು. ಅದೇ ಮಾತು ಚಕ್ರಾಕಾರವಾಗಿ ನನ್ನ ತಲೆಯಲ್ಲಿ ಸುತ್ತ ತೊಡಗಿತು.... ತಾಯಿ? ಗಂಡು!... ವತ್ಸಲೆ ನನ್ನವಳೆಂದು ತಿಳಿಯುತ್ತ ಬಂದೆ. ಆಕೆಯು ಪ್ರೇಮಿಯಾಗಿದ್ದಳು; ಕಾಮಿಯಾಗಿದ್ದಳು. ಆಕೆಯ ಸ್ಪರ್ಶದಲ್ಲಿ ಸಂಜೀವಿನಿ ಶಕ್ತಿಯನ್ನು ಕಂಡಿದ್ದೆ... ಎಂಥ ತಳಮಳ ಅದು!

'ಬಿಂದೂಽಽ'

'ಓ'.

'ಹಿಂಗ್ಯಾಕಪಾ ಒಮ್ಮಿಲೆ?— ನಿಮ್ಮ ವೈನೀದು ನೆನಪಾತೇನು?'

ನನ್ನ ಮುಗ್ಧಮನಸ್ಸು ವೈನಿಯನ್ನು ಚಿಂತಿಸುತ್ತಿರಲಿಲ್ಲ. ನನ್ನ ಕೈಯಿಂದ ಜಾರಿದ ಚಿಂತಾಮಣಿಯನ್ನು ಕುರಿತು ಚಿಂತಿಸುತ್ತಿತ್ತು.

ಅತ್ತಿಗೆಯಾದೆ, ತಾಯಿಯಾದೆ

ವತ್ಸಲೆ—

'ಬಿಂದಣ್ಣನ ತಲೆದಿಂಬಿನ ದೆಸೆಗೆ ದೊರೆತ ಹಿಂದಿನ ಚೀಟಿಗೂ ಮೊನ್ನಿನ ಚೀಟಿಗೂ ಎಷ್ಟು ಅಂತರ! ನನ್ನನ್ನು ಚಿಕ್ಕ ಅತ್ತಿಗೆ, ಭಾಬೀ ತಾಯಿ ಎಂದೆಲ್ಲ ಕರೆದಿದ್ದ. 'ನೀವು ನನ್ನ ಚಿಕ್ಕ ವೈನಿ, ನಾನು ನಿಮ್ಮ ಮೆಂದಿ ಭಾವೂಜಿ' ಎಂದು ಪತ್ರವನ್ನು ಮುಕ್ತಾಯಗೊಳಿಸಿದ್ದ, ಬಿಂದಣ್ಣನ ಈ ಪರಿವರ್ತನೆಯ ಮಾತುಗಳು ನನ್ನ ಕಳ್ಳ ಮನಸ್ಸಿಗೆ ಬಾರಕೋಲಿನ ಏಟುಗಳಂತಿದ್ದವು. ಅಂದು ಬಿಂದಣ್ಣ ನನ್ನ ಪಾಲಿನ ದೇವತೆ ಎನಿಸಿದ್ದ. ವಿದ್ಯಾರಣ್ಯರ ಈ ಉತ್ಸವ ಮೂರ್ತಿಗೆ ನನ್ನ ಹೃದಯ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಪ್ರೀತಿಯ ಚಾಮರ ಬೀಸಿದ್ದೆ. ಅಂದೊಮ್ಮೆ ಬಿಂದಣ್ಣನ ಎಂಜಲದ ನೀರು ಕುಡಿದಿದ್ದೆ. ಇಂದು ಬಿಂದಣ್ಣ ಪತ್ರದಲ್ಲಿ ನನ್ನ ಮಗುವಾಗಿ ಬಿಟ್ಟಿದ್ದ. ತಾಯಿ ಮಗುವಿನ ಎಂಜಲು ಕುಡಿದರೇನು ತಪ್ಪು. ಸತಿ ಅನುಸೂಯೆ ತನ್ನನ್ನು ಕಾಮಿಸಿದ ದೇವತೆಗಳನ್ನು ಕೂಸಾಗಿ ಮಾಡಿಬಿಡಲಿಲ್ಲವೇ? ಬಿಂದೂನನ್ನು ಕೂಸಾಗಿ ಮಾಡಿಬಿಟ್ಟಿತ್ತು ಬಿಂದಣ್ಣನ ಪತ್ರ.

ಬರಬರುತ್ತ ಬಿಂದಣ್ಣ ಅಂತರ್ಮುಖಿಯಾದ ಆಧ್ಯಾತ್ಮಿಯಂತೆ ಕಾಣುತ್ತಿದ್ದ. 'ನಾನೂ ವಿವೇಕಾನಂದರ ಹಾಂಗ ಆಗಬೇಕುತೀನಿ' ಎಂದು ಊರ ಹೊರಗಿನ ಬಂಡೆಗಲ್ಲಿನ ಮೇಲೆ ಕುಳಿತು ಜಯಣ್ಣನಿಗೆ ಚೇಷ್ಟೆ ಮಾಡಬೇಕೆಂತ ಬಿಂದಣ್ಣ. ಆ ಚೇಷ್ಟೆಯ ಹಿಂದೆ ಇರುವ ಚೇಳಿನ ನೋವು ನನಗೆ ಅರ್ಥವಾಗುತ್ತಿತ್ತು.

'ಬಿಂದಣ್ಣ ಬಿ. ಎ. ಸೆಕೆಂಡ ಕ್ಲಾಸ್ ಪಾಸಾಗಿದ್ದ. ಕಾಕಾ ಫೇಡೆ ಕೇಳಿದ್ದ. 'ಫೇಡೆ ಸಿಗೋದು ಧಾರವಾಡದಾಗ ಅಲ್ಲೇನು?' ಎಂದು ನಾನು ಕಾಕಾನ ಮುಂದೆ ಹೇಳಿದೆ. 'ನನ್ನ ಮಗನ ಫೇಡೆ ನಾನು ಕಳಿಸಬೇಕು' ಎಂದು ಫಕ್ಕನೆ ಬಾಯಿಂದ ಬಂದುಬಿಟ್ಟಿತು. ಮರುಕ್ಷಣಕ್ಕೆ ಕಣ್ಣೀರು ತೂರಿಕೊಂಡು ಬಂದವು.

ಗದುಗಿನಿಂದ ಪತ್ರ ಬಂತು. ಬಿಂದಣ್ಣನಿಂದಲ್ಲ.

'ಮಾಡುವ ವಂದನೆಗಳು... ನೀವು ಸೂಚಿಸಿದಂತೆ ಮುಹೂರ್ತ ಜ್ಯೇಷ್ಠ ಮಾಸದಲ್ಲಿ ಇಡಬಹುದು. ಉಳಿದ ವಿಷಯ ಸಮಕ್ಷಮದಲ್ಲಿ'

—ನಿಮ್ಮ, ಶೇಷಗಿರಿರಾವ್

ದಿನಗಳುರುಳಿದಂತೆ ಜ್ಯೇಷ್ಠ ಮಾಸದ ಜಿಟಿಜಿಟಿ ಮಳೆ ಸುರುವಾಗಿತ್ತು. ನಾನು ರಾಗಿಯ ತಾಯಿಯಾಗಿದ್ದೆ. ಈ ಸಲ ಬಿಂದಣ್ಣನ ಜರದ ಟೊಪ್ಪಿಗೆಯನ್ನು ರಾಗಿ ಹಾಕಿಕೊಂಡಿದ್ದ.

ಅಕ್ಷತೆಗಳು ಬಿದ್ದವು... 'ಅಕ್ಕಾ, ನೀನು ವರಿಸಿದ ವರನನ್ನೇ ನಾನೂ ವರಿಸುತ್ತಿದ್ದೇನೆ. ನಿನ್ನ ಸವತಿ ನಾನು. ಮತ್ಸರ ಪಡಬೇಡ ಅಕ್ಕ' ಎಂದು ಒಳದನಿ ಆಕ್ರೋಶ ಮಾಡುತ್ತಿತ್ತು. ಎಲ್ಲಿಯ ಮತ್ಸರ? ಇಂತಹ ಕ್ಷುಲ್ಲಕಗಳನ್ನೆಲ್ಲ ಮೀರಿ ದೂರ ದೂರ ಇದ್ದಳು ನಮ್ಮ ಅಕ್ಕ'.

ಮುಂಬಯಿಗೆ ತೆರಳಿದ—

ಬಿಂದಣ್ಣ —

ಅಂದು! ಪ್ರಥಮ ರಾತ್ರಿಯ ದಿನ. ನಮ್ಮ ಸಣ್ಣ ವೈನಿಯ ಮೈಯಲ್ಲಿ ದೊಡ್ಡ ವೈನಿ ಬಂದಿದ್ದರು. 'ನನ್ನ ತಂಗಿನ್ನ ನನ್ನ ಸವತಿನ್ನ ಮಾಡಿ ಕೊಡಿಸಿದಿರಾ?' ಎಂದು ಆಕ್ರೋಶ ಮಾಡಿದರು. ಶೇಷಣ್ಣ ಗದುಗಟ್ಟಿ ನಡುಗಿ ಹೋದ. 'ವೈನೀ'ss ಎಂದು ನಾನು ಅಡ್ಡ ಬರಸಿ ಹೋದೆ. ಸಣ್ಣ ವೈನಿಯೊಳಗಿದ್ದ ದೊಡ್ಡ ವೈನಿ ನನ್ನನ್ನು ಕಂಡು ಮರುಕಪಟ್ಟರು. ಸಾಂತ್ವನದ ಮಾತನಾಡಿದರು.

ನನಗೆ ಶೇಷಣ್ಣನ ಸಂಸಾರದ ಸುಖದ ಚಿಂತೆ. ಸಾಂಬನ ಜೊತೆಗೆ ನಾನೂ ಮುಂಬಯಿಗೆ ಹೋಗಿ ಅಲ್ಲಿ earning, learning ಎರಡು ಮಾಡಬೇಕೆಂದು ನಿರ್ಧರಿಸಿದೆ. ಮುಂಬಯಿಯಲ್ಲಿ ಪ್ರಸಿದ್ಧ ಪ್ರೊಫೆಸರ್ ಇದ್ದರು. ಅವರ ಮಾರ್ಗದರ್ಶನದಲ್ಲಿ ಎಂ. ಎ. ಮಾಡಬೇಕೆಂಬ ನನ್ನ ಅಭಿಲಾಷೆಯನ್ನು ಶೇಷಣ್ಣನ ಮುಂದೆ ಇಟ್ಟೆ. ಶೇಷಣ್ಣ ನನ್ನ ಈ ವಿಚಾರದಿಂದ ವ್ಯಗ್ರಚಿತ್ತನಾದ. ನನಗೂ ಶೇಷಣ್ಣನ ಬಗ್ಗೆ ಕಾಳಜಿ ಇದ್ದುದರಿಂದಲೆ ಠದಗು ಬಿಟ್ಟು ಮುಂಬಯಿಗೆ ಹೋಗಬೇಕೆಂದು ನಿರ್ಧರಿಸಿದ್ದೆ. ಶೇಷಣ್ಣ ನಿರುಪಾಯನಾಗಿ ಸುಮ್ಮನಾದ. ಸಣ್ಣ ವೈನಿ? ಸುಮ್ಮನಾಗದೆ ಏನು ಮಾಡುತ್ತಾರೆ? ಹುಡುಗರು ನನ್ನನ್ನು ಬಿಟ್ಟು ಕದಲುತ್ತಿರಲಿಲ್ಲ. ಆದರೆ ಸಣ್ಣ ವೈನಿ ಕಳೆದ ಒಂದೆರಡು ದಿನಗಳಿಂದ ಅವರನ್ನು ನನ್ನಿಂದ ದೂರಿಡಲು ಪ್ರಯತ್ನಿಸಿದರು.

'ಹೃದಯದ ಹುಣ್ಣು ಮಾಯಬೇಕೆಂದು ಮುಂಬಯಿಗೆ ಹೋದರೆ ಹುಣ್ಣು ಮಾಯಲಿಲ್ಲ. ಮಾಯಬೇಕೆಂದು ಕಟ್ಟಿದ ಪಟ್ಟಿ ಕಿತ್ತುಹೋದಂತಾಯಿತು. ಮತ್ತೆ ಛಗಛಗ.

ಮಿಸ್ ಪಿ. ಎಸ್. ದೇಸಾಯಿ, ಸಂಸ್ಕೃತ ಸ್ಕಾಲರ್ ನನ್ನ ಸಹಪಾಠಿನಿ! ಅವರ ಹೆಸರೂ ವತ್ಸಲಾ!! ಒಬ್ಬ ವತ್ಸಲೆಯನ್ನು ಮರೆಯಬೇಕೆಂದು ಮುಂಬಯಿಗೆ ಬಂದರೆ ಇಬ್ಬರು ವತ್ಸಲೆಯರು! ವತ್ಸಲೆ ಎಂಬ ಹೆಸರೇ ನನ್ನನ್ನು ಇಂದ್ರಜಾಲ ಬೀಸಿ ಮುಗ್ಧಗೊಳಿಸಿತು. ಅಂದು ಲೈಬ್ರರಿಯಲ್ಲಿ ಉಂಟಾದ ಪರಿಚಯ ವೃದ್ಧಿಂಗತವಾಯಿತು. ಪರಸ್ಪರವಾಗಿ ಕ್ಲಾಸಿನ ನೋಟ್ಸ್ ವಿನಿಮಯಿಸುತ್ತಿದ್ದೆವು. ಗಾಂವದೇವಿಯ ಅವರ ಮನೆಗೆ ಹೋದಾಗೊಮ್ಮೆ ಚಹಾದ ಜೊತೆಗೆ ಬಗೆಬಗೆಯ ಉಪಹಾರ! ಒಮ್ಮೆ ಎಲಿಫಂಟಾ ಕೇವ್ಸ್ ನೋಡಲಿಕ್ಕೆ ಅವರ ಮನೆಯವರ ಜೊತೆ ಹೋಗಿದ್ದೆ. ಬೋಟಿನಲ್ಲಿ ಪ್ರಯಾಣ! ಬೋಟು ಹೊಯ್ದಾಡಿದಾಗ ವತ್ಸಲೆಯ ಭುಜ ನನ್ನ ಭುಜಕ್ಕೆ ತಾಗುತ್ತಿತ್ತು. ವತ್ಸಲೆಯ ಜೊತೆ ಸಂಸಾರ ನೌಕೆಯಲ್ಲೇ ವಿಹರಿಸಿದ ಅನುಭವ. ಅವರ ತಂದೆ, ತಾಯಿ ಆತ್ಮೀಯತೆಯಿಂದ ಕಂಡರು.


'ಹೊಸ ವತ್ಸಲೆಯ ಪರಿಚಯವಾದುದನ್ನು ನಮ್ಮ ಸಣ್ಣ ವೈನಿಗೆ ಬರೆದು ತಿಳಿಸಿದ್ದೆ. ಅವರು ಸಾರಸ್ವತರು, ಎಂದರೆ ಸರಸ್ವತಿ ಭಕ್ತರು ಎಂದೂ ತಿಳಿಸಿದ್ದೆ.'



'ನನ್ನ ಬಗ್ಗೆ ಕಾಳಜಿ ಮಾಡಬೇಡಿ, ನೀವು ಹೊಟ್ಟೆತುಂಬ ಊಟ ಮಾಡಿ.'

'ಅಂದು ಸಣ್ಣ ವತ್ಸಲೆಯು ಮನೆಗೆ ಹೋದಾಗ ಮನೆಯಲ್ಲಿ ಯಾರೂ ಇದ್ದಂತೆ ಕಾಣಲಿಲ್ಲ. ವತ್ಸಲೆ ಪಲ್ಲಂಗದ ಮೇಲೆ ಮಲಗಿದ್ದಳು. ಕೈಯೊಳಗಿನ ಪುಸ್ತಕ ಕೈಯೊಳಗೇ ಇತ್ತು. ಇನ್ನೊಂದು ಕೈ ಕೆಳಗೆ ಬಿದ್ದಿತ್ತು. ಸೆರಗು ಸರಿದಿತ್ತು. ಮೈಯ ಮೇಲ್ಭಾಗವೆಲ್ಲ ಹರವಾಗಿ ಕಾಣುತ್ತಿತ್ತು. ಶುಭ್ರವಾಗಿ ಶೋಭಿಸುವ ಪಾದಗಳು. ಕಾಲಿನ ಮೇಲ್ಭಾಗ ಸ್ಫುಟವಾಗಿ ಕಾಣುತ್ತಿದೆ. ನೀಳವಾದ ಹೆಳಲು ಪಲ್ಲಂಗದ ಕೆಳಗೆ ಜೋಲು ಬಿದ್ದಿದೆ. ಒಂದು ನಿಮಿಷ ಮಂಚದ ಹತ್ತಿರವೇ ನಿಂತೆ. ನೀಳವಾದ ಜಡೆಗೆ ನಡುವಿನ ಬೆರಳು ತಾಗಿತ್ತು. ಬೂರಲ ಅರಳೆಯನ್ನು ಮುಟ್ಟಿದಂತಾಯಿತು. ಕಳ್ಳ ಮನಸ್ಸು ಏನೇನೊ ಧ್ಯೇನಿಸುತ್ತಿತ್ತು. ಮೈ ಬೆವೆತಂತಾಯಿತು. ಮನಸ್ಸು ಪಾರಜದಂತಾಯಿತು, ರೂಢಿಯಿಲ್ಲದವರು ಎಲೆ, ಅಡಿಕೆ ತಿಂದಂತೆ ಕಿವಿಗಳು ಉರಿದಂತಾದವು. ಹೃದಯ ತತ್ತರಿಸಿ ಹೋಯಿತು. ಮುಖ ತಂತಾನೆ ಆ ಮುಖದ ಸಮೀಪಕ್ಕೆ ಹೋಗಿತ್ತು. 'ಆಯಿಂದss' ಚೀರಿ ಎದ್ದು ಕೂತಳು ವತ್ಸಲೆ. ನಾನು ಹುಚ್ಚನಂತೆ ನಿಂತಿದ್ದೆ. 'will you...' ಏನೊ ಕೇಳಲು ಹೋದೆ. 'ಆಯೀs' ಎಂದು ಮತ್ತೆ ಚೀರಿಕೊಂಡಳು ವತ್ಸಲೆ.

'ವತ್ಸಲೆಯ ಸಲುಗೆಯನ್ನು ನಾನು ತಪ್ಪು ತಿಳಿದುಕೊಂಡಿದ್ದೆ. ತಪ್ಪು ತಿಳುವಳಿಕೆಗೆ ತಕ್ಕ ಬೆಲೆಯನ್ನು ಕೊಡಬೇಕಾಯಿತು. ಅವರ ತಂದೆ ಬೂಟುಗಾಲಿನ ಸಪ್ಪಳ ಮಾಡುತ್ತ ಕೈಯೊಳಗಿನ ಬೆತ್ತ ಬೀಸುತ್ತ ಕಲ್ಲಿಮೀಸೆ ತಿರುವುತ್ತ ಬಂದರು. ಅವರು I. P. S. ಆಫೀಸರ್. ನನ್ನನ್ನು 'ರಾಸ್ಕಲ್' ಎಂದು ಗದ್ದರಿಸಿದರು. 'I want to marry her' ಎಂದು ನುಡಿದುಬಿಟ್ಟೆ. 'ಆಕೀದು ಎಂಗೇಜಮೆಂಟ್ ಆಗಿದೆ,' ಆಯೀ ನುಡಿದರು. 'ಯಾರಿಗೆ?' ಎಂದು ಮತ್ತೆ ಪ್ರಶ್ನೆ ಮಾಡಬೇಕೆ ನಾನು? ಅವರು ನನ್ನನ್ನು ಹೊರಗೆ ದಬ್ಬಿದಾಗ ವತ್ಸಲೆ ಸುಮ್ಮನಿದ್ದಳು. ನಾನು ಹೇಗೆ ಕೋಣೆಗೆ ಹೋದೆನೋ ಗೊತ್ತಿಲ್ಲ...'



ವಾತ್ಸಲ್ಯಮಯಿ

ವತ್ಸಲೆ-

'ಬಿಂದಣ್ಣನ ಹಿಂದಿನ ಒಂದು ಪತ್ರ ಇವರ ಕೈಗೆ ಸಿಕ್ಕಾಗ ಇವರು ಮಮ್ಮಲ ಮರುಗಿದರು. ಪಶ್ಚಾತ್ತಾಪಪಟ್ಟುಕೊಂಡರು. 'ನನಗ್ಯಾಕ ನೀ ಹೇಳಲಿಲ್ಲ?' ಎಂದರು. ನಾನೇನು ಉತ್ತರ ಹೇಳಬೇಕು? ಬಿಂದಣ್ಣನ ಬಗ್ಗೆ ಎಲ್ಲಿ ಸಿಟ್ಟಿಗೇಳುತ್ತಾರೆ ಎಂದು ಕೊಂಡಿದ್ದೆ ಹಾಗೇನೂ ಮಾಡಲಿಲ್ಲ.

'ಹಟಾತ್ತನೆ ಸಾಂಬನ ತಾರು! Bindu admitted hospital cerebral meningitis. Serious start— Samba' ಇವರು ಹಣೆಗೆ ಕೈ ಹಚ್ಚಿಕೊಂಡು ಕೂತುಬಿಟ್ಟರು. ಸುಂದ್ರಕ್ಕ ಸಮಾಧಾನ ಹೇಳಿದರು. 'ಮೊದಲು ಅವನ ಮದುವಿ ಮಾಡ್ರಿ, ಎಲ್ಲಾ ತಾನs ಸಮಾ ಆಗ್ತದ' ಎಂದು ಸಲಹೆ ನೀಡಿದರು.

ಮುಂದಿನ ಗಾಡಿಗೇ ಮುಂಬಯಿಗೆ ಹೊರಟೆವು. ಸಾಂಬನನ್ನು ಕರೆದುಕೊಂಡು ದವಾಖಾನೆ ಮುಟ್ಟಿದೆವು. ಬಿಂದಣ್ಣನ ಮೈಯ ಮೇಲೆ ಪ್ರಜ್ಞೆ ಇರಲಿಲ್ಲ. 'ಕೋಮಾ ಕಂಡೀಶನ್ ದಾಟಬೇಕು' ಎಂದು ಡಾಕ್ಟರರ ಅಭಿಪ್ರಾಯ. ಇವರು ದಂಗುಬಡೆದು ಕೂತುಬಿಟ್ಟರು. ರಾತ್ರಿಯೆಲ್ಲ ಹಣೆಗೆ ಒದ್ದೆ ಬಟ್ಟೆ ಹಾಕುತ್ತ ಕುಳಿತುಬಿಟ್ಟೆ. ನಡುನಡುವೆ ಏನೇನೋ ಬಡಬಡಿಸಿ ಗಾಬರಿಯಿಂದ ಪುಟಿದು ಬೀಳುತ್ತಿದ್ದರು. ನಾನು ಹಣೆಗೆ ಪಟ್ಟಿ ಹಾಕುತ್ತ ಬೆಳತನಕ ಅವರ ಮಗ್ಗುಲಿಗೇ ಕುಳಿತಿದ್ದೆ; ನಸುಕಿನ ತಂಪಿಗೆ ಅವರಿಗೆ ಎಚ್ಚರ ಬಂದಂತಾಯಿತು. 'ಅವ್ವಾ' ಎಂದರು. 'ಬಿಂದಣ್ಣಾ' ಎಂದು ಕಿವಿಯೊಳಗೆ ಮೆಲ್ಲಗೆ ಕರೆದೆ. 'ವೈನೀ' ಎಂದರು 'ಬಿಂದಣ್ಣಾ' ಎಂದು ಕಿವಿಯಲ್ಲಿ ಮೆಲ್ಲಗೆ ಕರೆದೆ. ಬಿಂದಣ್ಣ ಮೆಲ್ಲಗೆ ಕಣ್ಣು ತೆರೆದರು. ಡಾಕ್ಟರರು ತಪಾಸು ಮಾಡಿ, 'He is safe' ಎಂದರು. ಇವರು ಅಡ್ಡಬರಿಸಿ ಬಿಂದಣ್ಣನತ್ತ ಧಾವಿಸಿದರು. ಬಿಂದಣ್ಣ ಇವರ ಕೊರಳಿಗೆ ಕೈ ಹಾಕಿದರು. 'ಬಿಂದಣ್ಣಾ,' 'ಶೇಷಣ್ಣಾ,' 'ಗದಗಿಗೆ ಬರ್ತೀಯಾ ಬಿಂದಣ್ಣ?' 'ಹೂಂ!'... ✡



ಸರಿಯಾದ ಮತ್ತು ಉತ್ಸಾಹಪೂರಿತ ಪ್ರಯತ್ನದಿಂದ ಪಡೆಯಲು ಅಸಾಧ್ಯವಾದ ವಸ್ತು ಯಾವುದೂ ಈ ಪ್ರಪಂಚದಲ್ಲಿಲ್ಲ. ಯಾರಾದರೂ ಯಾವುದೇ ವಸ್ತುವನ್ನು ಪಡೆಯಲು ಆಶಿಸಿ, ಅದನ್ನು ಹೊಂದಲು ಯತ್ನಿಸಿದುದೇ ಆದರೆ ಅವರು ಖಂಡಿತವಾಗಿಯೂ ಸಫಲರಾಗಬಲ್ಲರು.

—'ಯೋಗವಾಸಿಷ್ಠ'ದಿಂದ

This magazine owned by the Karnataka Patrika Private Ltd. is printed by Shri K. Janardana and published by Shri D. L. Kerur at the Samyukta Karnatak Press, Koppikar Road, Hubli. Representatives: Bombay: V. S. Mani, Phone: 472794, Calcutta: H. Muzamdar Phone: 46-4238; Madras: P. N. Srinivasan, Phone: 83748; New Delhi P. R. Chopra, Phone: 224130

ಫಾಸ್ಫೋಮಿನ್

ಫಾಸ್ಫೋಮಿನ್ ಕುಟುಂಬದ ಎಲ್ಲರಿಗೂ ಆರೋಗ್ಯಕರ

ಜೀವನದಲ್ಲಿ ಇನ್ನಷ್ಟು ಮೋಜಿನ ಭಾಗ್ಯ
ದೊರೆಯುವುದು, ಶರೀರದಲ್ಲಿರೆ ಆರೋಗ್ಯ.



ಫಾಸ್ಫೋಮಿನ್. ಹಸುರು ಬಣ್ಣದ. ಹಣ್ಣಿನ ರುಚಿಯಿರುವ ವಿಟಮಿನ್ ಟಾನಿಕ್. ಫಾಸ್ಫೋಮಿನ್. ಹಸಿವೆಯನ್ನು ಉದ್ದೀಪನಗೊಳಿಸುತ್ತದೆ. ಶಕ್ತಿ ನೀಡುತ್ತದೆ. ದೇಹದಾರ್ಢ್ಯವನ್ನು ಹೆಚ್ಚಿಸುತ್ತದೆ. ದೇಹದ ರೋಗ ನಿರೋಧಕ ಶಕ್ತಿಯನ್ನು ಬಲಪಡಿಸುತ್ತದೆ. ಕುಟುಂಬದ ಎಲ್ಲರನ್ನೂ ಆರೋಗ್ಯವಾಗಿ ಮತ್ತು ಚಟುವಟಿಕೆಯಿಂದ ಇಡುತ್ತದೆ.



SARABHAI CHEMICALS LTD.

Registered with the Registrar of Newspapers for India under No. 3633/57

